ವಿಶ್ವವಾಣಿ
ವಿಶ್ವಾಸವೇ ವಿಶ್ವ

ಅಮೆರಿಕದ ಅಕ್ಕ ಸಮ್ಮೆಳನ ವಿಶೇಷ ಪುಟ-10 ಹಾಗೂ ಇ-ಪೇಪರ್ ಪುಟ 11, 12

3 ವಂದೇ ಭಾರತ್ ರೈಲುಗಳಿಗೆ ಚಾಲನೆ

ಬೆಂಗಳೂರು: ಮಧುರೈ-ಬೆಂಗಳೂರು ಸೇರಿ ದಂತೆ 3 ವಂದೇ ಭಾರತ್ ರೈಲುಗಳ ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು. ಈ ರೈಲುಗಳು ಬೆಂಗಳೂರು-ಮಧುರೈ, ಮೀರತ್-ಲಖನೌ ಮತ್ತು ಚೆನ್ನೈ-ನಾಗರಕೋಯಿಲ್ ನಡುವೆ ಸಂಚರಿಸಲಿವೆ.

ಪುಟ ತೆರೆದಂತೆ...

ಕೆಲವೊಮ್ಮೆ ಬೇರೆಯವರ ಅನುಕೂಲಕ್ಕಾಗಿ ನಾವು ಬೆಲೆ ತೆರಬೇಕಾಗುತ್ತದೆ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಲಿಂಗ ಅಸಮಾನತೆ ಇನ್ನಾದರೂ ಕೊನೆಯಾಗಲಿ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ದಾರಿದೀಪೋಕ್ತಿ

ನೀವು ಜೀವನದಲ್ಲಿ ಇಲ್ಲಿ ತನಕ ಪಡೆಯದೇ ಇರುವುದನ್ನು ಪಡೆಯಬೇಕು ಎಂದು ನಿರ್ಧರಿಸಿದರೆ, ಇಲ್ಲಿ ತನಕ ಮಾಡದೇ ಇರುವುದನ್ನು ಮಾಡಲು ಸಿದ್ಧರಿರಬೇಕಾಗುತ್ತದೆ. ಯಾವುದೂ ಸುಲಭವಾಗಿ ಸಿಗುವುದಿಲ್ಲ. ಆಸೆಪಡುವುದು ತಪ್ಪಲ್ಲ. ಅದನ್ನು ಈಡೇರಿಸಿಕೊಳ್ಳಲು ತಕ್ಕುದಾದ ಪರಿಶ್ರಮವನ್ನೂ ಪಡಬೇಕು.

ವಕ್ರತುಂಡೋಕ್ತಿ

ಡ್ರೈವಿಂಗ್ ಲೈಸನ್ಸ್ ಥರ ಮದುವೆಯ ಸರ್ಟಿಫಿಕೇಟ್ ಕೂಡ ಅವಧಿ ಮೀರಿದ್ದರೆ, ಬಹುತೇಕ ಗಂಡಸರು ಅದನ್ನು ನವೀಕರಿಸುತ್ತಿರಲಿಲ್ಲ.

ಫನ್‌ತರಂಗ

- ರಘುಪತಿ ಶೃಂಗೇರಿ -

ಬೀಗರಾದ ಬಿಜೆಪಿ-ಕಾಂಗ್ರೆಸ್ ನಾಯಕರು

ಕೋವಿಡ್ ವೇಳೆ 7,223 ಕೋಟಿ ರು. ನಕಲಿ ಬಿಲ್ ಸೃಷ್ಟಿ?

ಮಧ್ಯಂತರ ವರದಿಯಲ್ಲಿಯೇ ಕೋಟ್ಯಂತರ ರುಪಾಯಿ ಹಗರಣ ಬಯಲು | ಬಿಜೆಪಿ ವಿರುದ್ಧದ ಹೋರಾಟಕ್ಕೆ ಕಾಂಗ್ರೆಸ್‌ಗೆ ಬ್ರಹ್ಮಾಸ್ತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ನ್ಯಾ.ಜಾನ್ ಮೈಕಲ್ ಕುನ್ಹಾ ನೇತೃತ್ವದ ಆಯೋಗ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿ ವರದಿ ಸಲ್ಲಿಸಿದೆ. ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಪೊನ್ನಣ್ಣ, ಸಚಿವರಾದ ಪ್ರಿಯಾಂಕ್ ಖರ್ಗೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು ಉಪಸ್ಥಿತರಿದ್ದರು.

ರಂಜಿತ್ ಎಚ್. ಅಶ್ವತ್ಥ

ಬೆಂಗಳೂರು: ಕರೋನಾ ಅವಧಿಯಲ್ಲಿ ಆರ್ಥಿಕವಾಗಿ ರಾಜ್ಯ ಸರಕಾರ ಜರ್ಜರಿತವಾಗಿದ್ದರೂ, ಬರೋಬ್ಬರಿ 7,223 ಕೋಟಿ ರು. ಹೆಚ್ಚು ಮೊತ್ತದ ಖರೀದಿಗೆ ನಕಲಿ ಬಿಲ್‌ಗಳನ್ನು ಒದಗಿಸಲಾಗಿದೆ ಎನ್ನುವ ಗಂಭೀರ ಆರೋಪ ಇದೀಗ ಕೇಳಿಬಂದಿದೆ.

ಬಿಜೆಪಿ ಅವಧಿಯಲ್ಲಿ ಕರೋನಾ ಅವಧಿಯಲ್ಲಿ ಸಾವಿರಾರು ಕೋಟಿ ಅಕ್ರಮ ನಡೆದಿರುವ ಆರೋಪ ಮಾಡಿದ್ದ ಕಾಂಗ್ರೆಸ್ ನಾಯಕರಿಗೆ ಇದೀಗ, ಅಕ್ರಮ ನಡೆದಿರುವುದಕ್ಕೆ 'ದಾಖಲೆ' ಸಮೇತ ಮಾಹಿತಿ ಸಿಕ್ಕಿರುವುದು ಬಿಜೆಪಿ ವಿರುದ್ಧದ ಹೋರಾಟಕ್ಕೆ ಬ್ರಹ್ಮಾಸ್ತ್ರ ಸಿಕ್ಕಿದೆ. ಕರೋನಾ ಸಮಯದಲ್ಲಿ ನಡೆದಿರುವ ಅವ್ಯವಹಾರದ ತನಿಖೆಗೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ನ್ಯಾ.ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ನ್ಯಾಯಾಂಗ ತನಿಖೆಗೆ ನೇಮಿಸಿತ್ತು. ಇದೀಗ ಈ ಸಮಿತಿಯೂ ಮಧ್ಯಂತರ ವರದಿಯನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ಸಾವಿರಾರು ಕೋಟಿ ರು. ಮೌಲ್ಯದ ಅವ್ಯವಹಾರವಾಗಿರುವ ಸಾಧ್ಯತೆಯಿದೆ ಎಂದು ಉಲ್ಲೇಖಿಸಿದೆ. ಇದರೊಂದಿಗೆ ಏಳು ಸಾವಿರ ಕೋಟಿ ರು. ಹೆಚ್ಚಿನ ಮೌಲ್ಯದ ವಿವಿಧ ಸಾಮಗ್ರಿಗಳ ಖರೀದಿಗೆ ಸೂಕ್ತ ದಾಖಲೆಗಳೇ ಇಲ್ಲ ಎಂದು ಖಚಿತ ಮೂಲಗಳು ತಿಳಿಸಿವೆ. → 4

1722 ಸಾವಿರ ಪುಟದ ವರದಿ

ಇನ್ನು ನ್ಯಾ.ಜಾನ್ ಮೈಕಲ್ ಕುನ್ಹಾ ನೇತೃತ್ವದ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿಯೂ 1722 ಪುಟಗಳಿಗೂ ಹೆಚ್ಚು ಪುಟಗಳ ವರದಿಯನ್ನು ಸಲ್ಲಿಕೆ ಮಾಡಲಾಗಿದೆ. ಈ ಪ್ರಮಾಣದಲ್ಲಿ ಸಲ್ಲಿಕೆಯಾಗಿರುವ ವರದಿಯಲ್ಲಿ ಜಿಲ್ಲಾವಾರು, ಝೋನ್‌ವಾರು ಅಕ್ರಮ ನಡೆದಿರುವ ಬಗ್ಗೆ ಮಾಹಿತಿಯನ್ನು ಒದಗಿಸಲಾಗಿದೆ. ಇಡೀ ವರದಿಯನ್ನು ಕಾನೂನು ತಜ್ಞರೊಂದಿಗೆ ಮತ್ತೊಮ್ಮೆ ಪರಿಶೀಲಿಸಿ ಮುಂದಿನ ಕ್ರಮವಹಿಸಲು ಸರಕಾರ ಸಿದ್ಧತೆ ನಡೆಸಿಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಪ್ರಮುಖವಾಗಿ ವೆಂಟಿಲೇಟರ್, ಆಕ್ಸಿಜನ್ ಉಪಕರಣಗಳ ಖರೀದಿ, ನಿರ್ವಹಣೆ ಲೋಪ, ಕೊವಿಡ್-19 ನಿರ್ವಹಣಾ ಉಪಕರಣ, ರ್‍ಯಾಪಿಡ್ ಆ್ಯಂಟಿಜೆನ್ ಟೆಸ್ಟ್ ಕಿಟ್ ಖರೀದಿ ಮತ್ತು ಸಂಗ್ರಹಣೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ದ ಆರೋಪ ಸಂಬಂಧ ಸುವಿಸ್ತಾರವಾಗಿರುವ ಮಾಹಿತಿಯನ್ನು ಒದಗಿಸಲಾಗಿದೆ. ಆದರೆ ಇನ್ನಷ್ಟು ಮಾಹಿತಿ ಕಲೆ ಹಾಕಬೇಕಿರುವುದರಿಂದ ಮಧ್ಯಂತರ ವರದಿಯನ್ನು ಸಲ್ಲಿಸಿದ್ದು, ಮುಂದಿನ ದಿನದಲ್ಲಿ ಪೂರ್ಣ ಪ್ರಮಾಣದ ವರದಿಯನ್ನು ಸಲ್ಲಿಸುವುದಾಗಿ ಆಯೋಗದ ಸದಸ್ಯರು ತಿಳಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಾಲ್ವರು ದೋಸ್ತಿ ನಾಯಕರ ಪ್ರಾಸಿಕ್ಯೂಷನ್‌ಗೆ ಆಗ್ರಹಿಸಿ ರಾಜ್ಯಪಾಲರಿಗೆ ಮನವಿ
ಗಾಂಧಿ ಪ್ರತಿಮೆ ಮುಂದೆ ಸಿಎಂ ನೇತೃತ್ವದಲ್ಲಿ ಪ್ರತಿಭಟನೆ, ಡಿಕೆಶಿ ನೇತೃತ್ವದಲ್ಲಿ ಜಾಥಾ
ಕಾಂಗ್ರೆಸ್ ನಿಯೋಗಕ್ಕೆ 'ಯಾವುದೇ ಪ್ರಕರಣ ಬಾಕಿ ಇಲ್ಲ' ಎಂದ ರಾಜ್ಯಪಾಲರು

ರಾಜಭವನ ಚಲೋ

ಬೆಂಗಳೂರು: ರಾಜಭವನವನ್ನು ರಾಜಕೀಯ ಭವನವನ್ನಾಗಿ ಮಾಡಿಕೊಳ್ಳಬಾರದು ಹಾಗೂ ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಬಾಕಿಯಿರುವ ಪ್ರಕರಣಗಳ ಅಭಿಯೋಜನೆಗೆ ಅವಕಾಶ ನೀಡುವಂತೆ ಆಗ್ರಹಿಸಿ ಕಾಂಗ್ರೆಸ್ ಪಡೆ ಶನಿವಾರ ರಾಜಭವನ ಚಲೋ ನಡೆಸಿ, ರಾಜ್ಯಪಾಲರಿಗೆ ಮನವಿ ಸಲ್ಲಿಸಿತು.

ಶನಿವಾರ ಬೆಳಗ್ಗೆ ವಿಧಾನಸೌಧದ ಬಳಿಯಿರುವ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ನಾಯಕರು ಬಳಿಕ, ರಾಜಭವನದವರೆಗೆ ಪಾದಯಾತ್ರೆಯ ಮೂಲಕ ತೆರಳಿದರು. ಈ ವೇಳೆ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿ, ರಾಜಭವನವನ್ನು ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು ಖಂಡನೀಯ ಎಂದು ಟೀಕಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್‌ಗೆ ತರಾತುರಿಯಲ್ಲಿ ಅನುಮತಿ ನೀಡಿರುವ ರಾಜ್ಯಪಾಲರು, ಕಳೆದ ಒಂದು ವರ್ಷದಿಂದ ಬಾಕಿ ಉಳಿಸಿಕೊಂಡಿರುವ ಜೆಡಿಎಸ್-ಬಿಜೆಪಿ ನಾಯಕರ ಪ್ರಕರಣಗಳ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಆಗ್ರಹಿಸಿದರು.

ಪಕ್ಷಪಾತ ಧೋರಣೆ: ರಾಜ್ಯದ ಕಾಂಗ್ರೆಸ್ ಸರಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ-ಜೆಡಿಎಸ್ ಪ್ರಯತ್ನ ನಡೆಸಿದೆ ಎಂದು ಕಿಡಿಕಾರಿದ ಕಾಂಗ್ರೆಸ್ ನಾಯಕರು, ರಾಜಭವನ ರಾಜಕೀಯ ಭವನವಾಗಿ ಮಾರ್ಪಟ್ಟಿದೆ. ರಾಜ್ಯಪಾಲರು ಪಕ್ಷಪಾತ ಧೋರಣೆ ತಾಳಿದ್ದಾರೆ. ಸರಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ ಹೈಕಮಾಂಡ್ ಜತೆ ರಾಜ್ಯಪಾಲರು ಕೈ ಜೋಡಿಸಿದ್ದಾರೆ. ಪಕ್ಷಪಾತಿ ರಾಜ್ಯಪಾಲರು ಬಿಜೆಪಿಯ ಚೇಲಾ ಆಗಿದ್ದಾರೆ ಎಂಬ ಭಿತ್ತಿಪತ್ರಗಳನ್ನು ಹಿಡಿದಿದ್ದರು. ಪ್ರತಿಪಕ್ಷ ನಾಯಕರ ವಿರುದ್ಧ ತನಿಖೆ ಬೇಡವೇ? ಕಣ್ಮುಚ್ಚಿದ ಪಕ್ಷಪಾತಿ ರಾಜ್ಯಪಾಲರು ತೊಲಗಲಿ ತೊಲಗಲಿ ಎಂಬ ಘೋಷಣೆಗಳನ್ನು ಕೂಗಿ ರಾಜ್ಯಪಾಲರ ನಡೆಯನ್ನು ಖಂಡಿಸಿದರು.

ರಾಜಭವನಕ್ಕೆ ತೆರಳುವ ಮೊದಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸಚಿವರು, ಕಾಂಗ್ರೆಸ್ ಶಾಸಕರು, ಸಂಸದರು ಸೇರಿದಂತೆ ಪ್ರಮುಖ ನಾಯಕರು ರಾಜ್ಯಪಾಲರ ವಿರುದ್ಧ ಪ್ರತಿಭಟನೆ ನಡೆಸಿದರು.

- ರಾಜ್ಯಪಾಲರ ಭೇಟಿಯಿಂದ ದೂರ ಉಳಿದ ಮುಖ್ಯಮಂತ್ರಿ ಸಿದ್ದರಾಮಯ್ಯ
- ಬಿಜೆಪಿ, ಜೆಡಿಎಸ್ ನಾಯಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿಗೆ ಮನವಿ
- ತಮ್ಮ ಮುಂದೆ ಯಾವುದೇ ಪ್ರಕರಣಗಳಿಲ್ಲವೆಂದು ಹೇಳಿರುವ ರಾಜ್ಯಪಾಲ ಗೆಹ್ಲೋಟ್
- ರಾಜ್ಯಪಾಲರು ಪಕ್ಷಪಾತಿ ಧೋರಣೆ ಅನುಸರಣೆ ಎಂದು ಆರೋಪಿಸಿದ ಕಾಂಗ್ರೆಸ್

ಯಾರೋ ದೂರು ಕೊಟ್ಟರೆಂದು ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಆದರೆ, ಬಿಜೆಪಿ-ಜೆಡಿಎಸ್ ವಿರುದ್ಧ ತನಿಖಾ ವರದಿ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡುತ್ತಿಲ್ಲ. ರಾಜಭವನ ರಾಜಕೀಯ ಭವನ ಆಗಬಾರದು. ಸಂವಿಧಾನದಲ್ಲಿ ರಚನೆಯಾದ ಪೀಠ ರಾಜ್ಯಪಾಲ ರದ್ದು. ಇಂತಹ ರಾಜ್ಯಪಾಲರಿಂದ ಪ್ರಜಾಪ್ರಭುತ್ವದ ಕಗ್ಗೊಲೆ ಆಗಬಾರದು.

- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಮೇಲೆ ಮುಡಾ ನಿವೇಶನ ಪಡೆಯಲು ಪ್ರಭಾವ ಬೀರಿರುವ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಅಗತ್ಯವಿಲ್ಲ ಎಂದು ಈಗಾಗಲೇ ನಾವೆಲ್ಲ ಹೇಳಿದ್ದೇವೆ. ಹೀಗಾಗಿ ಊಹಾಪೋಹಕ್ಕೆ ಅವಕಾಶವಿಲ್ಲ.

- ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಹೈಕೋರ್ಟ್‌ನಲ್ಲಿ 7 ಗಂಟೆಗೂ ಹೆಚ್ಚು ವಾದ ಮಂಡನೆ
ಮನು ಸಿಂಘ್ವಿ ವಾದಕ್ಕೆ ಸೋಮವಾರ ಅವಕಾಶ

ದಿನವಿಡೀ ವಿಚಾರಣೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಭಿಯೋಜನೆಗೆ ಅವಕಾಶ ನೀಡಿರು ವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆ ಇಡೀ ದಿನ ನಡೆದರೂ, ವಿಚಾರಣೆ ಪೂರ್ಣಗೊಳ್ಳದ ಹಿನ್ನೆಲೆಯನ್ನು ಸೋಮವಾರ ಮಧ್ಯಾಹ್ನ 1.30ರ ಬಳಿಕ ವಿಚಾರಣೆ ಮುಂದೂಡಲಾಗಿದೆ. ಆ ಮೂಲಕ ಮುಖ್ಯ ಮಂತ್ರಿ ಸಿದ್ದರಾಮಯ್ಯಗೆ ಹೈಕೋರ್ಟ್‌ನಲ್ಲಿ ಇನ್ನೆರಡು ದಿನ ತಾತ್ಕಾಲಿಕ ರಿಲೀಫ್ ಸಿಕ್ಕಿದೆ.

ನ್ಯಾ.ನಾಗಮೋಹನ್ ದಾಸ್ ಅವರ ಏಕಸದಸ್ಯ ಪೀಠದ ಮುಂದೆ ಶನಿವಾರ ಇಡೀ ದಿನ ನಡೆದ ಅರ್ಜಿ ವಿಚಾರಣೆ ನಡೆಯಿತು. ಈ ವೇಳೆ ಅಬ್ರಾಹಂ ಪರ ವಕೀಲ ರಂಗನಾಥ್ ಅವರು, ಕೆಳಹಂತದಲ್ಲಿ ಬಾಕಿಯಿರುವ ಅರ್ಜಿ ಯನ್ನು ಕೈಗೆತ್ತಿಕೊಳ್ಳಲು ಅವಕಾಶ ನೀಡುವಂತೆ ಮನವಿ ಮಾಡಿದರು. ಆದರೆ ಇದಕ್ಕೆ ಒಪ್ಪದ ನ್ಯಾಯಮೂರ್ತಿಗಳು, ಅಷ್ಟು ಅವಸರವೇನಿದೆ? ಶೀಘ್ರ ವಿಚಾರಣೆ ಮುಗಿಸೋಣ. ಅಲ್ಲಿಯವರೆಗೆ ಕೆಳಹಂತದಲ್ಲಿ ವಿಚಾರಣೆಗೆ ಅವಕಾಶ ನೀಡಲು ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ರಾಜ್ಯಪಾಲರ ಪರ ವಕಾಲತ್ತು ವಹಿಸಿದ ತುಷಾರ್ ಮೆಹ್ತಾ, ಮುಖ್ಯಮಂತ್ರಿ ವಿರುದ್ಧದ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರಿಂದ ವಿವೇಚನೆ ಬಳಸಿಯೇ ಅನುಮತಿ ನೀಡಲಾಗಿದೆ ಎಂದು ವಾದ ಮಂಡಿಸಿದರು. → 4

ರಾಜ್ಯಪಾಲರ ಮುಂದೆ ಯಾವ ಪ್ರಕರಣ ಬಾಕಿಯಿಲ್ಲ

ವಿಚಾರಣೆಯನ್ನು ಮುಂದೂಡುವ ಸಮಯದಲ್ಲಿ ಮಧ್ಯಪ್ರವೇಶಿಸಿದ ಅಬ್ರಹಾಂ ಪರ ವಕೀಲರಾದ ರಂಗನಾಥ್ ರೆಡ್ಡಿ, ರಾಜ್ಯಪಾಲರ ಮುಂದೆ ಯಾವುದೇ ಜನಪ್ರತಿನಿಧಿಗಳ ಪ್ರಾಸಿಕ್ಯೂಷನ್ ಅನುಮತಿ ಬಾಕಿಯಿಲ್ಲ ಎಂದು ವಾದಿಸಿದರು. ಇದಕ್ಕೆ ನ್ಯಾಯಮೂರ್ತಿ ಗಳು, ಈ ವಿಷಯ ನಿಮಗೆ ಹೇಗೆ ಗೊತ್ತು? ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರಂಗನಾಥ್ ರೆಡ್ಡಿ ಅವರು ಆರ್‌ಟಿಐ ಮೂಲಕ ಮಾಹಿತಿ ಪಡೆದುಕೊಳ್ಳಲಾ ಗಿದೆ. ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ರಾಜ್ಯಪಾಲರ ಮುಂದೆ ಸದ್ಯ ಯಾವುದೇ ಪ್ರಾಸಿಕ್ಯೂಷನ್ ಮನವಿ ಅರ್ಜಿ ಬಾಕಿ ಇಲ್ಲ ಎಂದು ವಾದ ಮಂಡಿಸಿದರು. ಈ ವೇಳೆ ಎಜಿ ಶಶಿಕಿರಣ್ ಶೆಟ್ಟಿ ಅವರು ವಾದಕ್ಕೆ ಮನವಿ ಮಾಡಿದರು. ಆಗ ಸಿಎಂ ಪರ ವಕೀಲರಾದ ಅಭಿಷೇಕ್ ಮನು ಸಿಂಘ್ವಿ ಅವರು ಪ್ರತಿವಾದಿಗಳ ವಾದಕ್ಕೆ ಉತ್ತರ ಕೊಡಲು ಸಮಯಾವಕಾಶ ನೀಡುವಂತೆ ಕೋರಿದರು.

ಶಂಕಿತ ಉಗ್ರ ಸೆರೆ

ಬೆಂಗಳೂರು: ತಮಿಳುನಾಡು ಹಿಜ್ಬ್-ಉತ್-ತಹ್ರೀರ್ ಪ್ರಕರಣದ ಪ್ರಮುಖ ಆರೋಪಿ ಅಜೀಜ್ ಅಹಮದ್ ಅಲಿಯಾಸ್ ಜಲೀಲ್ ಅಜೀಜ್ ಅಹ್ಮದ್‌ನನ್ನು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿದೇಶಕ್ಕೆ ಪರಾರಿಯಾಗಲು ಪ್ರಯತ್ನಿಸುತ್ತಿದ್ದಾಗ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿದೆ.

ಉಗ್ರಗಾಮಿ ಹಾಗೂ ಇಸ್ಲಾಂ ಮೂಲಭೂತ ಸಿದ್ಧಾಂತದಿಂದ ಪ್ರಭಾವಿತವಾಗಿ ಜಗತ್ತಿನ ಇಸ್ಲಾಮೀಕರಣ ಮತ್ತು ಇಸ್ಲಾಮಿಕ್ ಕಾನೂನು ಸ್ಥಾಪಿಸುವ ಗುರಿಯೊಂದಿಗೆ ಕೆಲಸ ಮಾಡುತ್ತಿದ್ದ ಆರೋಪದಲ್ಲಿ ಆರು ಮಂದಿ ವಿರುದ್ಧ ಎನ್‌ಐಎ ಪ್ರಕರಣ ದಾಖಲಿಸಿಕೊಂಡಿತ್ತು. ಹಿಜ್ಬ್-ಉತ್-ತಹ್ರೀನರ್ ಸಂಸ್ಥಾಪಕ ತಾಕಿ ಅಲ್-ದಿನ್ ಅಲ್-ನಭಾನಿ ಬರೆದ ಸಂವಿ ಧಾನವನ್ನು ಭಾರತದಲ್ಲಿ ಜಾರಿಗೊಳಿಸುವ ಗುರಿಯನ್ನು ಆರೋಪಿಗಳು ಹೊಂದಿದ್ದರು ಎಂದು ಎನ್‌ಐಎ ತಿಳಿಸಿದೆ.

ಪತಂಜಲಿಗೆ ನೋಟಿಸ್

ದೆಹಲಿ: ಪತಂಜಲಿ ಕಂಪನಿ ಮಾರುಕಟ್ಟೆಗೆ ಬಿಡುಗಡೆ ಮಾಡಿರುವ ದಿವ್ಯ ಮಂಜನ್ ಹಲ್ಲಿನ ಪುಡಿಯ ಮೇಲೆ ಸಸ್ಯಾಹಾರ ಎಂದು ನಮೂದು ಮಾಡಿ, ಹಸಿರು ಬಣ್ಣದ ಚುಕ್ಕಿ ಇದೆ. ಆದರೆ, ಈ ಉತ್ಪನ್ನದಲ್ಲಿ ಮಾಂಸಾಹಾರವನ್ನು ಬಳಸಲಾಗಿದೆ ಎಂದು ಆರೋಪಿಸಿ ವಕೀಲ ಯತಿನ್ ಶರ್ಮಾ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದಾರೆ. ಇದು ಮಿಸ್ ಬ್ರ್ಯಾಂಡಿಂಗ್ ಮತ್ತು ಡ್ರಗ್ಸ್ ಮತ್ತು ಕಾಸ್ಮೆಟಿಕ್ಸ್ ಕಾಯಿದೆಯ ಉಲ್ಲಂಘನೆಯಾಗಿದೆ ಎಂದು ಅರ್ಜಿದಾರರು ವಾದ ಮಾಡಿದ್ದಾರೆ. ಅರ್ಜಿ ದಾಖಲಾಗುತ್ತಿದ್ದಂತೆ ಪತಂಜಲಿ ಆಯುರ್ವೇದ ಹಾಗೂ ಕೇಂದ್ರ ಸರಕಾರಕ್ಕೆ ದೆಹಲಿ ಹೈಕೋರ್ಟ್ ನೋಟಿಸ್ ಜಾರಿ ಮಾಡಿದೆ.

ಅಮೆರಿಕ ಟೆನಿಸ್: ಜೊಕೊವಿಚ್, ಆಲ್ಕರಾಜ್‌ಗೆ ಸೋಲು,

ನ್ಯೂಯಾರ್ಕ್: ಅಮೆರಿಕ ಓಪನ್ ಗ್ರ್ಯಾಂಡ್ ಸ್ಲ್ಯಾಮ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಮೂರನೇ ಸುತ್ತಿನಲ್ಲಿ ಹಾಲಿ ಚಾಂಪಿಯನ್, 24 ಬಾರಿಯ ಗ್ರ್ಯಾನ್‌ಸ್ಲ್ಯಾಮ್ ಚಾಂಪಿಯನ್ ಸರ್ಬಿಯಾದ ನೊವಾಕ್ ಜೊಕೊವಿಚ್‌ಗೆ ಆಘಾತಕಾರಿ ಸೋಲು ಎದುರಾಗಿದ್ದು, ಕೂಟದಿಂದಲೇ ನಿರ್ಗಮಿಸಿದ್ದಾರೆ. ಜೊಕೊವಿಚ್ ಅವರು 28ನೇ ಶ್ರೇಯಾಂಕದ ಆಸ್ಟ್ರೇಲಿಯಾದ ಅಲೆಕ್ಸಿ ಪೊಪಿರಿನ್ ವಿರುದ್ಧ 6-4, 6-4, 2-6, 6-4ರ ಅಂತರದಲ್ಲಿ ಸೋಲು ಅನುಭವಿಸಿದ್ದಾರೆ.

ಗ್ರ್ಯಾನ್ ಸ್ಲಾಂನಲ್ಲಿ ಸತತ 15 ಪಂದ್ಯ ಗೆದ್ದಿದ್ದ ಸ್ಪೇನ್‌ನ ಕಾರ್ಲೋಸ್ ಆಲ್ಕರಜ್ ಅವರಿಗೂ 2ನೇ ಸುತ್ತಿನಲ್ಲಿ ಸೋಲಿನ ಆಘಾತ ಎದುರಾಗಿದೆ. ವಿಶ್ವ ನಂ.3 ಆಲ್ಕರಜ್‌ಗೆ ವಿಶ್ವ ರ್‍ಯಾಂಕಿಂಗ್‌ನಲ್ಲಿ 74ನೇ ಸ್ಥಾನದಲ್ಲಿರುವ ನೆದರ್‌ಲೆಂಡ್‌ನ ಬೊಟಿಕ್ ವಾನ್ ಡೆ ಝೂಂಡ್‌ಲ್ ವಿರುದ್ಧ 1-6, 5-7, 4-6 ನೇರ ಸೆಟ್‌ಗಳಲ್ಲಿ ಸೋಲು ಎದುರಾಯಿತು.

ಭಾರತಕ್ಕೆ 5ನೇ ಪದಕ ತಂದು ಕೊಟ್ಟ ಫ್ರಾನ್ಸಿಸ್
ಶೂಟಿಂಗ್‌ನಲ್ಲಿ ರುಬಿನಾಗೆ ಕಂಚು

ಶಾತೋಹು: ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ಪ್ಯಾರಾಲಿಂಪಿಕ್ಸ್‌ನಲ್ಲಿ ಮಹಿಳೆಯರ ಏರ್ ಪಿಸ್ತೂಲ್ ಎಸ್‌ಎಚ್1 10 ಮೀಟರ್ ವಿಭಾಗದಲ್ಲಿ ಭಾರತದ ರುಬಿನಾ ಫ್ರಾನ್ಸಿಸ್ ಶನಿವಾರ ಕಂಚಿನ ಪದಕ ಜಯಿಸಿದ್ದಾರೆ. ಆ ಮೂಲಕ ಶೂಟಿಂಗ್‌ನಲ್ಲಿ ಭಾರತಕ್ಕೆ ನಾಲ್ಕು ಪದಕಗಳು ಲಭಿಸಿವೆ. ಇರಾನ್‌ನ ಜವನ್‌ಮರ್ಡಿ ಸರೆ ಅವರು 236.8 ಅಂಕಗಳನ್ನು ಗಳಿಸುವ ಮೂಲಕ ಸತತ ಮೂರನೇ ಒಲಿಂಪಿಕ್ಸ್ ಚಿನ್ನವನ್ನು ತಮ್ಮದಾಗಿಸಿ ಕೊಂಡರು. ವಿಶ್ವ ದಾಖಲೆ ಹೊಂದಿರುವ ಟರ್ಕಿಯ ಓಝ್ಗಾನ್ ಆಯ್ಸೆಲ್ ಅವರು 231.1 ಅಂಕಗಳೊಂದಿಗೆ ಬೆಳ್ಳಿ ಪದಕಕ್ಕೆ ತೃಪ್ತಿಪಟ್ಟು ಕೊಂಡರು. ಜಗತ್ತಿನ ಸರ್ವಶ್ರೇಷ್ಠ ಶೂಟರ್‌ಗಳೊಂದಿಗೆ ನಿಕಟ ಪೈಪೋಟಿ ನೀಡಿದ 25 ವರ್ಷದ ರುಬಿನಾ, 211.1 ಅಂಕಗಳನ್ನು ಗಳಿಸಿ ಕಂಚಿನ ಪದಕಕ್ಕೆ ಮುತ್ತಿಕ್ಕಿದರು.

- ಪ್ಯಾರಿಸ್‌ಗೆ ತೆರಳಲು ಭಾರತ ತಂಡ ಅಣಿಯಾದ ಕೆಲವೇ ದಿನಗಳ ಮೊದಲು ವೈಲ್ಡ್ ಕಾರ್ಡ್ ಮೂಲಕ ತಂಡ ಸೇರಿದ್ದ ರುಬಿನಾ
- ಕಂಚಿನ ಪದಕ ಜಯಿಸುವ ಮೂಲಕ ಭಾರತಕ್ಕೆ ಶೂಟಿಂಗ್‌ನಲ್ಲಿ 4 ಹಾಗೂ ಒಟ್ಟಾರೆ 5 ಪದಕಗಳು ಲಭಿಸಿದಂತಾಗಿದೆ

22 ಜನರಿದ್ದ ರಷ್ಯಾ ಹೆಲಿಕಾಪ್ಟರ್ ನಾಪತ್ತೆ

ಮಾಸ್ಕೊ: ರಷ್ಯಾದ ವಚ್ಕಜೆಟ್ಸ್ ಜ್ವಾಲಾಮುಖಿ ಬಳಿಯ ಸೇನಾನೆಲೆಯಿಂದ ಹೊರಟಿದ್ದ, ಮೂವರು ಸಿಬ್ಬಂದಿ ಮತ್ತು 19 ಪ್ರಯಾಣಿ ಕರನ್ನು ಹೊತ್ತೊಯ್ಯುತ್ತಿದ್ದ ಎಂಐ-8ಟಿ ಹೆಲಿಕಾಪ್ಟರ್ ಕಾಣೆಯಾಗಿದೆ. ಅದು ಬಹಳ ಹೊತ್ತಾದರೂ ನಿಗದಿತ ಸ್ಥಳವನ್ನು ತಲುಪಿಯೇ ಇಲ್ಲ. ಪೂರ್ವ ಕಂಚಟ್ಕಾ ಪೆನಿನ್ಸುಲಾದಲ್ಲಿ ಕಾಪ್ಟರ್ ನಾಪತ್ತೆಯಾಗಿದೆ ಎಂದು ರಾಯಿಟರ್ಸ್ ವರದಿ ಮಾಡಿದೆ. 1960ರ ದಶಕದ, ಡಬಲ್ ಎಂಜಿನ್ ಹೆಲಿಕಾಪ್ಟರ್ ರಷ್ಯಾದಲ್ಲಿ ವ್ಯಾಪಕವಾಗಿ ಬಳಕೆಯಾಗುತ್ತಿದೆ.

ಎಮರ್ಜೆನ್ಸಿಗೆ ಸಿಗದ ಪ್ರಮಾಣಪತ್ರ

ದೆಹಲಿ: ಬಿಜೆಪಿ ಸಂಸದೆ ಕಂಗನಾ ರಣಾವತ್ ನಿರ್ಮಿಸಿ ನಟಿಸಿದ್ದ 'ಎಮರ್ಜೆನ್ಸಿ' ಚಲನಚಿತ್ರಕ್ಕೆ ಸೆನ್ಸಾರ್ ಮಂಡಳಿಯಿಂದ ಈವರೆಗೂ ಪ್ರಮಾಣಪತ್ರ ಸಿಗದ ಕಾರಣ ನಿಗದಿಯಂತೆ ಸೆ.6ರಂದು ಸಿನಿಮಾ ತೆರೆಗೆ ಬರುವುದು ಅನುಮಾನವಾಗಿದೆ. ಸಿಖ್ಖರ ಸಂಘಟನೆಗಳ ತೀವ್ರ ವಿರೋಧ ಮತ್ತು ಸೆನ್ಸಾರ್ ಮಂಡಳಿ ವಕೀಲರ ಮೂಲಕ ನೋಟಿಸ್ ನೀಡಿದ್ದರಿಂದ ಮಂಡಳಿ ಈವರೆಗೂ 'ಎಮರ್ಜೆನ್ಸಿ' ಸಿನಿಮಾಗೆ ಪ್ರದರ್ಶನಕ್ಕೆ ಸಮ್ಮತಿ ನೀಡುವ ಪ್ರಮಾಣಪತ್ರ ಕೊಟ್ಟಿಲ್ಲ ಎಂದು ತಿಳಿದುಬಂದಿದೆ.

ಕನ್ನಡ ವೃದ್ಧರ ಭಾಷೆಯಾಗುತ್ತಿದೆ: ಡಾ. ನಾ ಸೋಮೇಶ್ವರ ಕಳವಳ

ಅಕ್ಕ ಸಮ್ಮೇಳನದಲ್ಲಿ ಕನ್ನಡ ಕಲರವ

ಬೆಂಗಳೂರು: ಅಮೆರಿಕದ ಕನ್ನಡ ಕೂಟಗಳ ಆಗರ (ಅಕ್ಕ) ಆಶ್ರಯದಲ್ಲಿ 12ನೇ ವಿಶ್ವ ಕನ್ನಡ ಸಮ್ಮೇಳನಕ್ಕೆ ಅಮೆರಿಕದ ವರ್ಜಿನಿಯಾ ರಾಜ್ಯದ ಗ್ರೇಟರ್ ರಿಚ್ಮಂಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಅದ್ದೂರಿ ಚಾಲನೆ ದೊರೆತಿದೆ.

ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರು ಒಗ್ಗೂಡಿ ನಡೆಸುತ್ತಿರುವ ಈ ವಿಶ್ವ ಕನ್ನಡ ಸಮ್ಮೇಳನಕ್ಕೆ ರಾಜ್ಯದ 17 ಪೌರಕಾರ್ಮಿಕರು, ತಮಟೆ, ನಗಾರಿ, ವಾದ್ಯ ವೃಂದದ ಜಾನಪದ ಕಲಾವಿದರು, ಮೇರು ಸಾಹಿತಿಗಳು, ಯಕ್ಷಗಾನ, ಸಿನಿಮಾ, ನಾಟಕ, ರಂಗಭೂಮಿ ಸೇರಿದಂತೆ ಪ್ರಮುಖ ಕಲಾವಿದರು, ಗಾಯಕರು, ರಾಜಕೀಯ ನಾಯಕರು, ಸುತ್ತೂರು, ಆದಿಚುಂಚನಗಿರಿ ಶ್ರೀ, ಶ್ವಾಸಗುರು ವಚನಾನಂದ ಶ್ರೀ ಸೇರಿದಂತೆ ಹಲವು ಸ್ವಾಮೀಜಿಗಳು ಆಗಮಿಸಿದ್ದು ಪ್ರೇಮನಗರಿಯಲ್ಲಿ ಕನ್ನಡ ಲೋಕವೇ ಮೈ ತಳೆದಿದೆ.

ಸುಧೀಂದ್ರ ಕುಲಕರ್ಣಿ

ಸುದರ್ಶನ ಭಕ್ತವತ್ಸಲ

ಶುಕ್ರವಾರ ಸಮ್ಮೇಳನಕ್ಕೆ ಚಾಲನೆ ನೀಡಿ ಆಶಯ ಭಾಷಣ ಮಾಡಿದ 'ಥಟ್ ಅಂಥ ಹೇಳಿ' ಖ್ಯಾತಿಯ ಡಾ. ನಾ.ಸೋಮೇಶ್ವರ ಅವರು ಅಮೆರಿಕನ್ನಡರ ಕನ್ನಡ ಪ್ರೀತಿ, ಸಾಹಿತ್ಯ ಸೇವೆ, ಕನ್ನಡದ ಸದ್ಯದ ಸ್ಥಿತಿ ಮತ್ತು ಭವಿಷ್ಯದ ಬಗ್ಗೆ ವಿಸ್ತೃತವಾಗಿ ಪ್ರಸ್ತಾಪಿಸಿದರು. ಕನ್ನಡ ಭಾಷೆಗೆ ಶ್ರೀಮಂತ ಪರಂಪರೆಯಿದ್ದರೂ ಅದರ ಬಗ್ಗೆ ಹೆಮ್ಮೆ ಪಡುವವರು ವೃದ್ಧರು ಮತ್ತು ಮಧ್ಯಮ ವರ್ಗದವರು ಮಾತ್ರ. ಕನ್ನಡ ಭಾಷೆಯ ಬಗ್ಗೆ ಸರಕಾರ ಹಾಗೂ ಪಾಲಕರ ಉದಾಸೀನತೆಯು ಅಕ್ಷಮ್ಯ. ಕರ್ನಾಟಕದಲ್ಲಿ ಕನ್ನಡವನ್ನು ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಮುಂದೆ ಕನ್ನಡಿಗರು ಅಲ್ಪಸಂಖ್ಯಾತರಾದರೆ ಆಶ್ಚರ್ಯ ಪಡಬೇಕಾಗಿಲ್ಲ ಎಂದವರು ಎಚ್ಚರಿಸಿದರು.

ಸುಧೀಂದ್ರ ಕುಲಕರ್ಣಿ ಅಧ್ಯಕ್ಷತೆಯ ರಿಚ್ಮಂಡ್ ಕನ್ನಡ ಸಂಘ ಮತ್ತು ಸುದರ್ಶನ ಭಕ್ತವತ್ಸಲ ಅಧ್ಯಕ್ಷತೆಯ ಕಾವೇರಿ ಕನ್ನಡ ಸಂಘದ ಜಂಟಿ ಆಶ್ರಯದಲ್ಲಿ ಈ ಬಾರಿಯ ಸಮ್ಮೇಳನ ಆಯೋಜನೆಗೊಂಡಿದೆ. ಶನಿವಾರ ಸಮಾರಂಭ ಉದ್ಘಾಟನೆಗೆ ಮುನ್ನ ನಡೆದ ಮೆರವಣಿಗೆಯಲ್ಲಿ ಅಮೆರಿಕದ ನಾನಾ ಪ್ರಾಂತ್ಯಗಳಿಂದ ಬಂದ ಕನ್ನಡ ಸಂಘಗಳ ಪ್ರತಿನಿಧಿಗಳು ಸಾಂಪ್ರದಾಯಿಕ ಉಡುಗೆ ತೊಟ್ಟು ಕನ್ನಡ ಪುಳಕ ಮೂಡಿಸಿದರು. → 4

ಅಮೆರಿಕಾದ ವರ್ಜಿನಿಯಾದಲ್ಲಿ ಶುರುವಾಗಿರುವ 12ನೇ ಅಕ್ಕ ವಿಶ್ವ ಸಮ್ಮೇಳನ ಕಾರ್ಯಕ್ರಮಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ, ವಚನಾನಂದ ಸ್ವಾಮೀಜಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೃಷಿ ಸಚಿವ ಎನ್. ಚಲುವನಾರಾಯಣಸ್ವಾಮಿ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಮತ್ತಿತರರು ಚಾಲನೆ ನೀಡಿದರು.

ಮೂರು ತನಿಖಾ ತಂಡಗಳಿಂದ ಪರಪ್ಪನ ಅಗ್ರಹಾರಕ್ಕೆ ಭೇಟಿ, ಸೌಲಭ್ಯಗಳ ಪರಿಶೀಲನೆ

ದರ್ಶನ್‌ಗೆ ಆತಿಥ್ಯ: ವರದಿಗೆ ಸೂಚನೆ

ಬೆಂಗಳೂರು: ಪರಪ್ಪನ ಅಗ್ರಹಾರದಲ್ಲಿ ನಟ ದರ್ಶನ್‌ಗೆ ಆತಿಥ್ಯ ನೀಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ತಿಂಗಳಲ್ಲಿ ವರದಿ ನೀಡುವಂತೆ ತನಿಖಾಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಮೂರು ತನಿಖಾ ತಂಡಗಳು ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದುಕೊಂಡಿವೆ.

ದರ್ಶನ್ ಹಾಗೂ ಕುಖ್ಯಾತ ರೌಡಿಗಳಿಗೆ ಯಾವ ಯಾವ ರೀತಿಯ ಸೌಲಭ್ಯಗಳನ್ನು ನೀಡುತ್ತಿದ್ದೀರಾ? ಎಷ್ಟು ದಿನಗಳಿಂದ ಈ ಎಲ್ಲ ಸವಲತ್ತುಗಳನ್ನು ಕೊಟ್ಟಿದ್ದೀರಾ? ಬೇರೆ ಕೈದಿ, ವಿಚಾರಣಾ ಕೈದಿಗಳಿಗೂ ಈ ರೀತಿಯ ಸೌಲಭ್ಯ ಗಳನ್ನು ನೀಡಿದ್ದೀರಾ? ಎನ್ನುವ ನಿಟ್ಟಿನಲ್ಲಿ ತನಿಖಾ ತಂಡಗಳು ಅಲ್ಲಿನ ಸಿಬ್ಬಂದಿ, ಹಿರಿಯ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸುತ್ತಿವೆ.

ಡಿಜಿಪಿಗೆ ನೋಟಿಸ್: ದರ್ಶನ್ ಪ್ರಕರಣದಿಂದ ಸರಕಾರ ಮುಜುಗರಕ್ಕೆ ಸಿಲುಕಿದೆ. ಇದರಿಂದ ಸಿಎಂ ಅವರು ಹಿರಿಯ ಅಧಿಕಾರಿಗಳ ವಿರುದ್ಧವೂ ಕ್ರಮವಹಿಸುವಂತೆ ಸೂಚನೆ ನೀಡಿದ ಬೆನ್ನಲ್ಲೇ, ಕಾರಾಗೃಹ ಇಲಾಖೆ ಡಿಜಿಪಿ ಮಾಲಿನಿ ಕೃಷ್ಣಮೂರ್ತಿಗೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ನೋಟಿಸ್ ನೀಡಿದ್ದು, ಕರ್ತವ್ಯಲೋಪ ಎಲ್ಲಿಯಾಗಿದೆ ಎನ್ನುವ ಬಗ್ಗೆ ವರದಿ ನೀಡುವಂತೆ ಸೂಚನೆ ನೀಡಿದ್ದಾರೆ.

ಕಮೋಡ್‌ಗೆ ಬೇಡಿಕೆ

ದರ್ಶನ್ ಶೌಚಕ್ಕಾಗಿ ಸರ್ಜಿಕಲ್ ಚೇರ್ ಕೇಳಿರುವುದಾಗಿ ಕಾರಾಗೃಹ ಇಲಾಖೆಯ ಉತ್ತರ ವಲಯ ಉಪಮಹಾನಿರೀಕ್ಷಕ ಟಿ.ಪಿ.ಶೇಷ ತಿಳಿಸಿದ್ದಾರೆ. ಆಹಾರ ತೆಗೆದುಕೊಳ್ಳದಿರುವ ಬಗ್ಗೆ ದರ್ಶನ್ ಅವರನ್ನು ವಿಚಾರಿಸಲಾಯಿತು. 'ಜೈಲಿನಲ್ಲಿ ಇಂಡಿಯನ್ ಟಾಯ್ಲೆಟ್ ಇದೆ. ಬೆನ್ನೆಲುಬು ಸಮಸ್ಯೆ ಇರುವ ಕಾರಣ ಶೌಚಕ್ಕೆ ಕಷ್ಟವಾಗುತ್ತದೆ' ಎಂದು ಹೇಳಿದ್ದಾರೆ. ವೆಸ್ಟ್ರನ್ ಕಮೋಡ್ ಒದಗಿಸಿಕೊಡಿ ಅಥವಾ ಸರ್ಜಿಕಲ್ ಚೇರ್ ಆದರೂ ಕೊಡಿ' ಎಂದು ದರ್ಶನ್ ಕೇಳಿರುವುದಾಗಿ ಶೇಷ ತಿಳಿಸಿದರು.

ದರ್ಶನ್ ಭೇಟಿಯಾದ ಪತ್ನಿ

ದರ್ಶನ್‌ನನ್ನು ಭೇಟಿಯಾಗಲು ಅವರ ಪತ್ನಿ ವಿಜಯಲಕ್ಷ್ಮೀ ಶನಿವಾರ ಆಗಮಿಸಿದ್ದರು. ಎರಡು ಬ್ಯಾಗ್‌ನಲ್ಲಿ ದರ್ಶನ್ ಅವರಿಗೆ ಬಟ್ಟೆ, ಡ್ರೈ ಫ್ರೂಟ್ಸ್, ಹಲ್ಲುಜ್ಜುವ ಬ್ರೇಶ್, ಪೇಸ್ಟ್ ತೆಗೆದುಕೊಂಡು ಬಂದಿದ್ದರು. ಜೈಲಿನ ಭದ್ರತಾ ಪರಿಶೀಲನೆ ಕೊಠಡಿಯಲ್ಲಿ ಬ್ಯಾಗ್ ಪರಿಶೀಲನೆ ನಡೆಸಿದ ಬಳಿಕ ದರ್ಶನ್ ಕೊಠಡಿಗೆ ಪತ್ನಿ ತೆರಳಿದರು.

ಪವಿತ್ರಾ ಅರ್ಜಿ ರದ್ದು

ಎ1 ಆರೋಪಿ ಪವಿತ್ರಾಗೌಡಗೆ ಜಾಮೀನು ಮಂಜೂರು ಮಾಡುವಂತೆ ವಕೀಲ ಅನುಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು 57ನೇ ಸಿಸಿಎಚ್ ನ್ಯಾಯಾಲಯ ವಜಾ ಮಾಡಿದೆ.

ದರ್ಶನ್ ಎ1 ಅಥವಾ ಎ2 ಎನ್ನುವುದನ್ನು ತನಿಖಾಧಿಕಾರಿಗಳು ನಿರ್ಧರಿಸುತ್ತಾರೆ. ಫೋನ್ ಕಾಲ್, ವಿಡಿಯೋ ಕಾಲ್ ಮಾಡಿರುವ ಬಗ್ಗೆ ತನಿಖೆಗೆ ಸಿಸಿಬಿ ಮುಖ್ಯಸ್ಥ ಚಂದ್ರಗುಪ್ತ ಅವರನ್ನು ನೇಮಕ ಮಾಡಲಾಗಿದ್ದು, ವರದಿ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದು.

- ಡಾ.ಜಿ.ಪರಮೇಶ್ವರ್, ಗೃಹ ಸಚಿವ

ಸಮಾಚಾರ ಸಣ್ಣದಲ್ಲ

ಸೆ.2ರಿಂದ ಪ್ರವಚನ ಮಂಗಲೋತ್ಸವ

ಮೂಡಲಗಿ: ತಾಲೂಕಿನ ಅಳಿಮಟ್ಟಿ ಗ್ರಾಮದಲ್ಲಿ ಶ್ರಾವಣ ಮಾಸದ ನಿಮಿತ್ಯವಾಗಿ ಒಂದು ತಿಂಗಳ ಕಾಲ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ಕಳೆದ 24 ವರ್ಷಗಳಿಂದ ಪ್ರತಿವರ್ಷ ಶ್ರಾವಣ ಮಾಸದಲ್ಲಿ ಜರಗುತ್ತಿರುವ ಆಧ್ಯಾತ್ಮಿಕ ಪ್ರವಚನ ಕಾರ್ಯಕ್ರಮದ ಮಂಗಲೋತ್ಸವ ಕಾರ್ಯಕ್ರಮ ಸೆ.2 ಮತ್ತು 3 ರಂದು ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ ಎಂದು ಮಂಡಳಿಯ ಮುರಿಗೆಪ್ಪ ಹುಬ್ಬಳ್ಳಿ ತಿಳಿಸಿದ್ದಾರೆ. ಸೋಮವಾರ ಸೆ.2 ರಂದು ರಾತ್ರಿ 10 ಗಂಟೆಗೆ ಭಜನಾ ಕಾರ್ಯಕ್ರಮ ಜರುಗುವುದು. ಮಂಗಳವಾರ ಸೆ.3ರಂದು ಬೆಳಗ್ಗೆ 4 ಗಂಟೆಗೆ ವೇದಮೂರ್ತಿ ಶ್ರೀ ದಾನಯ್ಯ ಶಾಸ್ತ್ರಿಗಳು ಮಠಪತಿ ಅವರ ವೈಧಿಕತ್ವದಲ್ಲಿ ಶ್ರೀಬಸವೇಶ್ವರ ಕೃತ್ಯ ಗದ್ದುಗೆಗೆ ರುದ್ರಾಭಿಷೇಕ ಜರುಗುವು. ಬೆಳಗ್ಗೆ 9 ಗಂಟೆಗೆ ಸಕಲ ಮಂಗಲ ವಾದ್ಯಗಳೊಂದಿಗೆ ಕುಂಭೋತ್ಸವ , ಶ್ರೀ ಬಸವೇಶ್ವರ ಪಲ್ಲಕ್ಕಿ ಉತ್ಸವ ಜರುಗುವುದು.

ಅಥಣಿಯಲ್ಲಿ ಕವಿಗೋಷ್ಠಿ ಇಂದು

ಅಥಣಿ: ಸಾಹಿತಿ ಅಪ್ಪಾಸಾಹೇಬ ಅಲಿಬಾದಿ ಪೌಂಡೇಶನ್ ವತಿಯಿಂದ ಸೆ.1ರಂದು ಬೆಳಗ್ಗ 10 ಗಂಟೆಗೆ ಸ್ಥಳೀಯ ಆದರ್ಶ ನಗರದಲ್ಲಿರುವ ಆರ್. ಎಸ್. ಪಿ ಸಭಾಭವನದಲ್ಲಿ ಕವಿ ಅಪ್ಪಾಸಾಹೇಬ ಅಲಿಬಾದಿ ಅವರ ಸಮಗ್ರ ಕಾವ್ಯ ಕೃತಿಗಳ ಕಾವ್ಯಾವಲೋಕನ ಹಾಗೂ ಕವಿಗೋಷ್ಠಿ ಸಮಾರಂಭ ಆಯೋಜಿಸಲಾಗಿದೆ. ಈ ಸಮಾರಂಭವನ್ನು ಹಿರಿಯ ಸಾಹಿತಿ ಡಾ.ಬಾಳಾ ಸಾಹೇಬ ಲೋಕಪುರ ಉದ್ಘಾಟಿಸಲಿದ್ದಾರೆ. ಪಟ್ಟಣದ ಹಿರಿಯ ವೈದ್ಯ ಹಾಗೂ ಸಾಹಿತಿ ಡಾ.ಎ.ಎ.ಪಾಂಗಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ರವಿ ಪೂಜಾರಿ, ನ್ಯಾಯವಾದಿ ಹಾಗೂ ರಂಗಭೂಮಿ ಕಲಾವಿದ ಕೆ ಎಲ್ ಕುಂದರಗಿ ಆಗಮಿಸಲಿದ್ದಾರೆ.

ಗುರುವಂದನಾ ಕಾರ್ಯಕ್ರಮ ಇಂದು

ಸುರೇಬಾನ: ಸಮೀಪದ ಮನಿಹಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ 1993 ರಿಂದ 2000ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಂದ ಗುರುವಂದನೆ ಹಾಗೂ ಸ್ನೇಹ ಸಮ್ಮೇಳನ ಶಬರಿ ದೇವಿ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ಇಂದು ಜರುಗಲಿದೆ. ಶ್ರೀಗುರುದೇವ ಆತ್ಮಾನಂದರ ಪುಣ್ಯಶ್ರಮದ ಸಮರ್ಥ ಶಿವಾನಂದ ಮಹಾಸ್ವಾಮಿಜಿ, ಶಂಕಯ್ಯ ಹಿರೇಮಠ ಸ್ವಾಮಿಜಿ ದಿವ್ಯ ಸಾನಿಧ್ಯ ವಹಿಸುವರು. ಎಚ್.ಪಿ.ಎಸ್ ಶಾಲೆಯ ನಿವೃತ್ತಿ ಮುಖ್ಯೋಪಾಧ್ಯಾಯ ಎನ್.ಎಚ್. ಪಾಟೀಲ್ ಸೇರಿ ಅನೇಕರು ಭಾಗವಹಿಸುವರು.

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಇಂದು

ರಾಮದುರ್ಗ: ಪಟ್ಟಣದ ವಿದ್ಯುತ್ ವಿತರಣಾ ಉಪಕೇಂದ್ರದ ಎರಡನೇ ತ್ರೈಮಾಸಿಕ ನಿರ್ವಹಣಾ ತುರ್ತು ಕಾರ್ಯ ನಿಮಿತ್ತ ರಾಮದುರ್ಗ ಪಟ್ಟಣ ಸೇರಿದಂತೆ ಉಪಕೇಂದ್ರಕ್ಕೆ ಒಳಪಡುವ ಕೆಲ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಮುದಕವಿ 33ಕೆವಿ ಉಪಕೇಂದ್ರಕ್ಕೆ ಒಳಪಡುವ ಪ್ರದೇಶಗಳಲ್ಲಿ ಸೆ.1 ಭಾನುವಾರ ಬೆಳಗ್ಗೆ 9 ರಿಂದ ಸಂಜೆ 5ಗಂಟೆ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಉಪವಿಭಾಗದ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ತಾಲೂಕಿನ ಸಾಲಾಪೂರ, ಮುದೇನೂರ, ಸುನ್ನಾಳ, ಗೊಣಗನೂರ, ಓಬಳಾಪೂರ, ಹಲಗತ್ತಿ ರಂಕಪಲಕೊಪ್ಪ, ರಾಮದುರ್ಗ, ಕೊಳಚಿ, ಮಾಗನೂರ, ಚಿಲಮೂರ, ಈಐಡಿ ಪ್ಯಾರಿ ಶುಗರ್ಷ ಹಾಗೂ ಮುದಕವಿ ವಿದ್ಯುತ್ ಕೇಂದ್ರದ ಮೇಲೆ ಮುದಕವಿ, ಕರಡಿಗುಡ್ಡ, ತಿಮ್ಮಾಪೂರ, ಹೊಸಕೇರಿ, ಆನೇಗುದ್ದಿ ಗ್ರಾಮಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳ್ಳಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಇಲಾಖೆ ಪ್ರಕಟಣೆಯಲ್ಲಿ ಕೋರಿದೆ.

ಶರಣರಿಂದ ಅಲೆಮಾರಿ ಜನಾಂಗ ಮುಖ್ಯ ವಾಹಿನಿಗೆ

ರಾಯಬಾಗ: ಅಲೆಮಾರಿ ಜನಾಂಗವನ್ನು ಸಮಾಜದ ಮುಖ್ಯವಾಹಿನಿಗೆ ತರುವ ಕಾರ್ಯವನ್ನು 12ನೇ ಶತಮಾನದಲ್ಲಿಯೇ ಶಿವಶರಣ ಬಸವಣ್ಣನವರು ಮಾಡಿದ್ದಾರೆ ಎಂದು ಬೆಂಗಳೂರಿನ ಎಸ್.ಸಿ., ಎಸ್.ಟಿ. ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜೆ.ಪಲ್ಲವಿ ಹೇಳಿದರು. ಅಖಿಲ ಕರ್ನಾಟಕ ಕುಳುವ ಮಹಾಸಂಘ ತಾಲೂಕಾ ಘಟಕದ ಸಂಯುಕ್ತಾಶ್ರ ಯದಲ್ಲಿ ಶಿವಶರಣ ನೂಲಿ ಚಂದಯ್ಯನವರ 917ನೇ ಜಯಂತಿ ಉತ್ಸವದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಗಣೇಶೋತ್ಸವ ಸಿದ್ಧತೆ ಡಿಸಿ ಪೂರ್ವಭಾವಿ ಸಭೆ

12 ಕಡೆ ಏಕಗವಾಕ್ಷಿ ವ್ಯವಸ್ಥೆ | ಮಂಟಪದ ಅಳತೆ ಮಿತಿಯೊಳಗೆ ಇರಲಿ | ಕಸ ವಿಲೇವಾರಿಗೆ ತೊಂದರೆಯಾಗದಿರಲಿ | ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್

ಬೆಳಗಾವಿ: ಗಣೇಶೋತ್ಸವ ಮಂಡಳಿಗಳಿಗೆ ಸುಲಭವಾಗಿ ಹಾಗೂ ಶೀಘ್ರವಾಗಿ ಒಂದೇ ಕಡೆ ಅನುಮತಿ ನೀಡಲು ಅನುಕೂಲವಾಗುವಂತೆ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ 12 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಆಯಾ ಪೊಲೀಸ್ ಠಾಣೆಗಳಲ್ಲಿಯೇ ಏಕಗವಾಕ್ಷಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಜರುಗಿದ ಗಣೇಶ ಉತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹೆಸ್ಕಾಂ, ಪೊಲೀಸ್, ಮಹಾನಗರ ಪಾಲಿಕೆ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಆಯಾ ಪೊಲೀಸ್ ಠಾಣೆಯ ಏಕಗವಾಕ್ಷಿ ಕೇಂದ್ರದಲ್ಲಿ ಬೆಳಗ್ಗೆ 8 ರಿಂದ ರಾತ್ರಿ 8 ಗಂಟೆಯವರೆಗೆ ಉಪಸ್ಥಿತರಿದ್ದು, ಅಗತ್ಯ ಅನುಮತಿಯನ್ನು ನೀಡಲಿದ್ದಾರೆ ಎಂದು ಹೇಳಿದರು.

ಈ ಕುರಿತು ಏಕಗ ವಾಕ್ಷಿ ತಂಡಗಳಿಗಾಗಿ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದಂತೆ ಗಣೇಶ ಮಂಟಪಗಳನ್ನು ನಿರ್ಮಿಸಬೇಕು. ಸಾರ್ವಜನಿಕರ ಸಂಚಾರಕ್ಕೆ, ಮಹಾನಗರ ಪಾಲಿಕೆಯ ಕಸ ವಿಲೇವಾರಿ ಹಾಗೂ ಅಂಬ್ಯುಲೆನ್ಸ್ ಸಂಚಾರಕ್ಕೆ ತೊಂದರೆಯಾಗದಂತೆ ಮಂಟಪದ ಅಳತೆಯು ಮಿತಿಯೊಳಗೆ ಇರುವಂತೆ ನಿಗಾವಹಿಸಬೇಕು ಎಂದರು.

ನಗರದಲ್ಲಿ ಬಂಟ್ಟಿಂಗ್, ಬ್ಯಾನರ್ ಅಳವಡಿಕೆ ಕುರಿತು ನೀಡಲಾಗುವ ಅನುಮತಿಗಳ ವಿವರಗಳನ್ನು ಪೊಲೀಸ್ ಇಲಾಖೆಗೆ ನೀಡಲು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು. ಪಿ.ಒ.ಪಿ ಗಣೇಶ ಮೂರ್ತಿಗಳ ಬಳಸದಂತೆ ಪಾಲಿಕೆಯ ವಾಹನಗಳಲ್ಲಿ ಜಾಗೃತಿ ಮೂಡಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ನಗರದ ಕಪಿಲೇಶ್ವರ ಹೊಂಡಕ್ಕೆ ಭೇಟಿ ನೀಡಿ, ಗಣೇಶ ವಿಸರ್ಜನೆಗೆ ಸಂಬಂಧಿಸಿದಂತೆ ಸಿದ್ಧತೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿ ಮಹಮ್ಮದ್ ರೋಷನ್

ಕಪಿಲೇಶ್ವರ ಹೊಂಡಕ್ಕೆ ಡಿಸಿ ಭೇಟಿ

ಸಭೆಯ ಬಳಿಕ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ನಗರದ ಕಪಿಲೇಶ್ವರ ಹೊಂಡಕ್ಕೆ ಭೇಟಿ ನೀಡಿ, ಗಣೇಶ ವಿಸರ್ಜನೆಗೆ ಸಂಬಂಧಿಸಿದಂತೆ ಸಿದ್ಧತೆಗಳನ್ನು ಪರಿಶೀಲಿಸಿದರು. ಪ್ರತಿವರ್ಷದಂತೆ ಸ್ವಚ್ಛತೆ, ಬೆಳಕಿನ ವ್ಯವಸ್ಥೆ, ಭದ್ರತೆ ಮತ್ತಿತರ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ನಿರ್ದೇಶನ ನೀಡಿದರು.

ಪೊಲೀಸ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ಅವರು ಮಾತನಾಡಿ, ಪೊಲೀಸ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು. ಪೊಲೀಸ್ ಇಲಾಖೆ ಹಾಗೂ ವಿವಿಧ ಇಲಾಖೆಗಳು ಜಂಟಿಯಾಗಿ ನಗರದಲ್ಲಿ ಸಂಚರಿಸಿ ಗಣೇಶ ಪ್ರತಿಷ್ಠಾನ ಮಂಟಪಗಳ ಹಾಗೂ ಮೆರವಣಿಗೆಯ ಸ್ಥಳಗಳ ಕುರಿತು ಸಮೀಕ್ಷೆ ನಡೆಸಲು ಸೂಚಿಸಿದರು. ಮಹಾನಗರ ಪಾಲಿಕೆ ಆಯುಕ್ತ ಅಶೋಕ ದುಡಗುಂಟಿ, ಡಿ.ಸಿ.ಪಿ. ರೋಹನ ಜಗದೀಶ, ಎಸಿಪಿ ಶ್ರೀಕಾಂತ ಕಟ್ಟಿಮನಿ ಸೇರಿದಂತೆ ಮಹಾನಗರ ಪಾಲಕೆ, ಲೋಕೋಪಯೋಗಿ ಇಲಾಖೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಹದಗೆಟ್ಟ ರಸ್ತೆ: ಬೈಲಹೊಂಗಲದ ಜನತೆ ಕಂಗಾಲು, ಹಿಡಿಶಾಪ

ಶರೀಫ ನದಾಫ ಬೈಲಹೊಂಗಲ

ಪಟ್ಟಣದ ತೋಟಗಾರಿಕೆ ಇಲಾಖೆಯಿಂದ ಮುರಗೋಡ ಗ್ರಾಮದವರೆಗೆ ನಿರ್ಮಿಸಿದ ಅಳ್ನಾವರ-ಬೆಟಗೇರಿ ರಾಜ್ಯ ಹೆದ್ದಾರಿ ರಸ್ತೆಯನ್ನು ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಿಸಿದ ರಸ್ತೆ ಕೆಲವೇ ವರ್ಷಗಳಲ್ಲಿ ಹಾಳಾಗಿರುವುದರಿಂದ ನಾಗರಿಕರು ಅಧಿಕಾರಿಗಳ ವಿರುದ್ಧ ನಿತ್ಯ ಹಿಡಿಶಾಪ ಹಾಕುವಂತಾಗಿದೆ.

ಈ ರಸ್ತೆಯನ್ನು 2019 ರಲ್ಲಿ ಸುಮಾರು 17 ಕೋಟಿ ರು. ವೆಚ್ಚದಲ್ಲಿ ನಿರ್ಮಿಸಲಾಗಿತ್ತು. ಕಾಮಗಾರಿ ಪ್ರಾರಂಭ ಹಂತದಲ್ಲಿಯೇ ಕಳಪೆ ಕಾಮಗಾರಿ ಕುರಿತು ನಾಗರಿಕರು ಹಲವಾರು ಬಾರಿ ದೂರು ನೀಡಿ, ಮನವಿ ಸಲ್ಲಿಸಿದರು ಪ್ರಯೋಜನವಾಗಿಲ್ಲ. 5 ವರ್ಷದಲ್ಲೇ ಈ ರಸ್ತೆಯಲ್ಲಿ ಹೊಂಡಗಳು ನಿರ್ಮಾಣಗೊಂಡು ಕಳಪೆ ಮಟ್ಟದ ಕಾಮಗಾರಿಗೆ ಹಿಡಿದ ಕೈ ಗನ್ನಡಿಯಾಗಿದೆ. ವಾಹನ ಸವಾರರು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ.

ಕಳಪೆ ಕಾಮಗಾರಿ ಮೂಲಕ ಜನರ ತೆರಿಗೆ ಹಣ ಪೋಲು ಮಾಡುತ್ತಿರುವ ಅಧಿಕಾರಿಗಳ ನಡೆಗೆ ಸಾರ್ವಜನಿಕರು ಆಕ್ರೋಶ ಹೊರಹಾಕುತ್ತಿದ್ದಾರೆ. ಹದಗೆಟ್ಟ ರಸ್ತೆಯಲ್ಲಿ ನಿತ್ಯ ಸಂಚರಿಸುವ ವಾಹನ ಸವಾರರು ಕೈಯಲ್ಲಿ ಜೀವ ಹಿಡಿದುಕೊಂಡು ವಾಹನ ಚಲಾಯಿಸಬೇಕಾಗಿದೆ. ಅಜಾಗ್ರತೆಯಿಂದ ವಾಹನ ಚಲಾಯಿಸಿದರೆ ಪ್ರಾಣಕ್ಕೆ ಕುತ್ತು ತಂದೊಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೈಲಹೊಂಗಲ ಪಟ್ಟಣದಿಂದ ಅಳ್ನಾವರ-ಬೆಟಗೇರಿ ರಸ್ತೆ ಕಳಪೆ ಕಾಮಗಾರಿಯಿಂದ ಬಿದ್ದ ಹೊಂಡಗಳು

ಈ ಕುರಿತು ಲೋಕೋಪಯೋಗಿ ಇಲಾಖೆಯ ಸಿಬ್ಬಂದಿಯನ್ನು ಸಂಪರ್ಕಿಸಿದರೆ ಬೇಜಬ್ದಾರಿ ಉತ್ತರ ನೀಡುತ್ತಾರೆ. ರಸ್ತೆಯ ಅಕ್ಕಪಕ್ಕದ ಎರಡು ಬದಿಯಲ್ಲಿ ನಿರ್ಮಿಸಿದ ಫುಟ್ ಪಾತ್ ಕಸ-ಕಡ್ಡಿಗಳಿಂದ ತುಂಬಿದೆ. ವಾಯುವಿಹಾರಕ್ಕೆ ತೆರಳುವ ನಾಗರಿಕರು ಛೀಮಾರಿ ಹಾಕುತ್ತಿದ್ದಾರೆ. ಅಧಿಕಾರಿಗಳು ಎಚ್ಚೆತ್ತುಕೊಂಡು ತಗ್ಗು-ಗುಂಡಿಗಳನ್ನು ಶಾಶ್ವತವಾಗಿ ಮುಚ್ಚುತ್ತಾರೆ ಅಥವಾ ಕಾಟಾಚಾರಕ್ಕೆ ಕೆಲಸ ಮಾಡುತ್ತಾರಾ ಎಂಬುದನ್ನು ನೋಡಬೇಕು.

ಕಳಪೆ ಕಾಮಗಾರಿ: ರಸ್ತೆಯಲ್ಲಿ ಗುಂಡಿ

ಪಟ್ಟಣದಿಂದ ಮುರಗೋಡ ಗ್ರಾಮಕ್ಕೆ ತೆರಳುವ ರಾಜ್ಯ ಹೆದ್ದಾರಿ ರಸ್ತೆ ಕೆಲವೇ ವರ್ಷಗಳಲ್ಲಿ ಹಾಳಾಗಿರುವುದು ಕಳಪೆ ಕಾಮಗಾರಿಗೆ ಹಿಡಿದ ಕೈ ಗನ್ನಡಿಯಾಗಿದೆ. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎಂಬಂತೆ ತಗ್ಗು ಗುಂಡಿ ಬಿದ್ದ ರಸ್ತೆಯಲ್ಲಿ ಮಣ್ಣು ಹಾಕಿ ಮತ್ತಷ್ಟು ರಸ್ತೆಯನ್ನು ಹಾಳು ಮಾಡುತ್ತಿದ್ದಾರೆ. ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು ಎಂದು ಬೈಲಹೊಂಗಲದ ಗುಂಡಪ್ಪ ಸನದಿ ತಿಳಿಸಿದರು.

ಅಳ್ನಾವರ-ಬೆಟಗೇರಿ ರಸ್ತೆ (ಮುರಗೋಡ ರಸ್ತೆ) ರಾಜ್ಯ ಹೆದ್ದಾರಿ ರಸ್ತೆಯ ವಾರ್ಷಿಕ ನಿರ್ವಾಹಣೆ ಕಾಮಗಾರಿ ಮಾಡುತ್ತಿದ್ದು, ಮಳೆ ನಿಂತ ಮೇಲೆ ತಗ್ಗು-ಗುಂಡಿಗಳನ್ನು ಡಾಂಬರೀಕರಣ ಮಾಡಲಾಗುವುದು.

-ಬಸವರಾಜ ಹಾಲಗಿ ಸಹಾಯಕ ಕಾರ್ಯನಿರ್ವಾಹಕ ಇಂಜೀನಿಯರ್

ಪುರಸಭೆ ಅಧ್ಯಕ್ಷರಾಗಿ ವಸಂತ ಲಾಳಿ ಆಯ್ಕೆ

ಹಾರೂಗೇರಿ: ಮೊದಲನೇ ಅವಧಿಗೆ ನಡೆದ ಚುನಾವಣೆಯಲ್ಲಿ ಹಾರೂಗೇರಿ ಪುರಸಭೆ ಬಿಜೆಪಿ ತೆಕ್ಕೆಗೆ ಬಂದಿದ್ದು, ನೂತನ ಅಧ್ಯಕ್ಷರಾಗಿ ವಸಂತ ಲಾಳಿ ಹಾಗೂ ಉಪಾಧ್ಯಕ್ಷರಾಗಿ ಬಸವರಾಜ ಅರಕೇರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

23 ಸದಸ್ಯ ಬಲದ ಹಾರೂಗೇರಿ ಪುರಸಭೆಯಲ್ಲಿ ಬಿಜೆಪಿ - 15, ಕಾಂಗ್ರೆಸ್ - 7 ಮತ್ತು ಒಬ್ಬ ಪಕ್ಷೇತರ ಅಭ್ಯರ್ಥಿ ಚುನಾಯಿತರಾಗಿದ್ದರು. ಬಹುಮತ ಹೊಂದಿದ್ದ ಬಿಜೆಪಿಯ ಅಧ್ಯಕ್ಷ ಸ್ಥಾನಕ್ಕೆ ಪ್ರವರ್ಗ ಅ ವರ್ಗಕ್ಕೆ ವಸಂತ ಲಾಳಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಪರಿಶಿಷ್ಟ ಜಾತಿಗೆ ಸೇರಿರುವ ಬಸವರಾಜ ಅರಕೇರಿ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ವಸಂತ ಲಾಳಿ ಮಾತನಾಡಿ. ಪಕ್ಷಾತೀತವಾಗಿ ಎಲ್ಲ ಸದಸ್ಯ ಬಳಗವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಜಿ ಶಾಸಕ ಪಿ.ರಾಜೀವ ಅವರ ಮಾರ್ಗದರ್ಶನದಲ್ಲಿ ಹಾರೂಗೇರಿ ಪುರಸಭೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಅವಿರತವಾಗಿ ಶ್ರಮಿಸುತ್ತೇನೆ ಎಂದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಶಾಸಕ ಪಿ.ರಾಜೀವ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಶುಭಾಶಯ ತಿಳಿಸಿ ಮಾತನಾಡಿ. ಜನರ ಋಣ ನಿಮ್ಮ ಮೇಲಿದೆ ಅದನ್ನ ಮರೆಯದೆ ಎಲ್ಲಾ ಸಮಸ್ಯೆಗಳನ್ನು ತ್ವರಿತವಾಗಿ, ನ್ಯಾಯೋಚಿತವಾಗಿ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರಾಮಾಣ ಕವಾಗಿ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಅಭಿಷೇಕ ಪಾಂಡೆ, ಚಿಕ್ಕೋಡಿ ಜಿಲ್ಲಾಧ್ಯಕ್ಷ ಸತೀಶ ಅಪ್ಪಾಜಿಗೋಳ, ಕುಡಚಿ ಮಂಡಲ ಅಧ್ಯಕ್ಷ ಶ್ರೀಧರ ಮೂಡಲಗಿ, ಪುರಸಭೆಯ ಸರ್ವ ಸದಸ್ಯರು, ಚುನಾವಣಾ ಸಿಬ್ಬಂದಿಗಳು, ಪುರಸಭೆಯ ಸಿಬ್ಬಂದಿಗಳು, ಪೊಲೀಸ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಮುಖಂಡರು, ಕಾರ್ಯಕರ್ತರು ಅಭಿಮಾನಿಗಳು ಉಪಸ್ಥಿತರಿದ್ದರು.

ನೂತನವಾಗಿ ಆಯ್ಕೆಯಾದ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಸನ್ಮಾನಿಸಿದ ಮಾಜಿ ಶಾಸಕ ಪಿ.ರಾಜೀವ್

ನಮ್ಮ ಗಣಪ ಮಣ್ಣಿನ ಗಣಪ ವಿಶೇಷ ಅಭಿಯಾನ ಆರಂಭ

ಬೆಳಗಾವಿ: ರಸಾಯನಿಕ ಬಳಸಿ ತಯಾರಿಸುವ ಪಿಒಪಿ ಗಣೇಶ ಮೂರ್ತಿ ಪ್ರತಿಷ್ಠಾಪನೆಯಿಂದ ಪ್ರಕೃತಿ ಮೇಲೆ ಆಗುತ್ತಿರುವ ಹಾನಿಗಳನ್ನು ತಡೆಗಟ್ಟುವ ಉದ್ದೇಶದಿಂದ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳನ್ನು ಬಳಸುವ ವಿಶಿಷ್ಟ ಅಭಿಯಾನಕ್ಕೆ ಯುವಕನೋರ್ವ ಮುಂದಾಗಿದ್ದಾನೆ.

ಸಧ್ಯ ಪಿಒಪಿ ಗಣೇಶ ಮೂರ್ತಿಗಳು ಮಾರುಕಟ್ಟೆಯಲ್ಲಿ ಹೇರಳವಾಗಿ ಮಾರಾಟವಾಗುತ್ತಿವೆ. ಇದರಿಂದ ಗಣೇಶ ಚತುರ್ಥಿಯಲ್ಲಿ ವಿಸರ್ಜನೆಯಾದ ಈ ಮೂರ್ತಿಗಳಿಂದ ಪ್ರಕೃತಿಗೆ ಹಾನಿ ಮಾಡುತ್ತಿವೆ. ಈ ಹಿನ್ನಲೆಯಲ್ಲಿ ಅರಭಾವಿ ಫೌಂಡೇಶನ್ ಅಧ್ಯಕ್ಷ ಸಂತೋಷ್ ಅರಭಾವಿ ಹಾಗೂ ತಂಡ ಸೇರಿಕೊಂಡು ಎರಡನೇ ವರ್ಷವೂ '' ನಮ್ಮ ಗಣಪ ಮಣ್ಣಿನ ಗಣಪ '' ಅಭಿಯಾನ ಪ್ರಾರಂಭಿಸಿದ್ದಾರೆ.

ಅರಭಾವಿ ಫೌಂಡೇಶನ್ ನ ಈ ವಿಶಿಷ್ಟ ಅಭಿಯಾನಕ್ಕೆ ತಾಲೂಕು ಆಡಳಿತ, ಸಾರ್ವಜನಿಕ ಶಿಕ್ಷಣ ಇಲಾಖೆ ಸೇರಿದಂತೆ ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಮಣ್ಣಿನ ಗಣಪತಿ ಪ್ರತಿಷ್ಠಾಪನಾ ಅಭಿಯಾನದಲ್ಲಿ ಕೈ ಜೋಡಿಸಿವೆ. ಈ ಹಿನ್ನಲೆಯಲ್ಲಿ ಈಗಾಗಲೇ ರಾಯಬಾಗ ತಾಲೂಕಿನ ಎಲ್ಲಾ ಶಾಲಾ ಕಾಲೇಜು ಹಾಗೂ ಸರಕಾರಿ ಕಚೇರಿಗಳಲ್ಲಿ ಮಣ್ಣಿನ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿರುವಂತೆ ಖುದ್ದಾಗಿ ತಹಸೀಲ್ದಾರರೇ ಜ್ಞಾಪನಾ ಪತ್ರ ಹೊರಡಿಸಿದ್ದಾರೆ.

ರಾಯಬಾಗ ತಾಲೂಕು ಸೇರಿ ಜಿಲ್ಲೆಯ ವಿವಿಧ ಭಾಗಗಳಲ್ಲಿ '' ನಮ್ಮ ಗಣಪ ಮಣ್ಣಿನ ಗಣಪ '' ಅಭಿಯಾನಕ್ಕೆ ಉತ್ತಮ ಬೆಂಬಲ ವ್ಯಕ್ತವಾಗಿದೆ. ರಿಯಾಯಿತಿ ದರದಲ್ಲಿ ಮಣ್ಣಿನ ಗಣೇಶ ಮೂರ್ತಿ ವಿತರಣೆಗೆ ಅರಭಾವಿ ಫೌಂಡೇಶನ್ ಮುಂದಾಗಿದೆ.

ಅರಭಾವಿ ಫೌಂಡೇಶನ್‌ನಿಂದ ಹಮ್ಮಿಕೊಳ್ಳಲಾದ ನಮ್ಮ ಗಣಪ ಮಣ್ಣಿನ ಗಣಪ ಅಭಿಯಾನದ ಮಣ್ಣಿನ ಮೂರ್ತಿಗಳು

ರಸಾಯನಿಕ ವಸ್ತುಗಳಿಂದ ತಯಾರಿಸಿದ ಪಿಒಪಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ನೈಸರ್ಗಿಕವಾಗಿ ಒಳ್ಳೆಯದಲ್ಲ. ಇದರಿಂದ ಪ್ರಕೃತಿ ಮೇಲೆ ಪರಿಣಾಮ ಬೀರುತ್ತದೆ. ಅಷ್ಟೇ ಅಲ್ಲದೆ ನೈಸರ್ಗಿಕವಾಗಿ ದೊರೆಯುವ ಗಾಳಿ, ನೀರು ಕಲುಷಿತ ಗೊಳ್ಳುವುದಿರಂದ ಆರೋಗ್ಯದ ಮೇಲೆ ಪರಿಣಾಯ ಬೀರುತ್ತದೆ. ಈ ಉದ್ದೇಶದಿಂದ ಮಣ್ಣಿನ ಗಣೇಶನನ್ನು ಪೂಜಿಸುವ ಮೂಲಕ ಪ್ರಕೃತಿ ಉಳಿಸುವ ಪುಟ್ಟ ಪ್ರಯತ್ನ.

-ಸಂತೋಷ ಅರಭಾವಿ ಅರಭಾವಿ ಫೌಂಡೇಶನ್ ಸಂಸ್ಥಾಪಕ

ಉಚಿತ ಆರೋಗ್ಯ ಶಿಬಿರ, ಶ್ರವಣ ಯಂತ್ರ ವಿತರಣೆ

ಅಥಣಿ: ನಮ್ಮ ದೇಹದ ಪ್ರತಿಯೊಂದು ಅಂಗಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ. ಇನ್ನೊಬ್ಬರು ಹೇಳುವ ಮಾತನ್ನು ಶ್ರವಣ ಮಾಡಿಕೊಳ್ಳಲು ಕಿವಿಗಳ ಅಂಗ ತನ್ನದೇ ಆದ ಪಾತ್ರ ನಿರ್ವಹಿಸುತ್ತದೆ. ಪ್ರತಿಯೊಬ್ಬರು ಕಿವಿಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳಷ್ಟು ಅಗತ್ಯ ಎಂದು ರೋಟರಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಗಜಾನನ ಮಂಗಸೂಳಿ ಹೇಳಿದರು.

ಅವರು ಇಲ್ಲಿನ ಯಶಸ್ವಿನಿ ಆಸ್ಪತ್ರೆಯ ಕಿವಿ, ಮೂಗು ಮತ್ತು ಗಂಟಲು ವಿಭಾಗ ಹಾಗೂ ಅಥಣಿ ರೋಟರಿ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಉಚಿತ ಶ್ರವಣ ಚಿಕಿತ್ಸಾ ಶಿಬಿರ ಹಾಗೂ ಶ್ರವಣ ಯಂತ್ರಗಳ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ ರೋಟರಿ ಸಂಸ್ಥೆಯ ಮೂಲಕ ಕಳೆದ 25 ವರ್ಷಗಳಲ್ಲಿ ಅನೇಕ ಬಾರಿ ಉಚಿತ ಆರೋಗ್ಯ ಶಿಬಿರಗಳನ್ನ ನಡೆಸುತ್ತಾ ಬರಲಾಗಿದೆ. ಈ ಬಾರಿ ಶ್ರವಣದೋಷವಿರುವ ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಬೆಲೆಬಾಳುವ ಶ್ರವಣ ಯಂತ್ರ ವಿತರಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಥಣಿ ರೋಟರಿ ಸಂಸ್ಥೆಯ ಅಧ್ಯಕ್ಷ ಅರುಣ ಸೌದಾಗರ ಮಾತನಾಡಿ ದೇಹದ ಅಂಗಾಂಗಗಳಲ್ಲಿ ಕಿವಿಯ ಸುರಕ್ಷತೆಯನ್ನು ಪ್ರತಿಯೊಬ್ಬರೂ ಕಾಪಾಡಿಕೊಳ್ಳುವುದು ಅಗತ್ಯ. ಶ್ರವಣದೋಷವಿರುವ ಫಲಾನುಭವಿಗಳಿಗೆ ಬೆಲೆಬಾಳುವ ಶ್ರವಣ ಯಂತ್ರಗಳನ್ನು ರೋಟರಿ ಸಂಸ್ಥೆಯಿಂದ ಉಚಿತವಾಗಿ ವಿತರಿಸಲಾಗುತ್ತಿದ್ದು, ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಉಚಿತವಾಗಿ ಶ್ರವಣ ಯಂತ್ರವನ್ನು ವಿತರಿಸಲಾಯಿತು ಹಾಗೂ ಅಲ್ಲಿ ಉಪಸ್ಥಿತರಿದ್ದ ಜನರಿಗೆ ಕಿವಿಯ ರಕ್ಷಣೆ ಹಾಗೂ ಶ್ರವಣಯಂತ್ರದ ಉಪಯೋಗದ ಬಗ್ಗೆ ತಿಳಿಸಲಾಯಿತು. ಈ ಸಂದರ್ಭದಲ್ಲಿ ಡಾ. ಆನಂದ ಕುಲಕರ್ಣಿ, ತೃಪ್ತಿ ಕುಲಕರ್ಣಿ, ವಿನಯ ಬಾಳಿಕಾಯಿ, ಸಚಿನ್ ದೇಸಾಯಿ, ಶೇಖರ್ ಕೋಲಾರ, ಅನಿಲ್ ದೇಶಪಾಂಡೆ, ಮಹದೇವ ಗಿಡ್ಡಳ್ಳಿ, ಕಿಶೋರ ಜಗದಾಳೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಂಘಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಲಿ

ಮೂಡಲಗಿ: ಸಹಕಾರ ಸಂಘಗಳು ಜನರಿಂದ ಠೇವಣ ಸಂಗ್ರಹಿಸಿ ಕಾರ್ಯನಿರ್ವಹಿಸುವ ಸಂಸ್ಥೆಗಳಾಗಿದ್ದು, ಎಂದಿಗೂ ಠೇವಣಿದಾರರ ವಿಶ್ವಾಸ ಕಳೆದುಕೊಳ್ಳಬಾರದು ಮತ್ತು ಪತ್ತಿನ ಸಹಕಾರ ಸಂಘಗಳು ಪ್ರಸ್ತುತ ದಿನಗಳಲ್ಲಿ ಬಹಳ ಜಾಗೃತದಿಂದ ಕಾರ್ಯನಿರ್ವಹಿಸಬೇಕಾಗಿದೆ ಎಂದು ಯುವ ನಾಯಕ ಸರ್ವೋತ್ತಮ ಜಾರಕಿಹೊಳಿ ಹೇಳಿದರು.

ಪಟ್ಟಣದ ಬಸವೇಶ್ವರ ಅರ್ಬನ್ ಸೋಸೈಟಿಯ ಸಭಾ ಭವನದಲ್ಲಿಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಾಹಕರುಗಳಿಗೆ ಏರ್ಪಡಿಸಿದ ಒಂದು ದಿನದ ವಿಶೇಷ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ. ದೇಶದಲ್ಲಿ ಬದಲಾಗುತ್ತಿರುವ ಕಾಯಿದೆ ಕಾನೂನುಗಳ ಅಡಿಯಲ್ಲಿ, ತಂತ್ರಜ್ಞಾನ ಅಳವಡಿಸಿಕೊಂಡು ಕಾರ್ಯನಿರ್ವಹಿಸಿದ್ದೆ ಆದಲ್ಲಿ ಎದುರಾಗುವ ಸಂಕಷ್ಟಗಳಿಂದ ಪಾರಾಗಬಹುದು.

ಸ್ವಂತ ಬಂಡವಾಳ ಹೆಚ್ಚಾಗಿ ಹೊಂದಿದ ಸಹಕಾರ ಸಂಘಗಳು ಭದ್ರತೆಯಿಂದ ಇರುತ್ತವೆ. ಭದ್ರತೆ ಇಲ್ಲದಿದ್ದರೆ ಗ್ರಾಹಕರು ಸಂಘಗಳ ಜೊತೆ ವ್ಯವಹಾರ ಮಾಡುವುದಿಲ್ಲಾ. ಸಂಘಗಳು ಲಾಭದಲ್ಲಿ ಭದ್ರತಾ ಠೇವಣಯನ್ನು ತೆಗೆದಿಡಬೇಕು, ಅಂದಾಗ ಮಾತ್ರ ಸಂಘಗಳು ಸಧೃಡದಿಂದ ಕಾರ್ಯನಿರ್ವಹಿಸುತ್ತವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಹಕಾರ ಯೂನಿಯನ್ನಿನ ನಿರ್ದೇಶಕ ವರ್ಧಮಾನ ಬೋಳಿ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ನಿರ್ದೇಶಕ ಸಂಜಯ ಪಿ. ಹೊಸಮಠ, ರಾಯಬಾಗ ತಾಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿ ಶಂಕರ ಎಸ್. ಕರಬಸನ್ನವರ ಮಾತನಾಡಿದರು.

ಸಮಾರಂಭದ ವೇದಿಕೆಯಲ್ಲಿ ವೇದಿಕೆ ಮೇಲೆ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷ ಬಸಗೌಡ ಪಾಟೀಲ, ನಿರ್ದೇಶಕರಾದ ಬಸಪ್ಪಾ ಸಂತಿ, ಶಿವಪ್ಪಾ ಮರ್ದಿ, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳ ನಿರ್ದೇಶಕ ತಮ್ಮಣ್ಣ ಕೆಂಚರಡ್ಡಿ, ಬಸವೇಶ್ವರ ಅರ್ಬನ್ ಸೋಸಾಯಿಟಿ ಅಧ್ಯಕ್ಷ ಮಲ್ಲಿಕಾರ್ಜುನ ಢವಳೇಶ್ವರ ಮುಂತಾದವರು ಉಪಸ್ಥಿತರಿದ್ದರು. ಜಿಲ್ಲಾ ಯೂನಿಯನ್ನಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಲಪ್ಪಾ ಜಗ್ಗಿನವರ ಸ್ವಾಗತಿಸಿ ವಂದಿಸಿದರು.



ನಗರಸಭೆ ಕಾರ್ಯಾಲಯ ಇಳಕಲ್ 587125
ಜಿಲ್ಲೆ: ಬಾಗಲಕೋಟೆ ರಾಜ್ಯ: ಕರ್ನಾಟಕ
Web: www.ilkalcity.mrc.gov.in Phone:08351-270416
Email: itstaff_ulb_ilkal@yahoo.com
ನಂ:ನಸಇ/ತಾಂ.ವಿ/ಪ್ರಕಟಣೆ/2024-25 ದಿನಾಂಕ: 31-08-2024

ಟೆಂಡರ್ ಪ್ರಕಟಣೆ:
||ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ||

ಇಳಕಲ್ ನಗರಸಭೆಯ ಸನ್ 2021-22ನೇ ಸಾಲಿನ 15ನೇ ಹಣಕಾಸು ನಾನ್ ಮಿಲಿಯನ್ ಪ್ಲಸ್ ಸಿಟಿಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗೆ ಕಾಣಿಸಿದ ಇಂಡೆಂಟ ನಂಬರ್‌ಗಳಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ ಆಹ್ವಾನಿಸಲಾಗಿದೆ. ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ ಸಲ್ಲಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್ ಸೈಟ್ ವಿಳಾಸ: https://kppp.karnataka.gov.in ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:- 09.09.2024 ರ ಸಾಯಂಕಾಲ 4-30 ಗಂಟೆವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಕಾಮಗಾರಿಗಳ ಇಂಡೆಂಟ್‌ಗಳ ವಿವರ ಈ ಕೆಳಗಿನಂತಿರುತ್ತದೆ. ಇಂಡೆಂಟ್ ಸಂಖ್ಯೆ: DMA/2024-25/OW/WORK_INDENT26366

ವಿ.ಸೂ:- ಯಾವುದೇ ಸೇರ್ಪಡೆ ಅಥವಾ ತಿದ್ದುಪಡಿ ಸೂಚನೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟ್‌ಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು .

ಈ ಕೆಳಗೆ ನಿಗಧಿಪಡಿಸಿದ ವೇಳಾಪಟ್ಟಿಗೆ ಅನುಗುಣವಾಗಿ ಟೆಂಡರ್ ಸಲ್ಲಿಸತಕ್ಕದ್ದು.

1) ಟೆಂಡರ್ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ಅವಧಿ ದಿನಾಂಕ:- 09.09.2024 ರಂದು ಸಾಯಂಕಾಲ 4.30ವರೆಗೆ.
2) ಟೆಂಡರ್ ತೆರೆಯುವ ದಿನಾಂಕ:- 10.09.2024 ರಂದು ಸಾಯಂಕಾಲ 4.31ಗಂಟೆ ನಂತರ.

ಪೌರಾಯುಕ್ತರು
ನಗರಸಭೆ ಇಳಕಲ್

ಇಷ್ಟಲಿಂಗದಿಂದ ಅನಿಷ್ಟಗಳು ದೂರ: ಶ್ರೀ

ಬೈಲಹೊಂಗಲ: ಮನುಷ್ಯನ ಎಲ್ಲ ಇಷ್ಟಾರ್ಥಗಳನ್ನು ಪೂರೈಸುವ ಹಾಗೂ ಅನಿಷ್ಠಗಳನ್ನು ದೂರ ಮಾಡುವ ಲಿಂಗವೇ ಇಷ್ಟಲಿಂಗ. ಇಷ್ಟಲಿಂಗವು 12ನೇ ಶತಮಾನದಲ್ಲಿ ಬಸವಣ್ಣನವರು ನೀಡಿದ ವಿಶಿಷ್ಟ ಕೊಡುಗೆಯಾಗಿದೆ' ಎಂದು ಶಾಖಾ ಮೂರುಸಾವಿರಮಠದ ಪ್ರಭುನೀಲಕಂಠ ಮಹಾಸ್ವಾಮಿಗಳು ಹೇಳಿದರು. ಪಟ್ಟಣದ ಮಹಾತ್ಮಾಗಾಂಧಿ ಹೌಸಿಂಗ್ ಕಾಲನಿ ಉದ್ಭವ ಚನ್ನಬಸವೇಶ್ವರ ದೇವಸ್ಥಾನದ ನೂತನ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಪ್ರವಚನ ಕಾರ್ಯಕ್ರಮದಲ್ಲಿ ಸಾನಿಧ್ಯವಹಿಸಿ ಅವರು ಮಾತನಾಡಿದರು. ಪ್ರತಿದಿನ ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರಿಂದ ಮುಂಬರುವ ವಿಪತ್ತುಗಳು ದೂರವಾಗುತ್ತವೆ. ಪೂಜೆಯಿಂದ ಏಕಾಗ್ರತೆ, ನೈತಿಕತೆ, ಆರೋಗ್ಯ ಹಾಗೂ ಆತ್ಮವಿಶ್ವಾಸ ವೃದ್ಧಿಸುತ್ತದೆ ಎಂದರು. ದೈಹಿಕ ಶಿಕ್ಷಣ ನಿರ್ದೇಶಕ ಬಸವರಾಜ ಹರ್ಲಾಪೂರ ಅಧ್ಯಕ್ಷತೆವಹಿಸಿದ್ದರು. ಟ್ರಸ್ಟ್ ಅಧ್ಯಕ್ಷ ಗಂಗಪ್ಪ ಗುಗ್ಗರಿ, ಹಿರಿಯರಾದ ಶಂಕರೆಪ್ಪ ಯಡಳ್ಳಿ, ಶ್ರೀಕಾಂತ ಪತ್ತಾರ, ತುಕಾರಾಮ ಹೊಂಗಲ, ಶಿವಪುತ್ರಪ್ಪ ತಲ್ಲೂರ, ಬಸವರಾಜ ನಾಗನೂರ ವೇದಿಕೆಯಲ್ಲಿ ಇದ್ದರು. ಇದೇ ವೇಳೆ ಶ್ರೀಖಾಸ್ಗತೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕಾಶಿನಾಥ ಬಿರಾದಾರ, ಬಿಜೆಪಿ ಮಾಧ್ಯಮ ಸಂಚಾಲಕ ಎಫ್.ಎಸ್.ಸಿದ್ದನಗೌಡರ, ಪ್ರಗತಿಪರ ರೈತ ಮುರುಗೆಪ್ಪ ಗುಂಡ್ಲೂರ ಪತ್ರಕರ್ತ ರವಿ ಹುಲಕುಂದ ಅವರನ್ನು ಸತ್ಕರಿಸಲಾಯಿತು. ಶಿವಪುತ್ರಪ್ಪ ತಲ್ಲೂರ ಪ್ರಾರ್ಥಿಸಿದರು. ಗಂಗಪ್ಪ ಗುಗ್ಗರಿ ಸ್ವಾಗತಿಸಿದರು.

ಹೆಚ್ಚು ಸದಸ್ಯತ್ವ ಹೊಂದಿದ ಪಕ್ಷ ಬಿಜೆಪಿ

ಗೋಕಾಕ: ವಿಶ್ವದಲ್ಲಿ ಅತಿ ಹೆಚ್ಚು ಸದಸ್ಯತ್ವ ಹೊಂದಿದ ರಾಜಕೀಯ ಪಕ್ಷವಾಗಿರುವ ಬಿಜೆಪಿ ಕಾರ್ಯಕರ್ತರ ಪಕ್ಷವಾಗಿದೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು ನಗರದ ತಮ್ಮ ಕಾರ್ಯಾಲಯದಲ್ಲಿ ಹಮ್ಮಿಕೊಂಡ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಸಂಬಂಧಿಸಿದ ಮಾಹಿತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ನಡೆದ ನೋಂದಣಿ ಅಭಿಯಾನಕ್ಕಿಂತಲೂ ಈ ಬಾರಿ ಅತಿ ಹೆಚ್ಚಿನ ಸಾಮಾನ್ಯ ಸದಸ್ಯರನ್ನು ಸೇರ್ಪಡೆಗೊಳಿಸುವ ಜವಾಬ್ದಾರಿ ಬೂತ್ ಮಟ್ಟದ ಅಧ್ಯಕ್ಷರು ಮತ್ತು ಕಾರ್ಯಕರ್ತರ ಜವಾಬ್ದಾರಿಯಾಗಿದ್ದು ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ನಿರ್ವಹಿಸಬೇಕು ಎಂದರು. ಪರಿಣಾಮಕಾರಿಯಾಗಿರುವ ಬಿಜೆಪಿ ಸದಸ್ಯತ್ವ ನೋಂದಣಿ ಅಭಿಯಾನ ಪರಿಕಲ್ಪನೆಗೆ ಹೆಚ್ಚು ಮಹತ್ವ ದೊರೆತಿರುವ ಕಾರಣಕ್ಕೆ ಕಾಂಗ್ರೆಸ್‌ನವರು ಬಿಜೆಪಿ ಮಾದರಿಯನ್ನು ನಕಲು ಮಾಡುತ್ತಿರುವುದೇ ಸಾಕ್ಷಿಯಾಗಿದೆ. ಗೋಕಾಕ ವಿಧಾನಸಭಾ ಕ್ಷೇತ್ರದ ಎಲ್ಲ ಬೂತ್‌ಗಳಲ್ಲಿ ಕನಿಷ್ಠ 300ಕ್ಕೂ ಅಧಿಕ ಸದಸ್ಯತ್ವವನ್ನು ಮಾಡುವ ಮೂಲಕ ದಾಖಲೆ ನಿರ್ಮಿಸುವಂತೆ ತಿಳಿಸಿದರು.

ಬಿಜೆಪಿ ರಾಷ್ಟ್ರೀಯ ಒಬಿಸಿ ಮೋರ್ಚಾ ಕಾರ್ಯಕಾರಿಣಿ ಸದಸ್ಯ ಲಕ್ಷ್ಮಣ ತಪಸಿ ಸದಸ್ಯತ್ವ ಅಭಿಯಾನ ಕುರಿತು ಮಾತನಾಡಿದರು. ವೇದಿಕೆಯ ಮೇಲೆ ಬಿಜೆಪಿ ನಗರ ಮಂಡಲ ಅಧ್ಯಕ್ಷ ಭೀಮಶಿ ಭರಮಣ್ಣವರ, ಗ್ರಾಮೀಣ ಅಧ್ಯಕ್ಷ ರಾಜೇಂದ್ರ ಗೌಡಪ್ಪಗೋಳ, ನಗರಸಭೆ ಅಧ್ಯಕ್ಷ ಪ್ರಕಾಶ ಮುರಾರಿ, ಕೊಣ್ಣೂರ ಪುರಸಭೆ ಅಧ್ಯಕ್ಷ ವಿನೋದ ಕರನಿಂಗ, ಪದಾಧಿಕಾರಿಗಳಾದ ಎಸ್ ವ್ಹಿ ದೇಮಶೆಟ್ಟಿ, ಶಾಮಾನಂದ ಪೂಜಾರಿ, ಬಸವರಾಜ ಹಿರೇಮಠ, ಗುರುಪಾದ ಕಳ್ಳಿ, ಶಿವಾನಂದ ಪಾಟೀಲ, ದಯಾನಂದ ಇದ್ದರು. ಕಿರಣ ಡಮಾಮಗರ ಸ್ವಾಗತಿಸಿದರು, ರಾಜೇಶ್ವರಿ ಒಡೆಯರ ನಿರೂಪಿಸಿದರು.

ಸರಕಾರಿ ಶಾಲೆಗೆ ವೀರಾಗ್ರಣಿ ಪ್ರಶಸ್ತಿ

ರಾಮದುರ್ಗ: 2024-25ನೇ ಸಾಲಿನ ಹುಲಕುಂದ-ಹಿರೇಕೊಪ್ಪ ಕೆ.ಎಸ್.ವಲಯ ಮಟ್ಟದ ಕ್ರೀಡಾಕೂಟದಲ್ಲಿ ತಾಲೂಕಿನ ಕುನ್ನಾಳ ಪಿಎಂಶ್ರೀ ಸರಕಾರಿ ಶಾಲೆ ಬಾಲಕರ ಹಾಗೂ ಬಾಲಕಿಯರ ವೈಯಕ್ತಿಕ ಹಾಗೂ ಗುಂಪು ವಿಭಾಗಗಳಲ್ಲಿ ಅದ್ವಿತೀಯ ಸಾಧನೆ ಮಾಡುವ ಮೂಲಕ ಸಮಗ್ರ ವೀರಾಗ್ರಣಿ ಪ್ರಶಸ್ತಿ ಪಡೆದುಕೊಂಡಿದೆ. ವಾಲಿಬಾಲ್‌ಪ್ರಥಮ ಸ್ಥಾನ ಹಾಗೂ ಬಾಲಕರ ವೈಯಕ್ತಿಕ ವಿಭಾಗದಲ್ಲಿ 600 ಮೀಟರ್ ಓಟದಲ್ಲಿ ಹಣಮಂತ ಅಳ್ಳಿ ಪ್ರಥಮ, ಗುಂಡುಎಸೆತ ಹಾಗೂ ಚಕ್ರಎಸೆತದಲ್ಲಿ ರಾಹುಲ ಕೋಳಿ ಪ್ರಥಮ, ಗುಂಡು ಎಸೆತದಲ್ಲಿ ಮನೋಜ ಗಾಣಿಗೇರ ತೃತೀಯ, ಉದ್ದ ಜಿಗಿತದಲ್ಲಿ ಹಣಮಂತ ಅಳ್ಳಿ ಪ್ರಥಮ, ಉದ್ದ ಜಿಗಿತದಲ್ಲಿ ಶಾಂತಾನಂದ ಹಿರೇಮಠ ದ್ವಿತೀಯ, 600ಮೀ ಓಟದಲ್ಲಿ ಹರೀಶ ನಾಡಗೌಡ್ರತೃತೀಯ ಸ್ಥಾನಗಳನ್ನು ಪಡೆದು ಬಾಲಕರ ವಿಭಾಗದಲ್ಲಿ ಸಂಪೂರ್ಣ ಮೈಲುಗೈ ಸಾಧಿಸುವ ಮೂಲಕ ಶಾಲೆಗೆ ಕೀರ್ತಿತಂದಿದ್ದಾರೆ. ಬಾಲಕಿಯರ ಗುಂಪು ವಿಭಾಗದಲ್ಲಿ: ರೀಲೆಸ್ಪರ್ಧೆಯಲ್ಲಿ ಪ್ರಥಮ ಮತ್ತುಖೋ ಖೋ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಸತತ ಹತ್ತು ವರ್ಷಗಳ ವಿಶಿಷ್ಟ ಸಾಧನೆಯನ್ನು ಬಾಲಕಿಯರು ಮುಂದುವರೆದ್ದಾರೆ. 100ಮೀಟರ್, 200 ಮೀ.ಓಟದಲ್ಲಿಅಲ್ಪಿಯಾ ನಾಯ್ಕ ಪ್ರಥಮ, 200ಮೀಟರ್‌ನಲ್ಲಿಅಪ್ಸಾನಾ ತಹಶೀಲ್ದಾರ ದ್ವಿತೀಯ, 600 ಮೀಟರ್‌ಓಟ ಭಾಗ್ಯಾ ಅಲಕನವರ ಪ್ರಥಮ ಸ್ಥಾನ ಪಡೆಯುವ ಮೂಲಕ ಬಾಲಕಿಯರ ವಿಭಾಗದಲ್ಲೂ ಮೈಲುಗೈ ಸಾಧಿಸಿದೆ.

ಶೈಕ್ಷಣಿಕ ಕ್ರಾಂತಿಗೆ ವೀರಶೈವ ಲಿಂಗಾಯತ ಮಠಗಳೇ ಕಾರಣ

ಚರಂತಿಮಠದ ಪ್ರಭುಸ್ವಾಮೀಜಿ ಹೇಳಿಕೆ । ಬೀಳೂರು ಗುರುಬಸವ ಸ್ವಾಮೀಜಿಗಳ ಪುಣ್ಯಸ್ಮರಣೆ

ಬಾಗಲಕೋಟೆ: ಸರ್ವಧರ್ಮಿಯರು ಶಿಕ್ಷಣವಂತರಾಗಿ ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿಗೆ ವೀರಶೈವ ಲಿಂಗಾಯತ ಮಠಗಳ ಸಾಮಾಜಿಕ ಕಳಕಳಿ ಕಾರಣವಾಗಿದೆ ಎಂದು ಚರಂತಿಮಠದ ಪ್ರಭುಸ್ವಾಮಿಗಳು ಹೇಳಿದರು.

ಬಿವಿವಿ ಸಂಘದಲ್ಲಿ ಸಂಘದ ಸಂಸ್ಥಾಪಕ ಬೀಳೂರ ಗುರುಬಸವ ಮಹಾಸ್ವಾಮಿಗಳ ಪುಣ್ಯಸ್ಮರಣೆ ಹಾಗೂ ಶ್ರಾವಣ ಮಾಸದ ಉತ್ಸವ ಮತ್ತು ಗ್ರಂಥ ಬಿಡುಗಡೆ ಕಾರ್ಯಕ್ರಮದ ಸಾನಿಧ್ಯ ವಹಿಸಿ, ಗ್ರಂಥವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಬೀಳೂರ ಗುರುಬಸವ ಮಹಾಸ್ವಾಮಿಗಳಿಗೆ ಬಡತನದ ಅರಿವಿತ್ತು. ಸರ್ವಜನರಿಗೂ ಶಿಕ್ಷಣ ಸಿಗಲಿ ಎಂಬ ಮಹಾದಾಸೆಯಿಂದ ಸ್ಥಾಪಿತವಾದ ಬಿವಿವಿ ಸಂಘ ಇಂದು ಶಿಕ್ಷಣ ಎಂಬ ಜ್ಞಾನಜೀವವನ್ನು ಧಾರೆ ಎರೆಯುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಮಠ ಮಾನ್ಯಗಳ ನೇತೃತ್ವದಲ್ಲಿ ಜನರು ನೀಡಿದ ದಾನದಿಂದಲೇ ಅನೇಕ ಶಿಕ್ಷಣ ಸಂಸ್ಥೆಗಳು ಜ್ಞಾನ ದಾಸೋಹದಲ್ಲಿ ತೊಡಗಿವೆ. ಬೀಳೂರು ಶ್ರೀಗಳ ಮಹಾಸಂಕಲ್ಪಕ್ಕೆ ಕೈ ಜೋಡಿಸಿದ ನಗರದ ಅನೇಕ ಜನ ವರ್ತಕರು ಶಿಕ್ಷಣ ದಾನಿಗಳ ಸಮಾಜಿಕ ಸೇವೆ ಸ್ಮರಣೀಯ. ಕಾಲಕಾಲಕ್ಕೆ ಅವರನ್ನು ನೆನಪಿಸಿಕೊಳ್ಳುವುದು ಅಗತ್ಯ. ಬೀಳೂರು ಶ್ರೀಗಳ ಜೀವನ ವೃತ್ತಾಂತದ ಗ್ರಂಥ ವಾಸ್ತವದೊಂದಿಗೆ ಇತಿಹಾಸದ ದಾಖಲೆಯನ್ನು ಬಿಚ್ಚಿಡುತ್ತದೆ. ಇಂದು ಪ್ರತಿಮನೆಯಲ್ಲೂ ಉತ್ತಮ ಗ್ರಂಥಗಳ ಓದುವಿಕೆ ಅಗತ್ಯವಾಗಿದೆ ಎಂದರು.

ಸಂಘ ಸ್ಥಾಪನೆಯ ನಂತರದಿಂದ ಇಲ್ಲಿಯವರೆಗೂ ಅನೇಕ ಜನ ಕಾರ್ಯಾಧ್ಯಕ್ಷರು ಸಂಘದ ಬೆಳವಣಿಗೆಯಲ್ಲಿ ತಮ್ಮದೆಯಾದ ಸೇವೆ ಸಲ್ಲಿಸಿದ್ದಾರೆ. ಈಗಿನ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅವರಿಗೆ ಮಠಗಳ ಹಾಗೂ ಸ್ವಾಮಿಗಳ ಸಂಪರ್ಕ ಹೆಚ್ಚಾಗಿರುವುದರಿಂದ ಮತ್ತು ಅವರ ಹೆಚ್ಚಿನ ಓದುವಿಕೆ ಅಪಾರ ಜ್ಞಾನ, ಶಿಸ್ತು ಹಾಗೂ ಅವರ ಸಾಮಾಜಿಕ ಕಳಕಳಿ ಸಂಘದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ವಿಶೇಷ ಉಪನ್ಯಾಸ ನೀಡಿದ ಬನಹಟ್ಟಿ ಖ್ಯಾತ ಸಾಹಿತಿ ಪ್ರೊ. ಸಿದ್ದರಾಜು ಪೂಜಾರಿ ಮಾತನಾಡಿ, ಮಹಾಪುರುಷರು ಹಾಗೂ ಜನಸಾಮಾನ್ಯರಿಂದ ದೇಶದ ಮೂಲ ಸತ್ವ ಇಂದಿಗೂ ಜೀವಂತವಾಗಿದೆ. ಬೀಳೂರು ಗುರುಬಸವ ಮಹಾಸ್ವಾಮಿಗಳು ಲೌಕಿಕ ಮತ್ತು ಅಲೌಕಿಕವನ್ನು ಅಖಂಡವಾಗಿಸಿಕೊಂಡು ಪಾರಂಪರಿಕ ಸಾತ್ವಿಕ ಸತ್ವವನ್ನು ಸಾರಿದರು. ಅವರು ಸಾಮಾಜಿಕ ಬದ್ಧತೆಯ ಹಾಗೂ ಶೈಕ್ಷಣಿಕ ಹರಿಕಾರರಾಗಿದ್ದರು. ಸಂಘದಲ್ಲಿ ನೈತಿಕ ಪ್ರಜ್ಞೆ, ನೆಲದ ಸಂಸ್ಕೃತಿ, ಸಂಸ್ಕಾರ ಇದೆ. ಬೀಳೂರ ಶ್ರೀಗಳ ಸಾರ್ವಕಾಲಿಕ ಮೌಲ್ಯಗಳನ್ನು ಪರಿಪಾಲಿಸಿದ ಪರಿಣಾಮ ಸಂಘ ಬಾನೆತ್ತರಕ್ಕೆ ಬೆಳೆದಿದೆ ಎಂದರು.

ಸಂಘದ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಮಾತನಾಡಿ, 5 ಜನ ವಿದ್ಯಾರ್ಥಿಗಳಿಂದ ಪ್ರಾರಂಭವಾದ ಸಂಸ್ಥೆ ಇಂದು 53 ಸಾವಿರ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹವನ್ನು ನೀಡುತ್ತಿದೆ. ಮುಂದಿನ ಜನಾಂಗಕ್ಕೆ ಇತಿಹಾಸದ ಪರಿಚಯ ಅಗತ್ಯವಿದ್ದು, ವರ್ತಮಾನದ ಬೆಳವಣಿಗೆಗೆ ಪೂರ್ವ ಪರಂಪರೆಯ ಜ್ಞಾನದ ಅರಿವು ಮುಖ್ಯವಾಗಿದೆ. ಆ ನಿಟ್ಟಿನಲ್ಲಿ ಬೀಳೂರು ಶ್ರೀಗಳ ಜೀವನ ವೃತ್ತಾಂತ ಗ್ರಂಥವನ್ನು ಲೋಕಾರ್ಪಣೆ ಮಾಡಲಾಗುತ್ತಿದೆ ಎಂದರು.

ಅನ್ನಸಂತರ್ಪಣೆ: ವೀರಭದ್ರೇಶ್ವರ ಸಾಂಸ್ಕೃತಿಕ ಭವನ ಹಾಗೂ ಬಸವೇಶ್ವರ ಮಂಗಲ ಭವನದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಬೆಳಿಗ್ಗೆಯಿಂದ ಸಂಜೆವರೆಗೂ ನಡೆದ ಅನ್ನ ಸಂತರ್ಪಣೆಯಲ್ಲಿ ಸಹಸ್ರಾರು ಜನ ಅನ್ನಪ್ರಸಾದ ಸ್ವೀಕರಿಸಿದರು.

ಸಾನಿಧ್ಯ ವಹಿಸಿದ್ದ ಟೀಕಿನ ಮಠದ ಮಲ್ಲಿಕಾರ್ಜುನ ದೇವರು ಹಾಗೂ ಅಡ್ನೂರಿನ ಕಲ್ಲಿನಾಥ ಶಾಸ್ತ್ರಿಗಳು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಜಿ.ಎನ್.ಪಾಟೀಲ ವಹಿಸಿದ್ದರು. ಉತ್ಸವ ಸಮಿತಿ ಅಧ್ಯಕ್ಷ ಬಿ.ಆರ್.ಬೋಳಿಶೆಟ್ಟಿ, ಸಂಘದ ಸದಸ್ಯರುಗಳು, ವಿವಿಧ ಮಹಾವಿದ್ಯಾಲಯದ ಪ್ರಚಾರ್ಯರು, ಶಿಕ್ಷಕ ವೃಂದ, ವಿದ್ಯಾರ್ಥಿಗಳಿದ್ದರು.

ಬಾಗಲಕೋಟೆಯ ಬಿವಿವಿ ಸಂಘದ ಸಂಸ್ಥಾಪಕ ಬೀಳೂರು ಗುರುಬಸವ ಸ್ವಾಮೀಜಿಗಳ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಗಣ್ಯರು ಗ್ರಂಥ ಬಿಡುಗಡೆಗೊಳಿಸಿದರು.

ಶ್ರದ್ಧಾ ಭಕ್ತಿಯಿಂದ ಜರುಗಿದ ಪಲ್ಲಕ್ಕಿ ಉತ್ಸವ

ಬೆಳಗಿನ ಜಾವ ಬೀಳೂರ ಗುರುಬಸವ ಮಹಾಸ್ವಾಮಿಗಳ ಶಿಲಾ ಮೂರ್ತಿಗೆ ರುದ್ರಾಭಿಷೇಕ, ಬಿಲ್ವಾಷ್ಟಕಂ, ಲಿಂಗಾಷ್ಟಕಂ ಹಾಗೂ ಶಿವ ಪಂಚಾಕ್ಷರ ಮಂತ್ರ ಸ್ತೋತ್ರಂ, ಶಿವ ಸಹಸ್ರನಾಮ ಸ್ತೋತ್ರಗಳಿಂದ ಪೂಜೆ ಸಲ್ಲಿಸಿ, ಪುಷ್ಪಾಲಂಕಾರ, ಮಹಾಮಂಗಳಾರುತಿ ನೆರವೇರಿಸಲಾಯಿತು. ಚರಂತಿಮಠದ ಪ್ರಭುಸ್ವಾಮಿಗಳು, ಟೀಕಿನ ಮಠದ ಮಲ್ಲಿಕಾರ್ಜುನ ದೇವರು, ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಅವರು ಬೀಳೂರ ಮಹಾಸ್ವಾಮಿಗಳ ಮೂರ್ತಿಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ನಂತರ ಬೀಳೂರ ಅಜ್ಜನವರ ಪಲ್ಲಕ್ಕಿ ಉತ್ಸವ ಸಂಘದ ಆವರಣದಲ್ಲಿ ಕರಡಿಮಜಲು ವಾದ್ಯದೊಂದಿಗೆ ಪ್ರಾರಂಭವಾದ ಮೆರವಣಿಗೆ ಮೈದಾನವನ್ನು ಸುತ್ತುವರೆದು ಬನ್ನಿ ಕಟ್ಟಿಗೆ ತೆರಳಿ ಅಲ್ಲಿ ಪೂಜೆ ಸಲ್ಲಿಸಿ, ಮರಳಿ ದೇವಸ್ಥಾನಕ್ಕೆ ಆಗಮಿಸಿತು. ಮೆರವಣಿಗೆಯುದ್ದಕ್ಕೂ ಎಲ್ಲ ಮಹಾವಿದ್ಯಾಲಯದ ಮುಂದೆ ರಂಗೋಲಿ ಹಾಕಿ ಹೂವಿನಿಂದ ಶೃಂಗರಿಸಿ ಸ್ವಾಗತ ಕೋರಿದರು. ಶ್ರದ್ಧಾ ಭಕ್ತಿಯಿಂದ ಪಲ್ಲಕ್ಕಿ ಉತ್ಸವ ಜರುಗಿತು.

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಮೆಟ್ರಿಕ್ ಪೂರ್ವ ಶಿಷ್ಯವೇತನ ಪಡೆಯಲು ರಾಜ್ಯ ವಿದ್ಯಾರ್ಥಿ ವೇತನ (ಎಸ್‌ಎಸ್‌ಪಿ) ಪೋರ್ಟಲ್‌ನಲ್ಲಿ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 1ನೇ ತರಗತಿಯಿಂದ 8ನೇ ತರಗತಿವರೆಗೆ 6 ಲಕ್ಷ ರು.ಗಳು ಆದಾಯ ಮಿತಿ ಹಾಗೂ 9ನೇ ರಿಂದ 10ನೇ ತರಗತಿವರೆಗೆ 2.50 ಲಕ್ಷ ರು.ಗಳಿಗೆ ಒಳಪಟ್ಟ ಆದಾಯ ಮೀತಿ ಹೊಂದಿರುವ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳು ಮೆಟ್ರಿಕ್ ಪೂರ್ವ ಶಿಷ್ಯವೇತನಕ್ಕಾಗಿ ಇಲಾಖೆಯ ವೆಬ್‌ಸೈಟ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ ಸಂ: 08354-221821ಗೆ ಸಂಪರ್ಕಿಸುವಂತೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸೈರಾಬಾನು ನದಾಫ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸೌಲಭ್ಯಗಳ ಅರ್ಜಿ ಅವಧಿ ವಿಸ್ತರಣೆ

ಬಾಗಲಕೋಟೆ: ಪ್ರಸಕ್ತ ಸಾಲಿನ ಆರ್ಥಿಕ ವರ್ಷದಲ್ಲಿ ಕರ್ನಾಟಕ ಅಲೆಮಾರಿ ಅರೆ ಅಲೆಮಾರಿ ಸಮುದಾಯ ಅಭಿವೃದ್ಧಿ ನಿಗಮ, ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ, ಸವಿತಾ ಸಮಾಜ ಅಭಿವೃದ್ಧಿ ನಿಗಮ, ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, ಕಾಡುಗೊಲ್ಲ ಅಭಿವೃದ್ಧಿ ನಿಗಮ, ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ, ವೀರಶೈವ ಲಿಂಗಾಯತ ಅಬಿವೃದ್ಧಿ ನಿಗಮ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನಗೊಳ್ಳುತ್ತಿರುವ ವಿವಿಧ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಿ ಸೆಪ್ಟೆಂಬರ್ 15ರ ವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ವಿವಿಧ ನಿಗಮಗಳ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಲೂಕು ಮಹಾಸಭಾ ಘಟಕ ಉದ್ಘಾಟನೆ

ಗುಳೇದಗುಡ್ಡ: ಜಾಗತಿಕ ಲಿಂಗಾಯತ ಮಹಾಸಭಾದ ಗುಳೇದಗುಡ್ಡ ತಾಲೂಕು ಘಟಕದ ಉದ್ಘಾಟನಾ ಕಾರ್ಯಕ್ರಮ ಸೆ.1ರಂದು ಬೆಳಿಗ್ಗೆ 10.30ಕ್ಕೆ ಪಟ್ಟಣದ ಶಿವಕೃಪಾ ರಂಗಮಂದಿರದಲ್ಲಿ ನಡೆಯಲಿದ್ದು, ತಾಲೂಕು ಅಧ್ಯಕ್ಷ ರಾಚಣ್ಣ ಕೆರೂರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಜಿಲ್ಲಾಧ್ಯಕ್ಷ ಅಶೋಕ ಬರಗುಂಡಿ ಕಾರ್ಯಕ್ರಮ ಉದ್ಘಾಟಿಸುವರು. ಸಂಘದ ಜಿಲ್ಲಾ ಉಪಾಧ್ಯಕ್ಷ ಬಸವರಾಜ ಕಡಪಟ್ಟಿ, ಪ್ರಧಾನ ಕಾರ್ಯದರ್ಶಿ ರವಿ ಯಡಹಳ್ಳಿ ಉಪಸ್ಥಿತರಿರಲಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಇಂದು ಲಿ.ಶ್ರೀ. ಶಂಕರ ಪುಣ್ಯಾರಾಧನೆ

ಗುಳೇದಗುಡ್ಡ: ಪಟ್ಟಣದ ಕುರುಹಿನಶೆಟ್ಟಿ ಸಮಾಜದ ಕುಲಗುರುಗಳಾದ ಶ್ರೀ ಶಂಕರ ಶಿವಾಚಾರ್ಯ ಮಹಾಸ್ವಾಮಿಗಳ 18ನೇ ಪುಣ್ಯಾರಾಧನೆ ಕಾರ್ಯಕ್ರಮದ ಸೆ. 1ರಂದು ನಡೆಯಲಿದೆ. ಪುಣ್ಯಾರಾಧನೆ ನಿಮಿತ್ತ ಮೇಲಿನ ಪೇಟೆಯ ಶ್ರೀ ನೀಲಕಂಠೇಶ್ವರ ಮಠದಲ್ಲಿ ಹಾಗೂ ಕೆಳಗಿನಪೇಟೆಯ ಶ್ರೀ ನೀಲಕಂಠೇಶ್ವರ ದೇವಸ್ಥಾನದಲ್ಲಿ ರುದ್ರಾಭಿಷೇಕ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ಎರಡು ದಿನಗಳವರೆಗೆ ನಡೆಯಲಿದೆ. ಸೆ.1 ರಂದು ಮುಂಜಾನೆ 9 ಗಂಟೆಗೆ ಮೇಲಿನಪೇಟೆಯ ಶ್ರೀ ನೀಲಕಂಠೇಶ್ವರ ಮಠದಿಂದ ಲಿಂ.ಶ್ರೀ.ಜ. ಶಂಕರ ಶಿವಾಚಾರ್ಯ ಮಹಾಸ್ವಾಮಿಗಳ ಭಾವಚಿತ್ರ ಮೆರವಣಿಗೆ ಆರಂಭಗೊಳ್ಳಲಿದ್ದು, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಕೆಳಗಿನ ಪೇಟೆಯ ಶ್ರೀ ನೀಲಕಂಠೇಶ್ವರ ದೇವಸ್ಥಾನಕ್ಕೆ ಬಂದು ತಲುಪಲಿದೆ. ಬಳಿಕ ಅನ್ನಸಂತರ್ಪಣೆ ನಡೆಯಲಿದೆ ಎಂದು ಕುರುಹಿನಶೆಟ್ಟಿ ಸಮಾಜ ಭಾಂದವರು ತಿಳಿಸಿದ್ದಾರೆ.

ಅಗಲಿದ ಜೀವ

ಜಯರಾಮ ಚಿಪ್ಪಲಕಟ್ಟಿ

ಮುಧೋಳ: ನಗರದ ರಾಘವೇಂದ್ರ ಪ್ರಿಂಟಿಂಗ ಪ್ರೆಸ್ ಮಾಲಿಕ ಜಯರಾಮ ವಿಠ್ಠಲರಾ ವಚಿಪ್ಪಲಕಟ್ಟಿ (66) ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಆಗಲಿದ್ದಾರೆ. ಇವರ ನಿಧನಕ್ಕೆ ವಿಪ್ರ ಸಮಾಜ ಬಾಂಧವರು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಗೆಜೆಟಿಯರ್ ಪ್ರತಿ ಮಂಗಳವಾರ ಇದು ಅನುಕ್ಷಣದ ಆ್ಯಪ್

{ ಜ್ಯೂ. ಎನ್‌ಟಿಆರ್ } ತೆಲುಗು ನಟ
ನನ್ನ ಅಮ್ಮನ ಪೂರ್ವಿಕರು ಮೂಲತಃ ಕುಂದಾಪುರದವರು. ನಾನು ಮನೆಯಲ್ಲಿ ಉಡುಪಿ ಊಟ ಮಾಡುತ್ತೇನೆ. ಕೃಷ್ಣಮಠಕ್ಕೆ ಭೇಟಿ ಕೊಟ್ಟು ಮನಶಾಂತಿ ಸಿಕ್ಕಿದೆ. ಸರ್ವೇ ಜನ ಸುಖಿನೋ ಭವಂತು ಎಂದು ದೇವರಲ್ಲಿ ಬೇಡಿಕೊಂಡಿದ್ದೇನೆ.

ಬಾದಾಮಿ ಪುರಸಭೆ ಚುನಾವಣೆ ಪ್ರಕ್ರಿಯೆ ಸರಳ

ಅಧ್ಯಕ್ಷರಾಗಿ ಪಾಂಡಪ್ಪ ಕಟ್ಟಿಮನಿ, ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕಮ್ಮಾರ

ಬಾದಾಮಿಯ ಪುರಸಭೆಗೆ ಅಧ್ಯಕ್ಷರಾಗಿ ಪಾಂಡಪ್ಪ ಕಟ್ಟಿಮನಿ, ಉಪಾಧ್ಯಕ್ಷೆಯಾಗಿ ವಿಜಯಲಕ್ಷ್ಮೀ ಕಮ್ಮಾರ ಚುನಾವಣೆ ಮೂಲಕ ಆಯ್ಕೆಯಾದರು. ಶಾಸಕ ಬಿ.ಬಿ.ಚಿಮ್ಮನಕಟ್ಟಿ, ಮುಖಂಡರು ಇದ್ದರು.

ಬಾದಾಮಿ: ಬಾದಾಮಿ ಪುರಸಭೆಯ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಚುನಾವಣೆ ಪುರಸಭೆಯ ಸಭಾ ಭವನದಲ್ಲಿ ನಡೆಯಿತು. ಕಾಂಗ್ರೆಸ್ ಪಕ್ಷದ ಸದಸ್ಯ ಪಾಂಡಪ್ಪ ಎಂ. ಕಟ್ಟಿಮನಿ ಅಧ್ಯಕ್ಷ ಸ್ಥಾನಕ್ಕೆ, ಉಪಾಧ್ಯಕ್ಷ ಸ್ಥಾನಕ್ಕೆ ಲಕ್ಷ್ಮೀಬಾಯಿ ಪಿ. ಕಮ್ಮಾರ ತಲಾ 14 ಮತಗಳನ್ನು ಪಡೆಯುವ ಮೂಲಕ ಆಯ್ಕೆಯಾದರೆಂದು ಚುನಾವಣಾಧಿಕಾರಿ ತಹಸೀಲ್ದಾರ್ ಜೆ.ಬಿ.ಮಜ್ಜಗಿ ಘೋಷಿಸಿದರು.

ಕಾಂಗ್ರೆಸ್ ಪಕ್ಷದ 13 ಜನ ಸದಸ್ಯರು ಮತ್ತು ಶಾಸಕ ಬಿ.ಬಿ.ಚಿಮ್ಮನಕಟ್ಟಿ ಸೇರಿ 14 ಮತಗಳು ಉಭಯರಿಗೆ ಕೈ ಎತ್ತುವ ಮೂಲಕ ಮತ ಚಲಾವಣೆ ನಡೆಯಿತು. ಬಿಜೆಪಿ ಪಕ್ಷದಿಂದ ಅಧ್ಯಕ್ಷ ಸ್ಥಾನಕ್ಕೆ ಕಾವ್ಯಶ್ರೀ ಚಂದ್ರಶೇಖರಯ್ಯ ಹಿರೇಮಠ, ಉಪಾಧ್ಯಕ್ಷ ಸ್ಥಾನಕ್ಕೆ ಅಶೋಕ ಯಲಿಗಾರ ತಮ್ಮ ನಾಮಪತ್ರ ಸಲ್ಲಿಕೆ ಮಾಡಿ ತಲಾ 10 ಮತಗಳನ್ನು ಪಡೆಯುವ ಮೂಲಕ ಪರಾಭವಗೊಂಡರು.

ಈ ಸಂದರ್ಭದಲ್ಲಿ ಮುಖ್ಯಾಧಿಕಾರಿ ಬಂದೇನವಾಜ ಡಾಂಗೆ 23 ಜನ ಸದಸ್ಯರು ಉಪಸ್ಥಿತರಿದ್ದರು. ಡಿವೈಎಸ್‌ಪಿ ವಿಶ್ವನಾಥ ಕುಲಕರ್ಣಿ, ಸಿಪಿಐ ಕರಿಯಪ್ಪ ಬನ್ನೆ, ಪಿಎಸ್‌ಐ ವಿಠ್ಠಲ ನಾಯಕ, ಕ್ರೈಂ ಪಿಎಸ್‌ಐ ವಿಜಯಕುಮಾರ ರಾಠೋಡ ಹಾಗೂ ಸಿಬ್ಬಂದಿ ಬಿಗಿ ಬಂದೂಬಸ್ತ್ ಒದಗಿಸಿದ್ದರು.

ಭಾರತೀಯರ ಹಬ್ಬಗಳ ಮಹತ್ವ ಮುಂದಿನ ಪೀಳಿಗೆಗೆ ತಿಳಿಸಿ

ರಬಕವಿ-ಬನಹಟ್ಟಿ: ಭಾರತೀಯ ಹಬ್ಬಗಳು ಬಹಳಷ್ಟು ವಿಶೇಷತೆಯನ್ನು ಪಡೆದುಕೊಂ ಡಿದ್ದು, ಈ ಹಬ್ಬಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುವುದು ಕೂಡಾ ಮಹತ್ವದ್ದಾಗಿದೆ ಎಂದು ಮಹೇಶ್ವರ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ನೂತನ ಕಾಬರಾ ತಿಳಿಸಿದರು. ಬಾಲಾಜಿ ಮಂದಿರದ ಮುಂಭಾಗದಲ್ಲಿ ಬತಬಾರತ ಹಬ್ಬದ ಅಂಗವಾಗಿ ಗೋವು ಗಳಿಗೆ ಪೂಜೆ ಸಲ್ಲಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ಸಮಾಜದ ಮಹಿಳೆಯರು ಗೋ ಮಾತೆಗೆ ಪೂಜೆ ಸಲ್ಲಿಸಿದ ನಂತರ ದಿನ ಪೂರ್ತಿ ಉಪವಾಸ ವೃತವನ್ನು ಕೈಗೊಳ್ಳುತ್ತಾರೆ. ಮನೆಯಲ್ಲಿ ಯಾವುದೇ ರೀತಿ ಬಿಸಿ ಅಡುಗೆಯನ್ನು ಮಾಡುವುದಿಲ್ಲ. ಇದೊಂದು ಮಹೇಶ್ವರಿ ಸಮಾಜದಲ್ಲಿ ಮಹಿಳೆಯರು ಆಚರಿಸುವ ಪವಿತ್ರವಾದ ಹಬ್ಬವಾಗಿದೆ ಎಂದು ಕಾಬರಾ ತಿಳಿಸಿದರು. ಗಾಯತ್ರಿ ಭೂತಡಾ, ನೀತಾ ರಾಠಿ, ಉಮಾ ಭಟ್ಟಡ, ನೇತಲ್ ರಾಠಿ, ಅರ್ಚನಾ ಸಾರಡಾ, ಜ್ಯೋತಿ ಭಟ್ಟಡ, ಪುಂಗಲೀಯಾ, ಗೀತಾ ಭಟ್ಟಡ, ಲಡ್ಡಾ ಪರಿವಾರದ ಮಹಿಳೆಯರು ಸೇರಿದಂತೆ ಅನೇಕರು ಇದ್ದರು.

ಸಜ್ಜನಿಕೆಗೆ ಹೆಸರಾಗಿದ್ದ ಡಾ.ಸಜನಾ

ಕಸಾಪ ತಾಲೂಕಾ ಘಟಕವು ಲಿಂಗೈಕ್ಯ ಡಾ. ಸ.ಜ.ನಾಗಲೋಟಿಮಠ ಸ್ಮರಣಾರ್ಥ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗಣ್ಯರು.

ರಬಕವಿ-ಬನಹಟ್ಟಿ: ಜೀವನದ ಮೌಲ್ಯಗಳನ್ನು ಬದುಕಿ ತೋರಿದ ವೈದ್ಯವಿಜ್ಞಾನಿ ಲಿಂಗೈಕ್ಯ ಡಾ. ಸ.ಜ.ನಾಗಲೋಟಿಮಠ ಅವರು ಸರಳ, ಸಜ್ಜನಿಕೆಗೆ ಹೆಸರಾಗಿದ್ದರು. ಅತ್ಯುತ್ತಮ ವೈದ್ಯ ಸಾಹಿತಿಯಾಗಿಯೂ ಅಗ್ರಮಾನ್ಯರೆನಿಸಿಕೊಂಡಿದ್ದರು. ಕನ್ನಡ ಸಾಹಿತ್ಯ ಲೋಕದಲ್ಲಿ ಅವರದು ಶಾಶ್ವತ ಸ್ಥಾನ ಪಡೆದ ಅವರ ನಿರಾಡಂಬರ ಜೀವನ ನಮಗೆಲ್ಲಾ ಪ್ರೇರಣೆಯಾಗಿದೆ ಎಂದು ಹಿರಿಯ ಸಾಹಿತಿ ಬನಹಟ್ಟಿ ಜಯವಂತ ಕಾಡದೇವರ ಬಣ್ಣಿಸಿದರು. ರಾಮಪುರದಲ್ಲಿ ಕಸಾಪದಿಂದ ಹಮ್ಮಿಕೊಂಡ ವೈದ್ಯ ಸದಾಶಿವ ಲಿಂಗೈಕ್ಯ ಡಾ. ಸ.ಜ.ನಾಗಲೋಟಿಮಠ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಡಾ. ಸ.ಜ.ನಾಗಲೋಟಿಮಠ ಅವರ ಜೀವನ ಸಾಧನೆ ಕುರಿತು ಮಾತನಾಡಿ ಶಾಲಾ ಮಕ್ಕಳು ಸಾಧಕರ ಜೀವನವನ್ನು ಅರಿಯಬೇಕು. ಸಾಧನೆಯತ್ತ ಸಾಗಿ, ಅತ್ಯುನ್ನತ ಸಾಧನೆ ಮಾಡಬೇಕೆಂದರು.

ಪರಪ್ಪ ಮ. ಬಿಳ್ಳೂರ ಅಧ್ಯಕ್ಷತೆ ವಹಿಸಿದ್ದರು. ಕಸಾಪ ತಾಲೂಕಾಧ್ಯಕ್ಷ ಮ. ಕೃ.ಮೇಗಾಡಿ, ಶ್ರೀಶೈಲ ಬುರ್ಲಿ ಮಾತನಾಡಿದರು. ಹಿರಿಯರಾದ ಬಸವಪ್ರಭು ಹಟ್ಟಿ, ತೇರದಾಳ ವಲಯ ಕಸಾಪ ಅಧ್ಯಕ್ಷ ಗಂಗಾಧರ ಮೋಪಗಾರ, ಈರಣ್ಣ ಗಣಮುಖಿ, ಅಪ್ಪಾಸಾಬ ತುಬಚಿ, ಎನ್.ಜಿ.ಅರಳಿಕಟ್ಟಿ ಪಾಲ್ಗೊಂಡಿದ್ದರು.

ಧರ್ಮ ರಕ್ಷಣೆಗಾಗಿ ಅವತರಿಸಿದ ಮಹಾಪುರುಷ ಶ್ರೀಕೃಷ್ಣ

ಬಾಗಲಕೋಟೆ: ಲೋಕದಲ್ಲಿ ಅನ್ಯಾಯ ಹೆಚ್ಚಾಗಿ, ಪಾಪ ಕರ್ಮಗಳು ಅಟ್ಟಹಾಸ ಮೆರೆಯುವ ಸಂದರ್ಭದಲ್ಲಿ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿ, ಧರ್ಮ ಉಳಿವಿಗಾಗಿ ಅವತರಿಸಿ ಬಂದವರೇ ಮಹಾಪುರುಷ ಶ್ರೀಕೃಷ್ಣ ಎಂದು ಆಹಾರ ಇಲಾಖೆಯ ಸಹಾಯಕ ನಿರ್ದೇಶಕ ನಾಗರಾಜ ಕುಲಕರ್ಣಿ ಹೇಳಿದರು.

ನವನಗರದ ಡಾ. ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾಭಾರತದಲ್ಲಿ ಅರ್ಜುನನನ್ನು ನಿಮಿತ್ಯವಾಗಿ ಇರಿಸಿಕೊಂಡು ಜನರಿಗೆ ಭಗವದ್ಗೀತೆ ಮೂಲಕ ಧರ್ಮ, ಅಧರ್ಮಗಳ ಸತ್ಯಾಸತ್ಯತೆಗಳ ಹಾಗೂ ಮಾನವೀಯತೆ ಮೌಲ್ಯಗಳನ್ನು ಕುರಿತಾದ ಸಂದೇಶಗಳನ್ನು ಸಾರಿದ್ದಾರೆ ಎಂದರು.

ಇಂದು ಆ ಭಗವದ್ಗೀತೆ ನ್ಯಾಯಾಲಯದಲ್ಲಿ ಪ್ರಮಾಣೀಕರಿಸುವಷ್ಟು ಪ್ರಸಿದ್ಧವಾಗಿದೆ. ಇಂತಹ ಅದ್ಭುತ ಗ್ರಂಥವನ್ನು ಲೋಕಕ್ಕೆ ನೀಡಿದ ಕೃಷ್ಣ ಹಿಂದು, ಇಂದು ಮುಂದೆಂದೂ ಅಜರಾಮರವಾಗಿದ್ದಾನೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ ಮಾತನಾಡಿ, ಮಹಾಪುರುಷರು ಯಾವುದೇ ಜಾತಿ ಧರ್ಮಕ್ಕೆ ಸೀಮಿತರಲ್ಲ. ಇಂತವಹ ಜಯಂತಿ ಉತ್ಸವಕ್ಕೆ ಅಭಿಮಾನಿಗಳು, ಭಕ್ತರು ಆರಾಧಕರು ಸ್ವಯಂ ಪ್ರೇರಿತರಾಗಿ ನಿಗದಿತ ಸಮಯದಲ್ಲಿ ಆಗಮಿಸಿ ಜಯಂತಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದಾಗ ಮಾತ್ರ ಅದಕ್ಕೊಂದು ಬೆಲೆ ಬರುತ್ತದೆ ಎಂದರು.

ಅದ್ದೂರಿ ಮೆರವಣಿಗೆ: ಕಾರ್ಯಕ್ರಮದ ಪೂರ್ವದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿ ಶ್ರೀಕೃಷ್ಣರ ಭಾವಚಿತ್ರಕ್ಕೆ ಪ್ರಭಾರಿ ಅಪರ ಜಿಲ್ಲಾಧಿಕಾರಿ ಸಂತೋಷ ಜಗಲಾಸರ ಪೂಜೆ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆ ಜಿಲ್ಲಾಡಳಿತ ಭವನದಿಂದ ಪ್ರಾರಂಭವಾಗಿ ನಗರದ ನಾನಾ ಕಡೆ ಸಂಚರಿಸಿ ಕೊನೆಗೆ ಅಂಬೇಡ್ಕರ್ ಭವನಕ್ಕೆ ಮುಕ್ತಾಯಗೊಂಡಿತು.

ಸಮುದಾಯದ ಮುಖಂಡರಾದ ಭೀಮಶಿ ಹಣಮರ್, ಸತ್ಯಪ್ಪ ಹಣಮರ, ಬಸವರಾಜ ಯಾದವ, ಫಕೀರಪ್ಪ ಯಾದವ ಸೇರಿದಂತೆ ಇತರರಿದ್ದರು.



ಬಾಗಲಕೋಟೆಯ ಡಾ. ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿದ್ದ ಶ್ರೀಕೃಷ್ಣ ಜಯಂತಿಯನ್ನು ಗಣ್ಯರು ಉದ್ಘಾಟಿಸಿದರು.

> ವಿಷ್ಣುವಿನ ದಶಾವತಾರಗಳಲ್ಲಿ ಕೃಷ್ಣಾ ಅವತಾರ ಕೂಡಾ ಒಂದಾಗಿದ್ದು, ಮೊದಲಿಗೆ ಕೂರ್ಮಾವತಾರ ಅವತರಿಸಿದ್ದರಿಂದ ಪ್ರತಿ ದೇವಸ್ಥಾನಗಳಲ್ಲಿ ಇಂದು ಕೂಡಾ ದೇವರ ಎದುರಿಗೆ ಆಮೆ ಪ್ರತಿಷ್ಠಾಪಿಸುವ ಉದ್ದೇಶ ಅದು ಕೂರ್ಮಾವತಾರದ ಕುರುಹು ಆಗಿದೆ.
>
> -ಡಿ.ಬಿ.ಫಕೀರಪ್ಪ
> ನವೋದಯ ವಿದ್ಯಾಲಯದ ಶಿಕ್ಷಕ

ಇಂದಿನಿಂದ 23ನೇ ರಾಜ್ಯ ಮಟ್ಟದ ವುಶು ಕ್ರೀಡಾಕೂಟ

ಬಾಗಲಕೋಟೆ: ಸಮೀಪದ ತೋಟಗಾರಿಕೆ ವಿಜ್ಞಾನಿಗಳ ವಿವಿಯಲ್ಲಿ ಸೆ.1 ರಿಂದ 4ರ ವರೆಗೆ 23ನೇ ರಾಜ್ಯ ವುಶು ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ವುಶು ಸಂಸ್ಥೆಯ ಅಧ್ಯಕ್ಷ ರಾಜು ನಾಯ್ಕರ್ ತಿಳಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ಪ್ರಥಮ ಬಾರಿಗೆ ನಗರದಲ್ಲಿ ಈ ಕ್ರೀಡಾಕೂಟ ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅಂದು ಬೆಳಿಗ್ಗೆ 10ಕ್ಕೆ ಕ್ರೀಡಾಕೂಟವನ್ನು ರಾಜ್ಯ ವುಶು ಸಂಸ್ಥೆ ಅಧ್ಯಕ್ಷ ಹಾಗೂ ಮಾಜಿ ಶಾಸಕ ವೀರಣ್ಣ ಚರಂತಿಮಠ ಉದ್ಘಾಟಿಸಲಿದ್ದು, ಅಧ್ಯಕ್ಷತೆಯಲ್ಲಿ ತೋವಿವಿ ಕುಲಪತಿ ಡಾ. ವಿಷ್ಣುವರ್ಧನ ವಹಿಸಲಿದ್ದಾರೆ. ರಾಜ್ಯ ವುಶು ಸಂಸ್ಥೆ ಉಪಾಧ್ಯಕ್ಷರಾದ ಅಶೋಕ ಸಜ್ಜನ ಹಾಗೂ ಕುಮಾರಸ್ವಾಮಿ ಹಿರೇಮಠ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. 4 ರಂದು ಸಂಜೆ 4ಕ್ಕೆ ಹಮ್ಮಿಕೊಂಡಿರುವ ಸಮಾರೋಪ ಸಮಾರಂಭದ ಅಧ್ಯಕ್ಷತೆಯಲ್ಲಿ ತೋವಿವಿ ಕುಲಪತಿ ಡಾ. ವಿಷ್ಣುವರ್ಧನ ಅಧ್ಯಕ್ಷತೆ ವಹಿಸಲಿದ್ದಾರೆ. ಬಾದಾಮಿ ಶಾಸಕ ಬಿ.ಬಿ.ಚಿಮ್ಮನಕಟ್ಟಿ, ಜಿಲ್ಲಾಧಿಕಾರಿ ಜಾನಕಿ ಕೆ.ಎಂ, ಜಿಪಂ ಸಿಇಒ ಶಶಿಧರ ಕುರೇರ ಹಾಗೂ ಬೀಳಗಿಯ ಸ್ವಾಮಿ ವಿವೇಕಾನಂದ ಶಿಕ್ಷಣ ಸಮೂಹ ಸಂಸ್ಥೆಗಳ ಸಂಸ್ಥಾಪಕ ಎಂ.ಎನ್.ಪಾಟೀಲ ಸೇರಿದಂತೆ ಅನೇಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಬ್ ಜೂನಿಯರ್, ಜೂನಿಯರ್ ಹಾಗೂ ಸೀನಿಯರ್ ವಿಭಾಗದ ಈ ಕ್ರೀಡಾಕೂಟದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಅಂದಾಜು 600 ಕ್ರೀಡಾಪಟುಗಳು, ತರಬೇತುದಾರರು ಹಾಗೂ ನಿರ್ಣಾಯಕರು ಪಾಲ್ಗೊಳ್ಳಲಿದ್ದಾರೆ. ಅವರಿಗೆ ಬೇಕಾದ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಈ ಕ್ರೀಡಾಕೂಟದಲ್ಲಿ ವಿಜೇತರಾದವರು ರಾಷ್ಟ್ರ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಲಿದ್ದಾರೆ ಎಂದು ತಿಳಿಸಿದರು. ರಾಜ್ಯ ವುಶು ಸಂಸ್ಥೆ ಪ್ರಧಾನ ಕಾರ್ಯದರ್ಶಿ ಅಶೋಕ ಮೊಕಾಶಿ ಮಾತನಾಡಿ, ವುಶು ಕ್ರೀಡೆಯಲ್ಲಿ ಸಾಧನೆ ಮಾಡಿರುವ ಕ್ರೀಡಾಪಟುಗಳಿಗೆ ರಾಜ್ಯ ಸರಕಾರದಿಂದ ಬರುವ ಸ್ಕಾಲರಶಿಪ್ ನಿಲ್ಲಿಸಿದ್ದಾರೆ. ಇದರಿಂದ ಬಡ ಕ್ರೀಡಾಪಟುಗಳು ತುಂಬ ತೊಂದರೆ ಅನುಭವಿಸುತ್ತಿದ್ದಾರೆ. ಕಾರಣ ಸರಕಾರ ಸ್ಕಾಲರಶಿಪ್ ನೀಡುವುದು ಪುನಃ ಪ್ರಾರಂಭಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ವುಶು ಸಂಸ್ಥೆ ಕೋಶಾಧ್ಯಕ್ಷ ಸಂಗಮೇಶ ಲಾಯದಗುಂದಿ, ಕ್ರೀಡಾಕೂಟದ ಸಂಘಟನಾ ಕಾರ್ಯದರ್ಶಿ ಡಾ. ಆರ್.ಎಂ.ಹಿರೇಮಠ ಇದ್ದರು.

ಬಾಗಲಕೋಟೆಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವುಶು ಸಂಸ್ಥೆಯ ಅಧ್ಯಕ್ಷ ರಾಜು ನಾಯ್ಕರ್ ಮಾತನಾಡಿದರು.

ಬೀದಿಬದಿ ಅಂಗಡಿಗಳಿಗೆ ದಾಳಿ

ಮುಧೋಳ: ನಗರದ ವಿವಿಧ ಹೊಟೇಲ್ ಹಾಗು ಬೀದಿ ಬದಿಯ ಅಂಗಡಿ, ಮುಗ್ಗಟ್ಟುಗಳಿಗೆ ಆಹಾರ ಸಂಹರ ಸಂರಕ್ಷಣಾ ಅಧಿಕಾರಿಗಳು ಧಿಡೀರನೆ ಭೇಟಿ ನೀಡಿ ಪರಿಶೀಲಿಸಿ ಕೆಲವೊಂದು ಅಂಗಡಿಕಾರರಿಗೆ ಅಲ್ಲಿನ ವ್ಯವಸ್ಥೆ ಬಗ್ಗೆ ಖಡಕ್ ಸೂಚನೆ ನೀಡಿದ್ದಾರೆ.

ಕಳಪೆ ಆಹಾರ ತಯಾರಿಕೆ, ಅಶುಚಿತ್ವ, ಮಟನ್, ಮೀನುಗಳಿಗೆ ಯೋಗ್ಯವಲ್ಲದ ಕಲರ್ ಬಳಕೆ ಮಾಡುತ್ತಿರುವದನ್ನು ಗಮನಿಸಿದ ಅಧಿಕಾರಿಗಳು ನೋಟಿಸ್ ನೀಡಿ ಎಚ್ಚರಿಸಿ, 15ದಿನದೊಳಗೆ ಎಲ್ಲವೂ ಸರಿಸಪಡಿಸಕೊಳ್ಳದಿದ್ದರೆ ಪ್ರಕರಣ ದಾಖಲು ಮಾಡಿಕೊಂಡು ದಂಡ ವಿಧಿಸಿ, ತಮ್ಮ ಲೈಸನ್ಸ್ ರದ್ದು ಪಡಿಸಲಾಗುವದು. ಎಂದು ಅಧಿಕಾರಿಗಳು ವ್ಯಾಪಾರಸ್ಥರಿಗೆ ಸೂಚಿಸಿದರು.

ಬಾಗಲಕೋಟೆ ಜಿಲ್ಲಾಧಿಕಾರಿ ಕೆ. ಜಾನಕಿ, ತಹಸೀಲ್ದಾರ್ ವಿ.ಎಸ್. ಹತ್ತಳ್ಳಿ ಮಾರ್ಗದರ್ಶದಂತೆ 25.ಕ್ಕೂ ಹೆಚ್ಚು ಹೊಟೇಲ್, ಖಾದ್ಯ ತಯಾರಿಕೆಯ ಅಂಗಡಿಗಳಿಗೆ ತೆರಳಿ ಪರಿಶೀಲನೆ ಮಾಡಿದ್ದರು. ಈ ಸಂದರ್ಭದಲ್ಲಿ ಅಧಿಕಾರಿಗಳಾದ ದಯಾನಂದ ಹೂಗಾರ, ಸುರೇಶ ಹೊಸಮನಿ, ಕಿರಿಯ ಆರೋಗ್ಯ ನಿರೀಕ್ಷಕ ಸುಭಾಸ ಕಾಂಬಳೆ, ಹಣಮಂತ ಮಾಲಗಿ ಇತರರಿದ್ದರು.

ಎನಿವೇರ್ ನೋಂದಣಿ ವ್ಯವಸ್ಥೆ ಜಾರಿ

ಬಾಗಲಕೋಟೆ: ಪ್ರಸಕ್ತ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಸ್ಥಿತಾಸ್ಥಿಯನ್ನು ಜಿಲ್ಲೆಯ ಯಾವುದೇ ಉಪ ನೋಂದಣಿ ಕಚೇರಿಯಲ್ಲಿ ನೋಂದಣಿ ಮಾಡಲು ಅನುಕೂಲವಾಗುವಂತೆ ಎನಿವೇರ್ ನೋಂದಣಿ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಜಿಲ್ಲಾ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದಾರೆ. ನೋಂದಣಿ ಕಾಯ್ದೆ-1908ರ ಕಲಂ (5) ಹಾಗೂ ಕಲಂ(6) ರಂತೆ 2011ರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಮತ್ತು ಕಳೆದ ಮಾರ್ಚ ಮಾಹೆಯಲ್ಲಿ ತುಮಕೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಈ ವ್ಯವಸ್ಥೆಯನ್ನು ಪ್ರಯಾಗಿಕವಾಗಿ ಜಾರಿಗೆ ತರಲಾಗಿತ್ತು. ಅಲ್ಲಿ ಯಶಸ್ವಿಯಾಗಿರುವ ಹಿನ್ನೆಲೆಯಲ್ಲಿ ಇದೀಗ ಎನಿವೇರ್ ನೋಂದಣಿ ವ್ಯವಸ್ಥೆಯನ್ನು ಬಾಗಲಕೋಟೆ ಜಿಲ್ಲಾ ಘಟಕವನ್ನು ಒಂದು ಯುನಿಟ್ ಎಂದು ಪರಿಗಣಿಸಿ ಈ ಜಿಲ್ಲೆಯ ಎಲ್ಲ ಉಪ ನೋಂದಣಿ ಕಚೇರಿಗಳಿಗೂ ವಿಸ್ತರಿಸಿ ಸರಕಾರ ಆದೇಶಿಸಿದೆ ಎಂದು ತಿಳಿಸಿದ್ದಾರೆ. ಎನಿವೇರ್ ನೋಂದಣಿ ವ್ಯವಸ್ಥೆಯು ಸಾರ್ವಜನಿಕರಿಗೆ ಹಲವಾರು ರೀತಿಯಲ್ಲಿ ಉಪಯುಕ್ತವಾಗಿದ್ದು, ನೋಂದಣಿ ಪ್ರಕ್ರಿಯೆ ಸುಲಭವಾಗುವುದಲ್ಲದೇ ಸಮಯವು ಸಹ ಉಳಿತಾಯವಾಗಲಿದೆ. ನೋಂದಣಿಯಲ್ಲಿ ಪಾರದರ್ಶಕತೆ ಹೆಚ್ಚಲಿದ್ದು, ವಿಳಂಬವನ್ನು ತಡೆಗಟ್ಟಲಿದೆ. ಸಾರ್ವಜನಿಕರು ಸ್ಲಾಟ್ ಲಭ್ಯವಿರುವಂತಹ ಸಮೀಪದ ನೋಂದಣಿ ಕಚೇರಿಯನ್ನು ಆಯ್ಕೆ ಮಾಡಿಕೊಂಡು ದಸ್ತಾವೇಜನ್ನು ನೋಂದಾಯಿಸಬಹುದು. ಈ ನೂತನ ವ್ಯವಸ್ಥೆಯನ್ನು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಒಳ ಮೀಸಲು ಜಾರಿಗಾಗಿ ಪ್ರತಿಭಟನೆ

ಮಾದಿಗ ಸಂಘಟನೆಯಿಂದ 30 ವರ್ಷಗಳಿಂದ ಅವಿರತ ಹೋರಾಟ

ಬೀಳಗಿ: ಪರಿಶಿಷ್ಟ ಜಾತಿಯ ಒಳ ಮೀಸಲಿಗಾಗಿ ಮಾದಿಗ ಸಂಘಟನೆಗಳು 30 ವರ್ಷಗಳಿಂದ ಅವಿರತ ಹೋರಾಟ ನಡೆಸುತ್ತಿದ್ದು ಅದರ ಫಲವಾಗಿ ಈಗ ಸುಪ್ರೀಂ ಕೊರ್ಟ ತೀರ್ಪು ಅ.1 ರಂದು ನೀಡಿದ್ದು, ರಾಜ್ಯ ಸರಕಾರವು ಕೇಳಿದದಾಗ ಮಾತ್ರ ಸರಕಾರ ಸ್ಪಂದಿಸುತ್ತದೆ ಎಂದು ಮಾದಿಗ ಒಳಮೀಸ ಲಾತಿ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಶಿವರಾಯ ಅಕ್ಕರಕಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಮಾದಿಗ ಸಂಘಟನೆಗಳ ಒಕ್ಕೂಟದವತಿಯಿಂದ ರಾಜ್ಯ ಸರಕಾರ ಒಳ ಮೀಸಲಾತಿ ಕಲ್ಪಿಸಬೇಕೆಂದು ನೂರಾರು ಜನರು ಬಿ ಅರ್ ಅಂಬೇಡ್ಕರ ವೃತ್ತದಿಂದ ತಹಸೀಲ್ದಾರ ಕಚೇರಿಯವರಿಗೆ ಹಲಗೆ ಭಾರಿಸುತ್ತಾ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಾದಿಗ ಸಂಘಟನೆಗಳ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮು ಚೂರಿ ಮಾತನಾಡಿ ಕಾಂಗ್ರೆಸ್ ಹೈಕಮಾಂಡ ಒಳಮೀಸಲಾತಿ ಬಗ್ಗೆ 3 ಭಾರಿ ಪ್ರಣಾಳಿಕೆಯಲ್ಲಿ ಬಿಡುಗಡೆ ಮಾಡಿದ್ದು ಈಗ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ನೇತೃತದಲ್ಲಿ ಸಮಿತಿ ರಚನೆ ಮಾಡಿದ್ದು ಜೆ ಮಾದುಸ್ವಾಮಿ ಶಿಫಾರಸ್ಸಿನಲ್ಲಿನ ನ್ಯೂನತೆಗಳನ್ನು ತಿದ್ದುಪಡಿ ಮಾಡುವದು ಅಗತ್ಯವಾಗಿದೆ ಎಂದರು. ಶಿವಾನಂದ ಬಿಸನಾಳ ಮಾತನಾಡಿದರು.

> ಸಿಎಂ ಸಿದ್ದರಾಮಯ್ಯನವರು ಒಳಮೀಸಲಾತಿ ತರುವ ಬಗ್ಗೆ ಕಾಳಜಿವಹಿಸುತ್ತಿಲ್ಲ ಸಚಿವರಾದ ಆರ್.ಬಿ.ತಿಮ್ಮಾಪೂರ ಮುನಿಯಪ್ಪವರು ಅವರ ಹತ್ತಿರ ಒಳಮೀಸಲಾತಿಯನ್ನು ಬಿಕ್ಷೆ ಬೇಡಿದಂತೆ ಕೇಳುವದು ಸರಿಯಲ್ಲ ಅದು ನಮಗೆ ಸಿಗಬೇಕಾದ ಹಕ್ಕು ತಕ್ಷಣ ತಮ್ಮ ಸಚಿವ ಸ್ಥಾನಗಳಿಗೆ ರಾಜೆನಾಮೆ ನೀಡಿ ಹೋರಾಟ ಮಾಡಲು ರಾಜ್ಯದ ಮಾದಿಗರ ಜತೆ ಬನ್ನಿ ಸಮಾಜ ನಿಮ್ಮ ಜೊತೆ ಇರುತ್ತದೆ.
>
> - ಮುತ್ತಣ್ಣ ಬೆಣ್ಣೂರ
> ರಾಜ್ಯಾಧ್ಯಕ್ಷರು ಮಾದಿಗ ಮಹಾ ಸಭಾ


ಮಾದಿಗ ಸಂಘಟನೆಗಳ ಒಕ್ಕೂಟವತಿಯಿಂದ ತಹಸೀಲ್ದಾರ್ ಸುಹಾಸ ಇಂಗಳೆಯವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ಪುರಸಭೆ ಚುನಾವಣೆ: ನಾಲ್ವರ ಬಂಧನ

ಗುಳೇದಗುಡ್ಡ: ಶುಕ್ರವಾರ ನಡೆದ ಸ್ಥಳೀಯ ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ಸಂದರ್ಭದಲ್ಲಿ ನಿರೀಕ್ಷಿತ ಫಲಿತಾಂಶಬಾರದೇ ಇದ್ದ ಪಕ್ಷದಲ್ಲಿ ಅಶಾಂತಿಯನ್ನು ಉಂಟು ಮಾಡುವ ಉದ್ದೇಶ ಹಾಗೂ ಸಾರ್ವಜನಿಕರಲ್ಲಿ ಭಯವನ್ನುಂಟುಪಡಿಸಿ ಶಾಂತತಾ ಭಂಗಪಡಿಸುವ ಉದ್ದೇಶದಿಂದ ತಮ್ಮ ಸಂಗಡ ವಾಹನ, ಮಾರಕಾಸ್ತ್ರಗಳೊಂದಿಗೆ ಹೊಂಚುಹಾಕಿ ನಿಂತಕೊಂಡ ಸಂದರ್ಭಲ್ಲಿ ಪೋಲಿಸರು ನಾಲ್ವರನ್ನು ಬಂಧಿಸಿಲಾಗಿದೆ. ಬಂಧಿತರಿಂದ ಎರಡು ವಾಹನಗಳು ಸೇರಿದಂತೆ ಕಬ್ಬಿಣದ ರಾಡ, ಕಲ್ಲು, ಕಟ್ಟಿಗೆ, ತಲವಾರ ವಶಪಡಿಸಿಕೊಂಡು ಸ್ಥಳಿಯ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸ್ಥಳೀಯ ಪಿಎಸ್‌ಐ ಸಿದ್ದಪ್ಪ ಯಡಹಳ್ಳಿ ತಿಳಿಸಿದ್ದಾರೆ.

ಬಾಗಲಕೋಟೆ ನವನಗರದ ಶಿವು ಬಸವರಾಜ ಕೊಡಬಾಗಿ, ವಿದ್ಯಾಗಿರಿಯ ಇಮಾಮ ಶಮಶುದ್ದೀನ ಕಳಸಿ, ಮುಚಗಂಡಿಯ ವಿಶ್ವನಾಥ ಬಸವರಾಜ ಅಂಬಿಗೇರ, ನವನಗರದ ಮಹಮ್ಮದಲಿ ಸಲೀಂ ಮಂಟೂರ ಅವರನ್ನು ಬಂಧಿಸಲಾಗಿದೆ. ನವನಗರದ ಸಮೀರ ಮುಲ್ಲಾ, ಗದ್ದನಕೇರಿಯ ವಿಲಾಸ ರಾಠೋಡ, ನವನಗರದ ಇಮ್ರಾನ ಗಾಡಿ, ಮುಚಗಂಡಿಯ ಸಮೀರ ಬಂದೇಸಾಬ ಚಿಮ್ಮಲಗಿ ಪರಾರಿಯಾಗಿದ್ದು. ಈ ಆರೋಪಿಗಳ ಪತ್ತೆಗೆ ಪೋಲಿಸರು ಹುಡುಕಾಟ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.

ಕೋವಿಡ್ ವೇಳೆ 7,223 ಕೋಟಿ ರು. ನಕಲಿ ಬಿಲ್?

← ಮೊದಲಪುಟದಿಂದ

ಮುಖ್ಯಮಂತ್ರಿಗಳ ಅಧಿಕೃತ ನಿವಾಸ ಕಾವೇರಿಗೆ ಆಗಮಿಸಿದ ಆಯೋಗದ ಅಧ್ಯಕ್ಷ ಕುನ್ಹಾ ಅವರು, ಮಧ್ಯಂತರ ವರದಿಯನ್ನು ಸಲ್ಲಿಕೆ ಮಾಡಿದರು. ಇದರಲ್ಲಿ ಪ್ರಮುಖವಾಗಿ ಯಾವೆಲ್ಲ ರೀತಿಯಲ್ಲಿ ಅಕ್ರಮ ನಡೆದಿದೆ? ಹೆಚ್ಚುವರಿ ಮೊತ್ತಕ್ಕೆ ಔಷಧಿ, ವೆಂಟಿಲೇಟರ್, ಮಾಸ್ಕ್ ಸೇರಿದಂತೆ ಹಲವು ವಸ್ತುಗಳ ಖರೀದಿ ವೇಳೆ ಅಕ್ರಮ ನಡೆದಿದೆ ಎಂದು ಉಲ್ಲೇಖಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಕೆ ಮಾಡಿರುವ ಮಧ್ಯಂತರ ವರದಿಯಲ್ಲಿ, ಸುಮಾರು 7223 ಕೋಟಿ ರು.ಗೂ ಹೆಚ್ಚು ಮೌಲ್ಯದ ಖರೀದಿಗೆ ಸೂಕ್ತ ದಾಖಲೆಗಳೇ ಇಲ್ಲದಿರುವುದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಮಧ್ಯಂತರ ವರದಿಯಲ್ಲಿಯೇ ಈ ಪ್ರಮಾಣದ ಅವ್ಯವಹಾರ ನಡೆದಿದೆ ಎಂದಿರುವುದರಿಂದ ಅಂತಿಮ ವರದಿ ವೇಳೆಗೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ವರದಿಯಲ್ಲಿರುವ ಪ್ರಮುಖಾಂಶವೇನು?: ಪ್ರಮುಖವಾಗಿ ಆರೋಗ್ಯ ಇಲಾಖೆ ವತಿಯಿಂದ 1754 ಕೋಟಿ ರು., ರಾಷ್ಟ್ರೀಯ ಆರೋಗ್ಯ ಮಿಷನ್‌ನಿಂದ 1406 ಕೋಟಿ ರು, ವೈದ್ಯಕೀಯ ಶಿಕ್ಷಣ ಇಲಾಖೆಯಿಂದ 918 ಕೋಟಿ ರು, ಕರ್ನಾಟಕ ರಾಜ್ಯ ಔಷಧ ಸರಬರಾಜು ಸಂಸ್ಥೆಯಿಂದ 1394 ಕೋಟಿ ರು ಸೇರಿದಂತೆ ಬಿಬಿಎಂಪಿ ಝೋನ್‌ವಾರು, ಕೆಲ ಸರಕಾರಿ ಆಸ್ಪತ್ರೆಗಳ ವತಿಯಿಂದ ಖರೀದಿಸಿರುವ ನಕಲಿ ಬಿಲ್‌ಗಳನ್ನು ಸೃಷ್ಟಿಸಲಾಗಿದೆ. ಈ ರೀತಿ ನಕಲಿ ಬಿಲ್ ಅಥವಾ ಇನ್ನಿತರೆ ಅಕ್ರಮದ ಮೂಲಕ ನಡೆದಿರುವ ಅಕ್ರಮದ ಪ್ರಮಾಣವೇ 7223 ಸಾವಿರ ಕೋಟಿ ರು. ದಾಟಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಖಚಿತ ಮೂಲಗಳು ತಿಳಿಸಿವೆ. ಕೋವಿಡ್ ಹಗರಣದ ವರದಿ ಸಿಎಂ ಕೈ ಸೇರಿದ ಬೆನ್ನಲ್ಲೇ ಕಾವೇರಿ ನಿವಾಸಕ್ಕೆ ಸಚಿವರು ಆಗಮಿಸಿ ಮಾತುಕತೆ ನಡೆಸಿದ್ದಾರೆ. ಡಿಸಿಎಂ ಡಿ.ಕೆ ಶಿವಕುಮಾರ್, ಸಚಿವ ಎಂ.ಬಿ ಪಾಟೀಲ, ಡಾ.ಜಿ ಪರಮೇಶ್ವರ್, ಪ್ರಿಯಾಂಕ್ ಖರ್ಗೆ, ಕೆ.ಎನ್ ರಾಜಣ್ಣ, ಎಂ.ಸಿ ಸುಧಾಕರ್ ದಿನೇಶ್ ಗೂಂಡುರಾವ್, ಸತೀಶ್ ಜಾರಕಿಹೊಳಿ, ಬೈರತಿ ಸುರೇಶ್ ಆಗಮಿಸಿ ಕೋವಿಡ್ ಅವಧಿಯ ಅಕ್ರಮದ ಬಗ್ಗೆ ಸಿಎಂ ಜತೆ ಸಮಾಲೋಚನೆ ನಡೆಸಿದ್ದಾರೆ.

ಯಾವುದೆಲ್ಲ ನಕಲಿ ಬಿಲ್

ವಿಭಾಗ	ಖರೀದಿಯ ಮೊತ್ತ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ	1754,34,47,931
ರಾಷ್ಟ್ರೀಯ ಆರೋಗ್ಯ ಮಿಷನ್	1406,56,53,000
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ	918,34,82,216
ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ(ವೈದ್ಯಕೀಯ ಸಲಕರಣೆ)	1394,59,70,842
ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ಔಷಧಿ)	569,02,51,915
ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ	264,37,48,862
ಬಿಬಿಎಂಪಿ, ಕೇಂದ್ರ ಕಚೇರಿ	732,41,53,099
ದಾಸರಹಳ್ಳಿ ವಲಯ ಬಿಬಿಎಂಪಿ	26,26,70,099
ಪೂರ್ವ ವಲಯ, ಬಿಬಿಎಂಪಿ	78,09,84,799
ಮಹದೇವಪುರ ವಲಯ, ಬಿಬಿಎಂಪಿ	48,57,42,526
ರಾಜರಾಜೇಶ್ವರಿ ನಗರ ವಲಯ ಬಿಬಿಎಂಪಿ	31,03,53,030
ಒಟ್ಟು	7223,64,58,319

ದಾಸನಿಗೆ ಧೈರ್ಯ ತುಂಬಿದ ಪತ್ನಿ, ವಕೀಲರು

ದರ್ಶನ್ ಭೇಟಿಯಾದ ಪತ್ನಿ

ಬಳ್ಳಾರಿ: ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ದರ್ಶನ್ ಪರಪ್ಪನ ಅಗ್ರಹಾರ ಜೈಲಿನಿಂದ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಶಿಫ್ಟ್ ಆದ ಬಳಿಕ ಪತ್ನಿ ವಿಜಯಲಕ್ಷ್ಮೀ ಭೇಟಿ ಮಾಡಿ ಕ್ಷೇಮ ವಿಚಾರಿಸಿದ್ದಾರೆ.

ಶನಿವಾರ ಜೈಲಿಗೆ ಆಗಮಿಸಿದ ವಿಜಯಲಕ್ಷ್ಮೀ ಅವರ ಬಳಿ ಮಾತನಾಡಲು ದರ್ಶನ್ ಅವರನ್ನು ಸಂದರ್ಶಕರ ಕೊಠಡಿಗೆ ಕರೆದುಕೊಂಡು ಬಂದ ಸಿಬ್ಬಂದಿಗಳು ಮಾತನಾಡಲು ಅವಕಾಶ ಮಾಡಿ ಕೊಟ್ಟರು. ಕೈದಿಗಳನ್ನು ಭೇಟಿ ಮಾಡುವ ಕೊಠಡಿಯಲ್ಲಿ ದರ್ಶನ್ ನೋಡಿ ಪತ್ನಿ ಕಣ್ಣೀರು ಹಾಕಿದ್ದಾರೆ. ಜೈಲು ಸಿಬಂದಿ ಸಂಜೆ 4.38 ಕ್ಕೆ ಭೇಟಿಗೆ ಅವಕಾಶ ಕೊಟ್ಟಿದ್ದು, ಹದಿನೈದು ನಿಮಿಷ ಜೈಲಿನ ಕೊಠಡಿಯಲ್ಲಿ ವಿಜಯಲಕ್ಷ್ಮೀ ಕುಳಿತಿದ್ದರು ಎಂದು ತಿಳಿದು ಬಂದಿದೆ. ವಿಜಯಲಕ್ಷ್ಮೀ ಮತ್ತು ವಕೀಲರು ಕೇಸ್ ನ ಪ್ರತಿ ಹಂತದ ಬಗ್ಗೆ ಮಾಹಿತಿ ಕೊಟ್ಟು ದರ್ಶನ್ ಗೆ ಧೈರ್ಯ ತುಂಬಿದ್ದಾರೆ. ಬಟ್ಟೆ ಮತ್ತು ತಿಂಡಿಯನ್ನು ವಿಜಯಲಕ್ಷ್ಮೀ ಅವರು ತೆಗೆದುಕೊಂಡು ಹೋಗಿದ್ದರು. ಅದನ್ನು ಸಂಪೂರ್ಣವಾಗಿ ಪರಿಶೀಲಿಸಿ ಸಿಬ್ಬಂದಿ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ದರ್ಶನ ಆಪ್ತ ವಿನಯ್ ವಿಜಯಪುರ ಜೈಲಿಗೆ

ವಿಜಯಪುರ : ರೇಣುಕಾಸ್ವಾಮಿ ಕೊಲೆ ಪ್ರಕರಣದ 10 ನೇ ಆರೋಪಿ ನಟ ದರ್ಶನ್ ಆಪ್ತ ವಿನಯ್‌ನನ್ನು ಬೆಂಗಳೂರಿನ ಪರಪ್ಪನ ಅಗ್ರಹಾರದಿಂದ ವಿಜಯಪುರ ಜಿಲ್ಲಾ ಕೇಂದ್ರ ಕಾರಾಗೃಹಕ್ಕೆ ಶನಿವಾರ ಕರೆ ತರಲಾಗಿದೆ. ವಿನಯ್ ವಿಜಯಪುರ ಜೈಲಿಗೆ ಸ್ಥಳಾಂತರಗೊಳ್ಳಲಿದ್ದಾನೆ ಎಂಬ ಸುದ್ದಿ ನಾಲ್ಕು ದಿನಗಳಿಂದ ಹರಿದಾಡುತ್ತಿತ್ತು. ಕೊನೆಗೆ ನಾಲ್ಕನೇ ದಿನ ವಿಜಯಪುರಕ್ಕೆ ಸ್ಥಳಾಂತರಿಸಲಾಗಿದೆ. ಎರಡು ಚೀಲಗಳೊಂದಿಗೆ ಆರೋಪಿ ವಿನಯ್ ನನ್ನು ಬಿಗಿಭದ್ರತೆಯಲ್ಲಿ ಪೊಲೀಸ್ ವಾಹನದಲ್ಲಿ ಕರೆತರಲಾಗಿದೆ. ವಿಜಯಪುರ ಕಾರಾಗೃಹದ ಸಿಬ್ಬಂದಿ ವಿನಯ್ ನ ಆರೋಗ್ಯ ತಪಾಸಣೆ ಹಾಗೂ ಇತರ ಕಾನೂನು ಪ್ರಕ್ರಿಯೆ ಕೈಗೊಂಡ ಬಳಿಕ ಕಾರಾಗೃಹದ ಸೆಲ್ ನಂಬರ್ 1ರಲ್ಲಿ ಇರಿಸಿದ್ದಾರೆ. ಆರೋಪಿ ವಿನಯ್ ಗೆ 14,433 ನೂತನ ಕೈದಿ ನಂಬರ್ ನೀಡಲಾಗಿದೆ.

ದಿನವಿಡೀ ವಿಚಾರಣೆ

← ಮೊದಲಪುಟದಿಂದ

ಸ್ನೇಹಮಯಿಕೃಷ್ಣ ಪರ ಹಿರಿಯ ವಕೀಲ ಮಣೀಂಧರ್ ಸಿಂಗ್ ವಾದ ಆರಂಭಿಸಿ, ಸರಕಾರದ ಬದಲು ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಯಬೇಕು ಎಂದು ಮನವಿ ಮಾಡಿದರು. ನಂತರ ವಿಚಾರಣೆ ಯನ್ನು ಮಧ್ಯಾಹ್ನ 2.30ಕ್ಕೆ ಮುಂದೂಡಲಾಯಿತು. ಬಳಿಕ ಪ್ರತಿವಾದಿ ಪ್ರದೀಪ್ ಪರ ಹಿರಿಯ ವಕೀಲ ಪ್ರಭುಲಿಂಗ ನಾವದಗಿ, ಅಬ್ರಹಾಂ ಪರ ವಕೀಲ ರಂಗನಾಥ ರೆಡ್ಡಿ ವಾದ ಮಂಡಿಸಿದ್ದರು. ದೂರುದಾರ ಟಿ.ಜೆ.ಅಬ್ರಹಾಂ ಪರ ಹಿರಿಯ ವಕೀಲ ರಂಗನಾಥ್ ರೆಡ್ಡಿ ವಾದ ಮುಗಿಸುತ್ತಿದ್ದಂತೆ ಮತ್ತಷ್ಟು ವಕೀಲರು ವಾದ ಮಂಡನೆಗೆ ಮನವಿ ಸಲ್ಲಿಸಿದರು. ಇಡೀ ದಿನ ವಾದ ಮಂಡನೆಗೆ ಅವಕಾಶ ಕೊಟ್ಟಿದ್ದೀನಿ ಎಂದು ನ್ಯಾಯಾ ಧೀಶರು ಅಸಮಾಧಾನಗೊಂಡರು. ಅಂತಿಮ ವಾಗಿ ಮುಖ್ಯಮಂತ್ರಿಗಳ ಪರ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸುವ ವೇಳೆ ಸಮಯವಾಗಿದ್ದರಿಂದ ವಿಚಾರಣೆಯನ್ನು ಸೋಮವಾರ ಮಧ್ಯಾಹ್ನ 1.30ರ ಬಳಿಕ ಕೈಗೆತ್ತಿಕೊಳ್ಳುವುದಾಗಿ ನ್ಯಾಯಾಧೀಶರು ಹೇಳಿದರು.

ಸಿಎಂ ಪಾತ್ರ ಏನು ಎಂದು ಪ್ರಶ್ನಿಸಿದ ಜಡ್ಜ್

ರಾಜ್ಯಪಾಲರು ಹಾಗೂ ಅರ್ಜಿದಾರರ ಪರ ವಕೀಲರು ವಾದ ಮಂಡನೆ ವೇಳೆ ಮಧ್ಯ ಪ್ರವೇಶಿಸಿದ ನ್ಯಾಯಮೂರ್ತಿಗಳು ಬಹಳ ಜನ ವಾದ ಮಂಡನೆ ಮಾಡಿದ್ದೀರಿ. ಆದರೆ ಇದರಲ್ಲಿ ಮುಖ್ಯಮಂತ್ರಿಗಳ ಪಾತ್ರ ಏನು ಎಂದು ಯಾರೂ ಹೇಳಿಲ್ಲ. ಸಿಎಂ ಪಾತ್ರದ ಬಗ್ಗೆ ನೀವು ಉತ್ತರಿಸುತ್ತೀರಾ ಎಂದು ದೂರುದಾರರ ಪರ ವಕೀಲರಿಗೆ ಪ್ರಶ್ನೆ ಮಾಡಿದರು. ಈ ವೇಳೆ ಎಜಿ ಶಶಿಕಿರಣ್ ಶೆಟ್ಟಿ ಮಧ್ಯಪ್ರವೇಶಿಸಿ, ಇವರು ಸಿಎಂ ವಿರುದ್ಧ ಆರೋಪಿಸುವುದಕ್ಕೆ ಏನೂ ಇಲ್ಲ ಎಂದರು.

ಸಿಎಂ ಮಗನ ಮೇಲೆ ಕೇಸ್ ಯಾಕಿಲ್ಲ?

ಡಿನೋಟಿಫಿಕೇಷನ್ ಆದಾಗ ಸಿದ್ದರಾಮಯ್ಯ ಡಿಸಿಎಂ ಆಗಿದ್ದರು. ಲ್ಯಾಂಡ್ ಕನ್ವರ್ಷನ್ ಆದಾಗಲೂ ಸಿದ್ದರಾಮಯ್ಯ ಡಿಸಿಎಂ ಆಗಿದ್ದರು. 50-50 ಹಂಚಿಕೆ ಕೇಳಿದಾಗ ಸಿದ್ದರಾಮಯ್ಯ ಸಿಎಂ ಆಗಿದ್ದರು. ಈ ಬೆಳವಣಿಗೆ ನಡೆದಾಗಲೆಲ್ಲಾ ಸಿದ್ದರಾಮಯ್ಯ ಡಿಸಿಎಂ ಅಥವಾ ಸಿಎಂ ಆಗಿದ್ದರು ಎಂಬುವುದು ನಿಮ್ಮ (ದೂರದಾರರು) ಆರೋ ಪವೇ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ರಂಗನಾಥ್ ರೆಡ್ಡಿ ಮುಖ್ಯಮಂತ್ರಿಗಳು ತಮ್ಮ ಅಧಿ ಕಾರ ಬಳಸಿ ಇದೆಲ್ಲಾ ಮಾಡಿದ್ದಾರೆ. ಕೆಸರೆ ಗ್ರಾಮ 20 ವರ್ಷಗಳ ಹಿಂದೆ ಡಿಲಿಟ್ ಮಾಡಿದ್ದಾರೆ. ಬಳಿಕ ದೇವನೂರು ಬಡಾವಣೆ ಆಗಿದೆ. 2021ರಲ್ಲಿ ಸಿಎಂ ಪುತ್ರ ಯತೀಂದ್ರ ಮುಡಾ ಸದಸ್ಯರಾಗಿದ್ದರು. ಪರಿಹಾರದ ನಿವೇಶನಗಳನ್ನು ನೀಡುವ ಕುರಿತಾದ ನಿರ್ಣಯಗಳನ್ನು ಕೈಗೊಳ್ಳುವ ಸಭೆಗಳಲ್ಲಿಯೂ ಯತೀಂದ್ರ ಇದ್ದರು. ಇದರ ಹಿಂದೆ ಅವರಿದ್ದಾರೆ ಎಂದಾಗ, ನ್ಯಾಯಮೂರ್ತಿಗಳು ಮತ್ತೆ ಸಿಎಂ ಬಿಟ್ಟು ಮಗನ ಮೇಲೆ ಯಾಕೆ ಕೇಸ್ ಮಾಡಲಿಲ್ಲ ಎಂದು ಪ್ರಶ್ನಿಸಿದರು. ಅಸ್ತಿತ್ವದಲ್ಲಿಯೇ ಇಲ್ಲದ ಭೂಮಿಗೆ ಮುಡಾದಲ್ಲಿ ದಾಖಲೆಗಳಿವೆ. ಭೂಮಿಗೆ ಪರಿಹಾರವಾಗಿ ಮುಖ್ಯ ಮಂತ್ರಿಯವರ ಪತ್ನಿಗೆ 14 ನಿವೇಶನಗಳನ್ನು ನೀಡಲಾಗಿದೆ. ಮುಖ್ಯಮಂತ್ರಿಯವರ ಕಚೇರಿಯ ಪಾತ್ರ ವಿವಿಧ ಹಂತಗಳಲ್ಲಿ ಇದೆ ಎಂದು ವಾದಿಸಿದರು.

ಜಲಾಶಯಗಳ ಮಟ್ಟ

ಜಲಾಶಯ	ಗರಿಷ್ಠ	ಇಂದಿನಮಟ್ಟ	ಒಳಹರಿವು
ಕೆಆರ್‌ಎಸ್	124.80	124.36	18690
ಕಬಿನಿ	2284	2283.46	8802
ಹಾರಂಗಿ	2859	2858.62	2381
ಹೇಮಾವತಿ	2922	2921.75	6742
ತುಂಗಭದ್ರಾ	1633	1625.16	34983
ಆಲಮಟ್ಟಿ	1704.81	1704.44	178574
ನಾರಾಯಣಪುರ	1615	1606.67	187209
ಲಿಂಗನಮಕ್ಕಿ	1819.12	1817.35	12597

ವಿವಾಹಿತ ಹಿಂದೂ ಮಹಿಳೆ ಜತೆ ಮುಸ್ಲಿಂ ವ್ಯಕ್ತಿ ಪರಾರಿ

ಧಾರವಾಡದಲ್ಲಿ ಲವ್ ಜಿಹಾದ್ ಸದ್ದು

ಧಾರವಾಡ: ಧಾರವಾಡದ ಆಂಜನೇಯ ನಗರದ ತಂಗೆಮ್ಮ ಎಂಬಾಕೆಯನ್ನು ಕರೆದುಕೊಂಡು ವಿವಾಹಿತ ಮುಸ್ಲಿಂ ವ್ಯಕ್ತಿಯೊಬ್ಬ ಪರಾರಿಯಾಗಿರುವ ಆರೋಪ ಕೇಳಿಬಂದಿದೆ. ತಂಗೆಮ್ಮ ವಾಸವಾಗಿದ್ದ ಮನೆಯ ಎದುರಿನ ಬಾಡಿಗೆ ಮನೆಯಲ್ಲಿ ಕಳೆದ ಆರು ತಿಂಗಳಿನಿಂದ ವಾಸವಾಗಿದ್ದ ಬೆಳಗಾವಿ ಜಿಲ್ಲೆ ಯ ರಾಮ ದುರ್ಗದ ಮುನ್ನಾ ಎಂಬ ವ್ಯಕ್ತಿ ತಂಗೆಮ್ಮನ ಜತೆ ಪ್ರೀತಿ- ಪ್ರೇಮದ ಕಥೆ ಕಟ್ಟಿ ತನ್ನೊಂದಿಗೆ ಕರೆದುಕೊಂಡು ಹೋಗಿದ್ದಾನೆ ಎಂದು ದೂರಲಾಗಿದೆ. ಆದರೆ, ಈ ಪ್ರಕರಣ ನಡೆದು ಒಂದೂ ವರೆ ತಿಂಗಳಾದರೂ ತಂಗೆಮ್ಮಳನ್ನು ಪತ್ತೆಹಚ್ಚಲು ಪೊಲೀಸರು ವಿಫಲರಾಗಿದ್ದಾರೆಂದು ದೂರಿ ಕುಟುಂಬದವರು ಶ್ರೀರಾಮ ಸೇನೆ ಜೊತೆಗೂಡಿ ಠಾಣೆ ಎದುರು ಪ್ರತಿಭಟನೆ ನಡೆಸಿದ್ದಾರೆ.

ಪೊಲೀಸರಿಗೆ ಗಡುವು

ಒಂದು ವಾರದಲ್ಲಿ ಮುನ್ನಾನನ್ನು ಪತ್ತೆಮಾಡಿ, ಆತನ ಮೇಲೆ ಲವ್ ಜಿಹಾದ್ ಪ್ರಕರಣ ದಾಖಲಿಸದಿದ್ದರೆ ಪ್ರತಿಭಟನೆ ತೀವ್ರಗೊಳಿಸುವುದಾಗಿ ಶ್ರೀರಾಮಸೇನೆ ರಾಜ್ಯ ಕಾರ್ಯಾಧ್ಯಕ್ಷ ಗಂಗಾಧರ ಕುಲಕರ್ಣಿ ಎಚ್ಚರಿಕೆ ಕೊಟ್ಟಿದ್ದಾರೆ.

ಜು. 11 ರಂದು ನಾಪತ್ತೆ ದೂರು

ವಿಚಿತ್ರ ಎಂದರೆ ಮುನ್ನಾಗೆ ಈಗಾಗಲೇ ಮದುವೆಯಾಗಿ ಇಬ್ಬರು ಮಕ್ಕಳು ಸಹ ಇವೆ. ತಂಗೆಮ್ಮಳಿಗೂ ಮದುವೆಯಾಗಿದ್ದು, ಆಕೆಯನ್ನು ಇನ್ನೂ ಗಂಡನ ಮನೆಗೆ ಕಳುಹಿಸಿರಲಿಲ್ಲ. ಜುಲೈ 11 ರಂದೇ ಉಪನಗರ ಠಾಣೆಯಲ್ಲಿ ನಾಪತ್ತೆ ದೂರು ದಾಖಲಾಗಿದ್ದರೂ ಈವರೆಗೂ ಆ ಇಬ್ಬರೂ ಪತ್ತೆಯಾಗಿಲ್ಲ. ತಂಗೆಮ್ಮಳನ್ನು ಪೊಲೀಸರು ಪತ್ತೆಮಾಡದ ಹಿನ್ನೆಲೆಯಲ್ಲಿ ತಂಗೆಮ್ಮಳ ಪೋಷಕರು ಶ್ರೀರಾಮಸೇನೆಯ ಸಹಾಯದಿಂದ ಪ್ರತಿಭಟನೆಯ ಹಾದಿ ತುಳಿದಿದ್ದಾರೆ. ಮುನ್ನಾ ವಿರುದ್ಧ ಅಪಹರಣದ ಪ್ರಕರಣ ದಾಖಲಿಸದೆ ಕೇವಲ ನಾಪತ್ತೆ ಕೇಸ್ ದಾಖಲಿಸಲಾಗಿದೆ. ಈ ಘಟನೆಯನ್ನು ಲವ್ ಜಿಹಾದ್ ಎಂದು ಪರಿಗಣಿಸುವಂತೆ ಶ್ರೀರಾಮಸೇನೆ ಕಾರ್ಯಕರ್ತರು ಒತ್ತಾಯಿಸಿ ಧಾರವಾಡ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಮಾನಸಿಕ ಅಸ್ವಸ್ಥೆ ಮೇಲೆ ಕಲ್ಲುಹಾಕಿ ಹತ್ಯೆ

ವಿಜಯನಗರ: ಮಾನಸಿಕ ಅಸ್ವಸ್ಥೆ ತಲೆಯ ಮೇಲೆ ಕಲ್ಲು ಹಾಕಿ ಬರ್ಬರವಾಗಿ ಕೊಲೆಗೈದ ಕೂಡ್ಲಿಗಿ ತಾಲೂಕಿನ ತಿಪ್ಪೇಹಳ್ಳಿಯಲ್ಲಿ ನಡೆದಿದೆ. ಚಳ್ಳಕೆರೆ ತಾಲ್ಲೂಕಿನ ಅಬ್ಬೇನಹಳ್ಳಿಯ ನೇತ್ರಾ, (30) ಹತ್ಯೆಗೀಡಾದ ಮಾನಸಿಕ ಅಸ್ವಸ್ಥೆ. ತಿಪ್ಪೇಹಳ್ಳಿ- ಅಬ್ಬೇನಹಳ್ಳಿಯ ಮಧ್ಯದ ನಿರ್ಜನ ಪ್ರದೇಶದಲ್ಲಿ ಈ ಕೃತ್ಯ ಎಸಗಲಾಗಿದೆ. ಶ್ವಾನದಳ, ಬೆರಳಚ್ಚು ಸಿಬ್ಬಂದಿ ಸ್ಥಳದಲ್ಲಿ ಮಹಜರು ನಡೆಸಿದ್ದಾರೆ. ವಿಜಯನಗರ ಜಿಲ್ಲಾ ಪೊಲೀಸ್ ವರಿಷ್ಠ ಶ್ರೀಹರಿಬಾಬು, ಕೊಟ್ಟೂರು ಇನ್ಸ್‌ಪೆಕ್ಟರ್ ವೆಂಕಟಸ್ವಾಮಿ, ಕಾನಹೊಸಹಳ್ಳಿ ಪಿಎಸ್‌ಐ ಸಿದ್ದರಾಮಪ್ಪ ಬಿದರಾಣಿ ಸ್ಥಳಕ್ಕೆ ಭೇಟಿ ನೀಡಿದ್ದರು. ಕಾನಾಹೊಸಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. .

ನಾಪತ್ತೆಯಾಗಿದ್ದ ಮಹಿಳೆ ಬಾವಿಯಲ್ಲಿ ಪ್ರತ್ಯಕ್ಷ

ಗದಗ: ಜಿಲ್ಲೆಯ ತೋಟಗಂಟಿ ಗ್ರಾಮದಿಂದ ಆಗಸ್ಟ್ 20 ರಂದು ನಾಪತ್ತೆಯಾಗಿದ್ದ ಮಹಿಳೆ ಮೂರು ದಿನಗಳ ನಂತರ ಗ್ರಾಮದ ಹೊರವಲಯದ ಪಾಳುಬಾವಿಯಲ್ಲಿ ಜೀವಂತವಾಗಿ ಪತ್ತೆಯಾಗಿದ್ದಾರೆ.

ಸದ್ಯ ಆಕೆ ಈಗ ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆ.20ರಂದು ಬೆಳಗ್ಗೆ 5 ಗಂಟೆಗೆ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅಪರಿಚಿತ ಮಹಿಳೆ ನುಗ್ಗಿ, ತನ್ನನ್ನು ಎಳೆದೊಯ್ದು ಮಂಗಳಸೂತ್ರ, ಬಳೆ ಮತ್ತು ಇತರ ಆಭರಣಗಳನ್ನು ಕಸಿದುಕೊಂಡು ಖಾಲಿ ಬಾವಿಗೆ ತಳ್ಳಿದಳು ಎಂದು ತೋಟಗಂಟಿ ಗ್ರಾಮದ ಪಾರ್ವತಿ ಕಲ್ಮಠ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. 'ಮಹಿಳೆ ನನ್ನನ್ನು ಬಾವಿಗೆ ತಳ್ಳಿದ ನಂತರ ನಾನು ಪ್ರಜ್ಞೆ ಕಳೆದುಕೊಂಡೆ. ಮೂರನೇ ದಿನ ಮಳೆಯಲ್ಲಿ ನೆನೆದಾಗ ಪ್ರಜ್ಞೆ ಬಂತು. ನಾನು ಎರಡು ಗಂಟೆಗಳ ಕಾಲ ಸಹಾಯಕ್ಕಾಗಿ ಕಿರುಚಿದೆ. ಕೊನೆಗೆ ನನ್ನ ಅಳಲನ್ನು ಕೇಳಿದ ಕೆಲವರು ನನ್ನನ್ನು ಬಾವಿಯಿಂದ ಹೊರತೆಗೆದು ರಕ್ಷಿಸಿದರು ಎಂದು ಆಕೆ ಹೇಳಿದ್ದಾರೆ. ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಈ ಹಿಂದೆಯೂ ಇಂತಹ ಹಲವು ಘಟನೆಗಳು ಗ್ರಾಮದಲ್ಲಿ ನಡೆದಿವೆ ಎಂದು ಕೆಲವು ಗ್ರಾಮಸ್ಥರು ಹೇಳಿದ್ದಾರೆ. ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಅಮೆರಿಕಾ ಅಕ್ಕ ಸಮ್ಮೇಳನದಲ್ಲಿ ಕನ್ನಡ ಕಲರವ

← ಮೊದಲಪುಟದಿಂದ

ಸಭಾಪತಿ ಬಸವರಾಜ ಹೊರಟ್ಟಿ, ಕೃಷಿ ಸಚಿವ ಚೆಲುವರಾಯಸ್ವಾಮಿ, ಶಾಸಕ ಎಸ್.ಟಿ. ಸೋಮಶೇಖರ್, ಮಾಜಿ ಸಚಿವ ಎಚ್. ಆಂಜನೇಯ, ಸಿನಿ ಕಲಾವಿದರಾದ ಡಾಲಿ ಧನಂಜಯ, ಪ್ರಥಮ್ ಹಿತಿಗಳಾದ ಎಂಎಸ್. ನರಸಿಂಹಮೂರ್ತಿ, ಡುಂಡಿರಾಜ್, ಜಯಶ್ರೀ ದೇಶಪಾಂಡೆ, ನಿರ್ಮಾಪಕ ವಿಜಯ್ ಕಿರಗಂದೂರು ಸೇರಿದಂತೆ ತವರು ನೆಲದ ನೂರಾರು ಮಂದಿ ರಿಚ್ಮಂಡ್ ನಗರದಲ್ಲಿ ಬೆರೆತು ಸಂಭ್ರಮಿಸಿದರು. ವಿದ್ಯಾಭೂಷಣ್ ಅವರ ಗೀತಗಾಯನ, ಗುರುಕಿರಣ್ ಅವರ ಪುನೀತ್ ನೈಟ್ಸ್ , ಪಟ್ಲ ಸತೀಶ್ ಶೆಟ್ಟಿ ತಂಡದ ಯಕ್ಷಗಾನ, ನಾಗಚಂದ್ರಿಕಾ ಭಟ್ ಅವರ ದಾಸರ ಪದ, ಅನುರಾಧಾ ಭಟ್ ಮತ್ತಿತರ ಕಲಾವಿದರ ಗಾಯನ, ಜನಪದ ಕಲಾವಿದರ ಸಾಂಪ್ರದಾಯಿಕ ಹಾಡು, ನೃತ್ಯ, ವಾದ್ಯ, ತಮಟೆ ವಿಶೇಷಗಳು ಸೆ. 1ರ ತನಕ ಅಮೆರಿಕ ಕನ್ನಡಿಗರ ಮನಸೂರೆಗೊಳ್ಳಲಿವೆ. ಕಳುಹಿಸಿಕೊಡುತ್ತಿದೆ.

ಪುರಸಭೆ ಕಾರ್ಯಾಲಯ ಬಾದಾಮಿ-587201
ಜಿಲ್ಲ: ಬಾಗಲಕೋಟೆ ಫೋನ್ ನಂ: 08357-220052 ರಾಜ್ಯ: ಕರ್ನಾಟಕ
Web: www.badamitown.mrc.gov.in Email: ka.badami.tmc@gmail.com
ನಂ/ಪುಸಬಾ/ಲೋ.ವಿ/ಪ.ವಾಮ/ಅ.ಟೆ/2024-25 ದಿನಾಂಕ :- 27-08-2024
ಟೆಂಡರ ಪ್ರಕಟಣೆ
E-Procurement Portal ಮುಖಾಂತರ
e-portal: https://eproc.karnataka.gov.in
ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999, ನಿಯಮಾವಳಿಗಳು 2000 ರಂತೆ ಬಾದಾಮಿ ಪುರಸಭೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ಪುರಸಭೆ : 15ನೇ ಹಣಕಾಸಿನ ನಿಧಿಯ ಅನುದಾನದಲ್ಲಿ ಕೆಳಗೆ ನಮೂದಿಸಿದ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ E-Procurement Portal ನಲ್ಲಿ Standard Tender Documents KW-1 & KW-2 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ 2016 ಗೆಜೆಟ್ ಅಧಿಸೂಚನೆ ದಿನಾಂಕ: 29-06-2017 ರನ್ವಯ ಟೆಂಡರನ್ನು ಅಹ್ವಾನಿಸಲಾಗಿದ್ದು ಅದರ ವಿವರ ಈ ಕೆಳಗಿನಂತಿರುತ್ತದೆ.
ಕಾಮಗಾರಿ ಇಂಡೆಂಟ್ ನಂ:
DMA/2024-25/OW/WORK_INDENT28782, 28787, 28793
ಹೆಚ್ಚಿನ ಮಾಹಿತಿಗಾಗಿ https://eproc.karnataka.gov.in ದಲ್ಲಿ ಅಥವಾ ಈ ಕಚೇರಿಯ ತಾಂತ್ರಿಕ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ.
1) Last Date For Submission of Bid Through E-Procurement Portal before:25-09- 2024 at 4.30 PM
2) Opening of Technical bid & Financial bid is on: 27-09-2024 at 11.00 Am
ಸಹಿ/- ಮುಖ್ಯಾಧಿಕಾರಿಗಳು ಪುರಸಭೆ ಬಾದಾಮಿ
ಸಹಿ/- ಆಡಳಿತಾಧಿಕಾರಿಗಳು ಪುರಸಭೆ ಬಾದಾಮಿ,

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಪೂರ್ವ ವಲಯ -ಕೆರೆಗಳು), ಸಂಖ್ಯೆ:309, 3ನೇ ಮಹಡಿ, ಅನೆಕ್ಸ್-3 ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು-02.
ಸಂಖ್ಯೆ:ಕಾಪಾಅ/ಕೆರೆಗಳು/ಪೂರ್ವ/ಟೆಂಡರ್-01/2024-25 ದಿನಾಂಕ: 31.08.2024
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ) (ದ್ವಿಲಕೋಟೆ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು/ವರ್ಗೀಕರಣ
1	ಹಲಸೂರು ಕೆರೆಗೆ ವಾರ್ಷಿಕ ನಿರ್ವಹಣೆ ಮಾಡುವುದು. (ಇತರರಿಗೆ) **ಕಾಮಗಾರಿಯ ಮೊತ್ತ: ರೂ.70.00 ಲಕ್ಷಗಳು, ಇಎಂಡಿ:ರೂ.1,36,000/-**

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳು ದಿನಾಂಕ 03.09.2024ರ ಬೆಳಿಗ್ಗೆ 10:00 ಗಂಟೆಯ ನಂತರ ಲಭ್ಯವಿರುತ್ತದೆ. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 10.09.2024ರ ಸಂಜೆ 4:00 ಗಂಟೆಯವರೆಗೆ. (3) ಟೆಂಡರ್ ಬಿಡ್ ತೆರೆಯುವ ದಿನಾಂಕ 11.09.2024ರ ಸಂಜೆ 4:30 ಗಂಟೆಗೆ. (4) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕ ಬಿಡ್‌ಗೆ ಅನುಮೋದನೆ ದೊರೆತ ನಂತರ ತಿಳಿಸಲಾಗುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು (ಪೂರ್ವ ವಲಯ-ಕೆರೆಗಳು)

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979 &Endst. No.MCI-37(1)(Recog.-18)(UG)/2017-Med./109629,Dt: 06/05/2019
DIRECTOR: 8147796529. PRINCIPAL :8147796527 CAO:8147796526PA : 8147796539.
e-mail-ids:directorbmcrcballari@gmail.com, website : https:// vims.karnataka.gov.inprincipalbmcrcballari@gmail.com
No.BMCRC/SUP/TEND/DRUG/08/2024-25 Date: 29.08.2024
ಮರು ಇ-ಟೆಂಡರ್ ಅಧಿಸೂಚನೆ
ಬಿಎಂಸಿಆರ್‌ಸಿ ಸಂಸ್ಥೆಯ ವೈದ್ಯಕೀಯ ಮಹಾ ವಿದ್ಯಾಲಯ ಆಸ್ಪತ್ರೆಗೆ ಔಷಧಿಗಳನ್ನು ಒಂದು ವರ್ಷದ ಅವಧಿಗೆ ಧರಗುತ್ತಿಗೆ ಆಧಾರ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ-1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಮರು ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಟೆಂಡರುದಾರರು ಮೇಲಿನ ಪೋರ್ಟಲ್‌ನಲ್ಲಿ ಟೆಂಡರನ್ನು ದಿನಾಂಕ:27.09.2024 ಸಂಜೆ 5.00 ಗಂಟೆಯ ಒಳಗಾಗಿಸಲ್ಲಿಸಲುಕೋರಿದೆ. ಟೆಂಡರಿನ ಅಂದಾಜು ಮೊತ್ತರೂ. 3.55 ಕೋಟಿಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್‌ಸೈಟ್ ಮತ್ತು www.vims.karnataka.gov.in ನಲ್ಲಿ ಪಡೆಯಬಹುದಾಗಿದೆ.
ಸಹಿ/- ಡೀನ್ & ನಿರ್ದೇಶಕರು, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ & ಸಂಶೋಧನ ಕೇಂದ್ರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/400/ಕೆಎಸ್‌ಎಂಸಿಎ/2024-25

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831-2405304,
Email : itstaff_ulb_belgaum@yahoo.com, Website : www.belgaumcity.mrc.gov.in
ಗುತ್ತಿಗೆ ಸಂಖ್ಯೆ: ಮನಪಾ/ಆ.ಶಾ/ಕಾಅ/ಘವನಿ/ಟಿಎನ್‌ಡಿ/ಇಪ್ರೋ-04/2024-25 ದಿನಾಂಕ: 29/08/2024
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)
ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ಪ್ರಕಾರ ಆ್ಯಕ್ಟ 2000 ನಿಯಮದಂತೆ ಸ್ವಚ್ಛ ಭಾರತ ಮಿಶನ-2.0 ಯೋಜನೆಯಡಿ ಮಂಜೂರಾದ Material recovery facility ಸಂಬಂಧಿಸಿದಂತೆ ವಾಹನ-ಯಂತ್ರೋಪಕರಣ, ಫೈಯರ್ ಹೈಡ್ರಂಟ್ ಹಾಗೂ ಇಲೆಕ್ಟ್ರಿಫಿಕೇಶನ್ ಹೀಗೆ ಒಟ್ಟು 3 ಕಾಮಗಾರಿಗಳಿಗೆ ಟೆಂಡರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ ಮುಖಾಂತರ ಅಹ್ವಾನಿಸಲಾಗಿದೆ. ಸದರಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 03/10/2024 ರಂದು ಇರುತ್ತದೆ. ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲನಲ್ಲಿ ಪಡೆಯಬಹುದಾಗಿದೆ ಹೆಚ್ಚಿನ ವಿವರಗಳಿಗೆ ಆನ್‌ಲೈನ ವೆಬ್‌ಸೈಟ್ (https://www.kppp.karnataka.gov.in) ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
ಡಿಐಪಿಆರ್/ಬೆಳಗಾವಿ/734/ಮಣಿಪಾಲ್/2024-25

ಕೃಷಿ ವಿಶ್ವವಿದ್ಯಾಲಯ, ಧಾರವಾಡ
ಆಸ್ತಿ ವಿಭಾಗ, ಕೃಷಿ ನಗರ, ಧಾರವಾಡ-5
ಪ್ಯಾಕ್ಸ್: +91-836-2441188 ದೂರವಾಣಿ: :+ 91-836-2214214
ಇ-ಮೇಲ್: estateofficer@rediffmail.com Epabx: +91-836-2214214 / 216, 332, 215
ಸಂ.ಆಅ/ಇ-ಪ್ರೋ./ಸ.ವಿ.ಸು.ಮ-2024/ಆಹಾರ/2024-25 ದಿನಾಂಕ: 27-08-2024
ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಕೃಷಿ ವಿಶ್ವವಿದ್ಯಾಲಯ ಧಾರವಾಡದ ಆವರಣದಲ್ಲಿ ಜರುಗಲಿರುವ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸುವರ್ಣ ಮಹೋತ್ಸವದ ಅಂಗವಾಗಿ ಅತಿಥಿಗಳಿಗೆ ಆಹಾರ ಪೂರೈಕೆ ಮಾಡಲು ಅರ್ಹ ವ್ಯಕ್ತಿಗಳಿಂದ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ.
ಟೆಂಡರ್ ವೇಳಾಪಟ್ಟಿ: 1) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17-09-2024 ರಂದು 16.00 ಗಂಟೆವರೆಗೆ. 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 18-09-2024 ರಂದು 16.30 ಗಂಟೆಗೆ.
ಸದರಿ ಟೆಂಡರ್‌ಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿಯಂತೆ http://kppp.karnataka.gov.in ಆನ್‌ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಚೇರಿ ಕೆಲಸದ ಸಮಯದಲ್ಲಿ ದೂರವಾಣಿ ಸಂಖ್ಯೆ: 0836-2214216/332 ಸಂಪರ್ಕಿಸಬಹುದು.
ಸೂಚನೆ: ಟೆಂಡರ್‌ಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಪ್ರವಹಿಸುವ ತಿದ್ದುಪಡಿಗಳು / ಮಾರ್ಪಾಡುಗಳನ್ನು ಗುತ್ತಿಗೆದಾರರು ಗಮನಿಸಬೇಕು.
ವಾಸಾಸಂಇ/ಧಾರವಾಡ/331/ಅಡ್ವರ್ಟೋ/2024-25 ಸಹಿ/- ಆಸ್ತಿ ಅಧಿಕಾರಿಗಳು

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ-ಮೇಲ್:zped_cta@yahoo.com ದೂರವಾಣಿ ಸಂ:08194-222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2024-25/1225 ದಿ:30.08.2024
ಟೆಂಡರ್ ಪ್ರಕಟಣೆ
(Through e-Procurement Portal Only)
ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ಯೋಜನೆಯಡಿಯಲ್ಲಿ ವ್ಯಾಪ್ತಿಯ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾದ 11 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.6.50ಲಕ್ಷ ಗರಿಷ್ಠ ರೂ.18.84ಲಕ್ಷಗಳು ಒಟ್ಟು ರೂ: 145.86ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:- (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ:- 06.09.2024ರ : ಸಮಯ: 11.00
(2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:-09.09.2024ರ : ಸಮಯ 16.00
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:-10.09.2024ರ : ಸಮಯ 16.01
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ:-11.09.2024ರ : ಸಮಯ 16.01
ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194-222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
RO.No.241:DIPR/CTA/KSMCA/2024-25
ಸಹಿ/- ಕಾರ್ಯಪಾಲಕ ಅಭಿಯಂತರರು ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು - 570005,
ದೂರವಾಣಿ/ಫ್ಯಾಕ್ಸ್: 0821-2420624
ಸಂ: ಮೈನಪ್ರಾ/ಅಅ/ಪಿಬಿ/ಟಿಎನ್/ದಸಸರಾ-05/2024-25 ದಿ: 30.08.2024
ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ರೂ. 5.00 ಲಕ್ಷ ರಿಂದ 25 ಲಕ್ಷದವರೆಗಿನ ಅಂದಾಜು ಮೊತ್ತದ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ 01 ರಿಂದ 16 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್‌ನಲ್ಲಿ ದಿ: 31.08.2024 ರಿಂದ ಪಡೆಯಬಹುದಾಗಿದ್ದು, ಟೆಂಡರ್ ಸಲ್ಲಿಸಲು ದಿ: 09.09.2024ರ ಸಂಜೆ 4.00 ಗಂಟೆಯವರೆಗೆ ಸಮಯವನ್ನು ನಿಗಧಿಪಡಿಸಿದ್ದು, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ದಿ: 10.09.2024ರ ಸಂಜೆ 4.30 ರ ನಂತರ ತೆರೆಯಲಾಗುವುದು. ಅರ್ಹ ನೋಂದಾಯಿತ ಸಿವಿಲ್ ಮತ್ತು ವಿದ್ಯುತ್ ಗುತ್ತಿಗೆದಾರರು ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://KPPP.karnataka.gov.in ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ 0821-2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ www.mudamysore.gov.in ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.
ಟಿಪ್ಪಣಿ: ಟೆಂಡರ್ ಸಲ್ಲಿಸುವ ದಿನಾಂಕಗಳು ಬದಲಾಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಇರುವ ದಿನಾಂಕಗಳನ್ನೆ ಪರಿಗಣಿಸುವುದು. ಮತ್ತೆ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ.
DIPR/DDMYS-492/KSMCA-335/2024-25 ಸಹಿ/- ಅಧೀಕ್ಷಕ ಅಭಿಯಂತರರು

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ& ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು ಹಾಸನ ಪ್ರಾದೇಶಿಕ ಅರಣ್ಯ ವಿಭಾಗ,ಹಾಸನ-573201
ದೂರವಾಣಿ & ಫ್ಯಾಕ್ಸ್08172-268296 ಈಮೈಲ್ : dcfhassan@yahoo.in
ಸಂಖ್ಯೆ:ಎ3/ಬಿಯುಡಿ/ಟೆಂಡರ್/ವಿವ-08/2024-25 ದಿಃ 29.08.2024
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)2024-25ನೇ ಸಾಲಿನಲ್ಲಿ ಹಾಸನ ಪ್ರಾದೇಶಿಕ ವಿಭಾಗದ ವಿವಿಧ ವಲಯಗಳಲ್ಲಿ ವಿವಿಧ ಕಾಮಗಾರಿಗಳನ್ನು ನಿರ್ವಹಿಸಲು ಅಂದಾಜು 365.450 ಲಕ್ಷ ಮೊತ್ತದ 24 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಂಕ್ಷಿಪ್ತ ಟೆಂಡ ಕರೆಯಲಾಗಿದೆ. ದಿನಾಂಕ: 17.09.2024 ರಂದು 16.00 (ಸಂಜೆ 4.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣಿಗಳ ಪೋರ್ಟಲ್ ಮುಖಾಂತರ ಬೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯುಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಪಡೆಯಬಹುದಾಗಿದೆ.
ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, & ಉಪ ಅರಣ್ಯ ಸಂರಕ್ಷಣಾಧಿಕಾರಿಯರ ತಾಂತ್ರಿಕ ಸಹಾಯಕರು ಹಾಸನ ವಿಭಾಗ,ಹಾಸನ
ವಾಸಾಸಂಇ/ಹಿಸನಿ/ಹಾಸನ/379/ಕೆಎಸ್‌ಎಂಸಿಎ/373/2024-25

ನಗರಸಭೆ ಕಾರ್ಯಾಲಯ ಕೋಲಾರ
ಸಂಖ್ಯೆ:ನಸಕೋ/ಆಶಾ/ಟೆಂಡರ್/ಸಿಆರ್/05/2024-25 ದಿನಾಂಕ:29.08.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೆಳಕಂಡಂತೆ ವಿವಿಧ ಯೋಜನೆಗಳಡಿ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇಲಾಖಾ ವೆಬ್‌ಸೈಟ್https://kppp.karnataka.gov.in ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.
(1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.09.2024 ರ ಸಂಜೆ 17.30 ಗಂಟೆವರೆಗೆ. (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 09.09.2024 ರ ಬೆಳಿಗ್ಗೆ 11.00 ಗಂಟೆಗೆ. ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 11.09.2024 ರ ಬೆಳಿಗ್ಗೆ 11.00 ಗಂಟೆಗೆ ಅಥವಾ ಸೂಚಿತ ದಿನಾಂಕದಂದು ತೆರೆಯಲಾಗುವುದು.

ಪ್ಯಾ ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷ ಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಲಾವಧಿ
2024-25 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ				
1	DMA/2024-25/IND3140	65.41	1,31,000.00	3 ತಿಂಗಳು
2	DMA/2024-25/IND3202	25.00	50,000.00	3 ತಿಂಗಳು
3	DMA/2024-25/IND3171	10.00	24,500.00	3 ತಿಂಗಳು
4	DMA/2024-25/IND3137	5.60	14,000.00	3 ತಿಂಗಳು

ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ www.kolarcity.mrc.gov.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.
ಸಹಿ/- ಅಧ್ಯಕ್ಷರು ನಗರಸಭೆ, ಕೋಲಾರ
ಸಹಿ/- ಉಪಾಧ್ಯಕ್ಷರು ನಗರಸಭೆ, ಕೋಲಾರ
ಸಹಿ/- ಪೌರಾಯುಕ್ತರು ನಗರಸಭೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:211/ಕೆಎಸ್‌ಎಂಸಿಎ/2024-25

ಟ್ವೀಟೂ-ಖಾರಾ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಬಿಜೆಪಿ-ಜೆಡಿಎಸ್ ಷಡ್ಯಂತ್ರ ಹಾಗೂ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರ ನಡೆ ಖಂಡಿಸಿ ವಿಧಾನಸೌಧದ ಗಾಂಧಿ ಪ್ರತಿಮೆಯಿಂದ ರಾಜಭವನದವರೆಗೆ ಹಮ್ಮಿಕೊಂಡಿದ್ದ ರಾಜಭವನ ಚಲೋ ಪ್ರತಿಭಟನೆಯಲ್ಲಿ ಪಾಲ್ಗೊಂಡೆ. ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರ ಕಚೇರಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ರೀತಿ ಮಾಡುವುದು ತಪ್ಪು. ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ. ಇದು ಯಾವ ರೀತಿಯ ನ್ಯಾಯ..?



ಮುಕುಂದ್ ಎಂ., ಯಲ್ಲಾಪುರ

ಸರಕಾರ ನಡೆಸುವವರೇ ಬೀದಿಗಿಳಿದು ಪ್ರತಿಭಟನೆ ಮಾಡುವ ಪರಿಸ್ಥಿತಿ ಬಂದಿದೆ.. ಹೀಗಾದರೆ ಸಾಮಾನ್ಯ ಜನರ ಗತಿ ಏನು..?

ರಾಜ್ಯಪಾಲರಿಂದ ಪ್ರಜಾಪ್ರಭುತ್ವ ಕಗ್ಗೊಲೆ ಸಲ್ಲ

ಕಾಂಗ್ರೆಸ್ ಪಕ್ಷದಿಂದ ಬಲ ಪ್ರದರ್ಶನ | ರಾಜಕೀಯ ಭವನವಾಗದಿರಲಿ ರಾಜಭವನ | ಡಿಕೆಶಿ ನೇತೃತ್ವದಲ್ಲಿ ಮನವಿ

ಬೆಂಗಳೂರು: ರಾಜ್ಯಪಾಲರ ಹುದ್ದೆ ಸಂವಿಧಾನ ನೀಡಿರುವ ಪೀಠ. ರಾಜ್ಯಪಾಲರ ಕಚೇರಿ ಒಂದು ರಾಜಕೀಯ ಪಕ್ಷದ ಕಚೇರಿಯಾಗಬಾರದು. ಸಂವಿಧಾನಿಕವಾಗಿ ಈ ಹುದ್ದೆಗಿರುವ ಘನತೆಗೆ ಧಕ್ಕೆ ಬರುವಂತೆ ನಡೆದುಕೊಳ್ಳಬಾರದು ಎಂಬುದು ನಮ್ಮ ಅಭಿಲಾಷೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜಭವನ ಚಲೋ ಪ್ರತಿಭಟನೆ ಮೂಲಕ ರಾಜಭವನಕ್ಕೆ ಕಾಲ್ನಡಿಗೆ ಮೂಲಕ ತೆರಳಿದ ಕಾಂಗ್ರೆಸ್ ಪಕ್ಷದ ನಿಯೋಗವು, ಲೋಕಾಯುಕ್ತ ಎಸ್ಐಟಿ ಕುಮಾರಸ್ವಾಮಿ, ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ ಮತ್ತು ಜನಾರ್ಧನ ರೆಡ್ಡಿ ಅವರ ವಿಚಾರಣೆಗೆ ಅನುಮತಿ ನೀಡಿ ಎಂದು ಸಲ್ಲಿಸಿರುವ ಅರ್ಜಿಗೆ ಅನುಮತಿ ನೀಡಬೇಕು ಎಂದು ಮನವಿ ಮಾಡಿದರು.

ಕಾಲ್ನಡಿಗೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯ್ಲಿ, ಸಚಿವರಾದ ಡಾ.ಜಿ.ಪರಮೇಶ್ವರ, ಎಚ್.ಕೆ.ಪಾಟೀಲ್, ಕೃಷ್ಣಬೈರೇಗೌಡ, ರಾಮಲಿಂಗಾರೆಡ್ಡಿ, ಜಮೀರ್ ಅಹ್ಮದ್, ಈಶ್ವರ್ ಖಂಡ್ರೆ, ಬೈರತಿ ಸುರೇಶ್ ಸೇರಿದಂತೆ ಪಕ್ಷದ ಸಚಿವರು, ಶಾಸಕರು ಸಂಸದರು, ಮಾಜಿ ಸಂಸದರು, ಮಾಜಿ ಶಾಸಕರು ಇದ್ದರು.

ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಳಿಕ ರಾಜಭವನದ ಹೊರಗಡೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯಪಾಲರು ನಮಗೆ ಟೀ, ಕಾಫಿ ಮತ್ತು ಉಪಹಾರ ಕೊಟ್ಟು ಉಪಚರಿಸಿದರು. ಎಲ್ಲದಕ್ಕಿಂತ ಮುಖ್ಯವಾಗಿ ನಿಮಗೆ ನ್ಯಾಯ ನೀಡುತ್ತೇವೆ ಎಂದು ಭರವಸೆ ನೀಡಿದರು. ಲೋಕಾಯುಕ್ತ, ಎಸ್ಐಟಿ ಅವರು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಹಾಗೂ ಮೂರು ಮಾಜಿ ಸಚಿವರ ಅಕ್ರಮಗಳ ವಿರುದ್ಧ ನ್ಯಾಯಾಲಯದ ಸೂಚನೆಯಂತೆ ಸಂಪೂರ್ಣ ತನಿಖೆ ನಡೆಸಿ ವರದಿ ನೀಡಿದ್ದಾರೆ. ಆದರೂ ಏನೂ ಕ್ರಮ ತೆಗೆದುಕೊಂಡಿಲ್ಲ. ಆದರೆ ನಮ್ಮ ಮುಖ್ಯಮಂತ್ರಿಗಳ ಮೇಲೆ ಕ್ರಮ ಕೈಗೊಳ್ಳಲು ಮುಂದಾಗುವ ರಾಜ್ಯಪಾಲರು, ಅವರ ಮೇಲೆ ಏಕೆ ಕ್ರಮ ತೆಗೆದುಕೊಂಡಿಲ್ಲ? ಎಂದು ಹೇಳಿದರು.

> ದಾರಿಯಲ್ಲಿ ಹೋಗುವವರು ದೂರು ಕೊಟ್ರೆ ಸಿಎಂ ಮೇಲೆಯೇ ತನಿಖೆಗೆ ಅನುಮತಿ ನೀಡುವ ರಾಜ್ಯಪಾಲರು, ಕುಮಾರಸ್ವಾಮಿ, ಶಶಿಕಲಾ ಜೊಲ್ಲೆ, ಜನಾರ್ಧನ ರೆಡ್ಡಿ, ನಿರಾಣಿ ವಿರುದ್ಧ ತನಿಖೆಗೆ ಸ್ವತಃ ಲೋಕಾಯುಕ್ತ ಮನವಿ ಮಾಡಿದರೂ ಅನುಮತಿ ಕೊಡುತ್ತಿಲ್ಲ. ರಾಜ್ಯಪಾಲರು ಬಿಜೆಪಿ-ಜೆಡಿಎಸ್ ಏಜೆಂಟ್ ರೀತಿ ವರ್ತಿಸುತ್ತಿದ್ದು ಈ ಪಕ್ಷಪಾತಿ ಧೋರಣೆಯ ವಿರುದ್ಧ ನಮ್ಮ ಹೋರಾಟ ಮುಂದುವರೆಯಲಿದೆ.
>
> **- ಕೃಷ್ಣಬೈರೇಗೌಡ,** ಕಂದಾಯ ಸಚಿವ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ರಾಜಭವನ ಚಲೋ ಅಂಗವಾಗಿ ಕಾಂಗ್ರೆಸ್ ಪಕ್ಷದ ನಿಯೋಗ ಕಾಲ್ನಡಿಗೆ ಮೂಲಕ ರಾಜಭವನಕ್ಕೆ ತೆರಳಿದರು.



ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಮುರುಗೇಶ್ ನಿರಾಣಿ, ಶಾಸಕರಾದ ಶಶಿಕಲಾ ಜೊಲ್ಲೆ ಮತ್ತು ಜನಾರ್ದನ ರೆಡ್ಡಿ ಮೇಲಿನ ಪ್ರಕರಣದಲ್ಲೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಆಗ್ರಹಿಸಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ನಿಯೋಗ ಶನಿವಾರ ಮನವಿ ಸಲ್ಲಿಸಿತು.

ಯಾವುದೇ ಪ್ರಕರಣಗಳಿಲ್ಲ ಎಂದ ರಾಜ್ಯಪಾಲರು?

ನನ್ನ ಬಳಿ ಯಾವುದೇ ಪ್ರಕರಣಗಳ ಬಾಕಿ ಇಲ್ಲ ಎಂದು ರಾಜ್ಯಪಾಲರು ತಿಳಿಸಿದ್ದಾರೆ. ರಾಜ್ಯಪಾಲರು ಏಕೆ ಹೀಗೆ ಹೇಳುತ್ತಿದ್ದಾರೆ ಎಂದು ಮತ್ತೊಮ್ಮೆ ಪರಿಶೀಲನೆ ಮಾಡಲಾಗುವುದು. ಇದು ನಿಜವೋ ಸುಳ್ಳೋ ಕಳಿಸಿರುವುದು ನಿಜವೋ, ಸುಳ್ಳು ಎಂದು ಪರಿಶೀಲಿಸಲಾಗುವುದು. ಅಥವಾ ಒಂದಷ್ಟು ವಿಚಾರದಲ್ಲಿ ಅವರು ಸ್ಪಷ್ಟನೆ ಕೇಳಿರಬಹುದು ಇದನ್ನು ಸಹ ನಾವು ಪರಿಶೀಲಿಸುತ್ತೇವೆ ಎಂದು ತಿಳಿಸಿದರು. ಸಿದ್ದರಾಮಯ್ಯ ಅವರ ಪ್ರಕರಣ ನ್ಯಾಯಾಲಯದಲ್ಲಿ ಇದ್ದು. ಅಲ್ಲಿ ನಾವು ಕಾನೂನು ಹೋರಾಟ ಮಾಡುತ್ತಿದ್ದೇವೆ. ಹೀಗಾಗಿ ನಮ್ಮ ಈ ರಾಜಭವನ ಚಲೋ ಹೋರಾಟ ಸಿದ್ದರಾಮಯ್ಯ ಅವರ ಪ್ರಕರಣಕ್ಕೆ ಸಂಬಂಧಿಸಿಲ್ಲ. ನ್ಯಾಯಾಲಯದಲ್ಲಿ ತೀರ್ಮಾನವಾದ ನಂತರ ಆ ವಿಚಾರವಾಗಿ ಪ್ರತಿಕ್ರಿಯೆ ನೀಡುತ್ತೇವೆ ಎಂದು ಡಿಸಿಎಂ ಹೇಳಿದರು.

ನಾಲ್ಕು ಜನರ ವಿರುದ್ಧ ಭ್ರಷ್ಟಾಚಾರ ವಿರೋಧಿ ಕಾಯಿದೆ, 197 ಸಿಪಿಸಿ ಕಾಯಿದೆಯ ಸೆಕ್ಷನ್ 17 ಎ ಪ್ರಕಾರ ಲೋಕಾಯುಕ್ತವು ಅನುಮತಿ ಕೇಳಿತ್ತು. ಆದರೂ ರಾಜ್ಯಪಾಲರು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಯಾರೋ ಅರ್ಜಿ ಕೊಟ್ಟರು ಎಂದು ಒಂದೇ ದಿನದಲ್ಲಿ ತೀರ್ಮಾನ ತೆಗೆದುಕೊಂಡರು. ಆದರೆ ಮಾಜಿ ಮುಖ್ಯಮಂತ್ರಿ, ಮಾಜಿ ಮಂತ್ರಿಗಳ ವಿಚಾರದಲ್ಲಿ ಲೋಕಾಯುಕ್ತ ಸಂಸ್ಥೆ ಮನವಿ ಮಾಡಿದ ಎಂಟತ್ತು ದಿನಗಳಲ್ಲಿ ತನಿಖೆಗೆ ಅನುಮತಿ ನೀಡುವ ತೀರ್ಮಾನ ಮಾಡಬಹುದಿತ್ತು. ಆದರೂ ತೀರ್ಮಾನ ತೆಗೆದುಕೊಳ್ಳದೆ ಪಕ್ಷಪಾತ ಮಾಡಿದ್ದಾರೆ ಎಂದು ಹೇಳಿದರು.

ಎಚ್ಚರಿಕೆಯಿಂದ ಕೆಲಸ ಮಾಡಬೇಕಿದೆ: ಸಾರ್ವಜನಿಕ ಜೀವನದಲ್ಲಿರುವ ರಾಜ್ಯಪಾಲರು ಎಚ್ಚರಿಕೆಯಿಂದ ಕೆಲಸ ಮಾಡಬೇಕಿತ್ತು. ಅವರು ಸಂವಿಧಾನದ ಪ್ರತಿನಿಧಿಯಾಗಿ ಕೆಲಸ ಮಾಡಬೇಕಿತ್ತೇ ಹೊರತು ಪಕ್ಷದ ಪ್ರತಿನಿಧಿಯಾಗಿ ಕೆಲಸ ಮಾಡಬಾರದಿತ್ತು. ಸಂವಿಧಾನಿಕ ಹುದ್ದೆಯನ್ನು ಸಂವಿಧಾನದ ರಕ್ಷಣೆಗೆ ಬಳಸಿಕೊಳ್ಳಬೇಕು ಎಂಬುದು ಸಾಮಾನ್ಯ ಜನರ ಅಭಿಪ್ರಾಯ ಎಂದರು.

ಮುಖ್ಯಮಂತ್ರಿಗಳ ವಿರುದ್ಧ ಪ್ರಾಥಮಿಕ ತನಿಖೆ ಹಾಗೂ ಯಾವುದೇ ಪೂರಕ ದಾಖಲೆಗಳಿಲ್ಲ. ಕುಮಾರಸ್ವಾಮಿ ಅವರು ಸೇರಿದಂತೆ ಮೂರು ಜನ ಸಚಿವರ ವಿರುದ್ಧ ತನಿಖಾ ವರದಿ ಹಾಗೂ ದಾಖಲೆಯಿದ್ದರೂ ರಾಜ್ಯಪಾಲರು ಪಕ್ಷಪಾತ ಏಕೆ ಮಾಡಿದರು. ರಾಜ್ಯಪಾಲರ ಕಚೇರಿ ಸಮಾನತೆ ಹೆಸರಾಗಿರಬೇಕು. ಸಾಂವಿಧಾನಿಕ ಪೀಠಕ್ಕೆ ಇರುವ ಗೌರವ ಉಳಿಯಬೇಕು ಎಂದು ನಾವು ರಾಜಭವನ ಚಲೋ ಹೋರಾಟ ಮಾಡಿದ್ದೇವೆ. ನ್ಯಾಯದ ಪರವಾಗಿ ಧ್ವನಿ ಎತ್ತಲು ನಾವು ಮುಂದಾಗಿದ್ದೇವೆ. ಎಂದು ಹೇಳಿದರು.

ನಾಲ್ಕು ಜನರ ವಿರುದ್ಧ ವಿಚಾರಣೆಗೆ ಅನುಮತಿ ನೀಡಬೇಕು. ರಾಜ್ಯಪಾಲರ ಕಚೇರಿ ಘನತೆಯನ್ನು ಉಳಿಸಿಕೊಳ್ಳಬೇಕು. ಕಾನೂನನ್ನು ಉಳಿಸಬೇಕು, ರಾಜ್ಯಪಾಲರ ಹುದ್ದೆಗೆ ಇರುವ ಘನತೆ, ಗೌರವವನ್ನು ಉಳಿಸಬೇಕು. ಪಕ್ಷಪಾತ ಧೋರಣೆ ಮಾಡದೆ ಕೆಲಸ ಮಾಡಬೇಕು ಎಂದು ಮನದಟ್ಟು ಮಾಡಿದ್ದೇವೆ ಎಂದರು.

ಅನುಮತಿ ನೀಡದೆ ಬೇರೆ ದಾರಿಯಿಲ್ಲ: ಡಿ.ಕೆ.ಶಿವಕುಮಾರ್

ರಾಜ್ಯಪಾಲರ ಸ್ಪಂದನೆಯಿಂದ ನ್ಯಾಯ ದೊರೆಯುತ್ತದೆ ಎನ್ನುವ ಭರವಸೆಯಿದೆಯೇ ಎನ್ನುವ ಪ್ರಶ್ನೆಗೆ ಉತ್ತರಿಸಿ, ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ರಾಜ್ಯದ ಜನತೆಯ ಹಿತಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ರಾಜ್ಯಪಾಲರ ಬಳಿ ಪರ್ಯಾಯ ದಾರಿಗಳಿಲ್ಲ. ಅವರು ನಾಲ್ವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲೇಬೇಕು. ಅರ್ಜಿಗಳು ಇತ್ಯರ್ಥವಾಗಿರುವ ವಿಷಯದ ಬಗ್ಗೆ ಎಲ್ಲವನ್ನು ಬಹಿರಂಗವಾಗಿ ಚರ್ಚಿಸಲು ಆಗುವುದಿಲ್ಲ. ಅವರು ನನ್ನ ಬಳಿ ಯಾವುದೇ ಅರ್ಜಿಗಳಿಲ್ಲ ಎಂದು ಹೇಳಿದ್ದಾರೆ ಅದನ್ನು ನಾವು ಪರಿಶೀಲಿಸುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಆಟೋಗೆ ಕ್ಯಾಂಟರ್ ಡಿಕ್ಕಿ: ಇಬ್ಬರ ಸಾವು

ಹಾವೇರಿ: ಆಟೋಗೆ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಸ್ಥಳದಲ್ಲೇ ಮೃತಪಟ್ಟಿದ್ದು, ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲೂಕಿನ ಚಳಗೇರಿ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಯಶೋಧ ಮತ್ತು ಬಸಮ್ಮ ಎಂದು ಗುರುತಿಸಲಾಗಿದೆ. ಯಶೋಧ ಮತ್ತು ಬಸಮ್ಮ ಸೇರಿದಂತೆ ಒಟ್ಟು ಎಂಟು ಜನರು ದಾವಣಗೆರೆಯಿಂದ ಚಳಗೇರಿ ಗ್ರಾಮಕ್ಕೆ ಸಂಬಂಧಿಕರೊಬ್ಬರ ಅಂತ್ಯಕ್ರಿಯೆಗೆ ಬಂದಿದ್ದರು. ಅಂತ್ಯಕ್ರಿಯೆ ಮುಗಿಸಿ ವಾಪಸ್ ಆಗುತ್ತಿದ್ದ ವೇಳೆ ಜವರಾಯನಾಗಿ ಬಂದ ಕ್ಯಾಂಟರ್ ಆಟೋಗೆ ಡಿಕ್ಕಿ ಹೊಡೆದಿದೆ. ಗಾಯಾಳುಗಳನ್ನು ರಾಣೆಬೆನ್ನೂರು ತಾಲೂಕು ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಕೊಡಿಸಲಾಗುತ್ತಿದೆ. ಸ್ಥಳಕ್ಕೆ ರಾಣೆಬೆನ್ನೂರು ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ಆತ್ಮಹತ್ಯೆ

ರಾಯಚೂರು: ವಿದ್ಯಾರ್ಥಿಯೊಬ್ಬ ಡೆತ್‌ನೋಟ್ ಬರೆದಿಟ್ಟು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ರಾಯಚೂರು ಜಿಲ್ಲೆಯ ಸಿರವಾರದಲ್ಲಿ ನಡೆದಿದೆ. ವೆಂಕಟೇಶ್ ನಾಯಕ್ (20) ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿ. ಆತ ಧಾರವಾಡದಲ್ಲಿ ಬಿಎ ಪದವಿ ವ್ಯಾಸಂಗ ಮಾಡುತ್ತಿದ್ದು, ಇತ್ತೀಚಿಗೆ ಊರಿಗೆ ಬಂದಿದ್ದ. ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣಿಗೆ ಶರಣಾಗಿದ್ದಾನೆ. ನನ್ನ ಸಾವಿಗೆ ಯಾರೂ ಜವಾಬ್ದಾರರಲ್ಲ, ಹೊಣೆಗಾರರಲ್ಲ ಎಂದು ಡೆತ್‌ನೋಟ್ ಬರೆದು ನೇಣಿಗೆ ಶರಣಾಗಿದ್ದಾನೆ. ವಿದ್ಯಾರ್ಥಿ ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಕುಟುಂಬಸ್ಥರು ತಮ್ಮದೇ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಮನೆಯಲ್ಲಿ ಒಬ್ಬನೇ ಇದ್ದ ವೆಂಕಟೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಿರವಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕಬಡ್ಡಿ ಟೂರ್ನಿ ವೇಳೆ ಮಚ್ಚು ಬೀಸಿದ ಬಾಲಕ

ಹಾಸನ: ಕಬಡ್ಡಿ ಪಂದ್ಯದ ವೇಳೆ ಪಿಯು ವಿದ್ಯಾರ್ಥಿಗಳ ನಡುವೆ ಗಲಾಟೆ ಶುರುವಾಗಿ ಮಾತಿಗೆ ಮಾತು ಬೆಳೆದು ಜಗಳ ತಾರಕಕ್ಕೇರಿ ಪರಸ್ಪರ ಬಡಿದಾಡಿಕೊಂಡು ಮಚ್ಚು ಬೀಸಿದ ಘಟನೆ ಹಾಸನದ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದಿದೆ. ಆ.30 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಪಿಯುಸಿ ಕಾಲೇಜುಗಳ ಕ್ರೀಡಾಕೂಟದಲ್ಲಿ ಕಬಡ್ಡಿ ಪಂದ್ಯ ನಡೆಯುತ್ತಿದ್ದ ವೇಳೆ ಈ ಘಟನೆ ನಡೆದಿದೆ. ಎರಡು ಕಾಲೇಜು ವಿದ್ಯಾರ್ಥಿಗಳ ಗುಂಪಿನ ನಡುವೆ ಜಗಳ ಶುರುವಾಗಿದೆ. ಈ ವೇಳೆ ವಿದ್ಯಾರ್ಥಿ ಮೇಲೆ ಮತ್ತೊಬ್ಬ ವಿದ್ಯಾರ್ಥಿ ಚೀಲದಲ್ಲಿ ಇಟ್ಟುಕೊಂಡಿದ್ದ ಮಚ್ಚು ತೆಗೆದು ಹಲ್ಲೆಗೆ ಮುಂದಾಗಿದ್ದು, ಕೂದಲೆಳೆ ಅಂತರದಲ್ಲಿ ವಿದ್ಯಾರ್ಥಿ ಪಾರಾಗಿದ್ದಾನೆ. ಇದರಿಂದ ಸಿಟ್ಟಿಗೆದ್ದ ಇತರ ವಿದ್ಯಾರ್ಥಿಗಳು ಮಚ್ಚು ಬೀಸಿದವನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಹೊಡೆತ ತಾಳಲಾರದೇ ವಿದ್ಯಾರ್ಥಿ ನೆಲಕ್ಕುರುಳಿದ್ದಾನೆ. ಆದರೂ ಬಿಡದೇ ವಿದ್ಯಾರ್ಥಿಗಳು ಒದ್ದು ಮನಸೋ ಇಚ್ಛೆ ಹೊಡೆತ ಕೊಟ್ಟಿದ್ದಾರೆ. ಗಾಯಾಳು ವಿದ್ಯಾರ್ಥಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ್ದರು. ಕೆ.ಆರ್.ಪುರಂ ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

{ **ಜಗದೀಶ್ ಶೆಟ್ಟರ್** } ಸಂಸದ

ಸಿದ್ದರಾಮಯ್ಯ ಅವರು ಸಾಚಾ ಆಗಿದ್ದರೆ ಸದನದಲ್ಲೇ ಉತ್ತರ ಕೊಡಬೇಕಿತ್ತು. ರಾಜ್ಯಪಾಲರಿಗೆ ಯಾರೋ ಹೋಗಿ ಸಿಎಂ ಅರೆಸ್ಟ್ ಮಾಡುವಂತೆ ಹೇಳಿಲ್ಲ. ತನಿಖೆ ಮಾಡುವುದಕ್ಕೆ ಕೇಳಿಕೊಂಡರೆ ಇವರಿಗೇಕೆ ಭಯವಾಗುತ್ತಿದೆ . ಸತ್ಯ ಸಂಗತಿಯನ್ನು ಮುಚ್ಚಿ ಹಾಕಲು ರಾಜ ಭವನ ಚಲೋ ಮಾಡುತ್ತಿದ್ದಾರೆ.

ಕಾಂಗ್ರೆಸ್ ನಾಯಕರಿಗೆ ಯಾವುದೇ ನೈತಿಕತೆಯಿಲ್ಲ

ಬೆಂಗಳೂರು: ರಾಜಭವನ ಚಲೋ ನಡೆಸಲು ಕಾಂಗ್ರೆಸ್ ನಾಯಕರಿಗೆ ನೈತಿಕತೆಯಿಲ್ಲ. ಅವರ ವರಿಷ್ಠರಿಗೂ ನೈತಿಕತೆ ಇಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಟೀಕಿಸಿದ್ದಾರೆ.

ನಗರದಲ್ಲಿ ಮಾತನಾಡಿದ ಅವರು, ನಾವು ತಪ್ಪು ಮಾಡಿದರೆ ಬಂಧನ ಮಾಡುತ್ತಾರೆ. ಇವರು ತಪ್ಪು ಮಾಡಬಹುದು. ಅಧಿಕಾರ ದುರ್ಬಳಕೆ ಮಾಡಿ ಸಿದ್ದರಾಮಯ್ಯ ಸಾಕ್ಷಿ ಸಮೇತ ಸಿಕ್ಕಿಕೊಂಡಿದ್ದಾರೆ. ಮೊದಲು ಸಿದ್ದರಾಮಯ್ಯ ರಾಜೀನಾಮೆ ಕೊಡಲಿ ಎಂದು ಆಗ್ರಹಿಸಿದರು.

ಚನ್ನಪಟ್ಟಣ ಟಿಕೆಟ್‌ಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ್ದು, ನಾವು ಒಗ್ಗಟ್ಟಿನಲ್ಲಿ ನಡೆಯಬೇಕು. ನಮ್ಮ ವರಿಷ್ಠರೊಂದಿಗೆ ಚರ್ಚಿಸಿದ್ದೇವೆ. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ವರಿಷ್ಠರೊಂದಿಗೆ ಚರ್ಚಿಸಿದ್ದೇವೆ. ಯಾರನ್ನು ಅಭ್ಯರ್ಥಿ ಮಾಡಬೇಕು ಅಂತ ಚರ್ಚೆ ಮಾಡಿದ್ದೇವೆ. ಮುಂದಿನ ದಿನಗಳಲ್ಲಿ ಯಾರು ಅಭ್ಯರ್ಥಿ ಎಂದು ತಿಳಿಸುವ ಕೆಲಸವಾಗಲಿದೆ ಎಂದು ಸ್ಪಷ್ಟಪಡಿಸಿದರು. ಸಿ.ಪಿ. ಯೋಗೀಶ್ವರ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇವೆ. ಅವರೂ ಸಹಕಾರ ಕೊಡಬೇಕು, ಕುಮಾರಸ್ವಾಮಿ ಅವರ ಸಹಕಾರವೂ ಬೇಕು. ಎಲ್ಲಾ ಒಟ್ಟಿಗೆ ಹೋಗಬೇಕು ಅಂತ ಚರ್ಚೆ ಮಾಡಿದ್ದೇವೆ. ಎನ್‌ಡಿಎ ಅಭ್ಯರ್ಥಿ ಯಾರೆನ್ನುವುದು ನಿರ್ಧಾರವಾಗಿಲ್ಲ. ಉಪ ಚುನಾವಣೆಯ ಅಧಿಸೂಚನೆ ನಂತರ ಅಭ್ಯರ್ಥಿ ಬಗ್ಗೆ ಚರ್ಚೆಯಾಗಲಿದೆ ಎಂದು ತಿಳಿಸಿದರು.

ಪತ್ನಿ ಮೇಲೆ ಹಲ್ಲೆ ಮಾಡಿದ ಪೇದೆ

ಶೆಡ್‌ನಲ್ಲಿ ಕೂಡಿಹಾಕಿ ಹೆಂಡತಿಗೆ ಬರೆ ಎಳೆದು ಚಿತ್ರಹಿಂಸೆ ನೀಡಿದ ಪೊಲೀಸ್

ಬೆಳಗಾವಿ: ಚಿತ್ರದುರ್ಗದ ರೇಣುಕಾಸ್ವಾಮಿಯನ್ನು ಶೆಡ್‌ನಲ್ಲಿ ಕೂಡಿಹಾಕಿ ಹತ್ಯೆಗೈದ ಪ್ರಕರಣ ಮಾಸುವ ಬೆನ್ನಲ್ಲೇ ಪೊಲೀಸ್ ಪೇದೆಯೊಬ್ಬ ಹೆಂಡತಿಯನ್ನು ಶೆಡ್‌ನಲ್ಲಿ ಕೂಡಿಹಾಕಿ ಮೈಮೇಲೆ ಬರೆ ಎಳೆದು ಚಿತ್ರಹಿಂಸೆ ನೀಡಿದ ಘಟನೆ ಬೆಳಕಿಗೆ ಬಂದಿದೆ.

ರಾಯಬಾಗ್ ತಾಲೂಕಿನ ನಿಡಗುಂಡಿ ಗ್ರಾಮದ ಪ್ರಿಯಾಂಕಾ ಎಂಬುವವರನ್ನು ಅಥಣಿ ತಾಲೂಕಿನ ಕುನ್ನಾಳದ ಡಿಆರ್ ಪೊಲೀಸ್ ಸಿಬ್ಬಂದಿ ಯಲ್ಲಪ್ಪ ಅಸಗೆ 10 ವರ್ಷಗಳ ಹಿಂದೆ ಮದುವೆಯಾಗಿದ್ದು, ಮೂರು ಮಕ್ಕಳಿದ್ದಾರೆ.

ಆದರೆ ತುಂಬು ಸಂಸಾರದಲ್ಲಿ ಹುಟ್ಟಿಕೊಂಡ ಅನುಮಾನದ ಪರಿಣಾಮ ಪತ್ನಿ ಪ್ರಿಯಾಂಕಾಳನ್ನು ತೋಟದ ಶೆಡ್‌ನಲ್ಲಿ ಕೂಡಿಹಾಕಿ ಚಿತ್ರಹಿಂಸೆ ನೀಡಿ ಆರೋಪಿ ಯಲ್ಲಪ್ಪ ವಿಕೃತಿ ಮೆರೆದಿದ್ದಾನೆ.

ನಾದಿನಿಯರಿಂದಲೂ ಹಲ್ಲೆ : ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ನೊಂದ ಮಹಿಳೆ ಪ್ರಿಯಾಂಕಾ, ಪತಿ ಯಲ್ಲಪ್ಪ ವಿಜಯಪುರ ತಾಲೂಕಿನ ತಿಕೋಟಾದಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದಾನೆ.

ನನ್ನ ಶೀಲ ಶಂಕಿಸಿ ಬರೆ ಎಳೆದು ತೀವ್ರ ಹಿಂಸೆ ಕೊಟ್ಟಿದ್ದಾನೆ. ಅವನ ಕೃತ್ಯಕ್ಕೆ ಅಕ್ಕ, ತಂಗಿಯರು ಸಾಥ್ ನೀಡಿ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸಿದ್ದಾಳೆ.

ಅನುಮಾನ ಮೂಡಿಸಿದ ಪ್ರಕರಣ ಮುಚ್ಚಿ ಹಾಕುವ ಯತ್ನ

ಮಹಿಳೆ ಮೇಲೆ ಪೊಲೀಸ್ ಪೇದೆ ಹಲ್ಲೆ ಮಾಡಿದ ಪ್ರಕರಣವನ್ನು ಮುಚ್ಚಿ ಹಾಕುವ ಯತ್ನ ನಡೆಯಿತೇ ಎಂಬ ಅನುಮಾನ ಮೂಡಿಸಿದೆ. ಬಹಿರಂಗವಾಗಿ ಪತಿಯ ಮೇಲೆ ಆರೋಪ ಮಾಡಿದ ಮಹಿಳೆ ತನ್ನ ಮೈಮೇಲಿನ ಬರೆಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆದರೆ ಪ್ರಿಯಾಂಕಾ, ಆಕೆ ಪೊಲೀಸ್ ಅಧಿಕಾರಿಗಳ ಮುಂದೆ ಹೇಳಿಕೆ ದಾಖಲಿಸಲು ನಿರಾಕರಿಸಿದ್ದಾಳೆ ಎಂದು ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಭೀಮಾಶಂಕರ ಗುಳೆದ ಮಾಹಿತಿ ನೀಡಿದ್ದಾರೆ. ಸದ್ಯ ನೊಂದ ಮಹಿಳೆ ಮಹಿಳಾ ಸಾಂತ್ವನ ಕೇಂದ್ರದಲ್ಲಿ ಆಶ್ರಯ ಪಡೆದಿದ್ದಾಳೆ.

ತವರು ಮನೆಯವರು ನನ್ನನ್ನು ನೋಡಲು ಬಂದಾಗ ಅವರಿಗೂ ಸಹ ನನ್ನ ಪತಿ ಬೆದರಿಕೆ ಹಾಕಿದ್ದಾನೆ. ನಿಮ್ಮ ಮಗಳು ಬೇರೆಯವರೊಂದಿಗೆ ಓಡಿಹೋಗಿದ್ದಾಳೆ ಎಂದು ದೂರು ಕೊಟ್ಟು ನಿಮ್ಮ ಮೇಲೆಯೇ ಪ್ರಕರಣ ದಾಖಲಿಸುತ್ತೇನೆ ಎಂದು ಬೆದರಿಕೆ ಹಾಕಿದ್ದಾನೆ.

ಶೆಡ್‌ನಲ್ಲಿ ಯಾರೂ ಇಲ್ಲದ ವೇಳೆ ತಪ್ಪಿಸಿಕೊಂಡು ಬಂದು ಬೆಳಗಾವಿಯ ಮಹಿಳಾ ಸಂಘದ ಸಹಾಯದಿಂದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ ಎಂದು ಪ್ರಿಯಾಂಕಾ ತನ್ನ ನೋವಿನ ಕಥೆ ವಿವರಿಸಿದ್ದಾರೆ.

ಮಳೆಗೆ ಕುಸಿದು ಬಿದ್ದ ಮಳಖೇಡ ಕೋಟೆ

ಕಲಬುರಗಿ: ಕಳೆದ ಎರಡು ದಿನದಿಂದ ಜಿಲ್ಲೆಯಾದ್ಯಂತ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಜಿಲ್ಲೆಯ ಸೇಡಂ ತಾಲೂಕಿನ ಐತಿಹಾಸಿಕ ಮಳಖೇಡ ಕೋಟೆಯ ಗೋಡೆ ಕುಸಿದು ಬಿದ್ದಿರುವ ಘಟನೆ ಶುಕ್ರವಾರ ಸಂಜೆ ಸಾಯಂಕಾಲ ನಡೆದಿದೆ.

ಮಳಖೇಡದಲ್ಲಿನ ಐತಿಹಾಸಿಕ ರಾಷ್ಟ್ರಕೂಟರ ಕೋಟೆಯ ಗೋಡೆ ಕುಸಿದಿದ್ದು, ಜನರಲ್ಲಿ ಆತಂಕ ಸೃಷ್ಟಿಸಿದೆ. ಶುಕ್ರವಾರ ತಡ ರಾತ್ರಿಯಿಂದ ಸುರಿಯುತ್ತಿರುವ ಮಳೆ ಶನಿವಾರವೂ ಮುಂದುವರೆದಿದ್ದು, ನಿರಂತರವಾಗಿ ಜಿಟಿ ಜಿಟಿ ಮಳೆ ಸುರಿಯುತ್ತಿರುವ ಕಾರಣ ಶನಿವಾರ ಬೆಳಗಿನ ಜಾವದಲ್ಲಿ ಕೋಟೆಯ ಗೋಡೆ ಕುಸಿದಿದೆ. ಇದರಿಂದಾಗಿ ಕೋಟೆಯ ಪಕ್ಕದಲ್ಲಿ ವಾಸಿಸುತ್ತಿರುವ ನಿವಾಸಿಗಳಲ್ಲಿ ಆತಂಕ ಮನೆಮಾಡಿದೆ. ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ನಿರಂತರ ಜಿಟಿ ಜಿಟಿ ಮಳೆ ಸುರಿಯುತ್ತಿದ್ದು, ಎಲ್ಲೆಡೆ ಜನಜೀವನ ಅಸ್ತವ್ಯಸ್ತಗೊಂಡಿದೆ. ನಗರದ ಪಿ ಅಂಡ್ ಟಿ ಕಾಲೋನಿ ಅಂಡರ್ ಬ್ರಿಡ್ಜ್, ರಾಮ ಮಂದಿರ್, ಜಿಲ್ಲಾಧಿಕಾರಿಗಳ ಕಚೇರಿಯ ಹಿಂಭಾಗ, ಆನಂದ ಹೋಟೆಲ್, ಲಾಲಗೇರಿ ಕ್ರಾಸ್, ಆಳಂದ ಚೆಕ್ ಪೋಸ್ಟ್, ಸೂಪರ್ ಮಾರ್ಕೆಟ್, ಹುಮನಾಬಾದ ರಿಂಗ್ ರಸ್ತೆ ಸೇರಿ ಅನೇಕ ಕಡೆಗೆ ಮಳೆಯಿಂದಾಗಿ ತಗ್ಗು ಪ್ರದೇಶದಲ್ಲಿ ನೀರು ನುಗ್ಗಿ ಜನರ ಓಡಾಟ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.



ಖ್ಯಾತ ನಟರಾದ ಜೂನಿಯರ್ ಎನ್‌ಟಿಆರ್ ಮತ್ತು ರಿಷಬ್ ಶೆಟ್ಟಿ ಕುಟುಂಬ ಸಮೇತ ಶನಿವಾರ ಉಡುಪಿಯ ಶ್ರೀಕೃಷ್ಣ ಮಠಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. ಶ್ರೀ ಕೃಷ್ಣ ಮತ್ತು ಮುಖ್ಯಪ್ರಾಣ ದೇವರ ದರ್ಶನ ಪಡೆದ ಜೂ.ಎನ್‌ಟಿಆರ್ ಪೂಜೆ ಸಲ್ಲಿಸಿದರು.

ಸ್ವಂತಶಕ್ತಿ ಇಲ್ಲದಿದ್ದಕ್ಕೆ ಆಪರೇಷನ್

ಬಿಜೆಪಿ ವಿರುದ್ಧ ಜವಳಿ, ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಕಿಡಿ

ವಿಜಯಪುರ: ರಾಜ್ಯದಲ್ಲಿ ಈ ಹಿಂದೆ ಎರಡು ಬಾರಿ ಹಿಂಬಾಗಿಲಿನಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿ ಪಕ್ಷಕ್ಕೆ ಸ್ವಂತಬಲದ ಮೇಲೆ ಅಧಿಕಾರಕ್ಕೆ ಬರುವ ಶಕ್ತಿ ಇಲ್ಲ. ಹೀಗಾಗಿ ಆಪರೇಷನ್ ಕಮಲ ಎಂಬುದು ಹೊಸತೇನಲ್ಲ, ಈಗಲೂ ಅಂತಹ ಪ್ರಯತ್ನ ನಡೆಸಿದ್ದಾರೆ ಎಂದು ಜವಳಿ, ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಮುಡಾ ಹಗರಣದ ಆರೋಪ ಹೊರಿಸಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲನ ನಡೆ ಸಮರ್ಥನೀಯವಲ್ಲ. ಎರಡು ಬಾರಿ ಹಿಂಬಾಗಿಲಿನಿಂದ ಅಧಿಕಾರ ಹಿಡಿದಿರುವ ಬಿಜೆಪಿ, ಮತ್ತದೇ ಪ್ರಯತ್ನ ನಡೆಸಿದೆ ಆಕ್ಷೇಪಿಸಿದರು.

ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆ ಖಂಡಿಸಿ ರಾಜಭವನ ಚಲೋ ಹೋರಾಟದಲ್ಲಿ ತಾವೂ ಪಾಲ್ಗೊಳ್ಳಬೇಕಿತ್ತು. ಆದರೆ ಆರ್‌ಬಿಐ ನಿಯಮದ ಪ್ರಕಾರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಸರ್ವ ಸದಸ್ಯರ ಸಾಮಾನ್ಯ ಸಭೆ ನಡೆಯುತ್ತಿರುವ ಕಾರಣ ಅನುಮತಿ ಪಡೆದು ವಿಜಯಪುರಕ್ಕೆ ಬಂದಿದ್ದೇನೆ ಎಂದು ಸಚಿವ ಪಾಟೀಲ್ ಸ್ಪಷ್ಟಪಡಿಸಿದರು.

> ಇದಕ್ಕೂ ಮೊದಲಿನ ಹಲವು ಪ್ರಕರಣಗಳ ಅರ್ಜಿ ರಾಜ್ಯಪಾಲರ ಮುಂದಿದ್ದರೂ ರಾಜಕೀಯ ಪ್ರೇರಿತವಾಗಿದೆ. ರಾಜ್ಯಪಾಲರ ಮೂಲಕ ರಾಜಭವದ ದುರ್ಬಳಕೆ ಮಾಡಿಕೊಳ್ಳುವ ಕೆಲಸ ನಡೆಯುತ್ತಿದೆ. ರಾಜ್ಯಪಾಲರ ಮುಂದೆ ಹಲವು ಕಡತ ಬಾಕಿ ಇದ್ದು, ಮೊದಲು ಅಂಥ ಆರೋಪದ ಪ್ರಕರಣದ ಕುರಿತು ತೀರ್ಮಾನವಾಗಲಿ. ಆದರೆ ಈಗಷ್ಟೇ ನೀಡಿದ ದೂರಿನ ಕುರಿತು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ನಡೆ ಸರಿಯಲ್ಲ.
>
> **-ಶಿವಾನಂದ ಪಾಟೀಲ** ಸಚಿವ

ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿಕೆ

2ಎ ಮೀಸಲಿಗಾಗಿ ನ್ಯಾಯಾಂಗ ಹೋರಾಟ

ಕೊಪ್ಪಳ: ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲು ನೀಡುವಂತೆ ಒತ್ತಾಯಿಸಿ ಹಲವು ಬಗೆಯ ಹೋರಾಟ ಮಾಡಿದರೂ ಇನ್ನೂ ಸ್ಪಂದನೆ ಸಿಕ್ಕಿಲ್ಲ.ಹೀಗಾಗಿ ನಾವು ನ್ಯಾಯಾಂಗದ ಮೂಲಕ ಹೋರಾಟಕ್ಕೆ ಧುಮುಕುತ್ತೇವೆ ಎಂದು ಎಂದು ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಜನಾಂಗದಲ್ಲಿಯೂ ಸಹ ನ್ಯಾಯವಾದಿಗಳು ಇದ್ದಾರೆ. ಅವರೆಲ್ಲರನ್ನೂ ಸಂಘಟಿಸಿ ಸಿಎಂ ಕಣ್ತೆರೆಸುವ ಪ್ರಯತ್ನ ಮಾಡುತ್ತೇವೆ . ಸೆ. 22 ರಂದು ಪಂಚಮಸಾಲಿ ವಕೀಲರ ಮಹಾಪರಿಷತ್ತು ಸಭೆ ನಡೆಯಲಿದೆ. ಆ ಸಭೆಯಲ್ಲಿ ಈ ಸರಕಾರದ ಗಮನ ಸೆಳೆಯುವ ಕುರಿತು ಚರ್ಚಿಸಲಾಗುತ್ತದೆ. ನಮ್ಮ ಸಮಾಜದ ಕಾನೂನು ತಜ್ಞರ ಸಮಿತಿ ಮಾಡಿ ಈ ಮೂಲಕ ಸರದಕಾರಕ್ಕೆ ಒತ್ತಡ ಹಾಕುವ ಪ್ರಯತ್ನ ಮಾಡಲಾಗುತ್ತದೆ. ಇದರ ಸಿದ್ಧತೆಗಾಗಿ ಎಲ್ಲ ಜಿಲ್ಲೆಗಳಲ್ಲಿ ಪೂರ್ವಭಾವಿ ಸಭೆ ನಡೆಸಲಾಗುತ್ತಿದೆ ಎಂದರು.

ಕಾಂಗ್ರೆಸ್ ನೇತೃತ್ವದ ಸಿದ್ದರಾಮಯ್ಯ ಅವರ ಸರಕಾರದಲ್ಲಿ ನಮಗೆ ಮೀಸಲು ದೊರೆಯುತ್ತದೆ ಎಂಬ ಆಶಾಭಾವನೆ ಹೊಂದಿದ್ದೆವು. ಆದರೆ, ಸಿದ್ದರಾಮಯ್ಯ ಸರಕಾರದಲ್ಲೂ ಸಹ ನಮಗೆ ಸ್ಪಂದನೆ ಸಿಗಲಿಲ್ಲ. ಅಧಿವೇಶನದಲ್ಲಿ ಈ ಬಗ್ಗೆ ಯಾರೂ ಮಾತನಾಡಲಿಲ್ಲ. ಈ ಸರಕಾರದ ಯಾವ ಶಾಸಕರು ನಮ್ಮ ಬೇಡಿಕೆ ಬಗ್ಗೆ ಮಾತನಾಡಿಲ್ಲ. ನಮ್ಮ ಸಮಾಜದ ಶಾಸಕರು ಸ್ಪೀಕರ್‌ಗೆ ಪತ್ರ ನೀಡಿದರೂ ಕಿಮ್ಮತ್ತು ಸಿಕ್ಕಿಲ್ಲ. ಪಂಚಮಸಾಲಿ ಸಮಾಜದ ಶಾಸಕರು ಸಭಾತ್ಯಾಗ ಮಾಡಬೇಕಿತ್ತು. ಅಧಿವೇಶನಕ್ಕೂ ಮೊದಲೇ ನಾವು ಅವರಿಗೆ ಮನವಿ ಮಾಡಿದ್ದೆವು. ಲಕ್ಷ್ಮೀ ಹೆಬ್ಬಾಳ್ಕರ್, ವಿಜಯಾನಂದ ಕಾಶಪ್ಪನವರ್ ಸಿಎಂ ಜತೆ ಮಾತನಾಡುತ್ತಿದ್ದೇವೆ ಎನ್ನುತ್ತಾರೆ ಹೊರತು ಯಾವುದೇ ನಿರ್ಣಯದ ಕುರಿತು ಅವರು ಮಾತನಾಡುತ್ತಿಲ್ಲ ಎಂದು ಜಯಮೃತ್ಯುಂಜಯ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದರು.



> ಸಮಾಜದ ಒಳಿತಿಗಾಗಿ ನಾವು ಹೊರಗಡೆ ಇದ್ದು ಹೋರಾಟ ಮಾಡುತ್ತೇವೆ. ಸರಕಾರದ ಒಳಗಿರುವ ನೀವು (ಪಂಚಮಸಾಲಿ ಶಾಸಕರು)ಅಲ್ಲಿ ಹೋರಾಟ ಮಾಡಿ. ಸಮಾಜದ ಋಣ ನಿಮ್ಮ ಮೇಲೆ ಇದೆ ಎಂದು ಹೇಳಿದ್ದೇವೆ. ಸಮಾಜದ ಪರವಾಗಿ ಮಾತನಾಡಿ. ನಿಮ್ಮ ಗೆಲುವಿಗೆ ಪಕ್ಷದ ಚಿಹ್ನೆ ಮಾತ್ರ ಕಾರಣವಲ್ಲ. ಸಮಾಜದ ಜನರು ಮತ ಹಾಕಿದ್ದಾರೆ ಎಂದು ಎಚ್ಚರಿಕೆ ಕೊಟ್ಟಿದ್ದೇವೆ.
>
> **- ಬಸವ ಜಯ ಮೃತ್ಯುಂಜಯ ಸ್ವಾಮೀಜಿ**
> ಪಂಚಮಸಾಲಿ ಪೀಠ

ಟಿಬಿ ಡ್ಯಾಂನಿಂದ ಯಾವುದೇ ಕ್ಷಣದಲ್ಲಿ ನೀರು ಹೊರಕ್ಕೆ

ಹೊಸಪೇಟೆ: ತುಂಗಭದ್ರಾ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚುತ್ತಿರುವ ಕಾರಣ ಹಾಗೂ ಅಣೆಕಟ್ಟೆ ಮತ್ತೊಮ್ಮೆ ತುಂಬುವ ಹಂತಕ್ಕೆ ಬಂದಿರುವ ಕಾರಣ ಯಾವುದೇ ಕ್ಷಣದಲ್ಲಿ ಅಣೆಕಟ್ಟೆಯಿಂದ ನೀರನ್ನು ನದಿಗೆ ಹರಿಸುವ ಸಾಧ್ಯತೆ ಇದೆ, ಹೀಗಾಗಿ ಎಚ್ಚರಿಕೆಯಿಂದ ಇರಬೇಕು ಎಂದು ತುಂಗಭದ್ರಾ ಮಂಡಳಿ ಸೂಚನೆ ನೀಡಿದೆ.

ಭಾರಿ ಪ್ರಮಾಣದ ಒಳ ಹರಿವಿನಿಂದ ತುಂಬಿ ತುಳುಕುತ್ತಿರುವ ಜಲಾಶಯ

ಮಂಡಳಿ ಈ ನಿಟ್ಟಿನಲ್ಲಿ ಶನಿವಾರ ಮಧ್ಯಾಹ್ನ ಪ್ರಕಟಣೆ ನೀಡಿದೆ. ತುಂಗಾ ನದಿ ಮತ್ತು ವರದಾ ನದಿಗಳಲ್ಲಿ ಹರಿಯುವ ನೀರಿನ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಹೀಗಾಗಿ ಜಲಾಶಯದ ಒಳಹರಿವಿನ ಪ್ರಮಾಣ ಹೆಚ್ಚಳವಾಗುತ್ತಿದೆ. ಅಣೆಕಟ್ಟೆಯ ಪಕ್ಕದಲ್ಲಿರುವ ಜಲವಿದ್ಯುದಾಗಾರದಲ್ಲಿ ಹೆಚ್ಚುವರಿ ವಿದ್ಯುತ್ ಉತ್ಪಾದಿಸುವ ಮೂಲಕ 5 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುವುದು, ಒಳಹರಿವಿನ ಪ್ರಮಾಣ ಇನ್ನಷ್ಟು ಹೆಚ್ಚಾದಲ್ಲಿ ನದಿಗೆ ನೀರು ಹರಿಸುವ ಪ್ರಮಾಣ ಇನ್ನಷ್ಟು ಹೆಚ್ಚಬಹುದು ಎಂದು ಮಂಡಳಿ ಹೇಳಿದೆ. ಆದರೆ ಸದ್ಯ ಕ್ರಸ್ಟ್‌ಗೇಟ್ ತೆರೆದು ನೀರು ಹರಿಸುವ ಕುರಿತು ಯಾವುದೇ ಮಾಹಿತಿ ನೀಡಿಲ್ಲ.

ಕೆಲವೊಮ್ಮೆ ಬೇರೆಯವರ ಅನುಕೂಲಕ್ಕಾಗಿ ನಾವು ಬೆಲೆ ತೆರಬೇಕಾಗುತ್ತದೆ!

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಕೆಲವು ಸಲ ಬೇರೆಯವರ ಸಿಟ್ಟು, ಸೆಡವು, ದ್ವೇಷ, ಅನುಕೂಲ, ಆಕ್ರೋಶಗಳಿಗೆ ನಾವು ಬೆಲೆ ತೆರಬೇಕಾಗುತ್ತದೆ. ನಮ್ಮ ಪಾತ್ರವಿಲ್ಲದಿದ್ದರೂ ನಾವು ಹಿಂಸೆ ಅನುಭವಿಸಬೇಕಾಗುತ್ತದೆ.

ನಾನು 'ವಿಜಯ ಕರ್ನಾಟಕ'ದ ಸಂಪಾದಕನಾಗಿದ್ದಾಗ, ಒಂದು ಸುದ್ದಿಯನ್ನು ಪ್ರಕಟಿಸಿದ್ದೆವು. ನಿವೃತ್ತ ಐಪಿಎಸ್ ಅಧಿಕಾರಿ ಮತ್ತು ಚಿತ್ರದುರ್ಗದ ಮಾಜಿ ಲೋಕಸಭಾ ಸದಸ್ಯ ಪಿ. ಕೋದಂಡರಾಮಯ್ಯ ಅವರ ಪತ್ರಿಕಾಗೋಷ್ಠಿಯ ವರದಿಯದು. ಕೋದಂಡರಾಮಯ್ಯನವರಿಗೆ ಅದ್ಯಾವ ಸಿಟ್ಟು, ಹತಾಶೆ ಇತ್ತೋ ಗೊತ್ತಿಲ್ಲ. ಹಾಲಿ ಮಂತ್ರಿ ಮತ್ತು ಮಾಜಿ ಪೊಲೀಸ್ ಕಾನ್ಸ್ಟೇಬಲ್ ಸಿ.ಚೆನ್ನಿಗಪ್ಪ ಅವರ ವಿರುದ್ಧ ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿ ಮಾಡಿ, ವಾಚಾಮಗೋಚರ ಟೀಕಿಸಿದ್ದರು. ಪೊಲೀಸ್ ಕಾನ್ಸ್ಟೇಬಲ್ ಆಗಿದ್ದವ ಮಂತ್ರಿಯಾಗಿ ಮೆರೆಯುತ್ತಿದ್ದಾನಲ್ಲ ಎಂಬ ಉರಿಯೂ ಇದ್ದಿರಬಹುದು.

ಮಾತಿನ ಭರದಲ್ಲಿ ಕೋದಂಡರಾಮಯ್ಯನವರು, 'ಆತ (ಚೆನ್ನಿಗಪ್ಪ) ನನ್ನ ಮನೆಯ ಬಾಗಿಲು ಕಾದ ಮನುಷ್ಯ. ಯಶವಂತಪುರ ಟ್ರಾಫಿಕ್ ಕಾನ್ಸ್ಟೇಬಲ್ ಆಗಿದ್ದಾಗ ನಕಲಿ ಚಲನ್ ಸೃಷ್ಟಿಸಿ, ದುಡ್ಡು ಲಪಟಾಯಿಸಿ ಸಿಕ್ಕಿ ಬಿದ್ದಿದ್ದ. ಬಚಾವ್ ಮಾಡುವಂತೆ ಅಂಗಲಾಚಿ ನನ್ನ ಮನೆ ಬಾಗಿಲಿಗೆ ಬಂದಿದ್ದ. ಆತ ಅದಕ್ಕೇ ಲಾಯಕ್ಕಾದ ಮನುಷ್ಯ. ಅದು ಹೇಗೆ ಮಂತ್ರಿಯಾದನೋ?' ಎಂದು ಅಂದುಬಿಟ್ಟರು.

ಪತ್ರಿಕಾಗೋಷ್ಠಿಯಲ್ಲಿ ಕೋದಂಡರಾಮಯ್ಯ ಹೇಳಿದ್ದನ್ನು ನಾವು ಯಥಾವತ್ ವರದಿ ಮಾಡಿದೆವು. ಇದರಲ್ಲಿ ನಮ್ಮ ತಪ್ಪೇನು ಬಂತು? ಅದಕ್ಕೆ ಚೆನ್ನಿಗಪ್ಪನವರು ಅಷ್ಟೇ ಕಟುವಾಗಿ ಕೋದಂಡರಾಮಯ್ಯನವರನ್ನು ಬೈದಿದ್ದರೂ ನಾವು ಯಥಾವತ್ ವರದಿ ಮಾಡುತ್ತಿದ್ದೆವು. ಅದು ನಮ್ಮ ಕರ್ತವ್ಯ.

ಅಷ್ಟಕ್ಕೇ ಚೆನ್ನಿಗಪ್ಪ ವ್ಯಗ್ರರಾಗಿಬಿಟ್ಟರು.

'ನಾನು ನನ್ನ ಜೀವನದಲ್ಲೇ ಆ ಮನುಷ್ಯನ ಮನೆಬಾಗಿಲು ಕಾದಿಲ್ಲ. ಸುಳ್ಳು ಬೊಗಳಿದ್ದಾನೆ. ನಾನು ಅವನನ್ನು ಬಿಡೊಲ್ಲ. ಕೋರ್ಟಿಗೆ ಎಳೆಯುತ್ತೇನೆ. ಆತ ಕ್ಷಮೆ ಕೇಳಿದರೂ ಬಿಡೊಲ್ಲ. ನೋಡೇ ಬಿಡ್ತೇನೆ' ಎಂದು ಅಬ್ಬರಿಸಿದರು. ಚೆನ್ನಿಗಪ್ಪನವರು ಕೋದಂಡರಾಮಯ್ಯನವರ ವಿರುದ್ಧ ಕೋರ್ಟಿನಲ್ಲಿ ದಾವೆ ಹೂಡಿದರು. ಇಷ್ಟೇ ಆಗಿದ್ದರೆ ಪರವಾಗಿರಲಿಲ್ಲ. ಅದು ಅವರಿಬ್ಬರಿಗೆ ಸೇರಿದ ವಿಷಯ ಎಂದು ಸುಮ್ಮನಾಗಿಬಿಡಬಹುದಿತ್ತು.

ಚೆನ್ನಿಗಪ್ಪನವರು ನನ್ನನ್ನು ಮತ್ತು ಪತ್ರಿಕೆಯ ಮಾಲೀಕರಾದ ವಿಜಯ ಸಂಕೇಶ್ವರರನ್ನೂ ಪಾರ್ಟಿ ಮಾಡಿದರು. ನಮ್ಮನ್ನೂ ಆರೋಪಿಗಳನ್ನಾಗಿ ಮಾಡಿದರು. ನಮಗೆ ಕೋರ್ಟ್ ನೋಟಿಸ್ ಬಂತು. ನಾನು ಮತ್ತು ಸಂಕೇಶ್ವರರು ಕೋರ್ಟಿಗೆ ಹಾಜರಾದೆವು. ಸಂಕೇಶ್ವರರು ಹೇಳಿಕೇಳಿ ಬಹಳ ಬ್ಯುಸಿ ವ್ಯಕ್ತಿ. ಅಲ್ಲದೇ ಅವರಿಗೂ, ಈ ಕೇಸಿಗೂ ಯಾವ ಸಂಬಂಧವೂ ಇರಲಿಲ್ಲ, ಅವರು ಪತ್ರಿಕೆಯ ಮಾಲೀಕರು ಎಂಬುದನ್ನು ಬಿಟ್ಟರೆ. ಅವರಿಗೆ ಕೋರ್ಟಿಗೆ ಅಲೆಯುವುದೆಂದರೆ ಕಿರಿಕಿರಿ.

ನಾನು ಚೆನ್ನಿಗಪ್ಪನವರಿಗೆ ಫೋನ್ ಮಾಡಿ, 'ನಮ್ಮನ್ನೇಕೆ ಪಾರ್ಟಿ ಮಾಡಿದ್ದೀರಿ? ಇದರಲ್ಲಿ ನಮ್ಮ ಪಾತ್ರವೇನಿದೆ? ನೀವು ಕೋದಂಡರಾಮಯ್ಯನವರನ್ನು ಹಿಗ್ಗಾಮುಗ್ಗಾ ಟೀಕಿಸಿದರೂ ನಾವು ಪ್ರಕಟಿಸುತ್ತೇವೆ, ಅದು ನಮ್ಮ ಧರ್ಮ. ಈ ಕೇಸಿನಿಂದ ನಮ್ಮನ್ನು ಬಿಟ್ಟುಬಿಡಿ' ಎಂದು ವಿನಂತಿಸಿದೆ.

ಅದಕ್ಕೆ ಚೆನ್ನಿಗಪ್ಪನವರು, 'ನೀವು ನನ್ನ ಉತ್ತಮ ಸ್ನೇಹಿತರು. ಸಂಕೇಶ್ವರರು ದೊಡ್ಡ ಮನುಷ್ಯ. ನಿಮ್ಮಿಬ್ಬರ ಬಗ್ಗೆ ನನಗೆ ಅಪಾರ ಗೌರವವಿದೆ. ಆದರೆ ನಿಮ್ಮನ್ನು ಪಾರ್ಟಿ ಮಾಡುವುದು ಅನಿವಾರ್ಯವಾಗಿದೆ. ಕೋರ್ಟಿನಲ್ಲಿ ಸಾಕ್ಷ್ಯ ಹೇಳುವ ಸಂದರ್ಭ ಬಂದಾಗ, ಕೋದಂಡರಾಮಯ್ಯ ಹಾಗೆ ನುಡಿದಿದ್ದು ನಿಜ ಎಂದು ನೀವು ಹೇಳಲಿ ಎಂಬ ಕಾರಣಕ್ಕೆ ನಿಮ್ಮಿಬ್ಬರನ್ನು ಪಾರ್ಟಿ ಮಾಡಿದ್ದೇನೆ. ನನಗೆ ಗೊತ್ತು ಇದರಿಂದ ನಿಮಗೆ ಸಮಸ್ಯೆ ಆಗುತ್ತೆ ಅಂತ. ಆದರೆ ಅನ್ಯ ಮಾರ್ಗವಿಲ್ಲ. ದಯವಿಟ್ಟು ತಪ್ಪು ಭಾವಿಸಬೇಡಿ. ಬೇಕಾದರೆ ನನಗೆ ಎರಡು ಹೊಡೆಯಿರಿ. ಆದರೆ ಆ ಮನುಷ್ಯನಿಗೆ ಪಾಠ ಕಲಿಸದೇ ಬಿಡುವುದಿಲ್ಲ' ಎಂದು ಖಡಾಖಡಿ ಹೇಳಿಬಿಟ್ಟರು.

ಈ ಕೇಸಿನ ಸಂಬಂಧ ನಾನು ಮತ್ತು ಸಂಕೇಶ್ವರರು ಎರಡು-ಮೂರು ಬಾರಿ ಕೋರ್ಟಿಗೆ ಅಲೆದೆವು. ಈ ಮಧ್ಯೆ, ಚೆನ್ನಿಗಪ್ಪನವರ ಪಕ್ಷದ ಮುಖ್ಯಸ್ಥರಾದ ಮಾಜಿ ಪ್ರಧಾನಿ ದೇವೇಗೌಡರ ಮನೆಗೆ ನಾನು ನಮ್ಮ ಪತ್ರಿಕೆಯ ಮುಖ್ಯ ವರದಿಗಾರರನ್ನು ಕಳುಹಿಸಿ, ಅವರಿಂದ (ಗೌಡರಿಂದ) ಚೆನ್ನಿಗಪ್ಪನವರ ಮೇಲೆ ಪ್ರಭಾವ ಬೀರುವಂತೆ ವಿನಂತಿಸಿದೆವು. ದೇವೇಗೌಡರು ಖುದ್ದಾಗಿ ಚೆನ್ನಿಗಪ್ಪನವರಿಗೆ ಫೋನ್ ಮಾಡಿ, 'ಭಟ್ಟರು ಮತ್ತು ಸಂಕೇಶ್ವರರ ತಪ್ಪೇನೂ ಇಲ್ಲ. ಅವರನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಬೇಡ. ಅವರ ಮೇಲಿನ ಕೇಸನ್ನು ವಾಪಸ್ ತೆಗೆದುಕೋ' ಎಂದು ಗಟ್ಟಿಯಾಗಿಯೇ ಹೇಳಿದರು.

'ಅಪ್ಪಾಜಿ, ನಿಮ್ಮ ಮಾತನ್ನು ನಾನು ಎಂದೂ ತೆಗೆದು ಹಾಕಿದವನಲ್ಲ. ಆದರೆ ಇದೊಂದು ವಿಷಯದಲ್ಲಿ ನನ್ನನ್ನು ಕ್ಷಮಿಸಿಬಿಡಿ' ಎಂದು ದಾಕ್ಷಿಣ್ಯವಿಲ್ಲದೇ ತಮ್ಮ ಪಕ್ಷದ ನಾಯಕರಿಗೇ ನೇರವಾಗಿ ಚೆನ್ನಿಗಪ್ಪನವರು ಹೇಳಿಬಿಟ್ಟರು. ಪ್ರತಿಸಲ ಕೋರ್ಟಿಗೆ ಹೋಗುವಾಗಲೂ ಸಂಕೇಶ್ವರರು, 'ಚೆನ್ನಿಗಪ್ಪ ಅವರಿಗೆ ಮಾತಾಡಿ ನಮ್ಮಿಬ್ಬರನ್ನು ಕೇಸಿನಿಂದ ಕೈಬಿಡುವಂತೆ ಹೇಳಬೇಕಿತ್ತು' ಎಂದು ನೆನಪಿಸುತ್ತಿದ್ದರು. ಒಂದು ದಿನ ಚೆನ್ನಿಗಪ್ಪನವರು, ನಮ್ಮಿಬ್ಬರಿಗೂ ಆತ್ಮೀಯರಾದ ಸ್ನೇಹಿತರೊಬ್ಬರ ಗೃಹಪ್ರವೇಶ ಕಾರ್ಯಕ್ರಮವೊಂದರಲ್ಲಿ ಸಿಕ್ಕರು.

ನನ್ನನ್ನು ನೋಡುತ್ತಿದ್ದಂತೆ, 'ಸ್ವಾಮಿ, ನಿಮಗೆ ಬಹಳ ನೋಯಿಸಿದ್ದೇನೆ. ನನ್ನನ್ನು ಕ್ಷಮಿಸಿರುವೆ ಎಂದು ಹೇಳುವ ತನಕ ನಿಮ್ಮ ಕೈ ಬಿಡೊಲ್ಲ, ಇದು ನಿಮ್ಮ ಕೈ ಅಲ್ಲ, ಕಾಲು.. ಆದರೆ ಯಾವ ಕಾರಣಕ್ಕೂ ನನಗೆ ಕೇಸ್ ವಾಪಸ್ ತೆಗೆದುಕೊಳ್ಳಿ ಎಂದು ವಿನಂತಿಸಿಕೊಳ್ಳಬೇಡಿ. ನಿಮ್ಮಿಬ್ಬರನ್ನು ಬಿಟ್ಟರೆ ಕೇಸ್ ವೀಕ್ ಆಗುತ್ತದೆ. ಆ ಕೋದಂಡರಾಮಯ್ಯನಿಗೆ ಬುದ್ಧಿ ಕಲಿಸದೇ ಬಿಡೊಲ್ಲ. ಸ್ವಲ್ಪ ಸಹಾಯ ಮಾಡಿ, ಕಿರಿಕಿರಿಯಾಗಿದ್ದರೂ ಅಡ್ಜಸ್ಟ್ ಮಾಡಿಕೊಳ್ಳಿ' ಎಂದುಬಿಟ್ಟರು.

ನಾನು ಹೇಳಬೇಕಿದ್ದ ಮಾತುಗಳೆಲ್ಲ ನನ್ನ ಗಂಟಲಲ್ಲೇ ಉಳಿದುಬಿಟ್ಟಿತು.

ಅದಾದ ಬಳಿಕ ನಾನು ಏನಿಲ್ಲವೆಂದರೂ ಹತ್ತಾರು ಮಂದಿ ಮೂಲಕ ಚೆನ್ನಿಗಪ್ಪನವರ ಮೇಲೆ ಪ್ರಭಾವ ಬೀರುವ ಪ್ರಯತ್ನ ಮಾಡಿದೆ. ಬಡಪಟ್ಟಿಗೆ ಕೊನೆಗೂ ಜಗ್ಗಲೇ ಇಲ್ಲ.

ಒಂದು ದಿನ ಬೆಳಗ್ಗೆ ಬೆಳಗ್ಗೆ ಚೆನ್ನಿಗಪ್ಪ ನಮ್ಮ ಮನೆಯ ಮುಂದೆ ಹಾಜರ್! ಕೈಯಲ್ಲೊಂದು ಶಾಲು, ಆನೆಕಾಲಿನ ಗಾತ್ರದ ಹಾರ ಮತ್ತು ದೊಡ್ಡ ಬುಟ್ಟಿ ತುಂಬಾ ಹಣ್ಣು.

'ಸ್ವಾಮಿ, ನಿಮಗೆ ಬಹಳ ನೋವನ್ನು ಕೊಟ್ಟಿದ್ದೇನೆ. ಕ್ಷಮಿಸಿ ಎಂದು ಹೇಳಿ ಹೋಗಲು ಬಂದೆ. ಇನ್ನು ಮುಂದೆ ಯಾರ ಹತ್ತಿರವೂ ಹೇಳಿಸಬೇಡಿ. ನಾನು ಆ ಭಗವಂತ ಬಂದರೂ ನಿಮ್ಮಿಬ್ಬರ ಹೆಸರುಗಳನ್ನು ಕೈಬಿಡುವುದಿಲ್ಲ. ನೀವಿರುವುದರಿಂದಲೇ ಇಡೀ ಕೇಸಿಗೆ ಪ್ರಾಮುಖ್ಯ ಬಂದಿರುವುದು. ನೀವು ಕೋದಂಡರಾಮಯ್ಯ ಹಾಗೆ ಹೇಳಿದ್ದು ಹೌದು ಎಂದು ಹೇಳುತ್ತೀರಿ. ಕಾರಣ ಹಾಗೆ ಹೇಳಿದ್ದನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದೀರಿ. ಹೀಗಾಗಿಯೇ ನಿಮ್ಮನ್ನು ಪಾರ್ಟಿ ಮಾಡಿರುವುದು. ಇದರಿಂದ ನಿಮಗೆ ತೊಂದರೆಯಾಗುತ್ತದೆ ಎಂಬುದು ಗೊತ್ತು. ಆದರೆ ನಾನು ಅಸಹಾಯಕ' ಎಂದು ಹೇಳಿ ಚೆನ್ನಿಗಪ್ಪ ಹೊರಟುಹೋದರು.

ಅಲ್ಲಿಗೆ ನಾನು ನನ್ನ ಪ್ರಯತ್ನವನ್ನು ಮುಂದುವರಿಸಲಿಲ್ಲ.

ಮೂರು ತಿಂಗಳುಗಳಿಗೊಮ್ಮೆ ನಾವು ಕೋರ್ಟಿನಲ್ಲಿ ಭೇಟಿಯಾಗುತ್ತಿದ್ದೆವು. ಚೆನ್ನಿಗಪ್ಪ ಪ್ರತಿ ಸಲವೂ ಖುದ್ದಾಗಿ ಕೋರ್ಟಿಗೆ ಹಾಜರಾಗುತ್ತಿದ್ದರು. ಕೋದಂಡರಾಮಯ್ಯನವರೇ ಬರುತ್ತಿರಲಿಲ್ಲ. ವಾರಂಟ್ ಆದಾಗ ಒಂದು ದಿನ ಮುಂಚಿತವಾಗಿ ಕೋರ್ಟಿಗೆ ಹಾಜರಾಗಿ ರೀಕಾಲ್ ಮಾಡಿಸಿಕೊಂಡು ಹೋಗುತ್ತಿದ್ದರು. ಅವರಿಗೆ ಚೆನ್ನಿಗಪ್ಪನವರನ್ನು ಕೋರ್ಟಿನಲ್ಲಿ ಮುಖಾಮುಖಿ ಭೇಟಿಯಾಗುವುದು ಇಷ್ಟವಿರಲಿಲ್ಲವೆನಿಸುತ್ತದೆ.

ಈ ಪ್ರಕರಣ ಕೋರ್ಟಿನಲ್ಲಿ ಸುಮಾರು ಹದಿನೇಳು ವರ್ಷಗಳ ತನಕ ನಡೆಯಿತು. ನಾನು, ಸಂಕೇಶ್ವರರು ಮತ್ತು ಚೆನ್ನಿಗಪ್ಪ ತಪ್ಪದೇ ಹಾಜರಾಗುತ್ತಿದ್ದೆವು. ಎದುರಿಗೆ ಸಿಕ್ಕಾಗ ಚೆನ್ನಿಗಪ್ಪನವರು, 'ಸ್ವಾಮಿ, ನಿಮ್ಮನ್ನು ಕೋರ್ಟಿಗೆ ಎಳೆದಿದ್ದಕ್ಕಾಗಿ ಕ್ಷಮಿಸಿಬಿಡಿ, ತಪ್ಪಾಯ್ತು' ಎಂದು ಆರಂಭದಲ್ಲಿ ಮತ್ತು ಕೊನೆಯಲ್ಲಿ ವಿನೀತರಾಗಿ ಹೇಳುವುದನ್ನು ಮರೆಯುತ್ತಿರಲಿಲ್ಲ.

ಕೋರ್ಟಿನಲ್ಲಿ ಅನೇಕ ಸಲ ಭೇಟಿಯಾಗಿಯೇ ನಮ್ಮಲ್ಲಿ ಆತ್ಮೀಯತೆ ಬೆಳೆಯಿತು. ವಿಶೇಷ ಕಾರ್ಯಕ್ರಮವಿದ್ದಾಗ ತಮ್ಮ ಮನೆಗೆ ಆಹ್ವಾನಿಸುತ್ತಿದ್ದರು. ಕೋರ್ಟಿನಲ್ಲಿ ನ್ಯಾಯಾಧೀಶರು ಕರೆಯುವ ತನಕ, ಅವರು ತಮ್ಮ ಕಷ್ಟ-ಸುಖಗಳನ್ನು ಹೇಳಿಕೊಳ್ಳುತ್ತಿದ್ದರು. ಅದಾದ ಬಳಿಕ ಊಟಕ್ಕೆ ಕರೆಯುತ್ತಿದ್ದರು.

ಈ ನಡುವೆ ನಾನು 'ವಿಕ' ಬಿಟ್ಟು 'ಕನ್ನಡಪ್ರಭ' ಸೇರಿದ್ದೆ. ಸಂಕೇಶ್ವರರು ಪತ್ರಿಕೆಯನ್ನು ಮಾರಾಟ ಮಾಡಿ, ಐದು ವರ್ಷ ಕಾಲಾವಕಾಶದ ಬಳಿಕ, 'ವಿಜಯವಾಣಿ' ಆರಂಭಿಸಿದ್ದರು. ಒಂದೆರಡು ಸಲ, ನಾವು ಕೋರ್ಟಿಗೆ ಹಾಜರಾದರೂ ಚೆನ್ನಿಗಪ್ಪನವರು ಕಾಣಿಸಲಿಲ್ಲ. ನಾವು ತಪ್ಪಿಸಿದರೂ ಚೆನ್ನಿಗಪ್ಪನವರು ಕೋರ್ಟಿಗೆ ಹಾಜರಾಗುವುದನ್ನು ತಪ್ಪಿಸುತ್ತಿರಲಿಲ್ಲ. ನಾನು ಅವರ ವಕೀಲರನ್ನು ಕೇಳಿದಾಗ, 'ಚೆನ್ನಿಗಪ್ಪನವರು ಚಿಕಿತ್ಸೆಗೆಂದು ಸಿಂಗಾಪುರಕ್ಕೆ ಹೋಗಿದ್ದಾರೆ' ಎಂದು ತಿಳಿಸಿದರು. ಅಲ್ಲಿ ಚಿಕಿತ್ಸೆ ಮಾಡಿಸಿದರೂ ಅವರ ಕಾಯಿಲೆ ವಾಸಿಯಾಗಲಿಲ್ಲ.

2020ರ ಫೆಬ್ರವರಿಯಲ್ಲಿ ಬಹುಅಂಗಾಂಗ ವೈಫಲ್ಯಗಳಿಂದ ಅವರು ನಿಧನರಾದರು. ಅಂದು ನಾನು ಶಿರಸಿಗೆ ಹೋಗಲೆಂದು ತುಮಕೂರು ಹತ್ತಿರವಿದ್ದೆ. ವಿಷಯ ತಿಳಿಯುತ್ತಿದ್ದಂತೆ, ಕಾರನ್ನು ವಾಪಸ್ ತಿರುಗಿಸಿ, ಚೆನ್ನಿಗಪ್ಪನವರ ಮನೆಗೆ ಹೋಗಿ, ಪಾರ್ಥಿವ ಶರೀರದ ಮೇಲೆ ಗಂಧದ ಹಾರವಿಟ್ಟು ಅಂತಿಮ ದರ್ಶನ ಪಡೆದು ಬಂದೆ. ಅಲ್ಲಿಗೆ ಕೇಸು ಖತಂ ಆಯಿತು. ಖರೆ ಅಂದ್ರೆ, ಚೆನ್ನಿಗಪ್ಪನವರ ನಿಧನದಿಂದ ಕೋದಂಡರಾಮಯ್ಯನವರು 'ಮರುಜೀವ' ಪಡೆದುಕೊಂಡರು.

ಇಂದು ರಾಯಚೂರು ಜಿಲ್ಲೆಯ ಮಾನ್ವಿ ಕೋರ್ಟಿಗೆ ಹೋಗಿ, ನನ್ನದಲ್ಲದ ತಪ್ಪಿಗೆ, ನ್ಯಾಯಾಧೀಶರ ಮುಂದೆ ಕೈಕಟ್ಟಿ ನಿಂತುಕೊಂಡಾಗ, ಯಾಕೋ ಚೆನ್ನಿಗಪ್ಪನವರು ನೆನಪಾದರು.

• • •

ಫೀಸಂಟ್ ಐಲ್ಯಾಂಡ್ ನ್ಯಾಯ ಅಂದ್ರೆ

ನೀವು ಫೀಸಂಟ್ ಐಲ್ಯಾಂಡ್ ಹೆಸರನ್ನು ಕೇಳಿದ್ದೀರೋ, ಇಲ್ಲವೋ ಗೊತ್ತಿಲ್ಲ. ಬಿಡಸೋಯಾ ನದಿಯ ದಂಡೆಯ ಮೇಲಿರುವ ಈ ದ್ವೀಪ ಫ್ರಾನ್ಸ್ ಮತ್ತು ಸ್ಪೇನ್ ದೇಶಕ್ಕೆ ಅಂಟಿಕೊಂಡಿದೆ. ಸೋಜಿಗದ ಸಂಗತಿ ಅಂದ್ರೆ, ಇದು ಪ್ರತಿ ಆರು ತಿಂಗಳುಗಳಿಗೊಮ್ಮೆ ತನ್ನ ದೇಶವನ್ನು ಬದಲಿಸುತ್ತದೆ.

ಫೆಬ್ರುವರಿ ಒಂದರಿಂದ ಜುಲೈ ಮೂವತ್ತೊಂದರ ತನಕ ಸ್ಪ್ಯಾನಿಷ್ ಆಡಳಿತಕ್ಕೆ ಸೇರಿದರೆ, ಮುಂದಿನ ಆರು ತಿಂಗಳು ಫ್ರೆಂಚ್ ಆಡಳಿತಕ್ಕೆ ಒಳಪಡುತ್ತದೆ. ತಲಾ ಆರು ತಿಂಗಳುಗಳಿಗೊಮ್ಮೆ ಆ ಎರಡು ದೇಶಗಳು ಈ ದ್ವೀಪದ ಮೇಲೆ ಕಬ್ಜ ಸಾಧಿಸುವುದರಿಂದ ಗಡಿ ವಿವಾದ ಇಲ್ಲದಂತಾಗಿದೆ. ಈ ದ್ವೀಪದ ವಾರಸುದಾರರು ಎಂಬ ಬಗ್ಗೆ ತಕರಾರು ಇಲ್ಲದಂತಾಗಿದೆ.

ಈ ದ್ವೀಪಕ್ಕೆ ಭೇಟಿ ನೀಡುವುದು ಸುಲಭ ಅಲ್ಲ. ಸ್ಪೇನಿನ ಇರುನ್ ಎಂಬ ಊರಿನ ಮೂಲಕ ಅಥವಾ ಫ್ರಾನ್ಸಿನ ಹಂಡೆಯೇ ಎಂಬ ಊರಿನ ಮೂಲಕ ಫೀಸಂಟ್ ಐಲ್ಯಾಂಡ್‌ಗೆ ಹೋಗಬಹುದು.

ವಿಶ್ವಸಂಸ್ಥೆ ಆಗಾಗ 'ಫೀಸಂಟ್ ಐಲ್ಯಾಂಡ್ ನ್ಯಾಯ' ಎಂಬ ಮಾತನ್ನು ಹೇಳುತ್ತಿರುತ್ತದೆ. ಎರಡು ದೇಶಗಳು ಒಂದು ಭೂಭಾಗವನ್ನು ವಶಪಡಿಸಿಕೊಂಡು ತನ್ನ ಪ್ರಭುತ್ವ ಸಾಧಿಸಿದರೆ ಅಥವಾ ಯಾವುದಾದರೂ ಒಂದು ಪ್ರದೇಶವನ್ನು ಆಕ್ರಮಿಸಿಕೊಂಡು ಪರಸ್ಪರ ಕಿತ್ತಾಡಿದರೆ, ವಿಶ್ವಸಂಸ್ಥೆ ಮಧ್ಯಪ್ರವೇಶಿಸಿ, ನಿಮಗೆ 'ಫೀಸಂಟ್ ಐಲ್ಯಾಂಡ್ ನ್ಯಾಯ' ಕೊಡಿಸುತ್ತೇವೆ ಎಂದು ಭರವಸೆ ನೀಡುತ್ತದೆ.

ಫೀಸಂಟ್ ಐಲ್ಯಾಂಡ್ ನ್ಯಾಯ ಅಂದ್ರೆ, ಆರು ತಿಂಗಳು ಒಂದು ದೇಶ ಆ ಪ್ರದೇಶವನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡು, ಮುಂದಿನ ಆರು ತಿಂಗಳು ಮತ್ತೊಂದು ದೇಶಕ್ಕೆ ಬಿಟ್ಟುಕೊಡುವುದು. ಈ ದಿನಗಳಲ್ಲಿ ಯಾವ ದೇಶವೂ ತನ್ನ ಹಿಡಿತವನ್ನು ಮತ್ತೊಂದು ದೇಶಕ್ಕೆ ಬಿಟ್ಟುಕೊಡುವುದಿಲ್ಲ.

ಆದರೆ ಫೀಸಂಟ್ ಐಲ್ಯಾಂಡ್ ವಿಷಯದಲ್ಲಿ 1659ರಲ್ಲಿಯೇ ಸ್ಪೇನ್ ಮತ್ತು ಫ್ರಾನ್ಸ್ ಒಪ್ಪಂದಕ್ಕೆ ಬಂದು ಫೀಸಂಟ್ ಐಲ್ಯಾಂಡ್ ಮೇಲಿನ ನಿಯಂತ್ರಣವನ್ನು ಪರಸ್ಪರ ಆರು ತಿಂಗಳುಗಳ ಕಾಲ ಹಂಚಿಕೊಂಡವು. ಅಂದಿನಿಂದ ಆರಂಭವಾದ ಒಪ್ಪಂದ ಅಬಾಧಿತವಾಗಿ ಮುಂದುವರಿದುಕೊಂಡು ಬರುತ್ತಿದೆ. ಆರು ತಿಂಗಳು ಮುಗಿಯಲು ಹತ್ತು ದಿನಗಳು ಇರುವಂತೆ ಮತ್ತೊಂದು ದೇಶಕ್ಕೆ ಆಡಳಿತವನ್ನು ಹಸ್ತಾಂತರಿಸುತ್ತದೆ.

ಫೀಸಂಟ್ ಐಲ್ಯಾಂಡ್ ಬಹಳ ಸುಂದರವಾದ ದ್ವೀಪ. ಆದರೆ ಅಲ್ಲಿ ಜನವಸತಿ ಇಲ್ಲ. ಅಷ್ಟಕ್ಕೂ ಆ ದ್ವೀಪ 660 ಅಡಿ ಉದ್ದ ಮತ್ತು 130 ಅಡಿ ಅಗಲವಿದೆ. ಇರುನ್ ಮತ್ತು ಹಂಡಯೇ ಮೇಯರ್ ಅವರು ಆ ದ್ವೀಪದ ಆಡಳಿತವನ್ನು ನೋಡಿಕೊಳ್ಳುತ್ತಾರೆ. ಆ ಎರಡೂ ನಗರಗಳ ಮೇಯರ್‌ಗಳು ಆ ದ್ವೀಪವನ್ನು ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆ.

ಪೈಪೋಟಿಗೆ ಬಿದ್ದವರಂತೆ ಉಭಯ ದೇಶಗಳು ದ್ವೀಪದ ಸೌಂದರ್ಯವನ್ನು ಹೆಚ್ಚಿಸಲು ಬೇಕಾದ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿವೆ. ಅವರು ಮಾಡಲಿ ಎಂದು ಇವರು, ಇವರು ಮಾಡಲಿ ಎಂದು ಅವರು ಎಂಬ ಧೋರಣೆಯನ್ನು ಉಭಯ ದೇಶಗಳು ಅನುಸರಿಸುವುದಿಲ್ಲ. ಆ ಎರಡೂ ದೇಶಗಳು ಫೀಸಂಟ್ ಐಲ್ಯಾಂಡನ್ನು ಸುಂದರವಾಗಿ ಇಟ್ಟುಕೊಳ್ಳುವ ಮೂಲಕ ಜಗತ್ತಿಗೆ ಮಾದರಿಯಾಗಿವೆ.

• • •

Shit ಪದದ ಕುರಿತು

ಇಂಗ್ಲಿಷಿನಲ್ಲಿ ಮಾತು ಮಾತಿಗೆ shit ಅಥವಾ Sh*t ಎಂಬ ಪದ ಪ್ರಯೋಗವನ್ನು ಕೇಳಿರಬಹುದು. Shit ಅಂದ್ರೆ, ಮಲ ಅಥವಾ ಅಮೇಧ್ಯ ಎಂದರ್ಥ. ಆದರೆ ಕ್ಷುಲ್ಲಕ ತಪ್ಪುಗಳನ್ನು ಮಾಡಿದಾಗಲೆಲ್ಲ shit ಎಂದು ಹೇಳುವುದು ಅನೇಕರಿಗೆ ರೂಢಿಯಾಗಿದೆ. ಅಲ್ಲದೆ ಆ ಪದಪ್ರಯೋಗ ತೀರಾ ಸಹಜ ಕೂಡ ಆಗಿದೆ. ಇಂಗ್ಲಿಷಿನ Fuck ಪದದಂತೆ ಸಂದರ್ಭಕ್ಕೆ ತಕ್ಕ ಹಾಗೆ Shit ಪದದ ಅರ್ಥವೂ ಬದಲಾಗುವುದನ್ನು ಕಾಣಬಹುದು.

ಊಟಕ್ಕೆ ಕುಳಿತಾಗ ಗಂಡ, 'ಇಂದು ನೀನು ಅಡುಗೆಗೆ ಜಾಸ್ತಿ ಉಪ್ಪು ಹಾಕಿದ್ದೀಯಾ' ಎಂದು ಹೇಳಿದರೆ, ಹೆಂಡತಿ shit ಅಂತ ಮುಖ ಕಿವುಚಿಕೊಳ್ಳುತ್ತಾಳೆ. ಊಟಕ್ಕೆ ಕುಳಿತಾಗ ಹಾಗೆ ಹೇಳಿದರೂ ತಪ್ಪು ಭಾವಿಸುವುದಿಲ್ಲ. ಅವೆಲ್ಲವನ್ನು ಸಹಿಸಿಕೊಳ್ಳುವ ಶಕ್ತಿ ಆ ಪದಕ್ಕಿದೆ.

ಏನೋ ಮಾಡಲು ಹೋಗಿ ಇನ್ನೇನೋ ಆದರೆ, ಕ್ಷುಲ್ಲಕ ಪ್ರಮಾದಗಳನ್ನು ಮಾಡಿದರೆ, ಶಿಟ್ ಪದ ಉಪಯೋಗಕ್ಕೆ ಬರುತ್ತದೆ. ಆ ಉದ್ಗಾರಕ್ಕೂ, ಆ ಸಂದರ್ಭಕ್ಕೂ ಅರ್ಥವಿರುವುದಿಲ್ಲ. ಅವನು ಬೇರೆಯವರಿಗೆ ಸೊಪ್ಪು ಹಾಕುವುದಿಲ್ಲ ಎಂದು ಹೇಳುವಾಗ, He doesn't take shit from anyone.

ಇನ್ನು ಕೆಲವು ಸಲ ಬುದ್ಧಿ, ಉಪದೇಶ ಅರ್ಥದಲ್ಲಿಯೂ shit ಪದವನ್ನು ಬಳಸುವುದುಂಟು. ಉದಾಹರಣೆಗೆ, Do what I say, and don't give me any shit. ಕಮ್ಮಿ ಗುಣಮಟ್ಟದ ವಸ್ತುವಿನ ಬಗ್ಗೆ ಹೇಳುವಾಗ, ಅನುಪಯುಕ್ತ ವಸ್ತುವಿನ ಕುರಿತು ಹೇಳುವಾಗ, shit ಅನ್ನುವುದುಂಟು. ಉದಾ, We need to get rid of all that shit in the basement. ಹೆಂಡತಿ ಗಂಡನನ್ನು ತೀರಾ ತಾತ್ಸಾರದಿಂದ ಕಂಡಾಗ She treats him like shit ಎಂದು ಹೇಳುವುದುಂಟು. ಕೆಲಸಕ್ಕೆ ಬಾರದ ವಸ್ತುವನ್ನು ಬಣ್ಣಿಸುವಾಗಲೂ ಆ ಪದ ಬಳಸುವುದುಂಟು- My car is a real piece of shit.

ಯಾವುದರಿಂದಲೂ ಭಾನಗಡಿಯಾದರೆ, ಆತಂಕಕಾರಿ, ಗೊಂದಲಮಯ ಸನ್ನಿವೇಶ ಉದ್ಭವಿಸಿದಾಗಲೂ 'ಶಿಟ್' ಪ್ರಯೋಗ ಬಳಕೆಯಾಗುವುದುಂಟು. Shit hits the fan, Shit hits the roof, when the shit hits the fan ಎಂದು ಹೇಳುವುದನ್ನು ಕೇಳಿರಬಹುದು.

ನಾನು ಯಾರಿಗೂ ಕೇರ್ ಮಾಡುವುದಿಲ್ಲ, ಜಾಸ್ತಿ ಕಿಮ್ಮತ್ತು, ಪ್ರಾಮುಖ್ಯ ಕೊಡುವುದಿಲ್ಲ ಎನ್ನುವಾಗಲೂ 'ಶಿಟ್' ಪದವನ್ನು ಬಳಸುವುದನ್ನು ಕೇಳಿದ್ದೇನೆ. ಉದಾ: I don't give a shit what they think of me.

ಸಕಾರಾತ್ಮಕವಾಗಿಯೂ ಈ ಪದವನ್ನು ಬಳಸುವುದುಂಟು. ಉದಾ: I think she is the shit. I want to keep my name largely because it's hers.

ಮಹತ್ವದ ಸಂಗತಿಯನ್ನು ನಕಾರಾತ್ಮಕವಾಗಿ ಹೇಳುವಾಗಲೂ ಈ ಪದವನ್ನು ಹೀಗೆ ಬಳಸುವುದನ್ನು ನೋಡಿದ್ದೇನೆ- People would say we learned our lesson after World War II. Turns out we didn't learn shit.

ಮಗಳ ಡ್ರೆಸ್ ಬಗ್ಗೆ ತಂದೆ ಅಸಮಾಧಾನ ವ್ಯಕ್ತಪಡಿಸಿ, ಬೈಯುವಾಗಲೂ ಈ ಪದ ಬೇಕು- She gets a lot of shit from his parents about the way she dresses. ಭಯದ ಸಂದರ್ಭವನ್ನು ವಿವರಿಸುವಾಗಲೂ 'ಶಿಟ್' ಬಳಕೆಯಾಗುವುದುಂಟು- She was shitting herself, especially when he pulled out a gun.

ಈ ಪದ ವಿವಿಧ ರೂಪಗಳಲ್ಲಿ ವ್ಯಕ್ತವಾಗುವುದುಂಟು. ಉದಾಹರಣೆಗೆ, Shit hot, Hot shit, Holy shit, Shit-faced, Shit stirrer, Shit-hole...

ಇನ್ನು, Shit ಮತ್ತು Oohh Shit ಎಂಬ ಪದಗಳೂ ಚಾಲ್ತಿಯಲ್ಲಿವೆ. ಈ ಪ್ರಸಂಗವನ್ನು ಕಲ್ಪಿಸಿಕೊಳ್ಳಿ.. ಹುಡುಗ ಪ್ರೇಮಪತ್ರವನ್ನು ಬರೆದು ಪಕ್ಕದಮನೆಗೆ ಎಸೆಯುತ್ತಾನೆ. ಅದು ಹುಡುಗಿಗೆ ಸಿಗುವ ಬದಲು, ಅವಳ ಅಣ್ಣನಿಗೆ ಸಿಗುತ್ತದೆ. ಅದು Shit. ಒಂದು ವೇಳೆ ಆತ ಸಲಿಂಗಕಾಮಿಯಾಗಿದ್ದರೆ ಅದು Oohh Shit.

ಅಂಕುರ್ ವಾರಿಕೂ ತಮ್ಮ ಜನಪ್ರಿಯ ಪುಸ್ತಕಕ್ಕೆ Do Epic Shit ಎಂಬ ಹೆಸರನ್ನೇ ಇಟ್ಟಿದ್ದಾರೆ. ಅವರ ಅತ್ಯಂತ ಪ್ರಸಿದ್ಧ ವಾಕ್ಯ ಅಂದ್ರೆ- Stay awesome, Stay focussed, Do Epic Shit.

ಕೆಲ ದಿನಗಳ ಹಿಂದೆ, ನಾನು ಬೆಂಗಳೂರಿನ ಖ್ಯಾತ ಆರ್ಥಿಕ ಸಲಹೆಗಾರರ ಆಫೀಸಿಗೆ ಹೋಗಿದ್ದೆ. ಅವರ ಕೋಣೆಯಲ್ಲಿ ಒಂದು ಫೋಟೋ ಇತ್ತು. ಅದರಲ್ಲಿ ಹೀಗೆ ಬರೆದಿತ್ತು- Do no harma. But take no shit.

ವಿಜ್ಞಾನ ಕಾನನದಲ್ಲಿ ಸಫಾರಿಗೆಂದು ಹತ್ತೇವು ವಿಜ್ಞಾನದ ಜೀಪ!

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ಅಜ್ಞಾನ ಅಥವಾ ಅರೆಬರೆ ಜ್ಞಾನಕ್ಕೇ ಈಗಿನ ದಿನಗಳಲ್ಲಿ ಹೆಚ್ಚು ಮನ್ನಣೆ, ಹೆಚ್ಚು ಪ್ರಚಾರ, ಹೆಚ್ಚು ವೇದಿಕೆಗಳು, ಹೆಚ್ಚು ಅವಕಾಶಗಳು. ಯಾವುದನ್ನೇ ಆದರೂ ಶಾಸ್ತ್ರೀಯವಾಗಿ ಮತ್ತು ಸಮಗ್ರವಾಗಿ ತಿಳಿದುಕೊಳ್ಳುವ ಆಸಕ್ತಿ, ಶ್ರದ್ಧೆ, ತಾಳ್ಮೆ ಒಂದೂ ನಮಗಿಲ್ಲ. ಹಾಗಾಗಿಯೇ ವಿಜ್ಞಾನ ಎಂದೊಡನೆ ನಮ್ಮ ಎದೆ ಕುಣಿದಾಡುವುದಿಲ್ಲ, ಕಿವಿ ನಿಮಿರುವುದಿಲ್ಲ, ತೆಕ್ಕನೆ ಮನ-ಮೈ ಮರೆಯುವುದೂ ಇಲ್ಲ. ಇದು ಒಂದು ಆಯಾಮವಾದರೆ ಇನ್ನೊಂದೆಡೆ- ವಿಜ್ಞಾನದ ಬಗ್ಗೆ ತಿಳಿಯಬೇಕೆಂಬ ಕುತೂಹಲವುಳ್ಳವರಿಗೆ, ಜ್ಞಾನಪಿಪಾಸುಗಳಿಗೆ ಅಂಥ ಜ್ಞಾನವು ಸುಲಭವಾಗಿ ವಿಪುಲವಾಗಿ ಸಿಗುವುದೂ ಇಲ್ಲ. ಕನ್ನಡದ ಸಂದರ್ಭವನ್ನೇ ತೆಗೆದುಕೊಂಡರೆ ವಿಜ್ಞಾನ ಬರಹಗಾರರ ಪರಂಪರೆ ಇಲ್ಲಿ ಸಮೃದ್ಧವಾಗಿದೆ ಎನ್ನಲಾರೆವು. ನೆನಪಿಸಿಕೊಂಡರೆ ಬೆರಳೆಣಿಕೆಯಷ್ಟೇ ಹೆಸರುಗಳು ಹೊಳೆದಾವು- ಅಡ್ಯನಡ್ಕ ಕೃಷ್ಣ ಭಟ್, ಜಿ.ಟಿ.ನಾರಾಯಣ ರಾವ್, ಜೆ.ಆರ್.ಲಕ್ಷ್ಮಣ ರಾವ್, ಹಾಲ್ದೊಡ್ಡೇರಿ ಸುಧೀಂದ್ರ ಮುಂತಾಗಿ ಆಗಿಹೋದ, ಮತ್ತು ನಾಗೇಶ ಹೆಗಡೆ, ಕೊಳ್ಳೇಗಾಲ ಶರ್ಮ, ರೋಹಿತ್ ಚಕ್ರತೀರ್ಥ, ಟಿ.ಜಿ.ಶ್ರೀನಿಧಿ ಮುಂತಾಗಿ ಈಗಲೂ ಬರೆಯುತ್ತಿರುವ ಕೆಲವೇಕೆಲವು ಲೇಖಕರವು; 'ಬಾಲವಿಜ್ಞಾನ'ದಂಥ ಒಂದೆರಡು ಹಳೇ ವಿಜ್ಞಾನ ಪತ್ರಿಕೆಗಳದು; ಪೂರ್ಣಚಂದ್ರ ತೇಜಸ್ವಿ, ಬಿ.ಜಿ.ಎಲ್ ಸ್ವಾಮಿ, ಪ.ರಾಮಕೃಷ್ಣಶಾಸ್ತ್ರಿ, ಪಾವೆಂ ಆಚಾರ್ಯ ಮುಂತಾಗಿ ಸಾಹಿತಿಗಳಾಗಿಯೂ ವಿಜ್ಞಾನ ವಿಷಯಗಳನ್ನು ಬೋಧಪ್ರದವಾಗಿ ಮತ್ತು ರಂಜನೀಯವಾಗಿ ಬರೆದವರದು; ಆಕಾಶವಾಣಿ ಮತ್ತು ದೂರದರ್ಶನಗಳಲ್ಲಿ ಸೀಮಿತ ಪ್ರಮಾಣದಲ್ಲಾದರೂ ವಿಜ್ಞಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟವರದು; ಹಾಗೆಯೇ 'ತರಂಗ'ದಲ್ಲಿ 'ಬಾಲವನದಲ್ಲಿ ಕಾರಂತಜ್ಜ' ಅಂಕಣದಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಕ್ಕಳ ಪ್ರಶ್ನೆಗಳಿಗೆ ಕಾರಂತರು ಉತ್ತರಿಸುತ್ತಿದ್ದುದು; 'ಸುಧಾ'ದಲ್ಲಿ 'ಚೌ ಚೌ ಚೌಕಿ' ಅಂಕಣ (ನಿರ್ವಹಣೆ: ಟಿ. ಆರ್. ಅನಂತರಾಮು ಮತ್ತು ಶರಣಬಸವೇಶ್ವರ ಅಂಗಡಿ) ವಿಜ್ಞಾನವನ್ನು ಕುರಿತ ಪ್ರಶ್ನೋತ್ತರಕ್ಕೆ ವೇದಿಕೆಯಾಗಿದ್ದದ್ದು ಇತ್ಯಾದಿ. ಹುಲುಸಾದ ಬೆಳೆ ಎನ್ನುವಷ್ಟಂತೂ ಖಂಡಿತ ಅಲ್ಲ.

ವಿಜ್ಞಾನಸಾಹಿತ್ಯ ಅಪೇಕ್ಷಿತ ಮಟ್ಟದಲ್ಲಿ ಬೆಳೆಯದಿರುವುದಕ್ಕೆ ಕಾರಣಗಳು ಹಲವಾರು ಇರಬಹುದು. ಓದುಗರಿಗೇ ಖಾಯಿಶಿ ಇಲ್ಲವಾದರೆ ಬರೆಯುವವರಿಗಾದರೂ ಉತ್ಸಾಹ ಎಲ್ಲಿಂದ ಬರಬೇಕು? ಪ್ರಕಾಶಕರೇಕೆ ಪ್ರಕಟಣೆಯ ಸಾಹಸ ಮಾಡಬೇಕು? ಫಿಲಂ, ಫುಡ್, ಫ್ಯಾಷನ್- ಈ ಮೂರು 'ಎಫ್'ಗಳಿಗೇ ಓದುಗರನ್ನು ಸೆಳೆಯುವ ಗುಣ ಹೆಚ್ಚು ಎಂದು ಪತ್ರಿಕೆಗಳಿಗೂ ಗೊತ್ತು. ಈಗಂತೂ ದಿನಪತ್ರಿಕೆಗಳು ಗಾಂಭೀರ್ಯ ಕಳೆದುಕೊಂಡು ಟ್ಯಾಬ್ಲಾಯ್ಡ್‌ಗಳಂತಾಗಿವೆ. ವಿಜ್ಞಾನಕ್ಕೆ ಮಣೆ ಹಾಕಲು ಅವು ಹಿಂಜರಿಯುತ್ತವೆ. ವಿಜ್ಞಾನವೆಂದರೆ ಒಂಥರದ ಹೆದರಿಕೆ-ಹೇವರಿಕೆಗಳ ಭಾವನೆ ಕೆಲವರಲ್ಲಿರುವುದೂ ಒಂದು ಕಾರಣವೇ. ಸೂತ್ರಗಳು, ಸಮೀಕರಣಗಳು, ಸಂಕೇತಗಳು, ಅಂಕಿಸಂಖ್ಯೆಗಳೇ ತುಂಬಿದ ವಿಜ್ಞಾನ ಲೇಖನ ಓದುಗರನ್ನು ಕಂಗೆಡಿಸಬಹುದು. ಗಣಿತದ ಗುಮ್ಮನಂತೆ ಅವ್ಯಕ್ತ ಹೆದರಿಕೆ ಹುಟ್ಟಿಸಬಹುದು. ಇಲ್ಲಿ ನನ್ನದೇ ಅನುಭವವನ್ನೂ ಹೇಳಬಲ್ಲೆ. ಕಳೆದ ಹತ್ತಾರು ವರ್ಷಗಳಿಂದ ಅಂಕಣ ಬರೆಯುತ್ತಿರುವ ನಾನು ಯಾವುದಾದರೂ ವಾರದಲ್ಲಿ ವಿಜ್ಞಾನದ ವಿಷಯವನ್ನೆತ್ತಿಕೊಂಡರೆ ಆ ವಾರ ಓದುಗರ ಪ್ರತಿಕ್ರಿಯೆ ನೀರಸವಾಗಿರುತ್ತದೆ. ಎಷ್ಟೇ ಸರಳವಾಗಿ, ಸರಸಮಯವಾಗಿ ಬರೆದರೂ 'ಇದು ನಮ್ಮ ತಲೆಮೇಲಿಂದ ಹಾರಿಹೋಯಿತು' ಎನ್ನುವವರೇ ಹೆಚ್ಚು. 'ವಿಜ್ಞಾನ ಲೇಖನಗಳನ್ನು ನೀವೇನಾದರೂ ಬರೆದಿರೋ, ಇನ್ನುಮುಂದೆ ನಿಮ್ಮ ಅಂಕಣ ಓದುವುದನ್ನೇ ನಿಲ್ಲಿಸುತ್ತೇನೆ' ಎಂದು ಸಾತ್ತ್ವಿಕ ಧಮ್ಕಿ ಹಾಕುವವರೂ ಇದ್ದಾರೆ. ಅದು ತಮಾಷೆಗಾಗಿಯೇ ಹೌದಾದರೂ ಒಬ್ಬರದೇ ಧ್ವನಿಯಲ್ಲ ಎಂದು ಕೂಡ ನನಗೆ ಗೊತ್ತು. ಹಾಗಂತ, ವಿಜ್ಞಾನವಿಷಯಗಳ ಉಸಾಬರಿಗೇ ಹೋಗಲಾರೆ ಎಂದು ನಾನೇನೂ ಶಪಥ ಮಾಡಿಲ್ಲ. ಆದರೆ ಈ ಬಗ್ಗೆ ಓದುಗರ ನಾಡಿಮಿಡಿತ ನನಗೆ ಅಷ್ಟಿಷ್ಟಾದರೂ ಅರ್ಥವಾಗಿದೆ ಎಂದಷ್ಟೇ ಹೇಳುತ್ತೇನೆ.

ಈ ಹಿನ್ನೆಲೆಯಿಂದ ಅಥವಾ ದೃಷ್ಟಿಕೋನದಿಂದ ನೋಡಿದರೆ, ಶರತ್ ಭಟ್ ಸೇರಾಜೆ ಅವರ ಹೊಸ ಪುಸ್ತಕ 'ಹತ್ತೇವು ವಿಜ್ಞಾನದ ಜೀಪ' ಒಂದು ಭರವಸೆಯ ಆಶಾಕಿರಣ. ಶರತ್ ಭಟ್ ನನ್ನಂತೆಯೇ ವೃತ್ತಿಗೋಸ್ಕರ ಮಾಹಿತಿ ತಂತ್ರಜ್ಞಾನ ಕ್ಷೇತ್ರವನ್ನು ಆರಿಸಿಕೊಂಡಿರುವವರು; ಪ್ರವೃತ್ತಿಯೆಂದು ಕನ್ನಡ ಅಕ್ಷರಕೃಷಿಯನ್ನು ಪ್ರೀತಿಯಿಂದ ಆಲಂಗಿಸಿಕೊಂಡಿರುವವರು. ಆಲೋಚನಾ ವಿಧಾನ, ತರ್ಕಸರಣಿಗಳು, ಅಕ್ಷರಗಳೊಂದಿಗಿನ ಆಟದ ವಿಷಯದಲ್ಲೂ ಅವರ ಮತ್ತು ನನ್ನ ಫ್ರೀಕ್ವೆನ್ಸಿ ಮ್ಯಾಚ್ ಆಗುತ್ತದೆ- ಎಂದು ಈ ಪುಸ್ತಕದಿಂದಷ್ಟೇ ಅಲ್ಲ, ಫೇಸ್‌ಬುಕ್‌ನಲ್ಲಿನ ಅವರ ಟಿಪ್ಪಣಿಗಳಿಂದ, ಬಿಡಿಬರಹಗಳಿಂದಲೂ ನಾನು ಅಂದಾಜಿಸಿದ್ದೇನೆ. ಅದಕ್ಕಿಂತ ಹೆಚ್ಚಾಗಿ, ಐದಾರು ವರ್ಷಗಳ ಹಿಂದೆ ಅಂಕಿತ ಪ್ರತಿಭಾ ಮಾಲಿಕೆಯಲ್ಲಿ ಪ್ರಕಟವಾದ ಅವರ ಚೊಚ್ಚಲ ಕೃತಿ 'ಬಾಗಿಲು ತೆರೆಯೇ ಸೇಸಮ್ಮ' ಎಂಬ ತುಸು ವಿಚಿತ್ರ, ವಿಶಿಷ್ಟ ಶೀರ್ಷಿಕೆಯ ಪುಸ್ತಕದಲ್ಲಿರುವ ವೈಚಾರಿಕ ಲಲಿತ ಪ್ರಬಂಧಗಳನ್ನು ಓದಿ ಆನಂದಿಸಿದ್ದೇನೆ. ಅದಕ್ಕೆ ಓದುಗರಿಂದ ಒಳ್ಳೆಯ ಸ್ಪಂದನ ಸಿಕ್ಕಿರುವುದನ್ನು ಕಂಡು ಖುಷಿಪಟ್ಟಿದ್ದೇನೆ. ವೈಚಾರಿಕ, ವೈನೋದಿಕ ಶೈಲಿಯನ್ನು ಕರಗತ ಮಾಡಿಕೊಂಡಿರುವ ಶರತ್ ಭಟ್ ಇದೀಗ ವೈಜ್ಞಾನಿಕ ಹೂರಣವನ್ನೇ ಎತ್ತಿಕೊಂಡಿರುವುದಕ್ಕೆ ಅವರ ಬಗೆಗೆ ಅಭಿಮಾನವನ್ನು ಹೆಚ್ಚಿಸಿಕೊಂಡಿದ್ದೇನೆ.

ನಾನಿಲ್ಲಿ ವೈಜ್ಞಾನಿಕ ಎಂಬ ಪದ ಬಳಸಿದ್ದು ವಿಜ್ಞಾನಕ್ಕೆ ಸಂಬಂಧಿಸಿದ ಎಂಬ ಅರ್ಥದಲ್ಲಿ. ಆದರೆ ಹಾಗೆ ಮಾಡುವಾಗ ಪ್ರಜ್ಞಾಪೂರ್ವಕ ಎಚ್ಚರವನ್ನೂ ವಹಿಸಿದ್ದೇನೆ! ಏಕೆಂದರೆ ಶರತ್ ಭಟ್ ಈ ಪುಸ್ತಕದ ಮೊದಲ ಅಧ್ಯಾಯದಲ್ಲಿ ಪೀಠಿಕೆಯೆಂಬಂತೆ ಬೆಟ್ಟು ಮಾಡಿ ತೋರಿಸಿರುವುದು ಅಥವಾ ತಕರಾರು ಎತ್ತಿರುವುದು ಎರಡು ಮುಖ್ಯವಾದ ಪದಗಳ ಅತಿಶಯ ಬಳಕೆಯ ಬಗೆಗೆ: ಒಂದು 'ವಿಜ್ಞಾನ', ಮತ್ತೊಂದು 'ವೈಜ್ಞಾನಿಕ'. ವಿಶೇಷವಾಗಿ ಇಂಗ್ಲಿಷ್‌ನಲ್ಲಿ The Science of Shopping, The Science of Popularity, The Science of Getting Rich ಅಂತೆಲ್ಲ ಪುಸ್ತಕಗಳ ಶೀರ್ಷಿಕೆಯಲ್ಲಿ Science ಪದ ಯಾವ ಕರ್ಮಕ್ಕೆ ಎಂದು ಅವರ ಪ್ರಶ್ನೆ. ಯಾರು ಬೇಕಾದರೂ ಯಾವುದನ್ನು ಬೇಕಾದರೂ ವಿಜ್ಞಾನ ಎನ್ನಬಹುದೇ? ಇನ್ನು ಸೈನ್ಸ್ ಆಫ್ ಕತ್ತೆ ಕಾಯುವುದು, ಸೈನ್ಸ್ ಆಫ್ ಟ್ರೋಲ್ ಮಾಡುವುದು ಎಂಬಂಥವು ಮಾತ್ರ ಬಾಕಿ ಉಳಿದಿರುವಂತಿವೆ ಎಂದು ಅವರು ಲೇವಡಿ ಮಾಡುತ್ತಾರೆ. ಕೂತದ್ದಕ್ಕೆ, ನಿಂತದ್ದಕ್ಕೆ, ಕುಣಿದದ್ದಕ್ಕೆ ಎಲ್ಲದಕ್ಕೂ ಒಂದೊಂದು ವೈಜ್ಞಾನಿಕ ಕಾರಣವನ್ನು ಆರೋಪಿಸುವ ಮಾತುಗುಳಿಗಳದ್ದು ಕೂಡ ಅತಿರೇಕದ ತರ್ಕರಸಿಕತೆ. ವಿಚಾರ ಯಾವುದೇ ಇರಲಿ, ಅದಕ್ಕೊಂದು ವೈಜ್ಞಾನಿಕ ಕಾರಣದ ಟೈ ಕಟ್ಟಿದರೆ ಮಾತ್ರ ಗೌರವಕ್ಕೆ ಪಾತ್ರವಾಗಿ ಕಾಲರ್ ಮೇಲೆ ಮಾಡಲು ಸಾಧ್ಯವೆಂದು ಹಲವರು ಭಾವಿಸಿರುವಂತಿದೆ. 'ವಿಜ್ಞಾನ, ವೈಜ್ಞಾನಿಕ ಎಂಬುದರ ಪರಿಧಿಯೊಳಗೆ ಎಲ್ಲೆ ಮೀರಿದ ಪ್ರವೇಶಗಳು ಹೇರಳವಾಗಿವೆ. ಈ ಪದಗಳ ಅಪಪ್ರಯೋಗ, ಅತಿಬಳಕೆಗಳನ್ನು ಕಂಡಾಗ ವಿಜ್ಞಾನದ ಚರಮಕಿಂಕರನಾಗಿರುವ, ವಿಜ್ಞಾನದ ಅಭಿಮಾನಿಗಳ ಸಂಘದ ಅಧ್ಯಕ್ಷನಾಗಲು ಹಗಲಿರುಳೂ ಹಾತೊರೆಯುತ್ತಿರುವ ನನ್ನಂಥವರು ಏನು ಮಾಡಬಹುದು? ಇಂಥದೊಂದು ಪುಸ್ತಕ ಬರೆಯಬಹುದು!' ಎಂದು, ಈ ಪುಸ್ತಕದ ರಚನೆಗೆ ಸಾತ್ತ್ವಿಕ ಸಿಟ್ಟೇ ಸ್ಫೂರ್ತಿಯೆಂದು ತಿಳಿಸುತ್ತಾರೆ. 'ನನ್ನ ಅಧ್ಯಯನದ ಮಿತಿಯಲ್ಲಿ, ವಿಜ್ಞಾನಕ್ಕೊಂದು ಶಾಲು ಹೊದೆಸಿ, ಪ್ರಶಸ್ತಿ ಪತ್ರ ಕೊಟ್ಟು ಅದರ ಬಗ್ಗೆ ಒಂದು ಅಭಿನಂದನಾ ಭಾಷಣವನ್ನು ಮಾಡಿದರೆ ಹೇಗಿರಬಹುದೋ ಆ ರೀತಿ ಇದನ್ನು ಬರೆದಿದ್ದೇನೆ. ವಿಜ್ಞಾನ ಎಂದರೆ ಏನೇನೆಲ್ಲ ಮತ್ತು ಏನೇನಲ್ಲ, ವಿಜ್ಞಾನಿಗಳು ಹೇಗೆ ಕೆಲಸ ಮಾಡುತ್ತಾರೆ, ವೈಜ್ಞಾನಿಕ ಮನೋಧರ್ಮ/ಮನೋವೃತ್ತಿ ಎಂದರೇನು ಎಂಬುದೆಲ್ಲ ಈ ಅಸಮಗ್ರ ಚಿತ್ರಣದಲ್ಲಿ ಅಷ್ಟಿಷ್ಟಾದರೂ ಬಂದು ಹೋದೀತೆಂದು ನನ್ನ ಮಿಣುಕು ಭರವಸೆ, ಅಭಿಲಾಷೆ' ಎಂದು ವಿನೀತಭಾವದಿಂದಲೇ ನಿವೇದಿಸುತ್ತಾರೆ.

ಎಲ್ಲಕ್ಕೂ ಮೊದಲು ವಿಜ್ಞಾನವು ಈ ಭೂಮಿಯಲ್ಲಿ ಏಕೆ ಅವತರಿಸಿತೆಂದು ವಿಚಾರಮಾಡುವುದು ಸಮುಚಿತವಾದೀತು ಅಂತ ಆರಂಭಿಸಿ, ಮನೋಜ್ಞ ಕಥಾನಕಗ ಳನ್ನು ಉದಾಹರಣೆಯಾಗಿ ತೋರಿಸಿ, ಜ್ಞಾನಾಕಾಂಕ್ಷೆ, ಒಗಟಿನ ಸವಾಲನ್ನು ಬಗೆಹರಿಸುವ ಕಾಮನೆ, ತಡೆಹಿಡಿಯಲಾಗದ, ಪ್ರಚಂಡವಾದ ತಿಳಿವಿನ ಬಯಕೆಯೇ ವಿಜ್ಞಾನದ ಪ್ರೇರಕಶಕ್ತಿ ಮತ್ತು ವಿಜ್ಞಾನ ಗಂಗೆಗೆ ಅಂಥ ತಣಿಯದ ಜಿಜ್ಞಾಸೆಯೇ ಗಂಗೋತ್ರಿ ಎಂಬ ತೀರ್ಮಾನಕ್ಕೆ ಶರತ್ ಭಟ್ ಬರುತ್ತಾರೆ. ಪುಸ್ತಕದುದ್ದಕ್ಕೂ ವಿಜ್ಞಾನಸಂಬಂಧಿ ಕಥಾನಕಗಳು, ಸಂದರ್ಭೋಚಿತ ನಗೆಹನಿಗಳು, ಚಾಟೂಕ್ತಿಗಳು ಬರುತ್ತವೆ. ಇದರಲ್ಲಿ ನಿಮಗೆ ಆರ್ಕಿಮಿಡಿಸನು ಬಚ್ಚಲುಮನೆಯಿಂದ ಬೆತ್ತಲೆ ಓಡಿದ ಕಥೆ (ಅದರ ನಿಖರ ರೂಪ) ಸಿಗುತ್ತದೆ; ಅಲೆಕ್ಸಾಂಡ್ರಿಯಾದಲ್ಲಿ ಗ್ರಂಥಪಾಲನಾಗಿದ್ದ ಇರಾಟೋಸ್ತನೀಸನು ಬರೀ ಒಂದು ಕೋಲಿಂದಲೇ ಭೂಮಿಯ ಸುತ್ತಳತೆಯನ್ನು ಕರಾರುವಾಕ್ಕಾಗಿ ಕಂಡುಹಿಡಿದ ಕಥೆಯೂ ಸಿಗುತ್ತದೆ. ಗಗನನೌಕೆಯೊಳಗೆ ಶೌಚಾಲಯ ಇರಲಿಲ್ಲವಾಗಿ ಉಡ್ಡಯನ ಸ್ಥಳಕ್ಕೊಯ್ದ ಬಸ್ಸಿನ ಚಕ್ರದ ಮೇಲೆ ಯೂರಿ ಗಗಾರಿನ್ ಉಚ್ಚೆ ಹೊಯ್ದಿದ್ದು, ರಷ್ಯನ್ ಅಂತರಿಕ್ಷಗಾಮಿಗಳು ಅಂಥ ಮೂತ್ರವಿಸರ್ಜನೆಯನ್ನು ಈಗಲೂ ಒಂದು ಸಂಪ್ರದಾಯವೆಂದು ಪಾಲಿಸುವುದು- ರೀತಿಯ ಉಲ್ಲೇಖಗಳು 'ಹೀಗೂ ಉಂಟೇ!?' ಎಂಬ ಉದ್ಗಾರ ಹೊರಡಿಸುತ್ತವೆ. ಆದ್ದರಿಂದಲೇ ಈ ಪುಸ್ತಕ ಎಲ್ಲಿಯೂ 'ತಲೆ ಮೇಲಿಂದ ಹಾದುಹೋಗುವಂತಿದೆ' ಎಂದನಿಸದೆ ಮನಸ್ಸಿಗೆ ಮುದ ನೀಡುತ್ತದೆ, ಕುತೂಹಲವನ್ನು ಕಾಯ್ದುಕೊಳ್ಳುತ್ತದೆ. ಇಲ್ಲಿ ನ್ಯೂಟನ್, ಐನ್‌ಸ್ಟೀನ್, ಗೆಲಿಲಿಯೋ, ಎಡಿಸನ್ ಮುಂತಾಗಿ ನಮಗೆ ಚಿರಪರಿಚಿತರಾಗಿರುವ ವಿಜ್ಞಾನಿಗಳ ಜತೆಜತೆಗೇ ಅಷ್ಟೇನೂ ಪರಿಚಿತವಲ್ಲದ ಹೆಸರುಗಳೂ ಬರುತ್ತವೆ. ವಿಜ್ಞಾನವನ್ನು ಅರಸುತ್ತ ಅವರೆಲ್ಲ ಮಾಡಿದ ಪ್ರಯೋಗಗಳ ವಿವರಗಳು ಕಾಣಸಿಕೊಳ್ಳುತ್ತವೆ. ಅವರ ಈ ಜ್ಞಾನಾನ್ವೇಷಣೆಯನ್ನು ಶರತ್ ಭಟ್ ಸನಾತನ ಭಾರತೀಯ ತತ್ತ್ವಶಾಸ್ತ್ರಜ್ಞರ, ದಾರ್ಶನಿಕರ 'ಸತ್ಯದ ಹುಡುಕಾಟ'ಕ್ಕೆ ಸಮೀಕರಿಸುತ್ತಾರೆ; 'ವಿಜ್ಞಾನ ಮತ್ತು ತತ್ತ್ವಶಾಸ್ತ್ರ ಎರಡರ ಗುರಿಯೂ ಒಂದೇ: ಮೂಲ ಸತ್ಯದ ಅನ್ವೇಷಣೆ, ಜ್ಞಾನದ ಹುಡುಕಾಟ. ವಿಧಾನದಲ್ಲಿ, ವೈಖರಿಯಲ್ಲಿ ಮಾತ್ರ ವ್ಯತ್ಯಾಸ. ಗ್ರೀಕ್ ಭಾಷೆಯಲ್ಲಿ 'ಫಿಲೋ' ಎಂದರೆ ಪ್ರೇಮ, 'ಸೋಫಿಯಾ' ಎಂದರೆ ಜ್ಞಾನ. ಹಾಗಾಗಿ, ಜ್ಞಾನದ ಪ್ರೇಮವೇ ಫಿಲಾಸಫಿ, ಜ್ಞಾನಾನುರಾಗಿಯೇ ಫಿಲಾಸಫರ್. ನಮ್ಮಲ್ಲಿ ತತ್ತ್ವಶಾಸ್ತ್ರವನ್ನು 'ದರ್ಶನ' ಎನ್ನುತ್ತೇವೆ. 'ದೃಶ್ಯತೇ ಅನೇನ ಇತಿ ದರ್ಶನಮ್' ಎಂದು ವ್ಯುತ್ಪತ್ತಿ. ಯಾವುದರ ಮುಖಾಂತರ ಕಾಣಬೇಕಾದ್ದು ಕಾಣುತ್ತದೋ ಅದೇ ದರ್ಶನ. ಕಾಣಬೇಕಾದ್ದು ಏನನ್ನು? ವಸ್ತುವಿನ ಸತ್ಯ-ಸ್ವರೂಪವನ್ನು. ಆದ್ದರಿಂದ ವಿಜ್ಞಾನವನ್ನು ದರ್ಶನವೆಂದೂ ಕರೆಯಬಹುದು, ಅದಕ್ಕೆ ಫಿಲಾಸಫಿ ಎಂದೂ ಹೆಸರಿಡಬಹುದು' ಎಂಬ ವ್ಯಾಖ್ಯಾನ ಓದುಗರಿಗೆ ಮನದಟ್ಟಾಗುವಂತೆ ಇದೆ.

ವಿಜ್ಞಾನ ಅಂದರೆ ಏನೇನೆಲ್ಲ ಮತ್ತು ಏನೇನಲ್ಲ ಎಂಬುದರ ಸೋದಾಹರಣ ವಿವರಣೆ ಈ ಪುಸ್ತಕದ ಮುಖ್ಯ ತಿರುಳು. 'ಪ್ರಮಾ ಅಂದರೆ ಯಥಾರ್ಥಜ್ಞಾನ. ಆ ಪದದಿಂದಲೇ ಬಂದದ್ದು ಪ್ರಮಾಣ, ಪ್ರಮೇಯ ಇತ್ಯಾದಿ. ನಮ್ಮ ದಾರ್ಶನಿಕರು ಸೂಚಿಸಿದ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ, ಅರ್ಥಾಪತ್ತಿ ಎಂಬ ಐದು ಪ್ರಮಾಣಗಳನ್ನೇ ಆಧುನಿಕ ವಿಜ್ಞಾನವೂ ಉಪಯೋಗಿಸುತ್ತದೆ. ಪಕ್ಷಪಾತ, ವೈಯುಕ್ತಿಕ ಒಲವು, ಪೂರ್ವಗ್ರಹ ಇವೆಲ್ಲ ವಿಕಿಪೀಡಿಯಾ ಬರವಣಿಗೆಯಲ್ಲಿ ಹೇಗೆ ಸಲ್ಲವೋ ಹಾಗೆ ವಿಜ್ಞಾನದಲ್ಲೂ ಸಲ್ಲ. ವಿಜ್ಞಾನಿಯ ವೈಯುಕ್ತಿಕ ನಡೆ-ನುಡಿ, ರಾಜಕೀಯ ನಿಲುವು, ಮುಂಗೋಪ, ಸುಳ್ಳು ಹೇಳುವ ಚಾಳಿ ಇವೆಲ್ಲವುಗಳಿಂದ ವಿಜ್ಞಾನಕ್ಕೆ ಯಾವುದೇ ಬಾಧೆಯುಂಟಾಗಬಾರದು, ಸತ್ಯವು ಮುಕ್ಕಾಗಬಾರದು. ವಿಜ್ಞಾನಿಗೆ ಒಂದು ರೀತಿಯ ತಟಸ್ಥ ದೃಷ್ಟಿಕೋನ ಬೇಕು. ವಿಜ್ಞಾನಿ ಏನು ಹೇಳುತ್ತಿದ್ದಾನೆ ಎನ್ನುವುದಕ್ಕಿಂತ, ಪ್ರಯೋಗವು ಏನು ಹೇಳುತ್ತಿದೆ? ನಿಸರ್ಗವು ಏನು ಹೇಳುತ್ತಿದೆ? ಎನ್ನುವುದಕ್ಕೇ ಬೆಲೆ ಹೆಚ್ಚು. ಪ್ರಯೋಗ, ಪರಿವೀಕ್ಷಣೆ, ಪರಿಶೀಲನೆ, ಸಾಕ್ಷಿ, ಆಧಾರಗಳು ಏನು ಹೇಳುತ್ತಿವೆ, ಸಂಶೋಧನೆಯಲ್ಲಿ ದೊರೆತ ಸತ್ಯಾಂಶವೇನು ಎನ್ನುವುದನ್ನು ವಿಜ್ಞಾನಿ ಹೇಳಲೇಬೇಕು; ಸ್ವತಃ ಅವನ ನಿಲುವಿಗೆ ಅದು ವಿರುದ್ಧವಾಗಿದ್ದರೂ, ಅವನಿಗೇ ಅದು ಇಷ್ಟವಿಲ್ಲದಿದ್ದರೂ. ವಿಜ್ಞಾನದ ಯಾವುದೇ ಸಿದ್ಧಾಂತವಾದರೂ ತನ್ನನ್ನು ಸುಳ್ಳಾಗಿಸಲು ಅನುವು ಮಾಡಿಕೊಡಬೇಕು, ಅದನ್ನು ತಪ್ಪೆಂದು ತೋರಿಸುವುದಕ್ಕೆ ಅವಕಾಶವೇ ಇಲ್ಲದಿದ್ದರೆ ಅದು ಎಂದಿಗೂ ವೈಜ್ಞಾನಿಕ ಸಿದ್ಧಾಂತವಾಗಲಾರದು. ಹಳೆಯದನ್ನು ತಿದ್ದುತ್ತ, ಬೇಡವಾದ್ದನ್ನು ಕೈಬಿಡುತ್ತ, ಹೊಸದನ್ನು ಸೇರಿಸಿಕೊಳ್ಳುತ್ತ, ಸುಧಾರಣೆಯಾಗುತ್ತ ಸಿದ್ಧಾಂತ ಬೆಳೆಯಬೇಕು. ನಿರಂತರವಾದ ತಿದ್ದುಪಡಿ, ಸುಧಾರಣೆ, ಸರಿಪಡಿಸುವಿಕೆ, ಹೊಸ ಅಂಶಗಳ ಸೇರ್ಪಡೆ ಇವೇ ವಿಜ್ಞಾನದ ಶಕ್ತಿಮದ್ದು. ವಿಜ್ಞಾನವು ಪರೀಕ್ಷೆಗಳನ್ನು, ತಪಾಸಣೆಗಳನ್ನು ಎದುರಿಸುವುದಕ್ಕೆ ಎಂದಿಗೂ ಸಿದ್ಧವಾಗಿ, ತುದಿಗಾಲಿನಲ್ಲಿ ನಿಂತಿರಬೇಕು. ಪ್ರಯೋಗಕ್ಕೆ ಒಳಗಾಗುವುದು, ಪರಿಶೀಲನೆಗೆ ಗುರಿಯಾಗುವುದು, ವಿಚಾರಣೆಗೆ, ತಪ್ಪು-ಒಪ್ಪುಗಳ ವಿಮರ್ಶೆಗೆ ವಸ್ತುವಾಗುವುದು ವಿಜ್ಞಾನಕ್ಕೆ ಅಚ್ಚುಮೆಚ್ಚು'- ಹೀಗೆ ಯಾವುದು ವಿಜ್ಞಾನ ಮತ್ತು ಯಾವುದು ವಿಜ್ಞಾನವಲ್ಲ, ಯಾರು ವಿಜ್ಞಾನಿ ಮತ್ತು ಯಾರು ವಿಜ್ಞಾನಿಯಲ್ಲ ಎಂದು ಸೂಕ್ತ ನಿದರ್ಶನಗಳೊಂದಿಗೆ, ಅಧಿಕೃತ ಆಕರಗಳ ಉಲ್ಲೇಖಗಳೊಂದಿಗೆ ನಿರೂಪಣೆ. ಅಲ್ಲಲ್ಲಿ ಹಾಸ್ಯೋಕ್ತಿಗಳು ಮತ್ತು ರಸಪ್ರಸಂಗಗಳು ರವೆಉಂಡೆಯ ರುಚಿ ಹೆಚ್ಚಿಸುವ ದ್ರಾಕ್ಷಿ-ಲವಂಗ-ಗೋಡಂಬಿಗಳಂತೆ. ಪುಸ್ತಕವನ್ನು ಓದಿ ಮುಗಿಸಿದಾಗ ವಿಜ್ಞಾನದ ಬಗೆಗಂತೂ ನಿಮ್ಮಲ್ಲಿ ವಿಶೇಷ ಆಸಕ್ತಿ, ಒಲವುಗಳು ಮೂಡಿಯೇಮೂಡುತ್ತವೆ; ಜತೆಯಲ್ಲೇ ಶರತ್ ಭಟ್ ಅವರ ಜ್ಞಾನಭಂಡಾರದ ಆಳ-ಅಗಲಗಳಿಗೆ, ಭಾಷಾ ಪ್ರೌಢಿಮೆಗೆ, ಹಾಸ್ಯಪ್ರಜ್ಞೆಗೆ, ಮತ್ತು ಆಗಾಗ ಇಣುಕುವ 'ಸ್ವಲ್ಪ ತಡೀ ಮಾರಾಯ...', 'ಅದ್ಯಾವ ಬೊಜ್ಜದ ಬ್ಯಾಕ್ಟೀರಿಯವೋ...', 'ಇದೆಂಥ ಮರ್ಲು ಮಾರಾಯರೇ' ರೀತಿಯ ವಾಕ್ಯಗಳಲ್ಲಿನ ಮಂಗಳೂರು-ಕನ್ನಡಕ್ಕೆ ನೀವು ನಿಮಗರಿವಿಲ್ಲದಂತೆಯೇ ಫಿದಾ ಆಗುತ್ತೀರಿ.

ಶರತ್ ಭಟ್ ಅವರ ಓದು-ಅಧ್ಯಯನಗಳ ಹರಹು, ವಿಶೇಷವಾಗಿ ಕನ್ನಡ ಸಾಹಿತ್ಯ-ಸಾಹಿತಿಗಳ ಬಗೆಗಿನ ಅರಿವು ನಿಮಗೆ ಈ ಪುಸ್ತಕದ ಹೆಸರು ಮತ್ತು ಅಧ್ಯಾಯಗಳ ಶೀರ್ಷಿಕೆಗಳಿಂದಲೇ ಅಂದಾಜಾಗುತ್ತದೆ. ವಿಜ್ಞಾನ ಕಾನನದಲೊಂದು ಸಫಾರಿಗೆ ಕರೆದುಕೊಂಡು ಹೋಗುತ್ತೇನೆಂದು ಅವರು 'ಹತ್ತೇವು ವಿಜ್ಞಾನದ ಜೀಪ' ಎಂದಿದ್ದಾರಷ್ಟೆ? ಅದು ಡಿ.ಎಸ್.ಕರ್ಕಿಯವರ 'ಹಚ್ಚೇವು ಕನ್ನಡದ ದೀಪ'ದ ಪ್ರೇರಣೆ. 'ಬಲ್ಲಿರೇನಯ್ಯ' ಎಂಬ ಮೊದಲ ಅಧ್ಯಾಯದ ತಲೆಬರಹ ಕರಾವಳಿಯ ಕಲೆ ಯಕ್ಷಗಾನಕ್ಕೆ ಸಮರ್ಪಣೆ; 'ದೂರದಿಂದ ಬಂದಂಥ ಸುಂದರಾಂಗ ಜ್ಞಾನ', 'ಇದು ಎಂಥಾ ಪ್ರಯೋಗವಯ್ಯಾ' ಕನ್ನಡ ಚಿತ್ರಗೀತೆ ಸಾಲುಗಳಿಂದ ಪ್ರಭಾವಿತವಾದರೆ 'ನಡೆವರೆಡಹದೆ ಕುಳಿತವರೆಡಹುವರೆ' ರಾಘವಾಂಕನ ಕೃಪೆ. 'ಪ್ರಯೋಗ ಪರಿಣತ ಮತಿಗಳ್' ಕವಿರಾಜಮಾರ್ಗದ ಶ್ರೀವಿಜಯನಿಂದ ಕಡ ಪಡೆದದ್ದು. 'ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ' ಮತ್ತು 'ಸಾಲವನು ಕೊಂಬಾಗ' ಸರ್ವಜ್ಞನ ವಚನಪ್ರಸಾದ. 'ಇದ ತಿಳಿದೆನೆಂದರೂ ತಿಳಿದ ಧೀರನಿಲ್ಲ' ಮತ್ತು 'ಕಾರ್ಯಕಾರಣದೊಂದಪೂರ್ವ ನಟನೆ' ಇವು ಗೋಪಾಲಕೃಷ್ಣ ಅಡಿಗರ ಅನುಗ್ರಹ. ಇದಿಷ್ಟೇ ಅಲ್ಲದೇ ಪುಸ್ತಕದುದ್ದಕ್ಕೂ ನಿಮಗೆ ಲಕ್ಷ್ಮೀಶ, ರತ್ನಾಕರವರ್ಣಿ, ಎ.ಎನ್.ಮೂರ್ತಿರಾಯರು, ನಾಡಿಗೇರ ಕೃಷ್ಣರಾಯರು, ಮಾಸ್ತಿ, ಬಿಎಂಶ್ರೀ, ತೀನಂಶ್ರೀ, ಡಿವಿಜಿ, ಬೀಚಿ, ಲಂಕೇಶ್ ಮುಂತಾಗಿ ಕನ್ನಡ ಸಾಹಿತ್ಯವೀಥಿಯ ಪ್ರಖರ ದೀಪಸ್ತಂಭಗಳು ಎದುರಾಗುತ್ತವೆ. ವಿಜ್ಞಾನ ಪುಸ್ತಕದಲ್ಲಿ ಕನ್ನಡ ಸಾಹಿತಿಗಳಿಗೇನು ಕೆಲಸ ಅಂತೀರಾ? ಓದಿನ ಅಮಿತಾನಂದಕ್ಕೆ ಅದೂ ಒಂದು ಕಾರಣ!

ಅಂದಹಾಗೆ, ಪುಸ್ತಕವಿನ್ನೂ ಅಚ್ಚಿನಮನೆಯಲ್ಲಿದೆ. ನನಗೆ ಇದರದೊಂದು ಪ್ರಿವಿಲೆಜ್ಡ್ ಪ್ರಿವ್ಯೂ ಸಿಕ್ಕಿದ್ದರಿಂದಾಗಿ ನನ್ನ ಸಂತಸವನ್ನು, ಪುಸ್ತಕದ ಬಗ್ಗೆ ನನ್ನ ಅನುಮೋದನೆಯನ್ನು ಈಗಲೇ ನಿಮಗೆ ತಿಳಿಸುತ್ತಿದ್ದೇನೆ. ಇನ್ನೇನು ಕೆಲ ದಿನಗಳಲ್ಲೇ ಪುಸ್ತಕ ಬಿಡುಗಡೆಯಾಗುತ್ತದೆ. ಇಷ್ಟೊಂದು ಎಕ್ಸೈಟ್‌ಮೆಂಟ್ ಏಕೆಂದರೆ- ಆಫ್ರಿಕಾ ಖಂಡದ ಕೀನ್ಯಾ, ಸೆರೆಂಗೆಟಿ, ಮಸೈಮಾರಗಳಲ್ಲೋ, ಜರ್ಮನಿಯ ಹ್ಯಾಂಬರ್ಗ್‌ನಲ್ಲೋ, ಅಥವಾ ನಮ್ಮದೇ ಕರ್ನಾಟಕದ ಕಬಿನಿ ಬಂಡೀಪುರಗಳಲ್ಲೋ- ವನ್ಯಮೃಗಗಳ ಸಹಜ ಜೀವನಶೈಲಿಯ ದರ್ಶನಕ್ಕೆಂದು ನಿಮ್ಮನ್ನು ಓಪನ್ ಜೀಪಿನಲ್ಲಿ ಕರೆದುಕೊಂಡು ಹೋಗುತ್ತೇನೆಂದಾಗಿನ ಕುತೂಹಲ ರೋಮಾಂಚನಗಳು ಹೇಗಿರುತ್ತವೋ ಅಂಥದೇ ರೋಮಾಂಚನ, ಭಾವೋದ್ವೇಗ, ಸಂಭ್ರಮ ನಿಮಗೆ ಈ ಪುಸ್ತಕದ ಓದಿನಿಂದ ಸಿಗಲಿದೆ. ಅದರಲ್ಲೂ ಸಫಾರಿಗೆ ಕರೆದುಕೊಂಡು ಹೋಗುವ ಜೀಪ್ ಡ್ರೈವರ್-ಕಮ್-ಗೈಡ್ ಬರೀ ವಿಜ್ಞಾನದ ಬಗ್ಗೆಯಷ್ಟೇ ಕಾಟಾಚಾರದ ಬಡಬಡಿಕೆ ಮಾಡದೆ, ರಸವತ್ತಾದ ಕಥೆಗಳನ್ನು ಹೇಳುತ್ತ, ಹಾಸ್ಯಚಟಾಕಿಗಳನ್ನು ಸಿಡಿಸುತ್ತ, ಸಂಸ್ಕೃತ-ಹಳಗನ್ನಡ ರಸಘಟ್ಟಿಗಳನ್ನು ಮಧುರಕಂಠದಲ್ಲಿ ಪಠಿಸುತ್ತ, ಭಾರತೀಯ ದರ್ಶನಶಾಸ್ತ್ರಗಳ ಝಲಕ್ಕುಗಳು, ವೇದೋಪನಿಷತ್ತುಗಳು, ಭಗವದ್ಗೀತೆ, ಶಂಕರಭಾಷ್ಯಗಳ ತುಣುಕುಗಳನ್ನೂ ಬಾಯಾಡಿಸಲಿಕ್ಕೆ ಒದಗಿಸುತ್ತ, ನಡುವೆಯೇ ಧುತ್ತೆಂದು ಕೈಫಿ ಆಜ್ಮಿ ಬರೆದ ಹಿಂದೀ ಚಿತ್ರಗೀತೆಯ ಸಾಲನ್ನೂ ಗುನುಗುನಿಸುತ್ತ ನಿಮಗೆ ಹೋಲ್‌ಸಮ್ ಇನ್ಫೊಟೈನ್‌ಮೆಂಟ್ ಕೊಡುತ್ತಾನಾದರೆ ತಪ್ಪಿಸಿಕೊಳ್ಳುತ್ತೀರೇಕೆ? ಯಾವುದಕ್ಕೂ, ಜೀಪ್ ಡ್ರೈವರನನ್ನು ಸಂಪರ್ಕಿಸಿ (ಶರತ್ ಭಟ್: 95914 81485).

ನಿಮಗೊಂದು ಸೀಟ್ (ಪುಸ್ತಕದ ಪ್ರತಿ) ಕಾಯ್ದಿರಿಸಿ...

ಲಿಂಗ ಅಸಮಾನತೆ ಇನ್ನಾದರೂ ಕೊನೆಯಾಗಲಿ

ಲಿಂಗ ಸಮಾನತೆಯ ಪ್ರಯೋಜನಗಳ ಹೊರತಾಗಿಯೂ ಭಾರತದ ಕಾರ್ಪೊರೇಟ್ ಜಗತ್ತು ಈಗಲೂ ಪುರುಷ ಉದ್ಯೋಗಿಗಳ ಕಡೆಗೇ ವಾಲುತ್ತಿರುವಂತಿದೆ. ಹಾಗಾಗಿ, ಕಾರ್ಪೊರೇಟ್ ವಲಯದಲ್ಲಿ ಈ ಅಸಮಾನತೆ ಉಳಿದುಕೊಂಡಿದೆ. ಭಾರತೀಯ ಕಂಪನಿಗಳಲ್ಲಿ ಮಹಿಳೆಯರು ಶೇ.17.1ರಷ್ಟು ಮಾತ್ರ ನಿರ್ದೇಶಕರ ಮಟ್ಟದ ಸ್ಥಾನಗಳನ್ನು ಹೊಂದಿರುವುದನ್ನು ವರದಿಯೊಂದು ಬಹಿರಂಗಪಡಿಸುತ್ತದೆ.

ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಅದು 1974ರ ಕಾಲಘಟ್ಟ. ಇನ್ಫೋಸಿಸ್ ಪ್ರತಿಷ್ಠಾನದ ಸುಧಾ ಮೂರ್ತಿಯವರು ಹುಬ್ಬಳ್ಳಿಯಲ್ಲಿ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದು, ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್‌ನಲ್ಲಿ ಎಂ.ಟೆಕ್ (ಮಾಸ್ಟರ್ ಆಫ್ ಟೆಕ್ನಾಲಜಿ) ಮಾಡುತ್ತಿದ್ದ ಸಮಯವದು. ಒಂದು ದಿನ ಅವರು ತರಗತಿ ಮುಗಿಸಿ ಹಾಸ್ಟೆಲ್‌ಗೆ ಹಿಂದಿರುಗುತ್ತಿರುವಾಗ, ಪುಣೆಯ 'ಟೆಲ್ಕೊ' ಸಂಸ್ಥೆ (ಟಾಟಾ ಎಂಜಿನಿಯರಿಂಗ್ ಆ್ಯಂಡ್ ಲೋಕೊಮೋಟಿವ್ ಕಂಪನಿ) ಉತ್ತಮ ಸಂಬಳದೊಂದಿಗೆ ಯುವ, ಪ್ರತಿಭಾವಂತ ಎಂಜಿನಿಯರ್‌ಗಳನ್ನು ಉದ್ಯೋಗಕ್ಕಾಗಿ ಆಹ್ವಾನಿಸುತ್ತಿದೆ ಎಂಬುದು ಸೂಚನಾ ಫಲಕದಲ್ಲಿ ಹಾಕಿದ್ದ ಸೂಚನಾಪತ್ರದಿಂದ ಗೊತ್ತಾಗುತ್ತದೆ. ಆದರೆ, ಸಿಗರೇಟಿನ ಪ್ಯಾಕ್ ಮೇಲೆ 'ಸಿಗರೇಟ್ ಸೇದುವುದು ಆರೋಗ್ಯಕ್ಕೆ ಹಾನಿಕರ' ಎಂಬುದನ್ನು ಸಣ್ಣಕ್ಷರಗಳಲ್ಲಿ ನಮೂದಿಸಲಾಗಿರುವಂತೆ, ಆ ಸೂಚನಾಪತ್ರದ ಕೊನೆಯಲ್ಲಿ 'ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸುವ ಅಗತ್ಯವಿಲ್ಲ' ಎಂದು ಸಣ್ಣಗಾತ್ರದಲ್ಲಿ ಉಲ್ಲೇಖಿಸಲಾಗಿತ್ತು. ಇದು ನಿಜವಾಗಿಯೂ ಅವರಿಗೆ ಕೋಪ ತರಿಸಿತು. ಅದನ್ನು ಓದಿದ ನಂತರ ಅವರು ಎಲ್ಲರಂತೆ ಸುಮ್ಮನಾಗಲಿಲ್ಲ; ಹಾಸ್ಟೆಲ್‌ಗೆ ಬಂದವರೇ ಒಂದು ಪೋಸ್ಟ್ ಕಾರ್ಡ್ ತೆಗೆದುಕೊಂಡು ಜೆಆರ್‌ಡಿ ಟಾಟಾ ಅವರಿಗೇ ನೇರವಾಗಿ ಪತ್ರ ಬರೆಯುತ್ತಾರೆ. 'ಈ ಸಮಾಜದಲ್ಲಿ 50:50 ಅನುಪಾತದಲ್ಲಿ ಪುರುಷರು ಮತ್ತು ಮಹಿಳೆಯರು ಇದ್ದಾರೆ. ನೀವು ಮಹಿಳೆಯರಿಗೆ ಅವಕಾಶ ನೀಡದಿದ್ದರೆ, ಅವರ ಸೇವೆಗಳನ್ನು ಕಳೆದುಕೊಳ್ಳುತ್ತಿದ್ದೀರಿ ಎಂತಲೇ ಅರ್ಥ. ದೇಶದಲ್ಲಿ ಪುರುಷರಿಗೆ ಸರಿಸಮನಾಗಿ ಮಹಿಳೆಯರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು ಸಿಗದಿದ್ದರೆ, ಸಮಾಜ ಅಥವಾ ದೇಶ ಎಂದಿಗೂ ಏಳಿಗೆ ಹೊಂದಲು ಸಾಧ್ಯವಿಲ್ಲ. ಹಾಗಾಗಿ ಇದು (ಅಂದರೆ, ಪುಣೆಯ ಟೆಲ್ಕೊದಲ್ಲಿ ಕಾರ್ಯನಿರ್ವಹಿಸುವುದಕ್ಕೆ ಅರ್ಜಿ ಸಲ್ಲಿಸಲು ವಿದ್ಯಾರ್ಥಿನಿಯರಿಗೆ ಅವಕಾಶ ನೀಡದಿರುವುದು) ನಿಮ್ಮ ಕಂಪನಿಯ ಒಂದು ತಪ್ಪು ನಿರ್ಧಾರವಾಗುತ್ತದೆ ಎನ್ನುವುದು ನನ್ನ ಅನಿಸಿಕೆಯಾಗಿದೆ' ಎಂದು ಅದರಲ್ಲಿ ಉಲ್ಲೇಖಿಸುತ್ತಾರೆ. ಸುಧಾ ಮೂರ್ತಿ ಅವರ ಪತ್ರವನ್ನು ಗಂಭೀರವಾಗಿ ಪರಿಗಣಿಸಿದ ಜೆಆರ್‌ಡಿ ಟಾಟಾ, ತಮ್ಮ ಸಂಸ್ಥೆಯ ಈ ನೀತಿಗೆ ಕೂಡಲೇ ಬದಲಾವಣೆಯನ್ನು ತಂದರು ಮತ್ತು ಇದರಿಂದಾಗಿ ಸುಧಾ ಮೂರ್ತಿಯವರು ಆ ಕಂಪನಿಯೊಂದಿಗೆ ಕೆಲಸ ಮಾಡುವಂತಾಯಿತು. ಅಂತೂ, ಸುಧಾ ಮೂರ್ತಿಯವರಿಂದಾಗಿ ಟೆಲ್ಕೊನಲ್ಲಿ ಮೊದಲ ಬಾರಿಗೆ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಉದ್ಯೋಗಾವಕಾಶಗಳ ಬಾಗಿಲು ತೆರೆದಂತಾಯಿತು. ಈ ಮೂಲಕ ಮಹಿಳೆಯೊಬ್ಬರು 50 ವರ್ಷಗಳ ಹಿಂದೆಯೇ ಭಾರತದ ಔದ್ಯೋಗಿಕ ಜಗತ್ತಿನಲ್ಲಿನ ಒಂದು ಹೊಸ ಕ್ರಾಂತಿಗೆ ನಾಂದಿ ಹಾಡಿದಂತಾಯಿತು.

ನಮ್ಮ ಸಂವಿಧಾನವು ಸ್ತ್ರೀಯರಿಗೆ ಸಮಾನತೆ, ಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳನ್ನು ನೀಡಿದ್ದರೂ ಅವು ಪ್ರಾಯೋಗಿಕವಾಗಿ ಇಂದಿಗೂ ದೊರೆತಿಲ್ಲ. ಲಿಂಗ ಅಸಮಾನತೆ ಎನ್ನುವುದು ಭಾರತದಲ್ಲಿ ಇಂದು ನಿನ್ನೆಯ ಕಥೆಯಲ್ಲ, ಇದು ದೀರ್ಘಕಾಲದ ಸಮಸ್ಯೆಯಾಗಿದೆ. ಇದರ ಬೇರುಗಳು ಪಿತೃಪ್ರಧಾನ ಸಮಾಜಗಳು ಮತ್ತು ಸಮಾಜದಲ್ಲಿ ಮಹಿಳೆಯರ ಪಾತ್ರವನ್ನು ಪ್ರತ್ಯೇಕವಾಗಿ ವ್ಯಾಖ್ಯಾನಿಸುವ ಸಿದ್ಧಾಂತಗಳಿಂದಾಗಿ ನಮ್ಮನ್ನು ಬಹಳ ಹಿಂದಕ್ಕೆ ಕರೆದೊಯ್ಯುತ್ತವೆ. ನಾವು 4ನೇ ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಸಾಗುತ್ತಿರುವಾಗಲೂ ಲಿಂಗ ಅಸಮಾನತೆಯ ಸಮಸ್ಯೆಯು ಭಾರತೀಯ ಸಂಸ್ಥೆಗಳಲ್ಲಿ ಪ್ರಚಲಿತದಲ್ಲಿದೆ ಎಂದು ನೋವಿನಿಂದ ಹೇಳಬೇಕಾಗುತ್ತದೆ ಮತ್ತು ಕೆಲವು ಸಂಸ್ಥೆಗಳ ಈ ಧೋರಣೆಗಳು ಸಮಾಜದ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿವೆ ಎನ್ನುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆ ಕಾಲ ಹಾಗಿತ್ತು ಬಿಡಿ! ಆಗ ಮಹಿಳೆಯರು ಎನ್ನುವ ಕಾರಣಕ್ಕೆ ಅವರಿಗೆ ಕೆಲಸವೇ ಸಿಗುತ್ತಿರಲಿಲ್ಲ. ಹಾಗೊಮ್ಮೆ ಸಿಕ್ಕರೂ ಪುರುಷರಿಗೆ ಹೋಲಿಸಿದರೆ ಮಹಿಳೆಯರ ವೇತನ ಕಡಿಮೆಯಿರುತ್ತಿತ್ತು ಮತ್ತು ಮಹಿಳೆಯರೂ ಉದ್ಯೋಗಕ್ಕಾಗಿ ಅಷ್ಟೊಂದು ಉತ್ಸಾಹವನ್ನು ತೋರುತ್ತಿರಲಿಲ್ಲ. ಆದರೆ ಈ ಪರಿಸ್ಥಿತಿ ನಿಧಾನವಾಗಿ ಬದಲಾಗತೊಡಗಿತು. ಸರಕಾರಿ ನೌಕರಿಗಳ ಜತೆಗೆ ಸಿದ್ಧ ಉಡುಪು ತಯಾರಿಕಾ ವಲಯ, ಬ್ಯಾಂಕಿಂಗ್, ವಿಮೆ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯಲ್ಲಿ ಸ್ವಲ್ಪ ಪ್ರಮಾಣದ ಉತ್ತೇಜನ ಕಂಡುಬರತೊಡಗಿತಾದರೂ, ವೇತನದಲ್ಲಿನ ತಾರತಮ್ಯ ಮಾತ್ರ ಹಾಗೇ ಮುಂದುವರಿದಿತ್ತು.

ಕಾರ್ಪೊರೇಟ್ ಭಾರತದಲ್ಲಿ ಲಿಂಗ ವೈವಿಧ್ಯತೆಯ ವಿಷಯವು ಇತ್ತೀಚಿನ ವರ್ಷಗಳಲ್ಲಿ ಮಹತ್ವದ ಚರ್ಚಾವಸ್ತುವಾಗಿದೆ. ಭಾರತವು ಜಾಗತಿಕ ಆರ್ಥಿಕ ಶಕ್ತಿಕೇಂದ್ರವಾಗಿ ಬೆಳೆಯುತ್ತಲೇ ಇರುವುದರಿಂದ, ದೇಶದ ವ್ಯಾಪಾರ-ವ್ಯವಹಾರ ವಲಯಗಳು ಲಿಂಗ ವೈವಿಧ್ಯತೆಯ ಪ್ರಾಮುಖ್ಯದ ಬಗ್ಗೆ ಹೆಚ್ಚು ಜಾಗೃತವಾಗುತ್ತಿವೆ ಮತ್ತು ಲಿಂಗಭೇದಕ್ಕೆ ಹೊರತಾದ ಹಾಗೂ ಎಲ್ಲರನ್ನೂ ಒಳಗೊಳ್ಳುವ ಕೆಲಸದ ವಾತಾವರಣವನ್ನು ಸೃಷ್ಟಿಸುವತ್ತ ದಾಪುಗಾಲು ಹಾಕುತ್ತಿವೆ. ಇದು ಒಳ್ಳೆಯ ಬೆಳವಣಿಗೆ. ಕಾರ್ಪೊರೇಟ್

ಭಾರತದಲ್ಲಿ ಲಿಂಗ ವೈವಿಧ್ಯತೆಯ ಪ್ರಸಕ್ತ ಸ್ಥಿತಿಯನ್ನು, ಈ ಮುಖವಾಗಿ ಸಾಗಲು ಇರುವ ಸವಾಲು ಗಳನ್ನು ಮತ್ತು ಲಿಂಗ ಸಮಾನತೆಯ ಉತ್ತೇಜನಕ್ಕೆ ಕಂಪನಿಗಳು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಸ್ವಲ್ಪ ನೋಡುವುದಾದರೆ, ಕಾರ್ಯಕ್ಷೇತ್ರದಲ್ಲಿ ಲಿಂಗ ವೈವಿಧ್ಯತೆ ಏಕೆ ಮುಖ್ಯವೆಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಹೆಚ್ಚು ವೈವಿಧ್ಯಮಯ ಕಾರ್ಯಪಡೆಯನ್ನು ಹೊಂದಿರುವ ಕಂಪನಿಗಳು ತಮ್ಮ ಗ್ರಾಹಕರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅದಕ್ಕೆ ತಕ್ಕಂತೆ ಸ್ಪಂದಿಸಲು ಹೆಚ್ಚು ಸಮರ್ಥವಾಗುತ್ತವೆ ಎನ್ನುತ್ತವೆ ಇತ್ತೀಚಿನ ಸಂಶೋಧನೆಗಳು. ಮಾತ್ರವಲ್ಲದೆ, ಕೆಲಸದಲ್ಲಿ ಮಹಿಳೆಯರಿಗಿರುವ ಬದ್ಧತೆ, ಕಾರ್ಯಕ್ಷಮತೆ ಮತ್ತು ಏಕಾಗ್ರತೆಗಳು ಕಂಪನಿಯ ಒಟ್ಟಾರೆ ಕಾರ್ಯಕ್ಷಮತೆಯನ್ನು ಸುಧಾರಿಸಲು ನೆರವಾಗುತ್ತವೆ ಎನ್ನುತ್ತವೆ ವರದಿಗಳು. ಮೆಕಿನ್ಸೆ ಕಂಪನಿಯ ವರದಿಯ ಪ್ರಕಾರ, ಕಾರ್ಯನಿರ್ವಾಹಕ ತಂಡಗಳಲ್ಲಿ ಲಿಂಗ ವೈವಿಧ್ಯತೆಯ ಅಗ್ರಸ್ಥಾನದಲ್ಲಿರುವ ಕಂಪನಿಗಳು, ಲಿಂಗ ತಾರತಮ್ಯ ಹೊಂದಿರದ ಕಂಪನಿಗಳ ಸರಾಸರಿಗಿಂತ ಹೆಚ್ಚಿನ ಲಾಭದಾಯಕತೆಯನ್ನು ಹೊಂದುವ ಸಾಧ್ಯತೆಯಿದೆ ಎಂದು ಸಕಾರಣವಾಗಿ ಘೋಷಿಸುತ್ತಿವೆ. ಇನ್ನು, ಮಹಿಳೆಯರಿಗೆ ಸಮಾನ ಉದ್ಯೋಗಾವಕಾಶ ದೊರಕಿಸಿಕೊಡುತ್ತಿರುವ ಅನೇಕ ಸಂಸ್ಥೆಗಳು ಗ್ರಾಹಕರ ಅದರಲ್ಲೂ ವಿದೇಶಿ ಗ್ರಾಹಕರ ಪ್ರಶಂಸೆಗೆ ಒಳಗಾಗುತ್ತಿವೆ. ಮುಂದುವರಿದು, ಅನೇಕ ವಿದೇಶಿ ಕಂಪನಿಗಳು ನಿರ್ದಿಷ್ಟ ಅನುಪಾತದ ಮಹಿಳಾ ಉದ್ಯೋಗಿಗಳನ್ನು ಹೊಂದಿರಲೇಬೇಕೆನ್ನುವ ಆಗ್ರಹವನ್ನೂ ಮಾಡುತ್ತಿವೆ.

ಲಿಂಗ ಸಮಾನತೆಯ ಅನೇಕ ಪ್ರಯೋಜನಗಳ ಹೊರತಾಗಿಯೂ ಭಾರತದ ಕಾರ್ಪೊರೇಟ್ ಜಗತ್ತು ಈಗಲೂ ಪುರುಷ ಉದ್ಯೋಗಿಗಳ ಕಡೆಗೇ ಹೆಚ್ಚು ವಾಲುತ್ತಿರುವಂತಿದೆ. ಹಾಗಾಗಿ, ಕಾರ್ಪೊರೇಟ್ ವಲಯದಲ್ಲಿ ಈ ಅಸಮಾನತೆ ಇನ್ನೂ ಗಟ್ಟಿಯಾಗಿ ಉಳಿದುಕೊಂಡಿದೆ ಎನ್ನಬಹುದು. 'ವುಮೆನ್ ಇನ್ ದಿ ಬೋರ್ಡ್‌ರೂಮ್' ವರದಿಯು, ಭಾರತೀಯ ಕಂಪನಿಗಳಲ್ಲಿ ಮಹಿಳೆಯರು ಶೇ.17.1ರಷ್ಟು ಮಾತ್ರ ಆಡಳಿತ ಮಂಡಳಿ/ನಿರ್ದೇಶಕರ ಮಟ್ಟದ ಸ್ಥಾನಗಳನ್ನು ಹೊಂದಿರುವುದನ್ನು ಬಹಿರಂಗಪಡಿಸುತ್ತದೆ.

ಭಾರತದ ಈಗಿನ ಸನ್ನಿವೇಶದಲ್ಲಿ ವೈವಿಧ್ಯತೆ, ಸಮಾನತೆ ಮತ್ತು ಒಳಗೊಳ್ಳುವಿಕೆ ಕುರಿತ ಇತ್ತೀಚಿನ ವರದಿಯು, ಭಾರತದಲ್ಲಿನ ದುಡಿಯುವ ವರ್ಗದ ಶೇ.78ರಷ್ಟನ್ನು ಪುರುಷರು, ಶೇ.18ರಷ್ಟನ್ನು ಮಹಿಳೆಯರು ಮತ್ತು ಶೇ.4ರಷ್ಟನ್ನು ತೃತೀಯ ಲಿಂಗಿಗಳು ಪ್ರತಿನಿಧಿಸುತ್ತಾರೆ ಎಂಬ ಮಾಹಿತಿಯನ್ನು ಬಹಿರಂಗಪಡಿಸಿದೆ. ಸಿದ್ಧ ಉಡುಪು ಮತ್ತಿತರ ಕೆಲ ಕಂಪನಿಗಳು ಪ್ರವೇಶಮಟ್ಟದ ಸ್ಥಾನಗಳಲ್ಲಿ ಆರೋಗ್ಯಕರ ಲಿಂಗಾನುಪಾತವನ್ನು ಹೊಂದಿದ್ದರೂ, ಅವರು ಶ್ರೇಣಿಯ ಏಣಿಯನ್ನು ಏರುತ್ತಿದ್ದಂತೆ ಆ ಸಂಖ್ಯೆ ಗಣನೀಯವಾಗಿ ತಗ್ಗುತ್ತದೆ ಎಂಬುದು ಸಾಬೀತಾಗಿದೆ. ಇದು ಸಂಸ್ಥೆಯ ಒಟ್ಟಾರೆ ಸಂಸ್ಕೃತಿ ಮತ್ತು ಮಹಿಳಾ ಉದ್ಯೋಗಿಗಳ ನೈತಿಕ ಸ್ಥೈರ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ನಿರ್ಧಾರ ಕೈಗೊಳ್ಳುವ ಸ್ಥಾನಗಳಲ್ಲಿ ಹೆಚ್ಚಿನ ಮಹಿಳೆಯರು ಕಂಡುಬಂದರೆ ಮಾತ್ರ ಅದು ನಿಜವಾದ ಲಿಂಗಸಮಾನತೆ ಎನ್ನಬಹುದು.

ಹಾಗಂತ, ಹಾಲಿ ಇರುವ ವ್ಯವಸ್ಥೆಯಿಂದ ಸಂಪೂರ್ಣ ಮಹಿಳಾಪ್ರಧಾನವಾದ ಹೊಸ ವ್ಯವಸ್ಥೆಯೆಡೆಗೆ ರಾತ್ರಿ ಬೆಳಗಾಗುವುದರೊಳಗೆ ಸಾಗಿಬಿಡುವುದು ಯಾವುದೇ ಸಂಸ್ಥೆಗೆ ಅಷ್ಟು ಸುಲಭವಲ್ಲ, ಈ ಕುರಿತ ಅನೇಕ ಸವಾಲುಗಳನ್ನೂ ಅವು ಎದುರಿಸಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಐತಿಹಾಸಿಕವಾಗಿ ಆಳವಾಗಿ ಬೇರೂರಿರುವ ಪಕ್ಷಪಾತ ಧೋರಣೆಗಳು ಇಂಥ ಪ್ರಮುಖ ಸವಾಲುಗಳಲ್ಲಿ ಒಂದೆನಿಸಿದೆ. ಮಾತ್ರವಲ್ಲದೆ, ಭಾರತದ ಅನೇಕ ಭಾಗಗಳಲ್ಲಿ ಇವತ್ತಿಗೂ ಮಹಿಳೆಯರು ತಮ್ಮ ವೃತ್ತಿಜೀವನಕ್ಕಿಂತ ಕೌಟುಂಬಿಕ ಜವಾಬ್ದಾರಿಗಳಿಗೆ ಆದ್ಯತೆ ನೀಡುತ್ತಿದ್ದಾರೆ; ಮಹಿಳೆಯರು ಪುರುಷರಷ್ಟು ಸಮರ್ಥರಲ್ಲ ಎಂಬ ವ್ಯಾಪಕ ನಂಬಿಕೆಗಳಿಂದ ಆಚೆ ಬರುವುದೂ ಅವರಿಗೆ ದೊಡ್ಡ ಸವಾಲೇ ಆಗಿದೆ. ಈ ಸವಾಲುಗಳ ಹೊರತಾಗಿಯೂ ಲಿಂಗ ವೈವಿಧ್ಯತೆಯನ್ನು ಉತ್ತೇಜಿಸಲು ಮತ್ತು ಹೆಚ್ಚು ಅಂತರ್ಗತ ಕೆಲಸದ ವಾತಾವರಣವನ್ನು ರೂಪಿಸಲು, ವೃತ್ತಿಜೀವನವನ್ನು ತಮ್ಮ ಕೌಟುಂಬಿಕ ಜವಾಬ್ದಾರಿಗಳೊಂದಿಗೆ ಸಮತೋಲನಗೊಳಿಸಬೇಕಾದ ಅಗತ್ಯವಿರುವ ಮಹಿಳೆಯರಿಗೆ ಅವಕಾಶ ಕಲ್ಪಿಸಲು ಕಂಪನಿಗಳು, ಕೆಲಸದ ಸಮಯ ಮತ್ತು ಮನೆಯಿಂದಲೇ ಕೆಲಸ ಮಾಡಬಹುದಾದ ನೀತಿಗಳನ್ನು ಜಾರಿಗೆ ತರಬೇಕಿದೆ. ಕಾರ್ಯಕ್ಷೇತ್ರದಲ್ಲಿನ ಯಶಸ್ಸಿಗೆ ಅಗತ್ಯವಾಗುವ ಕೌಶಲ ಮತ್ತು ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳುವಲ್ಲಿ ಮಹಿಳೆಯರಿಗೆ ನೆರವಾಗಲು ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಬೇ ಕಾಗುತ್ತದೆ. ಒಟ್ಟಾರೆಯಾಗಿ, ದೇಶದ ಔದ್ಯೋಗಿಕ ವಲಯದಲ್ಲಿ ಹೆಚ್ಚಿನ ಲಿಂಗ-ವೈವಿಧ್ಯತೆಯನ್ನು ಜಾರಿಗೆ ತರಲು ಸಾಕಷ್ಟು ಕೆಲಸಗಳಾಗಬೇಕಿದೆ ಎಂಬುದಂತೂ ಸತ್ಯ.

ಈ ನಿಟ್ಟಿನಲ್ಲಿ ದೇಶವಿನ್ನೂ ಬಹುದೂರ ಸಾಗಬೇಕಾಗಿದ್ದರೂ, MeToo ಮತ್ತು He for She ನಂಥ ಅಭಿಯಾನಗಳು ವಿಶ್ವಾದ್ಯಂತದ ಲಿಂಗ ಅಸಮಾನತೆಯ ಪರಿಸ್ಥಿತಿಯನ್ನು ಕ್ಷಿಪ್ರವಾಗಿ ಬದಲಾಯಿಸಲು ಕಾರಣವಾಗುತ್ತಿವೆ. ಇತ್ತೀಚೆಗೆ ಅನೇಕ ಸಂಸ್ಥೆಗಳು ಸ್ವಯಂಪ್ರೇರಣೆಯಿಂದ ಮಹಿಳಾ-ಕೇಂದ್ರಿತ ನೀತಿಗಳನ್ನು ಪರಿಚಯಿಸಲು ಪ್ರಾರಂಭಿಸಿವೆ. ಅನೇಕ ಪ್ರಸಿದ್ಧ ಖಾಸಗಿ ಸಂಸ್ಥೆಗಳು, ಮಹಿಳೆಯರೂ ಕಾರ್ಯನಿರ್ವಹಿಸಲು ಸಾಧ್ಯವಾಗುವಂತೆ ತಾಂತ್ರಿಕ ಬದಲಾವಣೆಗಳನ್ನು ಮಾಡಿಕೊಳ್ಳುತ್ತಿರುವುದರ ಜತೆಗೆ ಮತ್ತಷ್ಟು ಮಹಿಳಾ-ಸ್ನೇಹಿ ವ್ಯವಸ್ಥೆ ಮತ್ತು ಸೌಲಭ್ಯಗಳನ್ನು ಕಾರ್ಯಕ್ಷೇತ್ರದಲ್ಲಿ ಒದಗಿಸುತ್ತಿರುವುದನ್ನು ಕಾಣಬಹುದಾಗಿದೆ. ಆಧುನಿಕ ಮಹಿಳಾ ಉದ್ಯೋಗಿಗಳು ತಮ್ಮ ಉದ್ಯೋಗದಾತರನ್ನು ಆಯ್ಕೆಮಾಡುವಾಗ ನಿರೀಕ್ಷಿಸುವ ಸಮಾನ ವೇತನ, ಸುರಕ್ಷಿತ ಕೆಲಸದ ವಾತಾವರಣ, ಹೊಂದಿಕೊಳ್ಳುವ ಸಮಯದಂಥ ಕೆಲ ಪ್ರಮುಖ ಸವಲತ್ತುಗಳನ್ನು ಈ ಸಂಸ್ಥೆಗಳು ಒದಗಿಸುತ್ತಿವೆ. ಮಹಿಳೆಯರು ತಮ್ಮ ವೃತ್ತಿಜೀವನವನ್ನು ಮುಂದುವರಿಸಲು ಪ್ರೋತ್ಸಾಹಿಸುವ ಸಂಸ್ಕೃತಿಯನ್ನು ರೂಪಿಸುವತ್ತ ಆಧುನಿಕ ಸಂಸ್ಥೆಗಳು ಪ್ರಜ್ಞಾಪೂರ್ವಕವಾಗಿ ತೊಡಗಿಸಿಕೊಂಡಿವೆ ಮತ್ತು ಹಲವು ಪ್ರಮುಖ ಕಂಪನಿಗಳು ಹಿರಿಯ ನಾಯಕತ್ವದ ಮಟ್ಟದಲ್ಲಿ ಲಿಂಗ ವೈವಿಧ್ಯತೆಯನ್ನು ಹೆಚ್ಚಿಸುವಲ್ಲಿ ಗಮನಾರ್ಹ ಪ್ರಗತಿಯನ್ನೂ ಸಾಧಿಸಿವೆ. ಕೆಲಸದ ಸ್ಥಳದಲ್ಲಿ ಮಹಿಳೆಯರನ್ನು ಆಕರ್ಷಿಸಲು ಮತ್ತು ಅವರನ್ನು ಉಳಿಸಿಕೊಳ್ಳಲು ಅವು ರಚನಾತ್ಮಕ ಕಾರ್ಯಕ್ರಮಗಳನ್ನು ರೂಢಿಸಿಕೊಳ್ಳುತ್ತಿರುವುದು ಆಶಾದಾಯಕ ಸಂಗತಿಯಾಗಿದೆ.

ದೇಶದ ಸಾಂಸ್ಥಿಕ ಆಡಳಿತದಲ್ಲಿ ಲಿಂಗ ವೈವಿಧ್ಯತೆಯನ್ನು ಹೆಚ್ಚಿಸುವ ಪ್ರಯತ್ನಗಳಿಗಾಗಿಯೇ ಯಾವುದೇ ನಿರ್ದಿಷ್ಟ ಕಾನೂನು ಇಲ್ಲದಿದ್ದರೂ, ಪರೋಕ್ಷವಾಗಿ ಜಾರಿಯಲ್ಲಿರುವ ವಿವಿಧ ಕಾನೂನುಗಳು ಈ ನಿಟ್ಟಿನಲ್ಲಿ ಒತ್ತಾಸೆಯಾಗಿ ನಿಂತಿವೆ. 'ಕಂಪನಿ ಕಾಯ್ದೆ'ಗಳ ಪ್ರಕಾರ, ಸಾರ್ವಜನಿಕ ಕಂಪನಿಗಳು ತಮ್ಮ ಆಡಳಿತ ಮಂಡಳಿಯಲ್ಲಿ ಕನಿಷ್ಠ ಒಬ್ಬ ಮಹಿಳೆಯನ್ನು ನಿರ್ದೇಶಕರಾಗಿ ನೇಮಿಸುವುದು ಕಡ್ಡಾಯವಾಗಿದೆ. 'ಸೆಕ್ಯುರಿಟೀಸ್ ಆ್ಯಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ' (ಸೆಬಿ) ನಿಯಮಗಳ ಪ್ರಕಾರ, ಸಂಸ್ಥೆಗಳು ಮಹಿಳಾ ನಿರ್ದೇಶಕರ ನೇಮಕಾತಿ ಸೇರಿದಂತೆ ಮಂಡಳಿಯ ಸಂಯೋಜನೆಯ ಬಗೆಗಿನ ಲಿಂಗ ವೈವಿಧ್ಯತೆಯ ನೀತಿಗಳನ್ನು ಬಹಿರಂಗಪಡಿಸಬೇಕಾಗುತ್ತದೆ ಮತ್ತು ವರದಿ ಮಾಡಬೇಕಾಗುತ್ತದೆ. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳವನ್ನು ತಡೆಗಟ್ಟುವಿಕೆಯ ಕಾಯ್ದೆಯ ಪ್ರಕಾರ, 10 ಅಥವಾ ಅದಕ್ಕಿಂತ ಹೆಚ್ಚು ಮಹಿಳಾ ಉದ್ಯೋಗಿಗಳನ್ನು ಹೊಂದಿರುವ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ತಡೆಯಲು ಸಮಿತಿಯನ್ನು ರಚಿಸಬೇಕಾಗುತ್ತದೆ. ಈ ಸಮಿತಿಗೆ ಉನ್ನತ ಹುದ್ದೆಯಲ್ಲಿರುವ ಮಹಿಳೆಯೊಬ್ಬರು ಅಧ್ಯಕ್ಷರಾಗಿರಬೇಕಾಗುತ್ತದೆ ಮತ್ತು ಸಮಿತಿಯ ಅರ್ಧದಷ್ಟು ಸದಸ್ಯರು ಮಹಿಳೆಯರೇ ಆಗಿರಬೇಕಾಗುತ್ತದೆ. 'ಕಾರ್ಖಾನೆ ಕಾಯ್ದೆ'ಯು, 50 ಅಥವಾ ಅದಕ್ಕಿಂತ ಹೆಚ್ಚಿನ ಮಹಿಳಾ ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು, ಮಕ್ಕಳ ಆರೈಕೆ ಮಾಡುವ ಸೌಲಭ್ಯಗಳನ್ನು ಸಂಸ್ಥೆಯೊಳಗಡೆಯೇ ನಿರ್ಮಿಸುವುದನ್ನು ಕಡ್ಡಾಯಗೊಳಿಸುತ್ತದೆ. 'ಸಮಾನ ವೇತನ ಕಾಯ್ದೆ'ಯಡಿಯಲ್ಲಿ, ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಭೇದವಿಲ್ಲದೆ ನೀಡಬೇಕಾಗುತ್ತದೆ.

ಭಾರತದಲ್ಲಿ ಉದ್ಯೋಗದಲ್ಲಿನ ಲಿಂಗ ತಾರತಮ್ಯವನ್ನು ಸಂಪೂರ್ಣ ನಿವಾರಿಸಿ, ಎಲ್ಲರಿಗೂ ಮುಕ್ತ ಅವಕಾಶವನ್ನು ಕಲ್ಪಿಸುವಲ್ಲಿ ಹೊಸ ಕಾನೂನುಗಳ ಅಗತ್ಯವಿದೆ ಎನ್ನುವುದಕ್ಕಿಂತ, ಮನಸ್ಥಿತಿಯಲ್ಲಿನ ಬದಲಾವಣೆಯ ಅವಶ್ಯಕತೆಯಿದೆ ಎನ್ನುವುದು ಹೆಚ್ಚು ಸೂಕ್ತ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಸುದ್ದಿಮನೆಯಲ್ಲಿ ಸದ್ದಿಲ್ಲದೆ ಸಿಗುತ್ತೆ ಸುದ್ದಿಗೆ ಗುದ್ದು!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಇದು ಯಾವುದೇ ಪತ್ರಿಕಾಲಯದಲ್ಲಿ ಸಾಮಾನ್ಯವಾಗಿ ಕಾಣಬರುವ ಚಿತ್ರಣ. 'ಡೆಡ್‌ಲೈನ್' ಎಂಬ ಗುಮ್ಮನ ಕೈಗಳಿಗೆ ತಮ್ಮನ್ನು ಒಪ್ಪಿಸಿಕೊಳ್ಳಬೇಕಾಗಿ ಬರುವ ಸುದ್ದಿಮನೆಯ ವೃತ್ತಿಪ್ರವೀಣರು, ಕೊನೆಯ ಕ್ಷಣದಲ್ಲಿ ಎದುರಿಸಬೇಕಾಗುವ ಸವಾಲುಗಳು, ಅನುಭವಿಸುವ ಒತ್ತಡಗಳು ಮತ್ತು ಅದರ ಪರಿಣಾಮವಾಗಿ ಉದ್ಭವಿಸುವ ಎಡವಟ್ಟುಗಳ ಕುರಿತು ಹೇಳುತ್ತಾ ಹೋದರೆ ಅದೇ ಒಂದು ಮಹಾಗ್ರಂಥವಾದೀತು. ಅಂಥ ಒಂದೆರಡು ಸಂಗತಿಗಳನ್ನು ಇಲ್ಲಿ ಮೆಲುಕುಹಾಕಿರುವೆ.

ಈ ಘಟನೆಯನ್ನು, ನಾನು ಪದವಿ ತರಗತಿಯಲ್ಲಿದ್ದಾಗ ನಮ್ಮ ಇಂಗ್ಲಿಷ್ ಉಪನ್ಯಾಸಕರು ಹೇಳಿದ್ದು. ಇದು ಘಟಿಸಿ ದಶಕಗಳೇ ಆಗಿವೆಯೆನ್ನಿ. ಅದೊಂದು ಜನಪ್ರಿಯ ಪತ್ರಿಕೆ. ಅದರಲ್ಲಿ ಪ್ರಕಟವಾಗುತ್ತಿದ್ದ ರುಚಿಕಟ್ಟಾದ ಮತ್ತು ರಂಜನಾತ್ಮಕ ಸುದ್ದಿಗಳನ್ನು ಚಪ್ಪರಿಸಲು ಓದುಗರು ಹಾತೊರೆಯುತ್ತಿದ್ದರು. ಪತ್ರಿಕೆಯ ಎಲ್ಲ ಪುಟಗಳ ಸಂಪಾದನೆ-ಸಂಯೋಜನೆ ಮುಗಿದು ಇನ್ನೇನು ಮುದ್ರಣಕ್ಕೆ ಕಳಿಸಬೇಕೆನ್ನುವಷ್ಟರಲ್ಲಿ ಎರಡು ಮಹತ್ವದ ಸುದ್ದಿಗಳು ಬಂದವು ಮತ್ತು ಅವನ್ನು ಪ್ರಕಟಣೆಗೆ ಪರಿಗಣಿಸಲೇಬೇಕೆಂದು ಪತ್ರಿಕೆಯ ಮ್ಯಾನೇಜ್‌ಮೆಂಟ್‌ನಿಂದ ಒತ್ತಡವೂ ಬಂತು. ಸರಿ, ಸಮರೋಪಾದಿಯಲ್ಲಿ ಕೆಲಸಕ್ಕೆ ತೊಡಗಿಸಿಕೊಂಡ 'ಡೆಸ್ಕ್' ಪತ್ರಕರ್ತರು, ಮುಖಪುಟದಲ್ಲಿ ಪ್ರಕಟಣೆಗೆಂದು ಮುಂಚೆ ಪರಿಗಣಿಸಲಾಗಿದ್ದ ಎರಡು ಸುದ್ದಿಗಳನ್ನು ಎತ್ತಿ ಪಕ್ಕಕ್ಕಿಟ್ಟು, ಹೊಸದಾಗಿ ಬಂದಿದ್ದ ಆ ಎರಡು ಮಹತ್ವದ ಸುದ್ದಿಗಳನ್ನು ಪುಟದಲ್ಲಿ ಲಭ್ಯವಿರುವ ಜಾಗಕ್ಕೆ ಅಡಕಗೊಳಿಸಲು ಸಜ್ಜಾದರು. ಸುದ್ದಿಶೀರ್ಷಿಕೆಗಳೂ ಸಿದ್ಧವಾದವು. ಅವುಗಳಲ್ಲಿ ಒಂದು- 'ನಗರಕ್ಕೆ ಭೇಟಿಯಿತ್ತ ಸೊಮಾಲಿಯಾ ಅಧ್ಯಕ್ಷರು' ಎಂದಿದ್ದರೆ, ಮತ್ತೊಂದು- 'ಮೃಗಾಲಯದಲ್ಲಿ ಮೂರು ಮರಿಗಳಿಗೆ ಜನ್ಮವಿತ್ತ ಚಿಂಪಾಂಜಿ' ಎಂಬುದಾಗಿತ್ತು. ಕ್ಲುಪ್ತ ಸಮಯದಲ್ಲೇ ಈ ಎರಡೂ ಸುದ್ದಿಗಳನ್ನು ಸಿದ್ಧಪಡಿಸಿ, ತಿದ್ದಿ ತೀಡಿ, ಪುಟದಲ್ಲಿ ಅಡಕಗೊಳಿಸಿ ಮುದ್ರಣಕ್ಕೆ ಕಳಿಸುವ ಹೊತ್ತಿಗೆ ಪತ್ರಿಕೆಯ ಮುಖಪುಟದ ನಿರ್ವಾಹಕರ ಬೆವರುನೀರು ತಲೆಯಿಂದ ಶುರುವಾಗಿ ದೇಹದ ಸಂದುಗೊಂದುಗಳಲ್ಲೆಲ್ಲಾ ಇಳಿದು ಪಾದಗಳವರೆಗೂ ಹರಿದುಬಂದಿತ್ತು! ಆದರೆ, ಲಭ್ಯವಿದ್ದ ಅಲ್ಪ ಸಮಯದಲ್ಲೇ ಎರಡೂ ಸುದ್ದಿಗಳನ್ನು ಸಜ್ಜುಗೊಳಿಸಿದ್ದಕ್ಕೆ ಮ್ಯಾನೇಜ್‌ಮೆಂಟ್‌ನಿಂದ ಶಹಭಾಸ್‌ಗಿರಿ ಸಿಕ್ಕಿದ್ದರಿಂದ ಆ ಶ್ರಮವೆಲ್ಲಾ ಮಾಯವಾಯಿತು. ಸರಿ, ಅವರು ಕ್ಯಾಂಟೀನ್‌ಗೆ ತೆರಳಿ ಅಂದಿನ ಕೊನೆಯ ಕಾಫಿಯನ್ನು ಸವಿದು ನಿರಾಳರಾಗಿ ಮನೆಗೆ ತೆರಳಿದರು.



ಆದರೆ, ದಂಡಿಯಾಗಿ ಮುದ್ರಣಗೊಂಡ ಪತ್ರಿಕೆಗಳು ಮರುದಿನ ಮುಂಜಾನೆ ನಗರದ ವಿವಿಧ ಬಡಾವಣೆಗಳಲ್ಲಿನ ಮನೆಗಳಿಗೆ, ನ್ಯೂಸ್ ಪೇಪರ್ ಸ್ಟಾಲ್‌ಗಳಿಗೆ ವಿತರಣೆಯಾದ ನಂತರ ರಂಪ ರಾಮಾಯಣವಾಗಿತ್ತು, ಪತ್ರಿಕೆಯ ಮುಖಪುಟದ ಗಂಭೀರ ಓದಿನ ಒಂದಿಡೀ ವಾತಾವರಣವೇ ಬದಲಾಗಿತ್ತು. ಓದುಗರು ಮುಖಪುಟವನ್ನು ಮುಖಕ್ಕೆ ಒತ್ತಿಕೊಂಡು ಬಿದ್ದುಬಿದ್ದು ನಗುತ್ತಿದ್ದರು. ಅದಕ್ಕೆ ಕಾರಣವಾಗಿದ್ದು, ಎರಡು ಮಹತ್ವದ ಸುದ್ದಿಗಳನ್ನು ಪ್ರಸ್ತುತ ಪಡಿಸಿದ ರೀತಿ. ಅವೆರಡೂ ಕೊನೆಯ ಕ್ಷಣದಲ್ಲಿ ಬಂದ ಸುದ್ದಿಗಳು ಎಂದು ಹೇಳಿದೆನಲ್ಲವೇ? ಮುಖಪುಟದ ನಿರ್ವಾಹಕರು ಪುಟದಲ್ಲಿ ಲಭ್ಯವಿರುವ ಜಾಗಕ್ಕೆ ತಕ್ಕಂತೆ ಸರಿಯಾಗೇ ಆ ಎರಡೂ ಸುದ್ದಿಗಳನ್ನೂ ಎಡಿಟ್ ಮಾಡಿ, ಪುಟದ ಎಡಕ್ಕೊಂದು ಬಲಕ್ಕೊಂದು ಎಂಬಂತೆ ಪಕ್ಕಪಕ್ಕದಲ್ಲೇ ಪ್ರಕಟಿಸಿದ್ದರು; ಆದರೆ ಸಂಬಂಧಿತ ಫೋಟೋಗಳನ್ನು ಹಾಕುವಾಗ ಎಡವಟ್ಟಾಗಿತ್ತು. ಅಂದರೆ, 'ನಗರಕ್ಕೆ ಭೇಟಿಯಿತ್ತ ಸೊಮಾಲಿಯಾ ಅಧ್ಯಕ್ಷರು' ಎಂಬ ಸುದ್ದಿಯ ಜತೆಗೆ ಚಿಂಪಾಂಜಿಯ ಫೋಟೋ ಮತ್ತು 'ಮೃಗಾಲಯದಲ್ಲಿ ಮೂರು ಮರಿಗಳಿಗೆ ಜನ್ಮವಿತ್ತ ಚಿಂಪಾಂಜಿ' ಎಂಬ ಸುದ್ದಿಯ ಜತೆಗೆ ಸೊಮಾಲಿಯಾ ದೇಶದ ಅಧ್ಯಕ್ಷರ ಫೋಟೋ ರಾರಾಜಿಸುತ್ತಿದ್ದವು! ಅದೃಷ್ಟವಶಾತ್ ಸೊಮಾಲಿಯಾ ಅಧ್ಯಕ್ಷರು ಅಷ್ಟು ಹೊತ್ತಿಗೆ ತಮ್ಮ ದೇಶಕ್ಕೆ ಮರಳಿದ್ದರಿಂದ ಪತ್ರಿಕೆಯವರು ಬಚಾವ್ ಆಗಿದ್ದರು! ಆದರೆ ಪತ್ರಿಕೆಯ ಮ್ಯಾನೇಜ್‌ಮೆಂಟ್‌ನವರು ಮುಖಪುಟದ ನಿರ್ವಾಹಕರಿಗೆ ಮಾತಿನಲ್ಲೇ ತಪರಾಕಿ ಕೊಟ್ಟು ಗ್ರಹಚಾರ ಬಿಡಿಸಿದರು.

ಅಂದು ಮಧ್ಯಾಹ್ನವೇ ಪತ್ರಿಕಾಲಯಕ್ಕೆ ಆಗಮಿಸಿದ ಮುಖಪುಟದ ನಿರ್ವಾಹಕರು ಈ ಪ್ರಮಾದ ಆದದ್ದು ಹೇಗೆ ಎಂಬುದರ ಕುರಿತು ತನಿಖೆಗಿಳಿದಾಗ, ಇದು ಕಂಪೋಸಿಟರ್‌ನಿಂದ ಆದ ಎಡವಟ್ಟು ಎಂಬುದು ಗೊತ್ತಾಯಿತು. ಅದಾಗಿದ್ದು ಹೀಗೆ- ಮುಂಚೆಯೆಲ್ಲಾ ಪತ್ರಿಕೆಯ ಮುದ್ರಣಾಲಯಗಳಲ್ಲಿ ಇರುತ್ತಿದ್ದುದು ಅಚ್ಚುಮೊಳೆ ಅಕ್ಷರ ಜೋಡಣೆಯ ವ್ಯವಸ್ಥೆ; ಈಗಿನಂತೆ ಕಂಪ್ಯೂಟರ್‌ನಲ್ಲಿ ಛಾಯಾಕ್ಷರಗಳನ್ನು ಕೀಲಿಸಿ, ಫೋಟೋಗಳನ್ನೂ ಅದರಲ್ಲೇ ಎಡಿಟ್ ಮಾಡಿ ಸಂಬಂಧಿತ ಪುಟಕ್ಕೆ ನಿಯೋಜಿಸುವ ವ್ಯವಸ್ಥೆ ಆಗಿನ್ನೂ ಬಂದಿರಲಿಲ್ಲ. ಸುದ್ದಿ ಸಂಬಂಧಿತ ಚಿತ್ರಗಳು 'ಬ್ಲಾಕ್' ರೂಪದಲ್ಲಿ ಮುದ್ರಣಾಲಯಕ್ಕೆ ಬರುತ್ತಿದ್ದವು. ಅಂತೆಯೇ ಕೊನೆಯ ಕ್ಷಣದಲ್ಲಿ ಬಂದ ಮೇಲಿನ ಎರಡೂ ಸುದ್ದಿಗಳನ್ನು ಕಂಪೋಸಿಟರು ಲಕ್ಷಣವಾಗಿ ಅಕ್ಕಪಕ್ಕದಲ್ಲಿಯೇ ಸ್ಥಳಹೊಂದಿಸಿ ಕೂರಿಸಿದ. ಆದರೆ ಜತೆಗಿದ್ದ ಎರಡೂ ಫೋಟೋಗಳ ಬ್ಲಾಕ್‌ಗಳನ್ನು ಆಯಾ ಸುದ್ದಿಯ ಜತೆಗೆ ಕೂರಿಸುವಾಗ ಎಡವಟ್ಟಾಗಿದ್ದು. ಕಾರಣ, ಹೇಳಿಕೇಳಿ ಅದು ಕಪ್ಪು-ಬಿಳುಪು ಫೋಟೋಗಳ ಜಮಾನ. ಸೊಮಾಲಿಯಾ ಅಧ್ಯಕ್ಷರ ಫೋಟೋಕ್ಕೂ, ಮೃಗಾಲಯದಲ್ಲಿನ ಚಿಂಪಾಂಜಿಯ ಫೋಟೋಕ್ಕೂ ಅವನಿಗೆ ಅಂಥದ್ದೇನೂ ವ್ಯತ್ಯಾಸ ಕಂಡಿರಲಿಲ್ಲ! ಹೀಗಾಗಿ ಕೈಗೆ ಸಿಕ್ಕಿದ್ದನ್ನು ಆಯಾ ಸುದ್ದಿಗಳ ಜತೆಗೆ ಕೂರಿಸಿ ಲಕ್ಷಣವಾಗಿ ಕೈತೊಳೆದುಕೊಂಡಿದ್ದ! ಸೊಮಾಲಿಯಾ ಅಧ್ಯಕ್ಷರು ಕಂಪೋಸಿಟರ್‌ನ ಕೈಯಲ್ಲಿ ಸಿಲುಕಿ, ನಲುಗಿ ಚಿಂಪಾಂಜಿಯಾಗಿದ್ದರು!!

ಮತ್ತೊಂದು ಘಟನೆ ಅವಲೋಕಿಸೋಣ. ಈಗಂತೂ ಪತ್ರಿಕಾಲಯಗಳು ಸಾಕಷ್ಟು ಆಧುನೀಕರಣಗೊಂಡಿವೆ ಎನ್ನಿ. ಸುದ್ದಿ ಸಂಪಾದನೆ, ಅಕ್ಷರಜೋಡಣೆ, ಪುಟವಿನ್ಯಾಸ, ಭಾವಚಿತ್ರ-ರೇಖಾಚಿತ್ರ-ವ್ಯಂಗ್ಯಚಿತ್ರಗಳ ಅಳವಡಿಕೆ ಮುಂತಾದ ಚಟುವಟಿಕೆಗಳೆಲ್ಲವೂ ಪತ್ರಿಕಾಲಯಗಳಲ್ಲಿ ನೆರವೇರುವುದು ಕಂಪ್ಯೂಟರ್ ನೆರವಿನಿಂದಲೇ. ಆದರೆ, ಬಹಳ ವರ್ಷಗಳ ಹಿಂದೆ ಪರಿಸ್ಥಿತಿ ಹಾಗಿರಲಿಲ್ಲ; ಪತ್ರಿಕಾಲಯಗಳಿಗೆ ಕಂಪ್ಯೂಟರುಗಳು ದೊಡ್ಡ ಸಂಖ್ಯೆಯಲ್ಲಿ ಇನ್ನೂ ದಾಂಗುಡಿ ಇಟ್ಟಿರಲಿಲ್ಲ. ವರದಿಗಾರರು, ಉಪಸಂಪಾದಕರು, ಬರಹಗಾರರು ಮತ್ತು ವಿವಿಧ ಓದುಗರಿಂದ ಬರುವ ಬರಹದ ಹಸ್ತಪ್ರತಿಗಳನ್ನು ಡಿಟಿಪಿ ಸೆಕ್ಷನ್‌ನ ಕಂಪ್ಯೂಟರ್ ಆಪರೇಟರ್ ಒಬ್ಬನಿಗೆ ಕೊಟ್ಟು ಅವನ್ನು ಕೀಲಿಸಿ ಕೊಡುವಂತೆ ಹೇಳಬೇಕಿತ್ತು. ತರುವಾಯ ಅವುಗಳ ಪ್ರಿಂಟ್ ಔಟ್ ತೆಗೆದುಕೊಂಡು ಕರಡಚ್ಚು ತಿದ್ದಿದ ನಂತರ ಬರಹಗಳು ಪುಟಕ್ಕೆ ವರ್ಗಾವಣೆಯಾಗುತ್ತಿದ್ದವು. ಇಂಥ ವೇಳೆ, ಹಸ್ತಪ್ರತಿಯಲ್ಲಿನ ಅಕ್ಷರಗಳು ಸ್ಪಷ್ಟವಾಗಿಲ್ಲದೆ ಕಲಸಿಕೊಂಡಿರುವ ಕಾರಣಕ್ಕೋ ಅಥವಾ ಡಿಟಿಪಿ ಆಪರೇಟರ್‌ನ ದಿವ್ಯ ನಿರ್ಲಕ್ಷ್ಯದಿಂದಲೋ ಕಂಪೋಸ್ ಮಾಡಲಾದ ಬರಹದ ಕಾಗುಣಿತದಲ್ಲಿ ಸಾಕಷ್ಟು ಏರುಪೇರುಗಳಾಗಿರುತ್ತಿದ್ದವು. ಅವನ್ನು ನಿರಾಳವಾಗಿ ಪರಿಶೀಲಿಸಿ ಒಪ್ಪ ಮಾಡಿ ಪ್ರಕಟಣೆಗೆ ಕಳಿಸುವುದಕ್ಕೂ ಸಂಬಂಧಿತ ಡೆಸ್ಕ್ ಪತ್ರಕರ್ತರಿಗೆ ಕೆಲವೊಮ್ಮೆ ಆಗುತ್ತಿರಲಿಲ್ಲ. ಕಾರಣ, ಮೊದಲೇ ಹೇಳಿದಂತೆ ಮತ್ತದೇ 'ಡೆಡ್‌ಲೈನ್ ಗುಮ್ಮ'. ಇಂಥ ವೇಳೆ, ಸುದ್ದಿಸಾಲುಗಳು ವಿಪರೀತ ಅರ್ಥವನ್ನು ಹೊಮ್ಮಿಸಿಬಿಡುತ್ತಿದ್ದವು. 'ಹೆದ್ದಾರಿಯ ಉದ್ಘಾಟನೆಗೆ ಬಂದ ಸಚಿವರು, ತಮ್ಮ ಬಹುದಿನದ ಕನಸನ್ನು ನನಸಾಗಿಸಿದ್ದಕ್ಕೆ ದೇವರಿಗೆ ಕೃತಜ್ಞತೆ ಸಲ್ಲಿಸಿ, ಉದ್ಘಾಟನೆಯ ನಂತರ ರಾತ್ರಿ ಅದೇ ರಸ್ತೆಯಲ್ಲಿ ತಮ್ಮ ಪತ್ನಿಯೊಂದಿಗೆ ತೆವಳಿದರು' ಎಂಬುದು ಡಿಟಿಪಿ ಮಹಾಶಯ ಟೈಪ್ ಮಾಡಿದ ಇಂಥದೊಂದು ಸುದ್ದಿಸಾಲು. ಕರಡು ತಿದ್ದಲೆಂದು ಇದರ ಪ್ರಿಂಟ್ ಔಟ್ ತೆಗೆದುಕೊಂಡು ಓದಿದ ಟ್ರೇನೀ ಪತ್ರಕರ್ತರೊಬ್ಬರು, 'ಅಲ್ಲಾ, ಹೆದ್ದಾರಿಯನ್ನು ಉದ್ಘಾಟಿಸಿದ ಸಚಿವರು ಅದೇ ರಸ್ತೆಯಲ್ಲಿ ರಾತ್ರಿ ತಮ್ಮ ಪತ್ನಿಯೊಂದಿಗೆ ತೆವಳುವ ಅಗತ್ಯವೇನಿತ್ತು? ಅವರು ದೇವರಲ್ಲಿ ಹಾಗೇನಾದರೂ ಹರಕೆ ಹೊತ್ತಿದ್ದರೇ?!' ಎಂದು ಗೊಂದಲಗೊಂಡರು. ಅಷ್ಟಕ್ಕೇ ಸುಮ್ಮನಾಗದೆ ಆ ಸುದ್ದಿಯನ್ನು ಕಳಿಸಿದ್ದ ವರದಿಗಾರನಿಗೆ ಫೋನ್ ಹಚ್ಚಿ, 'ಹೆದ್ದಾರಿ ಉದ್ಘಾಟನೆಯ ನಂತರ ಸಚಿವರು ಅದರಲ್ಲಿ ಉರುಳುಸೇವೆ ಏನಾದ್ರೂ ಮಾಡಿದ್ರಾ?' ಎಂದೇ ನೇರವಾಗಿ ಕೇಳಿದರು. ಆ ವರದಿಗಾರನೂ ಎಳಸೇ, ಹೀಗಾಗಿ ಆತನೂ ಗಲಿಬಿಲಿಗೊಂಡು, 'ಹಾಗೇನೂ ಇಲ್ವಲ್ಲಾ.... ' ಎನ್ನುತ್ತಾ ಇನ್ನೇನು ಮಾತು ಮುಂದುವರಿಸಬೇಕು ಎನ್ನುವಷ್ಟರಲ್ಲಿ ಫೋನ್ ಸಂಪರ್ಕ ಕಡಿತಗೊಂಡಿತು. ಮತ್ತೆ ಲೈನ್ ಸಿಗಲಿಲ್ಲ (ಆಗೆಲ್ಲಾ ಮೊಬೈಲ್ ಇರಲಿಲ್ಲ, ಸ್ಥಿರ ದೂರವಾಣಿಯ ಸಂಪರ್ಕಜಾಲವೂ ಇಷ್ಟೊಂದು ಆಧುನೀಕರಣಗೊಂಡಿರಲಿಲ್ಲ. ಹೀಗಾಗಿ ಲೈನ್ ಸಿಗುವುದು ಕಷ್ಟವಿತ್ತು, ಮಳೆ ಬಂದರಂತೂ ಇನ್ನೂ ಅಧ್ವಾನ!). ಏನೂ ತೋಚದೆ ಆ ಟ್ರೇನೀ ಪತ್ರಕರ್ತರು ಮತ್ತಷ್ಟು ಗೊಂದಲ=ಗೊಂಡಿದ್ದಾಗ ಅಲ್ಲಿಗೆ ಬಂದ ಹಿರಿಯ ಸಹೋದ್ಯೋಗಿಯೊಬ್ಬರು ಕಂಪೋಸ್ ಮಾಡಲಾಗಿದ್ದ ಸುದ್ದಿಯನ್ನು ಓದಿ ಬಿದ್ದುಬಿದ್ದು ನಗಲಾರಂಭಿಸಿದರು. ಎಡವಟ್ಟು ಆಗಿರೋದು ಹೇಗೆ ಎಂಬುದು ಆ ಅನುಭವಿಗೆ ಗೊತ್ತಾಗಿತ್ತು. ವಾಸ್ತವವಾಗಿ ವರದಿಗಾರ ಕಳಿಸಿದ್ದ ಹಸ್ತಪ್ರತಿಯಲ್ಲಿ '... ಅದೇ ರಾತ್ರಿ ರಸ್ತೆಯಲ್ಲಿ ತಮ್ಮ ಪತ್ನಿಯೊಂದಿಗೆ ತೆರಳಿದರು' ಎಂದಿತ್ತು. ಆದರೆ ಆ ಸಾಲು ಕಲಸಿಕೊಂಡು ಹೋಗಿದ್ದರಿಂದ 'ಪತ್ನಿಯೊಂದಿಗೆ ತೆರಳಿದರು' ಎಂಬುದನ್ನು ಡಿಟಿಪಿ ಮಹಾಶಯ 'ಪತ್ನಿಯೊಂದಿಗೆ ತೆವಳಿದರು' ಎಂದು ಕಂಪೋಸ್ ಮಾಡಿದ್ದ! ಒಂದೊಮ್ಮೆ ಈ ಸುದ್ದಿ ಹಾಗೆಯೇ ಅಚ್ಚಾಗಿಬಿಟ್ಟಿದ್ದರೆ ಅದಿನ್ನೇನು ರಾದ್ಧಾಂತವಾಗುತ್ತಿತ್ತು ಎಂಬುದನ್ನು ಒಮ್ಮೆ ಊಹಿಸಿಕೊಳ್ಳಿ!

ಇದೇ ರೀತಿಯಲ್ಲಿ, 'ಕಾಮಪೀಡಿತ ಪ್ರದೇಶಗಳನ್ನು ತುಂಬಾ ಮುತುವರ್ಜಿಯಿಟ್ಟು ಖುದ್ದಾಗಿ ವೀಕ್ಷಿಸಿದ ಸಚಿವರು' ಎಂಬ ಸಾಲನ್ನೂ ಕೀಲಿಸಿದ ಮಹಾನುಭಾವರಿದ್ದಾರೆ. ವಾಸ್ತವವಾಗಿ ವರದಿಗಾರರ ಹಸ್ತಪ್ರತಿಯಲ್ಲಿದ್ದುದು 'ಕ್ಷಾಮಪೀಡಿತ ಪ್ರದೇಶಗಳನ್ನು...' ಅಂತ. ಕಂಪ್ಯೂಟರ್ ಬೆರಳಚ್ಚುಗಾರನ ಕಣ್ಣಿಗೆ ವರದಿಗಾರನ ಹಸ್ತಪ್ರತಿಯಲ್ಲಿ 'ಕಾ'ಕ್ಕೆ ಒತ್ತುಕೊಟ್ಟಿದ್ದ 'ಷ'ಕಾರ ಕಣ್ಣಿಗೆ ಬಿದ್ದಿರಲಿಲ್ಲವೋ ಅಥವಾ ಕೆಲ ಪದಗಳನ್ನು ಹೊರಡಿಸಲಾಗದೆ ನಾಲಿಗೆ ತೊದಲುವಂತೆ ಅವನ ಕೈಗಳೂ ತೊದಲಿದ್ದವೋ ಗೊತ್ತಿಲ್ಲ, ಒಟ್ಟಿನಲ್ಲಿ ಎಡವಟ್ಟಾಗಿತ್ತು! ಹಿರಿಯ ಪತ್ರಕರ್ತರೊಬ್ಬರು ಸಕಾಲಕ್ಕೆ ಈ ಪ್ರಮಾದವನ್ನು ಗುರುತಿಸಿ, ಸರಿಪಡಿಸಿ, ಆ ಸಿಬ್ಬಂದಿಯ ಮೇಲೆ ಶಿಕ್ಷೆಯ ತೂಗುಕತ್ತಿ ತೂಗುವುದನ್ನು ತಪ್ಪಿಸಿದರು ಎನ್ನಿ!!

(ಲೇಖಕರು ಪತ್ರಕರ್ತರು)

ಕಂಗನಾ ಎಮರ್ಜೆನ್ಸಿ ಬ್ರೇಕ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಡಾ.ರಾಜ್‌ಕುಮಾರ್ ಕುಟುಂಬದ ಕುಡಿ ವಿನಯ್ ರಾಜ್‌ಕುಮಾರ್ ಹೊಸತನಕ್ಕೆ ತೆರೆದುಕೊಂಡಿರುವ ಚಿತ್ರ 'ಪೆಪೆ'. ಆದರೆ ಈ ಸಿನಿಮಾಗೆ ಪ್ರೇಕ್ಷಕ ತನ್ನನ್ನು ತಾನು ಹೇಗೆ ತೆರೆದುಕೊಳ್ಳುತ್ತಾನೆ ಅನ್ನೋ ಕುತೂಹಲ ಎಲ್ಲರಿಗೂ ಇದ್ದೇ ಇತ್ತು. ಮೇಲ್ನೋಟಕ್ಕೆ 'ಪೆಪೆ' ಚಿತ್ರದ ಕಥೆಯನ್ನು ಮಾಮೂಲಿ ಸೇಡಿನ ಕಥೆ ಅಂತ ಸುಲಭವಾಗಿ ಹೇಳಿಬಿಡಬಹುದು. ಊರಿನ ಪ್ರಮುಖ ಭಾಗವಾದ ಒಂದು ತೊರೆ, ಈ ಚಿತ್ರದಲ್ಲಿ ಕೂಡಾ ಪ್ರಮುಖ ಪಾತ್ರ ವಹಿಸಿದೆ. ಈ ತೊರೆ ಚಿತ್ರದಲ್ಲಿ ಒಂದು ಪ್ರತಿಷ್ಠೆಯ ವಿಷಯವಾಗಿ ಕಾಣಿಸಿಕೊಂಡಿದೆ. ಇಲ್ಲಿನ ಪಾತ್ರಗಳು ಅದನ್ನೇ ಸೇಡಿನ ಮೂಲವಾಗಿಸಿಕೊಂಡಿವೆ. 'ತೊರೆದು ಜೀವಿಸಲಾರೆ ಸೇಡು' ಅನ್ನೋ ಭಾವವನ್ನು ಈ ಚಿತ್ರದ ಪಾತ್ರಗಳು ಕೊನೆಯವರೆಗೂ ಶ್ರದ್ಧೆಯಿಂದ ಮುಂದುವರಿಸಿವೆ. ನಿರ್ದೇಶಕ ಶ್ರೀಲೇಶ್ ನಾಯರ್ ಈ ತೊರೆಯ ಸುತ್ತಲೇ ಇಡೀ ಚಿತ್ರದ ಕಥೆ ಹೆಣೆದು 'ತೊರೆಯ ನೀರನು ತೆರೆಗೆ ಚೆಲ್ಲಿ' ಎನ್ನುವಂಥ ಕಥೆ-ಚಿತ್ರಕಥೆ ಮಾಡಿದ್ದಾರೆ. ತೆರೆಮರೆಯಲ್ಲಿ ಇನ್ನೊಬ್ಬರನ್ನು ಕೊಲ್ಲುವ ಸೇಡಿನ ಭಾವನೆಯನ್ನೇ ಜೀವಿಸುವ ಪಾತ್ರಗಳ ನಡುವೆ ಇಡೀ ಚಿತ್ರದ ಕಥೆ ಈ ತೊರೆ ಮರೆಯಲ್ಲೇ ಸಾಗುತ್ತದೆ. ಚಿತ್ರದ ವಸ್ತು ಮತ್ತು ನಿರೂಪಣೆಯ ವಿಷಯಕ್ಕೆ ಬಂದ್ರೆ, ನಿರ್ದೇಶಕರು ಇಲ್ಲಿ ತೊರೆಯ ನೀರಿನ ಸೇಡಿನ ಕಮರ್ಷಿಯಲ್ ಎನಿಸಬಹುದಾದ 'ಪೆಪೆ'ಯ ಕಥೆಗೆ ಆರ್ಟ್ ಸಿನಿಮಾದ ನಿರೂಪಣೆಯನ್ನ ಮಿಕ್ಸ್ ಮಾಡಿ ತೇಪೆ ಹಾಕಿದ್ದಾರೆ. ಆದರೆ ಅದರಿಂದಲೇ ಕೆರೆಯ ನೀರಿನಂತೆ ಸಿನಿಮಾ ಕೂಡಾ ಕಲುಷಿತ ಆಗಿದೆ ಅಂತ ಹೇಳೋಕಾಗಲ್ಲ. ಆದರೆ, ಈ ತೊರೆಯ ನೀರಿನ ಕಥೆಯಲ್ಲಿ ಗಟ್ಟಿತನ ಇಲ್ಲ ಅನ್ನಿಸಿದರೆ, 'ನೀರಿನ ಕಥೆ ಅಲ್ವಾ, ಗಟ್ಟಿ ಇರೋಕೆ ಹೆಂಗೆ ಸಾಧ್ಯ?' ಅಂತ ಅದಕ್ಕೆ ಸಮರ್ಥನೆ ಕೊಡಬಹುದು. ಆ ಲೆಕ್ಕದಲ್ಲಿ ಈ ಚಿತ್ರ ಒಂಥರಾ ಹಾರ್ಡ್ ವಾಟರ್. ಚಿತ್ರದ ಕೊನೆಯಲ್ಲಿ, 'ನೀನು ಕಥೆ ಮುಂದುವರಿಸು ಪೆಪೆ' ಅಂತ ಚಿತ್ರದ ಪಾತ್ರಗಳು ಹೇಳಿದಾಗ, 'ದಯವಿಟ್ಟು ಬೇಡ' ಅನ್ನೋ ಗಾಂಧಿ ಕ್ಲಾಸ್ ಪ್ರೇಕ್ಷಕನ ಕೂಗು ನಿರ್ದೇಶಕರ ಕಿವಿ ಮುಟ್ಟುತ್ತದೆ. ಚಿತ್ರದಲ್ಲಿ ಹಿಂಸೆ ಜಾಸ್ತಿ ಇದ್ದರೂ, ಗಾಂಧಿ ಅಹಿಂಸೆ ಬೋಧಿಸಿದರು ಅನ್ನೋ ಕಾರಣಕ್ಕೋ ಏನೋ ತೀರಾ ಗಾಂಧಿ ಕ್ಲಾಸ್ ಪ್ರೇಕ್ಷಕ ಕೂಡಾ ಅದನ್ನು ಎಂಜಾಯ್ ಮಾಡೋದಿಲ್ಲ. ಈ ಎಲ್ಲ ಕಾರಣಗಳಿಗಾಗಿ 'ಪೆಪೆ' ಕೇವಲ ಒಂದು ವರ್ಗದ ಪ್ರೇಕ್ಷಕರಿಗೆ ಇಷ್ಟ ಆಗುವ ಸಿನಿಮಾ ಆಗಿಬಿಟ್ಟಿದೆ ಅನ್ನಿಸಿದರೆ ತಪ್ಪಿಲ್ಲ. ಆದರೆ ಅದು ಯಾವ ವರ್ಗ ಅಂತ ಹೇಳೋದು ಸ್ವಲ್ಪ ಕಷ್ಟವೇ.

ಲೂಸ್ ಟಾಕ್



ಕಂಗನಾ ರನೌತ್

- **ಎನ್ರೀ, ನಿಮ್ಮ 'ಎಮರ್ಜೆನ್ಸಿ' ಸಿನಿಮಾ ಸೆಪ್ಟೆಂಬರ್ 6ಕ್ಕೆ ರಿಲೀಸ್ ಅಂತೆ?**

– ಹೌದು. ಸೆಪ್ಟೆಂಬರ್ 5 ಟೀಚರ್ಸ್ ಡೇ ಅಲ್ವಾ? ಸಿನಿಮಾ ಗೆದ್ರೆ ದುಡ್ಡು ಬರುತ್ತೆ, ಸೋತ್ರೆ ಟೀಚರ್ಸ್ ಡೇ ಕಾರಣಕ್ಕೆ ಬುದ್ಧಿನಾದ್ರೂ ಬರುತ್ತೆ ಅಂತ.

- **ಸಿನಿಮಾಗೆ 'ಎಮರ್ಜೆನ್ಸಿ' ಅಂತ ಹೆಸರಿಟ್ಟಿದ್ದೀರಿ. ಥಿಯೇಟರ್‌ಗಳಲ್ಲಿ ಇಂಟರ್ವಲ್ ಟೈಮಿಗೆ ಎಮರ್ಜೆನ್ಸಿ ಬ್ರೇಕ್ ಇರುತ್ತಾ ಇಲ್ವಾ?**

– ಅಯ್ಯೋ, ಮೊದ್ಲು ನನಗೆ ಒಂದು ಬ್ರೇಕ್ ಸಿಗ್ಲಿ, ಆಮೇಲೆ ಪ್ರೇಕ್ಷಕರಿಗೆ ಬ್ರೇಕ್ ಕೊಡೋದ್ರ ಬಗ್ಗೆ ನೋಡೋಣ.

- **ಅದೂ ಕರೆಕ್ಟೇ. ಆದ್ರೆ ಸೆನ್ಸಾರ್ ಆಗದೇನೇ ಸಿನಿಮಾ ರಿಲೀಸ್ ಡೇಟ್ ಅನೌನ್ಸ್ ಮಾಡಿದ್ದೀರಲ್ಲ. ನೀವೇನಾದ್ರೂ ಕನ್ನಡ ಇಂಡಸ್ಟ್ರಿಯಲ್ಲಿ ಇದ್ದಿದ್ರೆ, ನಿಮ್ಮನ್ನ ಬ್ಯಾನ್ ಮಾಡ್ತಾ ಇದ್ರು ಗೊತ್ತಾ?**

– ಅಯ್ಯೋ, ಸುಮ್ನಿರಿ, ನನ್ನ ಸಿನಿಮಾಗಳು ಯಾವುದೂ ಗೆಲ್ತಾ ಇಲ್ಲ. ದೇಶದ ಪ್ರೇಕ್ಷಕರೇ ನನ್ನ ಬ್ಯಾನ್ ಮಾಡಿಬಿಟ್ಟಿದ್ದಾರೆ ಅಂತ ನಾನಿದ್ರೆ... ನಿಮ್ಮದೊಂದು.

- **ಅದ್ ನಿಜ. ಹೋಗ್ಲಿ, ನೀವೇ ಪ್ರೊಡ್ಯೂಸರ್ರು, ನೀವೇ ನಟಿ, ಏನ್ ಸಮಾಚಾರ?**

– ಅದೇ ಭಯ ಕಣ್ರೀ. ನನಗೆ ನಾನೇ ಮಾಡಿಕೊಂಡ ಸಿನಿಮಾ. ಸೋತ್ರೆ ಯಾರನ್ನೂ ಟೀಕೆ ಮಾಡೋಕಾಗಲ್ಲ. 'ಕಂಗನಾ ರನ್ ಔಟ್' ಅಂತ ಜನ ಗೇಲಿಮಾಡ್ತಾರೆ.

- **ಸರಿ, ನಿಮ್ಮ ಹಳೇ ಬಾಯ್‌ಫ್ರೆಂಡ್ ಅಧ್ಯಯನ್ ಸುಮನ್ ನಿಮ್ಮ ಮೇಲೆ ಅಸಹ್ಯಕರ ಆರೋಪಗಳನ್ನ ಮಾಡ್ತಾ ಇದ್ದಾರಲ್ಲ?**

– ಅದಕ್ಕೇ ಹೇಳೋದು, ಸರಿಯಾದ ಅಧ್ಯಯನ ಇಲ್ಲದೇ ಸಂದರ್ಶನ ಮಾಡೋಕೆ ಬರಬಾರದು ಅಂತ. ಅವನು ಮಾಡ್ತಿರೋದು ಆರೋಪ ಅಲ್ಲ, ಇರೋ ವಿಷಯ ಹೇಳ್ತಾ ಇದ್ದಾನೆ ಅಷ್ಟೇ.

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಒಂದ್ಸಲ ಟ್ರೈನ್‌ನಲ್ಲಿ ದೂರ ಪ್ರಯಾಣ ಮಾಡ್ತಾ ಇದ್ದ. ಟ್ರೈನ್ ತುಂಬಾ ರಷ್ ಇತ್ತು. ಖೇಮುಗೆ ಹೆಂಗೋ ಒಂದು ಬೋಗಿಯಲ್ಲಿ ಸೀಟು ಸಿಕ್ತು. ಬೋಗಿ ತುಂಬಾ ರಷ್ ಇತ್ತು. ಜನ ನಿಂತ್ಕೊಂಡು ಪ್ರಯಾಣ ಮಾಡ್ತಾ ಇದ್ರು. ಸರಿ, ಲಾಂಗ್ ಜರ್ನಿ ಆದ್ರಿಂದ ಕತ್ತಲಾಗುವ ಹೊತ್ತಿಗೆ ಎಲ್ಲರೂ ಮಲಗೋ ಸಿದ್ಧತೆ ಮಾಡ್ಕೊತಾ ಇದ್ರು. ಆದ್ರೆ ಅವರಲ್ಲಿ ಹಾಡು ಹೇಳೋ ಚಟ ಇರೋ ಒಬ್ಬ ಮಧ್ಯವಯಸ್ಕ ಇದ್ದ. ಅವನ ಜತೆ ಒಂದಿಬ್ಬರು ಗೆಳೆಯರು. ಆ ವ್ಯಕ್ತಿ ಅವರ ಜತೆ ಸೇರಿಕೊಂಡು ಹಾಡು ಹೇಳ್ತಾ ಎಲ್ಲರಿಗೂ ಡಿಸ್ಟರ್ಬ್ ಮಾಡ್ತಾ ಇದ್ದ. ಜತೆಗೆ ಅವನ ಹಾಡು, ಕಂಠ ಕರ್ಕಶವಾಗಿತ್ತು. ಆದರೆ, ಅದಕ್ಕೆ ಅವನ ಗೆಳೆಯರ ಎನ್‌ಕರೇಜ್‌ಮೆಂಟು. ಜತೆಗೆ ಪ್ರತಿ ಹಾಡು ಹಾಡಿದ ಮೇಲೂ ಪಕ್ಕದಲ್ಲಿದ್ದ ಇತರ ಪ್ರಯಾಣಿಕರನ್ನ, 'ಹೆಂಗಿತ್ತು ಹಾಡು, ಚೆನ್ನಾಗ್ ಹಾಡ್ತೀನಾ?' ಅಂತ ಕೇಳಿ ಕಿರಿಕಿರಿ ಮಾಡ್ತಾ ಇದ್ದ. ಅವರೂ, ಪಾಪ ಇವನಿಗೆ ಯಾಕೆ ಬೇಜಾರು ಮಾಡೋದು ಅಂತ 'ಹ್ಞೂ' ಅಂತಿದ್ರು. ಇದು ಹಿಂಗೇ ನಡೀತಾ ಇತ್ತು. ಎಲ್ಲರಿಗೂ ಕಿರಿಕಿರಿ ಆಗ್ತಾ ಇದ್ರೂ, ಯಾರೂ ಅವನಿಗೆ 'ಹಾಡಬೇಡ ನಿಲ್ಸಪ್ಪ, ಕೆಟ್ಟದಾಗಿ ಹಾಡ್ತೀಯಾ' ಅಂತ ಹೇಳೋಕೆ ಧೈರ್ಯ ಮಾಡಲಿಲ್ಲ. ಖೇಮು ಕೂಡ ತುಂಬಾ ಹೊತ್ತಿನವರೆಗೂ ಅವನ ಹಾಡು ಕೇಳಿ, ತಲೆ ಕೆಡಿಸಿಕೊಂಡಿದ್ದ. ಕೊನೆಗೊಮ್ಮೆ ತಡೆಯಲಾರದೆ ಹಾಡುತ್ತಿದ್ದ ಆ ವ್ಯಕ್ತಿಯನ್ನ ಮಾತಾಡಿಸಿ ಕೇಳೇಬಿಟ್ಟ 'ಏನ್ ಸರ್, ನೀವ್ಯಾಕೆ ರೇಡಿಯೋದಲ್ಲಿ ಹಾಡಬಾರದು?'. ತಗೊಳ್ಳಿ, ಮಂಗನಿಗೆ ಹೆಂಡ ಕುಡಿಸಿದಷ್ಟೇ ಸಂತೋಷ ಆಗಿ ಆ ವ್ಯಕ್ತಿ, 'ಸರ್, ಅಷ್ಟೊಂದ್ ಚೆನ್ನಾಗ್ ಹಾಡ್ತೀನಾ ನಾನು?' ಅಂತ ಕೇಳಿದ. ಅದಕ್ಕೆ ಖೇಮು ಹೇಳಿದ 'ಹಂಗೇನಿಲ್ಲ, ರೇಡಿಯೋ ಆಗಿದ್ರೆ ಆಫ್ ಮಾಡಬೋದಿತ್ತು'.

ಲೈನ್ ಮ್ಯಾನ್

- **ಸಿನಿಮಾಗಳಿಗೆ ಹೊಸ ರೀತಿಯ ಬರಹಗಾರರು ಬೇಕು ಅಂದ್ರೆ, ಏನ್ ಮಾಡಬೇಕು?**

– 'ನ್ಯೂ ಟೈಪ್– ರೈಟರ್' ತರಬೇಕು

- **ಲೇಡೀಸ್ ಟೈಲರ್‌ಗಳಿಗೆ ಒಂದು ಹೆಸರು**

– 'ಹುಕ್ಕಿನ' ಮನುಷ್ಯ

- **ಇನ್ನೊಬ್ಬರನ್ನ ಕನ್ವಿನ್ಸ್ ಮಾಡೋ ಕೆಲಸಕ್ಕೆ ಬಹುಮಾನ ಕೊಟ್ಟರೆ ಅದಕ್ಕೆ ಏನಂತಾರೆ?**

– 'ಸಮಾಧಾನಕರ' ಬಹುಮಾನ

- **ಹೊಸದಾಗಿ ಕಿವಿಗೆ ಶ್ರವಣ ಸಾಧನ ಹಾಕಿಸಿಕೊಂಡವರಿಗೆ ಏನಂತ ಹೇಳಬೇಕು?**

– ಹ್ಯಾಪಿ ನ್ಯೂ 'ಇಯರ್'

- **ಯಲ್ಲಮ್ಮನ ದೇವಸ್ಥಾನದ ಹುಂಡಿ ಕಳ್ಳತನ: ಸುದ್ದಿ**

– ಯಲ್ಲಮ್ಮನ್ ದುಡ್ಡು, ಯಾರ್ದೋ ಜಾತ್ರೆ!

- **ರಸ್ತೆ ಅಡವಿಟ್ಟು ಸಾಲ ಪಡೆದ ಪಾಕಿಸ್ತಾನ**

– ಜೀವ್ನ ರೋಡಿಗ್ ಬರೋದು ಅಂದ್ರೆ ಇದೇನಾ?

- **ಸಂಸ್ಕೃತ ವಿವಿಯಲ್ಲಿ ಸ್ನಾತಕೋತ್ತರ ಪದವಿಗೆ ಏನಂತಾರೆ?**

– 'ಅಯ್ಯರ್' ಎಜುಕೇಷನ್

- **ಯಾರಿಗೋ ಸರಿಯಾಗಿ ಹೊಡೆದು ಅರೆಸ್ಟ್ ಆದ ಕನ್ನಡ ಹೋರಾಟಗಾರನ ಇಷ್ಟದ ಸಾಲುಗಳು**

– 'ಬಾರಿಸು' ಕನ್ನಡ ಡಿಂಡಿಮವ.

– ಕನ್ನಡಕ್ಕಾಗಿ 'ಕೈ ಎತ್ತು', ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.

- **ರೈತರ ಜೀವನದ ಸ್ಲೋಗನ್**

– 'ಹೊಲವೆ' ಜೀವನ ಸಾಕ್ಷಾತ್ಕಾರ

- **ಮುದುಕ ಮುದುಕಿಯರು ತಮ್ಮ ಯೌವನದ ಸೌಂದರ್ಯವನ್ನು ನೆನಪಿಸಿಕೊಳ್ಳೋದು ಹೇಗೆ ?**

– 'ಅಂದ' ಕಾಲತ್ತಿಲ್ ನಾನೂ ಸುಂದರವಾಗಿದ್ದೆ.

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 116

ಸಮಾಚಾರ ಸಣ್ಣದಲ್ಲ

6 ದಿನದ ಹೆಣ್ಣುಶಿಶು ಹತ್ಯೆ: ಬಾಣಂತಿ ಸೆರೆ

ದೆಹಲಿ: ಪಶ್ಚಿಮ ದೆಹಲಿಯ ಖಯಾಲಾ ಪ್ರದೇಶದಲ್ಲಿ ನಾಲ್ಕನೇ ಮಗುವೂ ಹೆಣ್ಣಾಯಿತೆಂದು 28 ವರ್ಷದ ತಾಯಿಯೇ ತನ್ನ 6 ದಿನಗಳ ಶಿಶುವನ್ನು ಕೊಂದು ಶವವನ್ನು ಪಕ್ಕದ ಮನೆ ಛಾವಣಿಗೆ ಎಸೆದಿದ್ದರು. ಬಳಿಕ ಬಾಣಂತಿಯೇ ಕರೆ ಮಾಡಿ ಮಗು ನಾಪತ್ತೆಯಾಗಿದೆ ಎಂದು ದೂರಿದ್ದರು. ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪಕ್ಕದ ಮನೆಗಳ ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದಾಗ ಪಕ್ಕದ ಮನೆಯ ಛಾವಣಿ ಮೇಲೊಂದು ಬ್ಯಾಗ್ ಪತ್ತೆಯಾಗಿದೆ. ಬ್ಯಾಗ್‌ನಲ್ಲಿ ಮಗುವಿನ ಶವ ಕಂಡುಬಂದಿದೆ. ಬಳಿಕ ತಾಯಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಕಾಂಗ್ರೆಸ್ ಕಚೇರಿಯಲ್ಲೆ ಹುಕ್ಕಾ ಸೇದಿದ ಸಂಸದ!

ಲಖನೌ: ಉತ್ತರ ಪ್ರದೇಶದ ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ಪಕ್ಷದ ಕಚೇರಿಯಲ್ಲೇ ಹುಕ್ಕಾ ಸೇದುತ್ತಿರುವ ವಿಡಿಯೋ ವೈರಲ್ ಆಗಿದ್ದು, ಟೀಕೆಗಳು ಕೇಳಿಬಂದಿವೆ.

ಭಗ್ವಾ ಕ್ರಾಂತಿ ಸೇನಾ ಅಧ್ಯಕ್ಷೆ ಸಾಧ್ವಿ ಪ್ರಾಚಿ, ಕಾಂಗ್ರೆಸ್ ಸಂಸ್ಕೃತಿಯ ಪ್ರದರ್ಶನ ಎಂದು 'ಎಕ್ಸ್' ಖಾತೆಯಲ್ಲಿ ಟೀಕಿಸಿದ್ದಾರೆ. ಪ್ರಧಾನಿ ಮೋದಿ ಅವರಿಗೆ ಹಿಂದೆ ಜೀವ ಬೆದರಿಕೆ ಹಾಕಿದ್ದ ಸಂಸದ ಇಮ್ರಾನ್ ಮಸೂದ್ ಕಾಂಗ್ರೆಸ್ ಕಚೇರಿ ಯಲ್ಲೇ ಹುಕ್ಕಾ ಸೇದುತ್ತಿದ್ದಾರೆ, ಕಾಂಗ್ರೆಸ್ ಮೌಲ್ಯ ಗಳನ್ನು ನೋಡಿ ಎಂದು ಅಣಕಿಸಿದ್ದಾರೆ. ಹಲವು ನೆಟ್ಟಿಗರು 'ಎಕ್ಸ್' ಖಾತೆಯಲ್ಲಿ ವಿಡಿಯೋವನ್ನು ಹಂಚಿಕೊಂಡು ಖಂಡಿಸಿದ್ದಾರೆ.

ಪಾಕ್: 10 ದಿನಕ್ಕೆ 37 ಉಗ್ರರು ಹತ

ಇಸ್ಲಾಮಾಬಾದ್: ಪಾಕಿಸ್ತಾನದ ವಾಯುವ್ಯ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಖೈಬರ್ ಜಿಲ್ಲೆಯಲ್ಲಿ 10 ದಿನಗಳ ಸೇನಾ ಕಾರ್ಯಾಚರಣೆಯಲ್ಲಿ 37 ಉಗ್ರರನ್ನು ಕೊಲ್ಲಲಾಗಿದೆ. 14 ಉಗ್ರರು ಗಾಯಗೊಂಡು ಸೆರೆ ಸಿಕ್ಕಿದ್ದಾರೆ ಎಂದು ಪಾಕ್ ಸೇನೆಯ ಮಾಧ್ಯಮ ವಿಭಾಗವಾದ ಇಂಟರ್-ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ ಹೇಳಿಕೆ ಬಿಡುಗಡೆ ಮಾಡಿದೆ.

ಜೆಎಂಎಂ ಮಾಜಿ ಶಾಸಕ ಲೋಬಿನ್ ಬಿಜೆಪಿಗೆ

ರಾಂಚಿ: ಆಡಳಿತಾರೂಢ ಜೆಎಂಎಂ ಪಕ್ಷದಿಂದ ಉಚ್ಚಾಟಿತರಾಗಿದ್ದ, ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದ ಲೋಬಿನ್ ಹೆಂಬ್ರೋಮ್ ಶನಿವಾರ ಬಿಜೆಪಿ ಸೇರಿದರು. ರಾಂಚಿಯ ಬಿಜೆಪಿ ಕಚೇರಿಯಲ್ಲಿ ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ, ಕೊಲ್ಹಾನ್ ಟೈಗರ್ ಮತ್ತು ಮಾಜಿ ಸಿಎಂ ಚಂಪೈ ಸೊರೇನ್, ಬಿಜೆಪಿ ನಾಯಕಿ ಸೀತಾ ಸೊರೇನ್, ರಾಜ್ಯಾಧ್ಯಕ್ಷ ಬಾಬುಲಾಲ್ ಮರಾಂಡಿ ಮತ್ತು ಪ್ರತಿಪಕ್ಷ ನಾಯಕ ಅಮರ್ ಕುಮಾರ್ ಬೌರಿ ಸಮ್ಮುಖ ಹೆಂಬ್ರೋಮ್ ಬಿಜೆಪಿ ಸೇರಿದರು. ಜಾರ್ಖಂಡ್ ವಿಧಾನಸಭೆ ಸ್ಪೀಕರ್ ಪಕ್ಷಾಂತರ ಪ್ರಕರಣದಲ್ಲಿ ಹೆಂಬ್ರೋಮ್‌ರನ್ನು ಶಾಸಕ ಸ್ಥಾನದಿಂದ ಇತ್ತೀಚೆಗೆ ಅನರ್ಹಗೊಳಿಸಿದ್ದರು.

ಮೂರು ವಂದೇಭಾರತ್ ರೈಲಿಗೆ ಮೋದಿ ಚಾಲನೆ

ದೆಹಲಿ: ಬೆಂಗಳೂರು-ಮಧುರೈ, ಮೀರತ್-ಲಖನೌ ಮತ್ತು ಚೆನ್ನೈ ಎಗ್ಮೋರ್-ನಾಗರ್‌ಕೋಯಿಲ್ ಮಾರ್ಗದಲ್ಲಿ ಹೊಸ ವಂದೇ ಭಾರತ್ ರೈಲುಗಳ ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದರು.

ಉತ್ತರ ಪ್ರದೇಶ, ತಮಿಳುನಾಡು ಮತ್ತು ಕರ್ನಾಟಕದಾದ್ಯಂತ ರೈಲು ಸಂಪರ್ಕ ಹೆಚ್ಚಿಸಲಾಗಿದೆ. ಬೆಂಗಳೂರು-ಮಧುರೈ ನಡುವಿನ 521 ಕಿಮೀ ರೈಲು ಮಾರ್ಗದಲ್ಲಿ ವಂದೇಭಾರತ್ ರೈಲು 7 ಗಂಟೆ 45 ನಿಮಿಷಗಳಲ್ಲಿ ಗುರಿ ತಲುಪಲಿದೆ. ಒಂದು ಕಡೆಯ ಪ್ರಯಾಣಕ್ಕೆ ಟಿಕೆಟ್ ದರ 1575 ರು. ನಿಗದಿಪಡಿಸಲಾಗಿದೆ.

ಬೆಂಗಳೂರು ವಿಮಾನ ತುರ್ತು ಭೂಸ್ಪರ್ಶ

ಕೋಲ್ಕತ್ತ: ಬೆಂಗಳೂರಿಗೆ ಹೊರಟಿದ್ದ ಇಂಡಿಗೊ ವಿಮಾನ ಆಕಾಶದಲ್ಲಿ ಹಾರಾಟ ನಡೆಸಿದ್ದಾಗಲೇ ವಿಮಾನದ ಇಂಜಿನ್‌ನಲ್ಲಿ ದೋಷ ಕಾಣಿಸಿಕೊಂಡಿದ್ದರಿಂದ ಕೋಲ್ಕತ್ತ ವಿಮಾನ ನಿಲ್ದಾಣದಲ್ಲಿಯೇ ಶನಿವಾರ ತುರ್ತು ಭೂಸ್ಪರ್ಶ ಮಾಡಲಾಗಿದೆ. ಕೋಲ್ಕತ್ತದಿಂದ ಶನಿವಾರ ಬೆಳಗ್ಗೆ ಬೆಂಗಳೂರಿನತ್ತ ಹಾರಾಟ ಆರಂಭಿಸಿದ್ದ ಇಂಡಿಗೊ ವಿಮಾನದಲ್ಲಿ ಸಿಬ್ಬಂದಿ ಸೇರಿದಂತೆ ಒಟ್ಟು 173 ಜನರಿದ್ದರು. ಯಾರಿಗೂ ಯಾವುದೇ ಹಾನಿಯಾಗಿಲ್ಲ ಎಂದು ಇಂಡಿಗೊ ಮಾಹಿತಿ ನೀಡಿದೆ. ಹಾರಾಟದಲ್ಲಿದ್ದಾಗಲೇ ವಿಮಾನದ ಎಂಜಿನ್ ವಿಫಲವಾಯಿತು. ಪೈಲಟ್‌ಗಳು ತಕ್ಷಣ ಕೋಲ್ಕತ್ತ ವಿಮಾನ ನಿಲ್ದಾಣದ ನಿಯಂತ್ರಣ ಕೇಂದ್ರವನ್ನು ಸಂಪರ್ಕಿಸಿ ತುರ್ತಾಗಿ ಲ್ಯಾಂಡಿಂಗ್ ಮಾಡಬೇಕಾದ ಅನಿವಾರ್ಯತೆಯನ್ನು ಮನವರಿಕೆ ಮಾಡಿದರು. ಬಳಿಕ ವಿಮಾನ ನಿಲ್ದಾಣದಲ್ಲಿ ತುರ್ತುಸ್ಥಿತಿ ಘೋಷಿಸಿ ರನ್‌ವೇಗಳನ್ನು ತೆರವುಗೊಳಿಸಿ ತುರ್ತು ಭೂಸ್ಪರ್ಶಕ್ಕೆ ಇಂಡಿಗೊ ವಿಮಾನಕ್ಕೆ ಅವಕಾಶ ಮಾಡಿಕೊಡಲಾಯಿತು ಎಂದು ತಿಳಿಸಲಾಗಿದೆ.

ಸುಪ್ರೀಂ ಕೋರ್ಟ್‌ಗೆ 75 ವರ್ಷಗಳ ಸಂಭ್ರಮ । ವಜ್ರ ಮಹೋತ್ಸವದಲ್ಲಿ ಪ್ರಧಾನಿ ನರೇಂದ್ರ ಮೋದಿ, ಸಿಜೆಐ ಡಿ.ವೈ.ಚಂದ್ರಚೂಡ್ ಭಾಗಿ । ಕೋಲ್ಕತ್ತ ವೈದ್ಯೆ, ಥಾಣೆ ಶಿಶು ದೌರ್ಜನ್ಯ ಉಲ್ಲೇಖ । 2 ದಿನ ಜಿಲ್ಲಾ ನ್ಯಾಯಾಂಗ ರಾಷ್ಟ್ರೀಯ ಸಮ್ಮೇಳನ । ಚಿನ್ನದ ನಾಣ್ಯ ಬಿಡುಗಡೆ

ಸ್ತ್ರೀ ವಿರುದ್ಧದ ಅಪರಾಧಗಳಲ್ಲಿ ಶೀಘ್ರ ತೀರ್ಪು ಬರಲಿ

ದೆಹಲಿ: ಮಹಿಳೆ ಮೇಲಿನ ದೌರ್ಜನ್ಯ, ಮಕ್ಕಳ ಸುರಕ್ಷತೆ ಗಂಭೀರ ವಿಷಯಗಳಾಗಿವೆ. ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳಲ್ಲಿ ತ್ವರಿತಗತಿ ವಿಚಾರಣೆ, ಶೀಘ್ರ ತೀರ್ಪು ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಸುಪ್ರೀಂ ಕೋರ್ಟ್‌ಗೆ 75 ವರ್ಷ ತುಂಬಿದ ಸಂದರ್ಭ ದೆಹಲಿಯಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಉಪಸ್ಥಿತಿಯಲ್ಲಿ ಶನಿವಾರ ಆಯೋಜಿಸಿದ್ದ 'ಜಿಲ್ಲಾ ನ್ಯಾಯಾಂಗದ ರಾಷ್ಟ್ರೀಯ ಸಮ್ಮೇಳನ'ದ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ಮೋದಿ ಮಾತನಾಡಿದರು.

ಕೋಲ್ಕತ್ತ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣ, ಮಹಾರಾಷ್ಟ್ರದ ಥಾಣೆಯಲ್ಲಿ ಶಿಶುವಿಹಾರದ ಬಾಲಕಿಯರಿಬ್ಬರ ಮೇಲಿನ ಲೈಂಗಿಕ ದೌರ್ಜನ್ಯ ಘಟನೆಗಳ ಹಿನ್ನೆಲೆ ಮಹಿಳೆಯರ ಮೇಲಿನ ದೌರ್ಜನ್ಯ-ಮಕ್ಕಳ ಸುರಕ್ಷತೆಯು ಸಮಾಜಕ್ಕೆ ಗಂಭೀರ ಕಾಳಜಿಯ ವಿಷಯ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಎಷ್ಟು ವೇಗವಾಗಿ ನ್ಯಾಯವನ್ನು ನೀಡಲಾಗುತ್ತದೆಯೋ ಅಷ್ಟು ಒಳ್ಳೆಯದು. ಅದರಿಂದ ದೇಶದ ಅರ್ಧದಷ್ಟು ಜನರು ತಮ್ಮ ಸುರಕ್ಷತೆಯ ಬಗ್ಗೆ ಹೆಚ್ಚಿನ ಭರವಸೆ ಹೊಂದಲು ಸಾಧ್ಯ ಎಂದು ಪ್ರಧಾನಿ ಹೇಳಿದ್ದಾರೆ. ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಕಠಿಣ ಕಾನೂನು ರಚಿಸಲಾಗಿದೆ. ಮಹಿಳೆಯರೂ ಕಾನೂನು ಅರಿಯುವ ಅಗತ್ಯವಿದೆ. ಅಲ್ಲದೇ, ತ್ವರಿತ ನ್ಯಾಯವನ್ನು ಖಚಿತಪಡಿಸಿ ಕೊಳ್ಳಲು ಅಪರಾಧ ನ್ಯಾಯ ವ್ಯವಸ್ಥೆಯ ನಡುವೆ ಉತ್ತಮ ಸಮನ್ವಯವನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ. ಮಹಿಳೆಯರ ಸುರಕ್ಷತೆಗೆ ಎದುರಾಗುತ್ತಿರುವ ಸಮಸ್ಯೆ ಪರಿಹರಿಸಲೆಂದೇ 2019ರಲ್ಲಿ ತ್ವರಿತಗತಿ ನ್ಯಾಯಾಲಯಗಳ ಕಾನೂನು ತರಲಾಗಿದೆ. ಇದರಲ್ಲಿ ಜಿಲ್ಲಾ ಮೇಲ್ವಿಚಾರಣಾ ಸಮಿತಿಯದ್ದೇ ಪ್ರಮುಖ ಪಾತ್ರ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ತ್ವರಿತಗತಿ ತೀರ್ಮಾನದಿಂದ ಅರ್ಧ ಜನಸಂಖ್ಯೆಗೆ ಸುರಕ್ಷತಾ ಭಾವ ಮೂಡುತ್ತದೆ ಎಂದರು.

ರಾಜ್ಯಗಳಿಂದ ಪ್ರಯತ್ನವಿಲ್ಲ

ಇನ್ನೊಂದೆಡೆ, ತಿರುವನಂತಪುರಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಮಹಿಳೆಯರ ಮೇಲಿನ ಅಪರಾಧಗಳ ಬಗ್ಗೆ ಕೇಂದ್ರ ಸರಕಾರ ಕಟ್ಟುನಿಟ್ಟಾದ ಧೋರಣೆ ಅನುಸರಿಸಿ ದರೂ ಹಲವು ರಾಜ್ಯಗಳು ಈ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿಲ್ಲ. ಕೋಲ್ಕತ್ತದಲ್ಲಿ ಆ.9ರಂದು ನಡೆದ ಘಟನೆ ಹೃದಯ ವಿದ್ರಾವಕ ಮತ್ತು ನಾಚಿಕೆಗೇಡಿನ ಸಂಗತಿ ಎಂದು ಹೇಳುತ್ತಲೇ ಮಮತಾ ಬ್ಯಾನರ್ಜಿ ನೇತೃತ್ವದ ಪಶ್ಚಿಮ ಬಂಗಾಳ ಸರಕಾರವನ್ನು ತರಾಟೆಗೆ ತೆಗೆದುಕೊಂಡರು.

> ನ್ಯಾಯಾಂಗವನ್ನು ಸಂವಿಧಾನದ ರಕ್ಷಕನೆಂದು ಪರಿಗಣಿಸಲಾಗುತ್ತದೆ. ಮತ್ತು ಸುಪ್ರೀಂ ಕೋರ್ಟ್ ಮತ್ತು ನ್ಯಾಯಾಂಗವು ಜವಾಬ್ದಾರಿಯನ್ನು ನಿರ್ವಹಿಸಿದೆ. ರಾಷ್ಟ್ರೀಯ ಭದ್ರತೆಯ ವಿಷಯಗಳಲ್ಲಿ, ನ್ಯಾಯಾಂಗವು ರಾಷ್ಟ್ರೀಯ ಹಿತಾಸಕ್ತಿಗಳನ್ನು ಪ್ರಧಾನವಾಗಿಟ್ಟುಕೊಂಡು ರಾಷ್ಟ್ರೀಯ ಸಮಗ್ರತೆಯನ್ನು ರಕ್ಷಿಸಿದೆ.
> -ನರೇಂದ್ರ ಮೋದಿ ಪ್ರಧಾನಿ

ಚಿನ್ನದ ನಾಣ್ಯ-ಅಂಚೆಚೀಟಿ

ದೇಶದ ಸುಪ್ರೀಂ ಕೋರ್ಟ್‌ಗೆ 75 ವರ್ಷ ತುಂಬಿದ ಸಂದರ್ಭದ ಸವಿ ನೆನಪಿಗಾಗಿ ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಮೂಲಕ ಸ್ಮರಣಿಕೆಯ ಚಿನ್ನದ ನಾಣ್ಯ ಹಾಗೂ ಭಾರತೀಯ ಅಂಚೆ ಇಲಾಖೆಯಿಂದ 'ಸುಪ್ರೀಂಕೋರ್ಟ್ ಚಿತ್ರವಿರುವ ಅಂಚೆಚೀಟಿ'ಯನ್ನು ಸಿದ್ಧಪಡಿಸಿ ಬಿಡುಗಡೆ ಮಾಡಲಾಗಿದೆ.

ಸರ್ವೋಚ್ಚ ನ್ಯಾಯಾಲಯ 75 ವರ್ಷಗಳ ಹಿಂದೆ...

1950ರ ಜನವರಿ 28ರಂದು, ಭಾರತ ಗಣತಂತ್ರ ದೇಶವಾಗಿ ಘೋಷಣೆಯಾದ ಎರಡು ದಿನಗಳ ತರುವಾಯ ಭಾರತದ ಸರ್ವೋಚ್ಚ ನ್ಯಾಯಾಲಯ(ಸುಪ್ರೀಂ ಕೋರ್ಟ್) ಸ್ಥಾಪನೆಯಾಯಿತು. ಹಳೆಯ ಸಂಸತ್ ಭವನದ ಪ್ರಿನ್ಸೆಸ್ ಛೇಂಬರ್‌ನಲ್ಲಿ ಬೆಳಗ್ಗೆ 9.45ಕ್ಕೆ ಭಾರತದ ಪ್ರಥಮ ಮುಖ್ಯ ನ್ಯಾಯಮೂರ್ತಿ ಹರಿಲಾಲ್ ಜೆ.ಕನಿಯಾ ಅವರು ಐವರು ನ್ಯಾಯಮೂರ್ತಿಗಳ ಜತೆಗೂಡಿ ಸುಪ್ರೀಂ ಕೋರ್ಟ್ ಪೀಠದ ಮೊದಲ ಕಲಾಪ ನಡೆಸಿಕೊಟ್ಟರು. ನ್ಯಾ.ಪತಂಜಲಿ ಶಾಸ್ತ್ರಿ, ನ್ಯಾ.ಮೆಹರ್‌ಚಂದ್ರ ಮಹಾಜನ್, ನ್ಯಾ.ಸಯ್ಯದ್ ಫಜ್ಲ್ ಅಲಿ, ನ್ಯಾ.ಬಿಜನ್ ಕುಮಾರ್ ಮುಖರ್ಜಿ ಮತ್ತು ನ್ಯಾ.ಎಸ್. ಆರ್.ದಾಸ್ ಪೀಠದಲ್ಲಿದ್ದರು. ಅಲ್ಲದೇ, ಮೈಸೂರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಮೇದಪ್ಪ, ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪಿ.ವಿ.ರಾಜಮನ್ನಾರ್, ಹೈದರಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆರ್.ಎಸ್.ನಾಯ್ಕ್ ಸೇರಿದಂತೆ ಆಗ ಚಾಲ್ತಿಯಲ್ಲಿದ್ದ 15 ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳೂ ಅಪರೂಪದ ಆ ಕ್ಷಣ ಹಾಜರಿದ್ದರು.

ಅಧೀನ ನ್ಯಾಯಾಲಯ ಎನ್ನಬಾರದು: ಸಿಜೆಐ

ಜಿಲ್ಲಾ ನ್ಯಾಯಾಂಗವು ದೇಶದ ನ್ಯಾಯಾಂಗದ ಬೆನ್ನೆಲುಬು. ಇದು ಕಾನೂನಿನ ಆಡಳಿತದ ನಿರ್ಣಾಯಕ ಅಂಶವಾಗಿದೆ. ಜಿಲ್ಲಾ ನ್ಯಾಯಾಲ ಯಗಳನ್ನು 'ಅಧೀನ ನ್ಯಾಯಾಲಯ' ಎಂದು ಕರೆಯುವುದನ್ನು ಮೊದಲು ನಿಲ್ಲಿಸಬೇಕಾದ ಅಗತ್ಯವಿದೆ ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ಹೇಳಿದರು. ನ್ಯಾಯದ ಹುಡುಕಾಟದಲ್ಲಿರುವ ಜನರಿಗೆ ಜಿಲ್ಲಾ ನ್ಯಾಯಾಂಗವೇ ಸಂಪರ್ಕದ ಮೊದಲ ಬಿಂದು. ಜಿಲ್ಲಾ ನ್ಯಾಯಾಂಗ ಎಂಬುದು ಕಾನೂನಿನ ಆಳ್ವಿಕೆಯ ನಿರ್ಣಾಯಕ ಅಂಶ ಎಂದು ಸಿಜೆಐ ವ್ಯಾಖ್ಯಾನಿಸಿದರು.

ನಟ ಮೋಹನಲಾಲ್ ಪ್ರತಿಕ್ರಿಯೆ

ಸಾಕ್ಷ್ಯಗಳಿದ್ದರೆ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲಿ

ತಿರುವನಂತಪುರಂ; ನ್ಯಾ.ಹೇಮಾ ಸಮಿತಿ ಮಲಯಾಳಂ ಚಿತ್ರರಂಗದಲ್ಲಿನ ನಟಿಯರ ಮೇಲಿನ ಲೈಂಗಿಕ ದೌರ್ಜನ್ಯ ಮತ್ತು ತಾರತಮ್ಯ ಧೋರಣೆ ಬಗ್ಗೆ ಬೆಳಕು ಚೆಲ್ಲಿದ ಬಳಿಕ 'ಅಮ್ಮ' ಸಂಘಟನೆಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದ ಬಹುಭಾಷಾ ನಟ ಮೋಹನ ಲಾಲ್, ಇದೇ ಮೊದಲ ಬಾರಿಗೆ ಮಲಯಾಳಂ ಚಿತ್ರರಂಗ ದಲ್ಲಿನ ಹೊಸ ಹಗರಣದ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.

ನ್ಯಾ.ಹೇಮಾ ಸಮಿತಿ ವರದಿ ಬಹಿರಂಗಗೊಂಡಿರುವುದು ಸರಿಯಾಗಿಯೇ ಇದೆ. ಅದನ್ನು ಒಪ್ಪಲೇಬೇಕು. ಈಗ ಕೆಲವು ಕಲಾವಿದರು, ನಿರ್ಮಾಪಕ, ನಿರ್ದೇಶಕರ ವಿರುದ್ಧ ದೂರುಗಳು ಕೇಳಿಬಂದಿವೆ. ಸಾಕ್ಷ್ಯಗಳು ಇದ್ದಲ್ಲಿ ಶಿಕ್ಷೆಯಾಗಲಿ ಎಂದಿದ್ದಾರೆ.

ಮಲಯಾಳಂ ಚಿತ್ರರಂಗ ಬಹುದೊಡ್ಡ ಉದ್ಯಮ. ಅಲ್ಲಿ ಇತ್ತೀಚೆಗೆ ತಲೆದೋರಿದ ಸಮಸ್ಯೆಗಳನ್ನು ಪರಿಹರಿಸಲು ಕಲಾವಿದರ ಸಂಘ 'ಅಮ್ಮ'ಗೆ ಸಾಧ್ಯವಾಗಲಿಲ್ಲ ಎಂದು ಬಹುಭಾಷಾ ನಟರೂ ಆದ ಮೋಹನಲಾಲ್ ವಿಷಾದಿಸಿದ್ದಾರೆ. 'ಅಮ್ಮ' ಸಂಘದಲ್ಲಿದ್ದ ಪದಾಧಿಕಾರಿಗಳಲ್ಲಿ ಕೆಲವರ ವಿರುದ್ಧವೇ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಿದ್ದರಿಂದ ನೈತಿಕ ಹೊಣೆ ಹೊತ್ತು ಸಂಘದ ಅಧ್ಯಕ್ಷ ಸ್ಥಾನ ತ್ಯಾಗ ಮಾಡಿದೆ ಎಂದು ತಮ್ಮ ರಾಜೀನಾಮೆಗೆ ಕಾರಣ ತಿಳಿಸಿದ್ದಾರೆ. 'ಮಾಲಿವುಡ್' ಲಕ್ಷಾಂತರ ಮಂದಿಗೆ ಕೆಲಸ ನೀಡುತ್ತಿದೆ. ಕೆಲವರು ತಪ್ಪು ಮಾಡಿದ್ದಕ್ಕೆ ಇಡೀ ಚಿತ್ರರಂಗಕ್ಕೆ ಕಳಂಕ ಹಚ್ಚುವುದು ಬೇಡ ಎಂದೂ ಮನವಿ ಮಾಡಿದ್ದಾರೆ.



> ಮಲಯಾಳಂ ಚಿತ್ರರಂಗದಲ್ಲಿ ವಿವಿಧ ಬಣಗಳು ಅಸ್ತಿತ್ವದಲ್ಲಿರುವ ಬಗ್ಗೆ ನನಗೇನೂ ತಿಳಿಯದು. ನಾನಂತೂ ಯಾವುದೇ ಬಣದೊಂದಿಗೂ ಗುರುತಿಸಿಕೊಂಡಿಲ್ಲ.
> -ಮೋಹನಲಾಲ್
> ಖ್ಯಾತ ನಟ-ನಿರ್ಮಾಪಕ

ಮಲಯಾಳಂ ಚಿತ್ರರಂಗದ ಕೊಳಕು ತೆರೆದಿಟ್ಟ ಹಿರಿಯ ನಟಿ ರಾಧಿಕಾ ಶರತ್ ಕುಮಾರ್

ನಟಿಯರ ನಗ್ನ ಚಿತ್ರೀಕರಣಕ್ಕೆ ಕ್ಯಾರವಾನ್ ಕ್ಯಾಮರಾ

ತಿರುವನಂತಪುರ: ನ್ಯಾ.ಹೇಮಾ ಸಮಿತಿ ವರದಿ ಬಹಿರಂಗಗೊಂಡ ಬಳಿಕ ಮಲಯಾಳಂ ಚಿತ್ರರಂಗ 'ಮಾಲಿವುಡ್'ನ ಕೊಳಕು ಒಂದೊಂದಾಗಿ ಹೊರಬರಲಾರಂಭಿಸಿದೆ. ಚಿತ್ರಪ್ರೇಮಿಗಳೇ ಥೂ.. ಅಸಹ್ಯ ಎಂದು ಛೀಮಾರಿ ಹಾಕುತ್ತಿದ್ದಾರೆ.

ಮಾಲಿವುಡ್‌ನಲ್ಲಿ ಲೈಂಗಿಕ ದೌರ್ಜನ್ಯ ಮತ್ತು ಮಹಿಳೆಯರ ವಿರುದ್ಧದ ತಾರತಮ್ಯ, ಶೋಷಣೆ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ನ್ಯಾ.ಹೇಮಾ ಸಮಿತಿ ವರದಿ ಹೇಳಿದೆ. ಅದನ್ನು ದೃಢೀಕರಿ ಸುವಂತೆ ನಿತ್ಯವೂ ನಟಿಯರು, ಸಹ ಕಲಾವಿದೆ ಯರು ಒಬ್ಬರಾದ ಮೇಲೊಬ್ಬರಂತೆ ಚಿತ್ರೀಕರಣ ತಾಣದಲ್ಲಿನ ಕೆಟ್ಟ ಅನುಭವಗಳನ್ನು ತೆರೆದಿಡುತ್ತಿದ್ದಾರೆ. ಅವರ ದೂರಿನ ಮೇರೆಗೆ ಈವರೆಗೆ 'ಮಾಲಿವುಡ್'ನ ಖ್ಯಾತ ನಟರು, ನಿರ್ದೇಶಕರು, ನಿರ್ಮಾಪಕರ ವಿರುದ್ಧ ಲೈಂಗಿಕ ದೌರ್ಜನ್ಯದ 18 ಪ್ರಕರಣಗಳು ದಾಖಲಾಗಿವೆ.

ಬಹುಭಾಷಾ ನಟಿ, ಹಿರಿಯ ಕಲಾವಿದೆ ರಾಧಿಕಾ ಶರತ್ ಕುಮಾರ್ ಅವರು ಮಲಯಾಳಂ ಸಿನಿಮಾದ ಚಿತ್ರೀಕರಣ ತಾಣದಲ್ಲಾದ ಕೆಟ್ಟ ಅನುಭವವನ್ನು 'ಏಷ್ಯಾನೆಟ್ ನ್ಯೂಸ್' ಜತೆ ಹಂಚಿಕೊಂಡಿದ್ದಾರೆ. 'ಒಂದು ಸಿನಿಮಾ ಚಿತ್ರೀಕರಣದಲ್ಲಿನ ಅನುಭವ ಭಯಾನಕ. ಆ ತಂಡದವರು ನಟಿಯರ ನಗ್ನತೆ ಸೆರೆಹಿಡಿಯಲು ಕ್ಯಾರವಾನ್‌ಗಳಲ್ಲಿ ಕ್ಯಾಮೆರಾ ಅಡಗಿಸಿಟ್ಟಿದ್ದರು. ಹೀಗೆ ಚಿತ್ರೀಕರಿಸಿದ ದೃಶ್ಯಗಳನ್ನು ಪ್ರತ್ಯೇಕ ಫೋಲ್ಡರ್‌ಗಳಲ್ಲಿರಿಸಿ ನಟಿಯರ ಹೆಸರುಗಳ ಲೇಬಲ್ ಅಂಟಿಸಿದ್ದರು. ಬಳಿಕ ಆ ನಗ್ನದೃಶ್ಯ ಗಳು ಚಿತ್ರ ತಂಡದಲ್ಲಿನ ಪುರುಷರೊಳಗೆ ಹಂಚಿ ಕೆಯಾಗುತ್ತಿತ್ತು. ಶೂಟಿಂಗ್ ಜಾಗದಲ್ಲೇ ಪುರುಷರು ತಮ್ಮ ಮೊಬೈಲ್ ಫೋನ್‌ಗಳಲ್ಲಿ ಆ ದೃಶ್ಯಗಳನ್ನು ವೀಕ್ಷಿಸುತ್ತಿದ್ದರು. ಅದನ್ನೆಲ್ಲಾ ಕಣ್ಣಾರೆ ಕಂಡು ಭಯಗೊಂಡು ಕ್ಯಾರವಾನ್ ಬಳಸುವುದನ್ನೇ ನಿಲ್ಲಿಸಿದೆ, ಹೊಟೇಲ್ ರೂಂನಲ್ಲಿ ಉಳಿದುಕೊಳ್ಳಲು ಶುರುಮಾಡಿದೆ' ಎಂದು ರಾಧಿಕಾ ಹೇಳಿದ್ದಾರೆ. ಆದರೆ, ಆ ಸಿನಿಮಾ ಹೆಸರು ಹೇಳಲು ರಾಧಿಕಾ ನಿರಾಕರಿಸಿದ್ದಾರೆ. ಏಕೆಂದರೆ ಆ ಚಿತ್ರದಲ್ಲಿ ನಟಿಸಿದವರಿಗೆ ಹಿಂಸೆಯಾಗುತ್ತದೆ, ಸಭ್ಯರಿಗೆ ಮುಜುಗರವಾಗುತ್ತದೆ. ಹಾಗಾಗಿ ಸಿನಿಮಾ ಹೆಸರು ಹೇಳುವುದಿಲ್ಲ ಎಂದಿದ್ದಾರೆ. ಇಂಥ ಕೆಟ್ಟ ವಾತಾವರಣ ಮಲಯಾಳಂನ ಲ್ಲಷ್ಟೇ ಅಲ್ಲ, ಬೇರೆ ಭಾಷೆಗಳ ಚಿತ್ರರಂಗದಲ್ಲೂ ಇದೆ. ನ್ಯಾ. ಹೇಮಾ ಸಮಿತಿ ವರದಿಯಲ್ಲಿ ಉಲ್ಲೇಖಿಸಿರುವಂತಹುದೇ ಅನುಭವ ನನಗೂ ಆಗಿದೆ. 4 ದಶಕಗಳಿಂದ ಸಿನಿಮಾರಂಗದಲ್ಲಿದ್ದೇನೆ. ಚಿತ್ರೀಕರಣ ತಾಣದಲ್ಲಿ ಪುರುಷರು ನನ್ನ ಜತೆಗೂ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಹಿರಿಯ ನಟಿ ನೋವು ತೋಡಿಕೊಂಡಿದ್ದಾರೆ.

ರಾಧಿಕಾ ಅವರ ಸಂದರ್ಶನ ಪ್ರಕಟವಾದ ಬಳಿಕ, ಮಲಯಾಳಂ ಚಿತ್ರರಂಗದಲ್ಲಿ ಲೈಂಗಿಕ ದೌರ್ಜನ್ಯಗಳ ತನಿಖೆಗೆ ಕೇರಳ ಸರಕಾರ ರಚಿಸಿರುವ ವಿಶೇಷ ತನಿಖಾ ತಂಡ, ಹಿರಿಯ ನಟಿಯ ಹೇಳಿಕೆ ದಾಖಲಿಸಿಕೊಂಡು ವಿಚಾರಣೆ ಆರಂಭಿಸುವುದಾಗಿ ತಿಳಿಸಿದೆ.

6 ತಿಂಗಳು ಬ್ರೇಕ್ ತೆಗೆದುಕೊಂಡಿದ್ದೆ!

2010ರಲ್ಲಿ ಮಲಯಾಳಂ ಸಿನಿಮಾ ಅಪೂರ್ವರಾಗಂ ಚಿತ್ರೀಕರಣ ವೇಳೆ ತಮ್ಮ ಮೇಲಾದ ಲೈಂಗಿಕ ದೌರ್ಜನ್ಯದ ಬಗ್ಗೆ ಹಿರಿಯ ನಟಿ ಮಾಲಾ ಪಾರ್ವತಿ ನೋವು ತೋಡಿಕೊಂಡಿದ್ದಾರೆ.

ಚಿತ್ರದಲ್ಲಿ ನನ್ನ ಮಗಳ(ನ್ಯಾನ್ಸಿ) ಪಾತ್ರ ಮಾಡಿದ್ದ ನಿತ್ಯಾ ಮೆನನ್ ನನ್ನ ಸುತ್ತಲೂ ಓಡಾಡುತ್ತಾ ನನ್ನ ಸೀರೆ ಎಳೆಯುವ, ಗಂಡನ ಪಾತ್ರಧಾರಿ ನ್ಯಾನ್ಸಿಯನ್ನು ತಮಾಷೆಯಾಗಿ ಸ್ಪರ್ಶಿಸುವ ಚಿತ್ರೀಕರಣವಿತ್ತು. ಆಗ ಗಂಡನ ಪಾತ್ರಧಾರಿ ನ್ಯಾನ್ಸಿಯತ್ತ ಬಲಗೈ ಚಾಚಿ, ಎಡಗೈಯಲ್ಲಿ ನನ್ನ ಸೊಂಟವನ್ನು ಬಲವಾಗಿ ಹಿಡಿದರು. ಆಗ ನನಗೆ ಬಹಳ ನೋವಾಯಿತು. ತಕ್ಷಣ ಪ್ರತಿಕ್ರಿಯಿಸಲು, ವಿರೋಧಿಸಲು ಸಾಧ್ಯವಾಗಲಿಲ್ಲ. ಅವರ ಕೈಗಳನ್ನು ನನ್ನ ಸೊಂಟದಿಂದ ಹೊರಗಿಡಲು ನಿರ್ದೇಶಕ ಸಿ.ಬಿ.ಮಲಾಯಿಲ್ ರಿಟೇಕ್ ತೆಗೆದುಕೊಂಡರು. ಆ ದೃಶ್ಯದ ಚಿತ್ರೀಕರಣಕ್ಕೆ 16 ಬಾರಿ ರಿಟೇಕ್ ತೆಗೆದುಕೊಳ್ಳಲಾಯಿತು. ಚಿತ್ರೀಕರಣ ಮುಗಿದ ಮೇಲೆ ಎಷ್ಟು ನೊಂದುಕೊಂಡಿದ್ದೆ ಎಂದರೆ 6 ತಿಂಗಳು ಶೂಟಿಂಗ್‌ನಿಂದ ಬ್ರೇಕ್ ಪಡೆದುಕೊಂಡಿದ್ದೆ. ಕೊನೆಗೆ ಪತಿಯೇ ಧೈರ್ಯ ಹೇಳಿದರು. ನೊಂದುಕೊಳ್ಳಬೇಡ, ಇಂತಹವರ ವಿರುದ್ಧ ಧೈರ್ಯದಿಂದ ಹೋರಾಡಬೇಕು ಎಂದು ಮನಃಸ್ಥೈರ್ಯ ತುಂಬಿ ಶೂಟಿಂಗ್‌ಗೆ ಕಳುಹಿಸಿಕೊಟ್ಟರು ಎಂದು ಮಾಲಾ ನೆನಪಿಸಿಕೊಂಡಿದ್ದಾರೆ.

> ಲೈಂಗಿಕ ದೌರ್ಜನ್ಯ, ಸಂಭಾವನೆಯಲ್ಲಿ ತಾರತಮ್ಯ ವಿಷಯ ಚರ್ಚೆಗೆ ಬಂದಾಗ ನಟರು, ನಿರ್ದೇಶಕರು ಮೌನವಾಗುವುದೇಕೆ? ಯಾವ ಪುರುಷನೂ ಹೆಣ್ಣಿನ ಪರವಾಗಿ ಮಾತನಾಡುವುದಿಲ್ಲ, ಹೆಣ್ಣಿನದ್ದೇ ತಪ್ಪು ಎಂಬಂತೆ ನಡೆದುಕೊಳ್ಳುತ್ತಾರೆ.
> - ರಾಧಿಕಾ ಶರತ್ ಕುಮಾರ್
> ದ.ಭಾರತದ ಹಿರಿಯ ನಟಿ

1ನೇ ಹಂತ ಚುನಾವಣೆ: 36 ನಾಮಪತ್ರ ತಿರಸ್ಕೃತ, 25 ವಾಪಸ್

ಕಾಶ್ಮೀರ: ಬಿಜೆಪಿ ತೊರೆದ ಮತ್ತಿಬ್ಬರು ನಾಯಕರು!

ಶ್ರೀನಗರ: ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಬಿಜೆಪಿಯಲ್ಲಿ ಭಿನ್ನಾಭಿಪ್ರಾಯ ಹೆಚ್ಚುತ್ತಲೇ ಇದೆ. ಬಿಜೆಪಿ ಜಿಲ್ಲಾಧ್ಯಕ್ಷ ಸೇರಿದಂತೆ ಇಬ್ಬರು ಪ್ರಮುಖ ನಾಯಕರು ಪಕ್ಷದ ಪ್ರಾಥ ಮಿಕ ಸದಸ್ಯತ್ವಕ್ಕೆ ಶನಿವಾರ ರಾಜೀನಾಮೆ ನೀಡಿದ್ದಾರೆ.

ದಶಕಗಳಿಂದ ನಮ್ಮ ಸಿದ್ಧಾಂತ ವಿರೋಧಿಸಿದ್ದ ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ನಾಯಕ ಮಾಜಿ ಸಚಿವ ಸುರ್ಜಿತ್ ಸಿಂಗ್ ಸಲಾಥಿಯಾ ಪಕ್ಷಕ್ಕೆ ಸೇರ್ಪಡೆಗೊಂಡಿದ್ದು, ಅವರನ್ನು ಸಾಂಬಾ ಕ್ಷೇತ್ರದಿಂದ ಕಣಕ್ಕಿಳಿಸಿದ್ದಾರೆ. 42 ವರ್ಷಗಳಿಂದ ಪಕ್ಷಕ್ಕಾಗಿ ದುಡಿದರೂ ಪ್ರಯೋಜನವಿಲ್ಲವಾಗಿದೆ. ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀ ನಾಮೆ ಸಲ್ಲಿಸಿದ್ದೇನೆ ಎಂದು ಸಾಂಬಾ ಜಿಲ್ಲಾ ಘಟಕದ ಬಿಜೆಪಿ ಅಧ್ಯಕ್ಷ ಕಾಶ್ಮೀರ ಸಿಂಗ್ ಹೇಳಿದ್ದಾರೆ. ಇನ್ನೊಂದೆಡೆ, ಮೊದಲ ಹಂತದ ಚುನಾವಣೆಯಲ್ಲಿ ರಾಂಬನ್ ಮತ್ತು ಪದ್ದರ್-ನಾಗಸೇನಿ ವಿಧಾನಸಭಾ ಕ್ಷೇತ್ರಗಳಿಂದ ಇಬ್ಬರು ನಾಯಕರು ಬಂಡೆದ್ದಿದ್ದು, ಸ್ವತಂತ್ರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದಾರೆ. ಅಲ್ಲದೇ, ಛಂಬ್ ವಿಧಾನಸಭಾ ಕ್ಷೇತ್ರದ ಖೌರ್ ಬ್ಲಾಕ್‌ನಲ್ಲಿ ಮಾಜಿ ಶಾಸಕ ರಾಜೀವ್ ಶರ್ಮಾರನ್ನು ಅಭ್ಯರ್ಥಿಯನ್ನಾಗಿಸಿದ್ದನ್ನು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಶನಿವಾರ ರ್‍ಯಾಲಿ ನಡೆಸಿದ್ದಾರೆ. ಕೇಂದ್ರ ಸಚಿವರು ಸೇರಿದಂತೆ ಉನ್ನತ ನಾಯಕರು ಭಿನ್ನಮತೀಯರನ್ನು ಸಮಾಧಾನಪಡಿಸಲೆತ್ನಿಸಿದರೂ ಪ್ರಯೋಜನವಾಗಿಲ್ಲ.

219 ಅಭ್ಯರ್ಥಿ ಕಣದಲ್ಲಿ

90 ಸದಸ್ಯ ಬಲದ ಜಮ್ಮು-ಕಾಶ್ಮೀರ ವಿಧಾನಸಭೆಗೆ 3 ಹಂತಗಳಲ್ಲಿ ಚುನಾವಣೆ ನಡೆಯುತ್ತಿದ್ದು, ಮೊದಲ ಹಂತದಲ್ಲಿ 24 ಕ್ಷೇತ್ರಗಳಿಗೆ ಸೆ.18ರಂದು ಮತದಾನ ನಡೆಯಲಿದ್ದು, ಒಟ್ಟು 219 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಒಟ್ಟು 280 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ 36 ನಾಮಪತ್ರ ತಿರಸ್ಕೃತಗೊಂಡವು. 25 ನಾಮಪತ್ರ ವಾಪಸ್ ಪಡೆಯಲಾಗಿದೆ. 219 ಮಂದಿ ಸ್ಪರ್ಧೆಯಲ್ಲಿದ್ದಾರೆ.

ಕಂಗನಾ ಎಮರ್ಜೆನ್ಸಿಗೆ ಸಿಗದ ಪ್ರಮಾಣಪತ್ರ!

ದೆಹಲಿ: ಬಾಲಿವುಡ್ ಖ್ಯಾತ ನಟಿ-ನಿರ್ಮಾಪಕಿ, ಬಿಜೆಪಿ ಸಂಸದೆ ಕಂಗನಾ ರಣಾವತ್ ನಿರ್ಮಿಸಿ ನಟಿಸಿದ್ದ 'ಎಮರ್ಜೆನ್ಸಿ' ಚಲನ ಚಿತ್ರಕ್ಕೆ 'ಸೆಂಟ್ರಲ್ ಬೋರ್ಡ್ ಆಫ್ ಫಿಲಂ ಸರ್ಟಿಫಿಕೇಷನ್'(ಸಿಬಿ ಎಫ್‌ಸಿ) ಯಿಂದ ಈವರೆಗೂ ಪ್ರಮಾಣ ಪತ್ರ ಸಿಗದ ಕಾರಣ, ನಿಗದಿಯಂತೆ ಸೆ.6ರಂದು ಸಿನಿಮಾ ತೆರೆಗೆ ಬರುವುದು ಅನುಮಾನವಾಗಿದೆ.

ಸಿಖ್ಖರ ಸಂಘಟನೆ ಗಳ ತೀವ್ರ ವಿರೋಧ ಮತ್ತು ಕೇಂದ್ರ ಚಲನಚಿತ್ರ ಮಂಡಳಿಗೆ ವಕೀಲರ ಮೂಲಕ ನೋಟಿಸ್ ನೀಡಿದ್ದರಿಂದ ಮಂಡಳಿ ಈವರೆಗೂ 'ಎಮರ್ಜೆನ್ಸಿ' ಸಿನಿಮಾಗೆ ಪ್ರದರ್ಶನಕ್ಕೆ ಸಮ್ಮತಿ ನೀಡುವ ಪ್ರಮಾಣಪತ್ರವನ್ನೂ ಕೊಟ್ಟಿಲ್ಲ ಎಂದು ಮೂಲಗಳಿಂದ ತಿಳಿದುಬಂದಿದೆ. ಬಹು ನಿರೀಕ್ಷೆಯ 'ಎಮರ್ಜೆನ್ಸಿ' ಸಿನಿಮಾವನ್ನು ಗೌರಿ-ಗಣೇಶ ಹಬ್ಬದ ಸಂದರ್ಭದಲ್ಲೇ ತೆರೆಗೆ ತರಲು ಸಿದ್ಧತೆ ನಡೆಸಿದ್ದೆ. ಆದರೆ, ಕೇಂದ್ರ ಚಲನಚಿತ್ರ ಮಂಡಳಿ ಪ್ರಮಾಣಪತ್ರ ನೀಡಿಲ್ಲ ಎಂದು ಚಿತ್ರದ ಮುಖ್ಯ ಪಾತ್ರಧಾರಿ ಕಂಗನಾ ರಣಾವತ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದಾರೆ. 1975ರ ಸತ್ಯಘಟನೆಗಳನ್ನು ಆಧರಿಸಿ ನಿರ್ಮಿಸಿರುವ 'ಎಮರ್ಜೆನ್ಸಿ'(ತುರ್ತು ಪರಿಸ್ಥಿತಿ) ಸಿನಿಮಾದಲ್ಲಿ ಕಂಗನಾ, ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರ ಪಾತ್ರ ವಹಿಸಿದ್ದಾರೆ. ಚಿತ್ರದಲ್ಲಿ ಸಿಖ್ಖರನ್ನು ಉಗ್ರರು, ಹಂತಕರು ಎಂಬಂತೆ ಬಿಂಬಿಸಲಾಗಿದೆ ಎಂದು ಸಿಟ್ಟಿಗೆದ್ದಿರುವ ಸಿಖ್ ಸಂಘಟನೆಗಳು, ಧಾರ್ಮಿಕ ಸಂಸ್ಥೆ ಕಂಗನಾ ವಿರುದ್ಧ ಕಿಡಿಕಾರುತ್ತಿವೆ. ಜತೆಗೆ ಜೀವ ಬೆದರಿಕೆಯೂ ಬಂದಿದೆ ಎಂದು ಸಂಸದೆ ಕಂಗನಾ ಈ ಮೊದಲೇ ಪೊಲೀಸರಿಗೆ ದೂರು ನೀಡಿದ್ದಾರೆ.

ಚಲನಚಿತ್ರ ಮಂಡಳಿಯವರಿಗೂ ಬೆದರಿಕೆ ಕರೆ ಬಂದಿರಬೇಕು. ಹಾಗಾಗಿಯೇ ಎಮರ್ಜೆನ್ಸಿ ಸಿನಿಮಾಗೆ ಪ್ರಮಾಣಪತ್ರ ನೀಡಲು ತಡ ಮಾಡಲಾಗಿದೆ ಎಂದು ನಟಿ ಹೇಳಿದ್ದಾರೆ.

ಪಾಲಕ್ಕಾಡಲ್ಲಿ ಆರೆಸೆಸ್ ಸಮನ್ವಯ ಬೈಠಕ್

ಪಾಲಕ್ಕಾಡ್: ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಅಖಿಲ ಭಾರತ ಸಮನ್ವಯ ಬೈಠಕ್ ಕೇರಳದ ಪಾಲಕ್ಕಾಡ್‌ನಲ್ಲಿ ಶನಿವಾರ ಆರಂಭವಾಗಿದ್ದು, ಸೆ.2ರವರೆಗೂ ನಡೆಯಲಿದೆ.

ಸರಸಂಘಚಾಲಕ್ ಡಾ. ಮೋಹನ್ ಭಾಗವತ್, ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಉಪ ಸರಕಾರ್ಯವಾಹ ಕೃಷ್ಣಗೋಪಾಲ್, ಸಿ.ಆರ್.ಮುಕುಂದ, ಅರುಣ್ ಕುಮಾರ್, ಅಲೋಕ್ ಕುಮಾರ್, ರಾಮದತ್ ಚಕ್ರಧರ್ ಮತ್ತು ಅತುಲ್ ಲಿಮಯೆ ಭಾಗವಹಿಸಿದ್ದಾರೆ. ಸಭೆಯ ಆರಂಭದಲ್ಲಿ ವಯನಾಡ್ ಭೂಕುಸಿತದ ವಿವರಗಳು ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ನೀಡಿದ ಸಹಾಯದ ಮಾಹಿತಿಯನ್ನು ಕಾರ್ಯಕ್ರಮದಲ್ಲಿ ವಿವರಿಸಲಾಯಿತು. ವಿವಿಧ ಸಂಘಟನೆಗಳ ಕಾರ್ಯಕರ್ತರು ತಮ್ಮ ಕೆಲಸದ ಮಾಹಿತಿ ಮತ್ತು ಅನುಭವಗಳನ್ನು ಸಲ್ಲಿಸಿ ವಿನಿಮಯ ಮಾಡಿಕೊಳ್ಳಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಸೇರಿದಂತೆ ಆರ್‌ಎಸ್‌ಎಸ್ ಸಿದ್ಧಾಂತದಿಂದ ಪ್ರೇರಿತರಾಗಿ ಸಮಾಜ ಪರಿವರ್ತನೆಗಾಗಿ ಶ್ರಮಿಸುತ್ತಿರುವ ವಿವಿಧ ಸಂಘಟನೆಗಳ 32 ರಾಷ್ಟ್ರೀಯ ಪದಾಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದಾರೆ.

ನಿರೋಧ್ ಬಳಕೆ ಇಳಿಕೆ ಆರೋಗ್ಯಸಂಸ್ಥೆ ಚಿಂತೆ

ಜಿನೀವಾ: ನಿರೋಧ್(ಗರ್ಭನಿರೋಧಕ) ಬಳಸುವವರ ಸಂಖ್ಯೆ ಇಳಿಮುಖವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಚಿಂತೆಗೀಡಾಗಿದೆ. 2014ರಲ್ಲಿ ನಿರೋಧ್ ಬಳಸುವವರ ಸಂಖ್ಯೆ ವಿಶ್ವದಲ್ಲಿ ಶೇ. 70ರಷ್ಟಿತ್ತು.

ಆದರೆ ಇತ್ತೀಚೆಗೆ(2024) ಸಮೀಕ್ಷೆ ನಡೆಸಿದಾಗ ಆ ಸಂಖ್ಯೆ ಶೇ.61ಕ್ಕೆ ಇಳಿಕೆಯಾಗಿದೆ. ಯುರೋಪ್, ಮಧ್ಯಪ್ರಾಚ್ಯ ಸೇರಿದಂತೆ 42 ದೇಶಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ 15 ವರ್ಷದವರು 2.42 ಲಕ್ಷ ಮಂದಿ ಭಾಗವಹಿಸಿದ್ದರು. ಆಗ ನಿರೋಧ್ ಬಳಕೆ ಪ್ರಮಾಣ ತಗ್ಗಿರುವುದು ತಿಳಿದುಬಂದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಹಿಂದೆ ಸುರಕ್ಷಿತ ಲೈಂಗಿಕತೆಯ ಬಗ್ಗೆ ಜನರಲ್ಲಿ ಅರಿವು ಹೆಚ್ಚಾಗಿತ್ತು. ಕಾಂಡೋಮ್ ಬಳಕೆ ಹೆಚ್ಚಳವಾಗಿ ಎಚ್‌ಐವಿ ರೀತಿಯ ಮಾರಕ ರೋಗ ಹರಡುವುದು ಕಡಿಮೆಯಾಗಿತ್ತು. ಆದರೆ ಇತ್ತೀಚೆಗೆ, ಕೆಲ ದೇಶಗಳಲ್ಲಿ ಕಾಂಡೋಮ್ ಬಳಕೆ ತೀವ್ರವಾಗಿ ಕುಸಿದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ. ಕೆಳ ಮಧ್ಯಮ ವರ್ಗದ ಶೇ.33 ಯುವಕರು ಕಾಂಡೋಮ್ ಬಳಸುವುದಿಲ್ಲ. ಮೇಲ್ವರ್ಗದ ಕುಟುಂಬಗಳ ಯುವಕರಲ್ಲಿ ಶೇ.25ರಷ್ಟು ಮಂದಿ ನಿರೋಧ್‌ನಿಂದ ದೂರವಿದ್ದಾರೆ. ಯುರೋಪ್ ಖಂಡದ ಅನೇಕ ದೇಶಗಳು ಯುವಜನರಿಗೆ ಲೈಂಗಿಕ ಶಿಕ್ಷಣ ನೀಡುತ್ತಿಲ್ಲ ಎಂಬುದರತ್ತಲೂ ವಿಶ್ವಸಂಸ್ಥೆ ಬೆಟ್ಟು ಮಾಡಿದೆ.

ಲಾವೋಸ್‌ನಿಂದ 47 ಭಾರತೀಯರ ರಕ್ಷಣೆ

ದೆಹಲಿ: ಲಾವೋಸ್‌ನ ಬೊಕಿಯೊ ಪ್ರಾಂತ್ಯದಲ್ಲಿ ಸೈಬರ್ ಹಗರಣದಲ್ಲಿ ಸಿಲುಕಿದ್ದ 47 ಭಾರತೀಯರನ್ನು ರಕ್ಷಿಸಲಾಗಿದೆ ಎಂದು ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ರಾಯಭಾರ ಕಚೇರಿ ಈವರೆಗೂ 635 ಭಾರತೀಯರನ್ನು ರಕ್ಷಿಸಿ ಸುರಕ್ಷಿತವಾಗಿ ಭಾರತಕ್ಕೆ ಕಳಿಸಿಕೊಟ್ಟಿದೆ. ಇತ್ತೀಚಿನ ಪ್ರಕರಣದಲ್ಲಿ, ಬೊಕಿಯೊ ಪ್ರಾಂತ್ಯದ ಗೋಲ್ಡನ್ ಟ್ರಯಾಂಗಲ್ ಎಸ್‌ಇಜೆಡ್‌ನಲ್ಲಿ ಸೈಬರ್ ಹಗರಣ ಕೇಂದ್ರಗಳಲ್ಲಿ 47 ಭಾರತೀಯರು ಸಿಲುಕಿದ್ದರು. ಈ ಪೈಕಿ 29 ಮಂದಿ ವಿರುದ್ಧ ಲಾವೋಸ್ ಅಧಿಕಾರಿಗಳು ಅಕ್ರಮ ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮ ಕೈಗೊಂಡ ನಂತರ ರಾಯಭಾರ ಕಚೇರಿಗೆ ಹಸ್ತಾಂತರಿಸಿದ್ದರು. ಉಳಿದ 18 ಮಂದಿ ಸಹಾಯ ಕೋರಿ ರಾಯಭಾರ ಕಚೇರಿ ಸಂಪರ್ಕಿಸಿದ್ದರು. 47 ಮಂದಿಯನ್ನೂ ಭಾರತಕ್ಕೆ ಕಳುಹಿಸಿಕೊಡಲಾಗುವುದು ಎಂದು ಭಾರತೀಯ ಅಧಿಕಾರಿಗಳು ತಿಳಿಸಿದ್ದಾರೆ. ಲಾವೋಸ್‌ನಿಂದ ನೀಡಲಾಗುವ ನಕಲಿ ನೌಕರಿ ಕರೆಗಳ ಬಗೆಗೆ ಇನ್ನು ಮುಂದಾದರೂ ಎಚ್ಚರಿಕೆಯಿಂದ ಇರುವಂತೆ ಸಲಹೆ ನೀಡಿದ್ದಾರೆ.

ಪುಂಚಿರಿಮಟ್ಟಂನಲ್ಲಿ ಮಳೆಗೆ ಮಣ್ಣು ಕುಸಿತ

ವಯನಾಡ್: ಕೇರಳದಲ್ಲಿ ತೀವ್ರ ಸ್ವರೂಪದ ಭೂಕುಸಿತ ಕಂಡಿದ್ದ ವಯನಾಡ್ ಪ್ರದೇಶದ ಸಮೀಪದಲ್ಲೇ ಕೆಲವೆಡೆ ಶನಿವಾರ ಮಣ್ಣು ಕುಸಿದಿದ್ದು, ಆತಂಕಕ್ಕೆ ಕಾರಣವಾಗಿದೆ.

ಕಳೆದೆರಡು ಮೂರು ದಿನಗಳಿಂದ ಧಾರಾಕಾರ ಮಳೆ ಸುರಿಯುತ್ತಿದ್ದು, ಪುಂಚಿರಿ ಮಟ್ಟಂ ಭಾಗದಲ್ಲಿ ಶನಿವಾರ ಮಣ್ಣು ಕುಸಿತವಾಗಿದೆ.

ತಕ್ಷಣವೇ ವಯನಾಡು ಜಿಲ್ಲಾಡಳಿತ, ಜುಲೈ 30ರ ರಾತ್ರಿ ಭೂಕುಸಿತವಾಗಿದ್ದ ಪ್ರದೇಶದಲ್ಲಿನ ಜನರಿಗೆ ಎಚ್ಚರಿಕೆ ಸಂದೇಶ ರವಾನಿಸಿದೆ. ಅದರಲ್ಲೂ ಮೆಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನಾಮಾವಶೇಷವಾದ ಚೂರನ್‌ಮಲಾ ಸೇರಿದಂತೆ 3 ಗ್ರಾಮಗಳಲ್ಲಿ ಅಳಿದುಳಿದ ವಸ್ತುಗಳಿಗಾಗಿ ಹುಡುಕಾಟ ನಡೆಸುತ್ತಿರುವವರು ಜಾಗ್ರತೆ ವಹಿಸಬೇಕು ಎಂದು ಎಚ್ಚರಿಸಿದೆ. ಪುಂಚಿರಿಮಟ್ಟಂ ಪ್ರದೇಶದಲ್ಲಿನ ಶನಿವಾರ ಸಂಭವಿಸಿದ ಮಣ್ಣು ಕುಸಿತ ಅಷ್ಟೊಂದು ತೀವ್ರ ಸ್ವರೂಪದ್ದೇನಲ್ಲ. ಹಾಗಾಗಿ ಭಾರೀ ಅಪಾಯವೇನೂ ಎದುರಾಗಿಲ್ಲ. ಆದರೆ, ಆ ಭಾಗದ ಜನರ ಎಚ್ಚರ ವಹಿಸಬೇಕು ಎಂದು ವಯನಾಡು ಜಿಲ್ಲಾಧಿಕಾರಿ ಡಿ. ಆರ್.ಮೇಘಶ್ರೀ ಸ್ಪಷ್ಟಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಜಯದೇವ ಸ್ವಾಮಿ ಹೆಸರು ನಾಮಕರಣ

ವಿಜಯಪುರ: ನಗರದ ಜಿಲ್ಲಾ ಪಂಚಾಯತಿ ಕಚೇರಿಯಿಂದ ವನಶ್ರೀ ಮಠಕ್ಕೆ,ಮನಗೂಳಿ ರಸ್ತೆಯಿಂದ ಕನಕದಾಸ ಬಡಾವಣೆಗೆ ಹೋಗುವ ಕೂಡು ರಸ್ತೆ (ಸರ್ಕಲ್)ಗೆ ಶ್ರೀ ಜಗದ್ಗುರು ಜಯದೇವ ಸ್ವಾಮಿಗಳ ವೃತ್ತವೆಂದು ನಾಮಕರಣ ಮಾಡಲು ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಠರಾವು ಮಾಡಲಾಗಿದೆ. ಸದರಿ ಠರಾವಿನ ಕುರಿತು ಸಾರ್ವಜನಿಕರಲ್ಲಿ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆಯ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆಗಳನ್ನು ಮಹಾನಗರ ಪಾಲಿಕೆಗೆ ಸಲ್ಲಿಸುವಂತೆ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂಟರ್ನ್‌ಶಿಪ್ ತರಬೇತಿಗೆ ಅರ್ಜಿ

ವಿಜಯಪುರ: ಮನಗೂಳಿ ಪಟ್ಟಣ ಪಂಚಾಯತಿಯ ವತಿಯಿಂದ ಡೇ-ನಲ್ಮ್ ಅಭಿಯಾನದ ಉಪ ಘಟಕಗಳು ಮತ್ತು ಪಿಎಂ ಸ್ವನಿಧಿ ಯೋಜನೆಯಡಿ ಬೀದಿ ವ್ಯಾಪಾರಿಗಳ ಕುರಿತು ಅಧ್ಯಯನ ಮಾಡಿ ಜ್ಞಾನ ಮತ್ತು ಕೌಶಲ್ಯ ವೃದ್ದಿಸಿಕೊಳ್ಳಲು ಅವಕಾಶ ಕಲ್ಪಿಸುವ ಉದ್ದೇಶದಿಂದ ನಗರ ಕಲಿಕಾ ಪ್ರಾಯೋಗಿಕ ತರಬೇತಿ ಕಾರ್ಯಕ್ರಮಕ್ಕೆ ಇಂಟರ್‌ಶಿಪ್ ತರಬೇತಿಗಾಗಿ ಪದವಿ-ಸ್ನಾತಕೋತ್ತರ ಪದವಿ-ಡಿಪ್ಲೋಮಾ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪದವಿ-ಸ್ನಾತಕೋತ್ತರ ಪದವಿ-ಡಿಪ್ಲೋಮಾ ಹೊಂದಿದ ಆಸಕ್ತ ಅಭ್ಯರ್ಥಿಗಳು ತಮ್ಮ ಶೈಕ್ಷಣಿಕ ದಾಖಲಾತಿಗಳೊಂದಿಗೆ ಡೇ-ನಲ್ಮ್ ಶಾಖೆಗೆ ಅರ್ಜಿ ಸಲ್ಲಿಸಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಡೇ-ನಲ್ಮ್ ಶಾಖೆಯನ್ನು ಸಂಪರ್ಕಿಸುವಂತೆ ಮನಗೂಳಿ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ವಿದ್ಯುತ್ ಪೂರೈಕೆ ವ್ಯತ್ಯಯ

ವಿಜಯಪುರ: 110 ಕೆವ್ಹಿ ಟಕ್ಕಳಕಿ ಉಪ ಕೇಂದ್ರದಲ್ಲಿ ಪ್ರಸ್ತಾಪಿತ 110ಕೆವ್ಹಿ ಕನಮಡಿ ಉಪ ಕೇಂದ್ರಕ್ಕಾಗಿ 110ಕೆ.ವ್ಹಿ ಬಸ್ ಜೋಡಣೆ ಕಾಮಗಾರಿ ನಡೆಯುವ ಹಿನ್ನೆಲೆಯಲ್ಲಿ ಈ ಉಪ ಕೇಂದ್ರದಿಂದ ಹೊರಡುವ ಎಲ್ಲ 11 ಕೆವ್ಹಿ ವಿದ್ಯುತ್ ಮಾರ್ಗಗಳಲ್ಲಿ ಸೆಪ್ಟೆಂಬರ್ 02ರ ಬೆಳಿಗ್ಗೆ 7 ಗಂಟೆಯಿಂದ ಬೆಳಿಗ್ಗೆ 11ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ವಿಜಯಪುರ ಹೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಯಕರ್ನಾಟಕ ಅಧ್ಯಕ್ಷ ಶಿವಲಿಂಗಪ್ಪ

ದೇವರಹಿಪ್ಪರಗಿ: ಜಯಕರ್ನಾಟಕ ಸಂಘಟನೆ ಪ್ರಮುಖರಾದ ಸಿದ್ರಾಮಪ್ಪ ಶಿವಲಿಂಗಪ್ಪ ಅವಟಿ ಇವರನ್ನು ದೇವರಹಿಪ್ಪರಗಿ ತಾಲೂಕಿನ ಜಯಕರ್ನಾಟಕ ಸಂಘಟನೆ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಹಲವಾರು ವರ್ಷಗಳಿಂದ ಸಂಘಟನೆಯಲ್ಲಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರ ಸಾಮಾಜಿಕ ಹೋರಾಟಗಳನ್ನು ಗುರುತಿಸಿ ಜಯಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಡಾ. ಬಿ ಎನ್ ಜಗದೀಶ ಇವರ ಶಿಫಾರಸ್ಸಿನ ಮೇರೆಗೆ ಜಿಲ್ಲಾಧ್ಯಕ್ಷ ಸಂಘಮೇಶಗೌಡ ದಾಶ್ಯಾಳ ನೇಮಕ ಮಾಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಗಲಿದ ಜೀವ

ಲಿಂಗನಗೌಡ ಪಾಟೀಲ್

ಸಿಂದಗಿ: ತಾಲೂಕಿನ ಬೆನಕೋಟಗಿ ಗ್ರಾಮದ ಕೆಬಿಜೆಎನ್ಎಲ್ ನಿವೃತ್ತ ಅಧಿಕಾರಿ ಲಿಂಗನಗೌಡ ಬಸವಂತರಾಯಗೌಡ ಪಾಟೀಲ ದೈವಾಧೀನರಾಗಿದ್ದಾರೆ. ಮೃತರಿಗೆ ಸಿಂದಗಿಯ ಉಪನೋಂದಣ ಅಧಿಕಾರಿ ಎಂ.ಆರ್.ಪಾಟೀಲ್ ಹಾಗೂ ಕಾನಿಪ ಸಂಘದ ತಾಲೂಕಾಧ್ಯಕ್ಷ ಆನಂದ ಶಾಬಾದಿ ಅಳಿಯಂದಿರು ಸೇರಿದಂತೆ ಒರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ವಿ+
ಸೋಮವಾರ

{ ಎಂ.ಬಿ. ಪಾಟೀಲ್ } ಸಚಿವ

ಛಲವಾದಿ ನಾರಾಯಣ ಸ್ವಾಮಿ ನನಗೆ ಆತ್ಮೀಯ ಸ್ನೇಹಿತರು. ಪ್ರಿಯಾಂಕ್ ಖರ್ಗೆ ಹಾಗೂ ಮಲ್ಲಿಕಾರ್ಜುನ ಖರ್ಗೆಯವರಿಗೆ ಬಿಜೆಪಿಯವರು ಅವಮಾನ ಮಾಡುತ್ತಾರೆ. ಅದು ಅಪಮಾನ ಅಲ್ವಾ? ನಾನು ಶೆಡ್ ಗಿರಾಕಿ ಎಂದಿರುವುದನ್ನು ರಾಜಕೀಯ ಮಾಡಲು ಬಿಜೆಪಿ ಹೊರಟಿರುವುದು ವಿಪರ್ಯಾಸ.

ಪ್ರಸಕ್ತ ವರ್ಷ 20.22 ಕೋಟಿ ನಿವ್ವಳ ಲಾಭ : ಬ್ಯಾಂಕ್ ಸಚಿವ ಶಿವಾನಂದ ಪಾಟೀಲ್ ಹೇಳಿಕೆ

ಲಾಭಾಂಶದಲ್ಲಿ ಡಿಸಿಸಿ ಬ್ಯಾಂಕ್ ಐತಿಹಾಸಿಕ ಸಾಧನೆ



ವಿಜಯಪುರ: ವಿಜಯಪುರ ಡಿಸಿಸಿ ಬ್ಯಾಂಕ್ 2023-24 ನೇ ಸಾಲಿನಲ್ಲಿ ಆದಾಯ ತೆರಿಗೆ ಪೂರ್ವ 27.10 ಕೋಟಿ ಲಾಭಗಳಿಸಿದ್ದು, 6.88 ಕೋಟಿ ತೆರಿಗೆ ಪಾವತಿ ನಂತರ 20.22 ಕೋಟಿ ನಿವ್ವಳ ಲಾಭ ಗಳಿಸಿ, ಸ್ಥಾಪನೆಯಾದ 105 ವರ್ಷಗಳಲ್ಲೇ ಐತಿಹಾಸಿಕ, ದಾಖಲೆಯ ಲಾಭಾಂಶ ಸಾಧನೆ ಮಾಡಿದೆ ಎಂದು ಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆಗಿರುವ ಸಚಿವ ಶಿವಾನಂದ ಪಾಟೀಲ್ ಮಾಹಿತಿ ನೀಡಿದರು.

ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ (ಡಿಸಿಸಿ) ಬ್ಯಾಂಕ್ ನ ಸರ್ವ ಸದಸ್ಯರ ಸಭೆಗೂ ಮುನ್ನ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಬ್ಯಾಂಕ್ ನ ಸಾಧನೆಗಳನ್ನು ವಿವರಿಸಿದರು.

ಬ್ಯಾಂಕಿನ ಲಾಭಾಂಶ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇ. 41.40 ರಷ್ಟು ಏರಿಕೆಯಾಗಿದೆ. ಬ್ಯಾಂಕಿನ ಒಟ್ಟು ವ್ಯವಹಾರ 6607 ಕೋಟಿಗಳಷ್ಟಾಗಿ ಕಳೆದ ವರ್ಷಕ್ಕಿಂತ ಈ ವರ್ಷ 524 ಕೋಟಿ ಏರಿಕೆಯಾಗಿದೆ. 2024 ರ ಮಾರ್ಚ್ ಅಂತ್ಯಕ್ಕೆ ಬ್ಯಾಂಕ್ 1865 ಕೋಟಿ ಕೃಷಿ ಸಾಲ, 1247 ಕೋಟಿ ಕೃಷಿಯೇತರ ಸಾಲ ಸೇರಿ ಒಟ್ಟು 3112 ಕೋಟಿಗಳಷ್ಟು ಸಾಲ ನೀಡಿದೆ. ಬ್ಯಾಂಕ್ 2.43 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆಸಾಲ ಹಾಗೂ ಶೇ. 03 ರ ಬಡ್ಡಿ ದರದಲ್ಲಿ ಕೃಷಿ ಅವಧಿ ಸಾಲ ನೀಡಿದೆ. ವರದಿ ವರ್ಷದಲ್ಲಿ 18513 ಹೊಸ ರೈತರಿಗೆ 145.02 ಕೋಟಿ ಬೆಳೆ ಸಾಲ ವಿತರಿಸಿದೆ. ಅಲ್ಲದೇ ಸರಕಾರದ ಬಡ್ಡಿ ಸಹಾಯಧನ ಯೋಜನೆಯಡಿ ಶೂನ್ಯ ಬಡ್ಡಿ ದರದಲ್ಲಿ ನೀಡುವ ಬೆಳೆಸಾಲದ ಮಿತಿ 3 ಲಕ್ಷದಿಂದ 5 ಲಕ್ಷಕ್ಕೆ, ಕೃಷಿ ಮಧ್ಯಮಾವಧಿ ಸಾಲ ಮಿತಿ 10 ಲಕ್ಷದಿಂದ 15 ಲಕ್ಷಕ್ಕೆ ಹೆಚ್ಚಿಸಿದೆ. ಒಟ್ಟು 3111.88 ಕೋಟಿಗಳಷ್ಟು ಬರಬೇಕಾದ ಸಾಲ ಬಾಕಿ ಇದೆ ಎಂದರು.

ಬ್ಯಾಂಕ್ ನ ಸರ್ವಸಾಧಾರಣ ಸಭೆಗೂ ಮುನ್ನ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ನಡೆಸಲಾಯಿತು.

ಡಿಸಿಸಿ ಬ್ಯಾಂಕಿನಿಂದ ರಾಜ್ಯದ ಒಟ್ಟು 27 ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಸಾಲ ನೀಡಿ ಕಾರ್ಯಾಚರಣೆಗೆ ಕಾರಣವಾಗಿದೆ. ಕಾರ್ಖಾನೆಗಳಿಂದ 747.90 ಕೋಟಿ ಸಾಲ ಬರಬೇಕಿದೆ. ಅಲ್ಲದೇ ಡಿಸಿಸಿ ಬ್ಯಾಂಕುಗಳ ಬಂಡವಾಳ ಅನುಪಾತ (ಸಿ.ಆರ್.ಎ.ಆರ್.) ಶೇ.9 ರಷ್ಟಿರಬೇಕಾದ ಅನುಪಾತ ಶೇ. 12.55 ರಷ್ಟಿದೆ. ಇದರಿಂದ ಬ್ಯಾಂಕ್ ಸತತವಾಗಿ 'ಅ' ವರ್ಗದ ಬ್ಯಾಂಕಾಗಿ ಮುಂದುವರೆದಿದೆ. ಬ್ಯಾಂಕ್ ಶಾಖೆಗಳ ಮಟ್ಟದಲ್ಲಿ ಒಟ್ಟು 10515 ಸ್ವಸಹಾಯ ಗುಂಪುಗಳು ರಚನೆಯಾಗಿ ಸದಸ್ಯರ ಠೇವಣಿ 751.62 ಲಕ್ಷದಷ್ಟಿದೆ. ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಕಾರ್ಯನಿರ್ವಹಿಸುತ್ತಿದ್ದು, ಈ ವರ್ಷ ನೆಟ್ ಬ್ಯಾಂಕಿಂಗ್, ಐಎಂಪಿಎಸ್, ಯುಪಿಐ ಪೇಮೆಂಟ್, ಫೋನ್ ಪೇ, ಗೂಗಲ್ ಪೇ ಸೇವೆಗಳನ್ನು ಆರಂಭಿಸಲಾಗಿದೆ ಎಂದರು.

ಮುಂದಿನ ವರ್ಷದಲ್ಲಿ 3750 ಕೋಟಿ ಠೇವಣಿ ಸಂಗ್ರಹಣೆ, 3400 ಕೋಟಿ ಸಾಲಗಳೊಂದಿಗೆ, 7150 ಕೋಟಿ ವ್ಯವಹರಿಸುವ ಗುರಿ ಹೊಂದಿದೆ. ದುಡಿಯುವ ಬಂಡವಾಳ 5085 ಕೋಟಿಗೆ ಹೆಚ್ಚಿಸಿ ಪ್ರಸಕ್ತ ವರ್ಷ 22 ಕೋಟಿ ಲಾಭ ಗಳಿಸುವ ಉದ್ದೇಶ ಹೊಂದಿದೆ. ಅಲ್ಲದೇ 1819 ಕೋಟಿ ಬೆಳೆ ಸಾಲ, 70 ಕೋಟಿ ಮಾಧ್ಯಮವಧಿ ಕೃಷಿ ಸಾಲ ಹಾಗೂ 121 ಕೋಟಿ ಕೃಷಿಯೇತರ ಸಾಲ ವಿತರಿಸಲು ಗುರಿ ಹೊಂದಲಾಗಿದೆ. ಹೈನುಗಾರಿಕೆ, ತೋಟಗಾರಿಕೆ, ಕೃಷಿ ಹಾಗೂ ಕೃಷಿಯೇತರ ಸಾಲ ವ್ಯವಹಾರ ಹೆಚ್ಚಿಸಲು ಆದ್ಯತೆ ನೀಡಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುವ ಗುರಿ ಇದೆ.

ಈ ವೇಳೆ ಬ್ಯಾಂಕಿನ್ ಉಪಾಧ್ಯಕ್ಷ ರಾಜಶೇಖರ ಗುಡದಿನ್ನಿ, ನಿರ್ದೇಶಕರುಗಳಾದ ಸುರೇಶ ಬಿರಾದಾರ, ಶೇಖರ ದಳವಾಯಿ, ಬಿ.ಎಸ್.ಪಾಟೀಲ ಯಾಳಗಿ, ಚಂದ್ರಶೇಖರಗೌಡ ಪಾಟೀಲ ಮನಗೂಳಿ, ಕಲ್ಲನಗೌಡ ಬಿ.ಪಾಟೀಲ, ಹಣಮಂತ್ರಾಯಗೌಡ ಆರ್.ಪಾಟೀಲ, ಗುರುಶಾಂತ ನಿಡೋಣಿ, ಅರವಿಂದ ಪೂಜಾರಿ, ವೃತ್ತಿಪರ ನಿರ್ದೇಶಕರಾದ ಎಸ್.ಎಸ್.ಶಿಂಧೆ, ಎಸ್.ಎಸ್.ಜಾಗೀರದಾರ, ಆಡಳಿತ ಮಂಡಳಿ ಸಲಹೆಗಾರ ಎ.ಕೊಟ್ರೇಶ್, ಮುಖ್ಯ ಕಾರ್ಯನಿರ್ವಾಹಕ ಎಸ್.ಬಿ.ಬಿರಾದಾರ, ಉಪನಿಬಂಧಕರಾದ ಎಸ್.ಕೆ.ಭಾಗ್ಯಶ್ರೀ ಸೇರಿದಂತೆ ಇತರರು ಉಪಸ್ಥಿತರಿದ್ದರು.

106 ನೇ ವರ್ಷಕ್ಕೆ ಯಶಸ್ವಿ ಕಾರ್ಯೋನ್ಮುಖ

ವಿಜಯಪುರ ಡಿಸಿಸಿ ಬ್ಯಾಂಕ್ ರೈತರು ಹಾಗೂ ಬ್ಯಾಂಕಿನ ಅಧಿಕಾರಿಗಳು, ಸಿಬ್ಬಂದಿವರ್ಗ ಪರಿಶ್ರಮ, ಸಹಕಾರದಿಂದ 105 ವರ್ಷ ಪೂರೈಸಿ 106 ನೇ ವರ್ಷಕ್ಕೆ ಯಶಸ್ವಿಯಾಗಿ ಕಾರ್ಯೋನ್ಮುಖವಾಗಿದೆ. ಡಿಸಿಸಿ ಬ್ಯಾಂಕ್ ಆರ್.ಬಿ.ಐ ನಿಯಂತ್ರಣದಲ್ಲಿದ್ದರೂ ರಾಷ್ಟ್ರೀಕೃತ ಬ್ಯಾಂಕುಗಳೊಂದಿಗೆ ಸ್ಪರ್ಧೆ ಮಾಡಿ ಇಡೀ ರಾಜ್ಯದಲ್ಲಿ ನಮ್ಮ ವಿಜಯಪುರ ಡಿಸಿಸಿ ಬ್ಯಾಂಕ್ ಟಾಪ್ 5 ರೊಳಗಿದೆ. ವಿಜಯಪುರ ಡಿಸಿಸಿ ಬ್ಯಾಂಕ್ ಎಲ್ಲಾ ಪ್ಯಾರಾಮಿಟರ್ ಗಳಲ್ಲೂ ಶೇ.100 ರಷ್ಟು ಪ್ರಗತಿ ಸಾಧಿಸಿ ರಾಜ್ಯದಲ್ಲಿ ಮುಂಚೂಣಿ ಬ್ಯಾಂಕ್ ಆಗಿದೆ ಎಂದು ವಿಜಯಪುರ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿರುವ ಸಚಿವ ಶಿವಾನಂದ ಪಾಟೀಲ್ ಡಿಸಿಸಿ ಬ್ಯಾಂಕ್ ಸಾಧನೆಗಳಿಗೆ ಹೆಮ್ಮೆ ವ್ಯಕ್ತಪಡಿಸಿದರು.

ತಲಾ ರೈತರಿಗೆ ಪ್ಯಾಕ್ಸ್‌ಗಳ ಮೂಲಕ ನೀಡುವ ಬೆಳೆ ಸಾಲದ ಕನಿಷ್ಠ ಮಿತಿ 65 ಸಾವಿರದಿಂದ 75 ಸಾವಿರಕ್ಕೆ ಹೆಚ್ಚಿಸಲಾಗಿದ್ದು, ಇದಕ್ಕಾಗಿ ಈ ವರ್ಷ 200 ಕೋಟಿ ಹೆಚ್ಚುವರಿ ಸಾಲ ವಿತರಣೆಗೆ ಮೀಸಲಿರಿಸಲಾಗಿದೆ. ವಿಜಯಪುರ ಡಿಸಿಸಿ ಬ್ಯಾಂಕ್ ಜಿಲ್ಲಾದ್ಯಂತ ಈಗಾಗಲೇ ತನ್ನ 46 ಶಾಖೆಗಳನ್ನು ಹೊಂದಿದ್ದು, ಪ್ರಸಕ್ತ ವರ್ಷ ಗೊಳಸಂಗಿ, ಲಚ್ಯಾಣ, ಜಿಗಜಿವಣಗಿ ಹಾಗೂ ಹಿಟ್ಟಿನಹಳ್ಳಿ ಗ್ರಾಮಗಳಲ್ಲಿ ಇದೇ ವರ್ಷ ಶಾಖೆಗಳನ್ನು ಆರಂಭಿಸಲಾಗುವುದು.

– ಶಿವಾನಂದ ಪಾಟೀಲ್, ಸಚಿವ

ತಾಲೂಕು ಮಟ್ಟಕ್ಕೆ ಬ್ರಿಲಿಯಂಟ್ ಶಾಲೆ

ಪಟ್ಟಣದ ಎಚ್ ಎಸ್ ಪಾಟೀಲ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ನಡೆದ ಸನ್ 2024-25ನೇ ಸಾಲಿನ ತಾಳಿಕೋಟಿ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಭಾಗವಹಿಸಿದರು.

ತಾಳಿಕೋಟಿ: ಪಟ್ಟಣದ ಎಚ್ ಎಸ್ ಪಾಟೀಲ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಯಲ್ಲಿ ನಡೆದ 2024-25ನೇ ಸಾಲಿನ ತಾಳಿಕೋಟಿ ಹೋಬಳಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟದಲ್ಲಿ ಬ್ರಿಲಿಯಂಟ್ ಶಾಲೆ ಮೈಲೇಶ್ವರದ ವಿದ್ಯಾರ್ಥಿಗಳು ಭಾಗವಹಿಸಿ ಬಾಲಕರ ವಿಭಾಗದ ಗುಂಪು ಆಟಗಳಾದ ಖೋ ಖೋ, ವಾಲಿಬಾಲ್, ಥ್ರೋ ಬಾಲ್ ಮತ್ತು 4ಥ100 ಮೀ. ರಿಲೇಯಲ್ಲಿ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ತಾಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಬಾಲಕಿಯರ ಗುಂಪು ಆಟಗಳಾದ ಕಬಡ್ಡಿಯಲ್ಲಿ ಬ್ರಿಲಿಯಂಟ್ ಶಾಲೆಯ ವಿದ್ಯಾರ್ಥಿನಿಯರು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ ವೈಯಕ್ತಿಕ ಆಟಗಳಲ್ಲಿ ಬ್ರಿಲಿಯಂಟ್ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ವಿಜೇತರಾಗಿ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮಕ್ಕಳ ಅತ್ಯುತ್ತಮ ಸಾಧನೆಗೆ ಮಾರುತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎನ್ ಬಿ ನಡುವಿನಮನಿ, ಸರ್ವ ಆಡಳಿತ ಮಂಡಳಿ, ಬ್ರಿಲಿಯಂಟ್ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ವರ್ಗದವರು ಅಭಿನಂದಿಸಿ ಹರ್ಷ ವ್ಯಕ್ತಪಡಿಸಿದರು.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ

ವಿಜಯಪುರ: ಸರಕಾರಿ ಜಾಗ ಒತ್ತುವರಿ ತಡೆಗೆ ಪೊಲೀಸ್ ಬೀಟ್ ಮಾದರಿಯಲ್ಲಿ ಲ್ಯಾಂಡ್ ಬೀಟ್ ವ್ಯವಸ್ಥೆ ಕೈಗೊಂಡು ಒತ್ತುವರಿ-ಅತಿಕ್ರಮಣ ತಡೆಗಟ್ಟಲು ಕ್ರಮವಹಿಸುವಂತೆ ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ (ಇ-ಆಡಳಿತ) ಸರಕಾರದ ಕಾರ್ಯದರ್ಶಿಗಳಾದ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶನಿವಾರ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಜಿಲ್ಲೆಯಲ್ಲಿರುವ ಸರಕಾರಿ ಜಾಗವನ್ನು ಗುರುತಿಸಿಕೊಳ್ಳಬೇಕು. ಒತ್ತುವರಿಯಾಗಬಹುದಾದ ಜಾಗಗಳನ್ನು ಆದ್ಯತೆ ಮೇಲೆ ಪರಿಶೀಲಿಸಿ ಒತ್ತುವರಿಯಾಗದಂತೆ ನಿಗಾ ವಹಿಸಿ ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು. ಸರಕಾರಿ ಜಾಗದ ಕುರಿತು ಇರುವ ಅನುದಾನವನ್ನು ಬಳಕೆ ಮಾಡಿಕೊಂಡು ಸುತ್ತಲೂ ತಂತಿ ಬೇಲಿ ವ್ಯವಸ್ಥೆ ಸೇರಿದಂತೆ ಸರಕಾರಿ ಜಾಗ ಇರುವ ಕುರಿತು ಫಲಕಗಳನ್ನು ಅಳವಡಿಸುವ ಮೂಲಕ ಒತ್ತುವರಿ ತಡೆಗೆ ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

ಜಿಲ್ಲೆಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳಲ್ಲಿ ಅಗತ್ಯ ಮೂಲ ಸೌಲಭ್ಯಗಳನ್ನು ಕಲ್ಪಿಸಲು ಕ್ರಮವಹಿಸಬೇಕು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಲಾಯಿತು.

ಜಿಲ್ಲೆಯಲ್ಲಿರುವ ಸರಕಾರಿ ಜಾಗ ಸೇರಿದಂತೆ ಇತರೆ ಸರ್ವೇ ಕಾರ್ಯಕ್ಕಾಗಿ ಈಗಿರುವ ಸಾಧನ ಹಳೆಯದಾಗಿರುವುದರಿಂದ ಪ್ರಸ್ತುತ ಕಾಲೋಚಿತ ಡಿಜಿಪಿಎಸ್ ಯಂತ್ರ ಬಳಸಿ ಸರ್ವೇ ಕಾರ್ಯ ಕೈಗೊಳ್ಳುವುದರಿಂದ ಸಮಯಕ್ಕೆ ತಕ್ಕಂತೆ ಕಾರ್ಯದಲ್ಲಿ ವೇಗ ದೊರೆಯಲಿರುವ ಕಾರಣ ಡಿಜಿಪಿಎಸ್ ಯಂತ್ರಗಳನ್ನು ಒದಗಿಸುವ ಕುರಿತಂತೆ ಕ್ರಮ ವಹಿಸಲಾಗುವುದು.

– ಉಜ್ವಲ್ ಕುಮಾರ್ ಘೋಷ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಬಾಲಕಿಯರ ವಸತಿ ನಿಲಯಗಳಲ್ಲಿ ಸೂಕ್ತ ಸುರಕ್ಷತಾ ವ್ಯವಸ್ಥೆಗೆ ಪೊಲೀಸ್ ಬೀಟ್ ವ್ಯವಸ್ಥೆ ಕೈಗೊಳ್ಳಬೇಕು. ಹೊರಗಿನ ಯಾವುದೇ ಅನಧಿಕೃತ ವ್ಯಕ್ತಿಗಳು ವಸತಿ ನಿಲಯಗಳಲ್ಲಿ ಪ್ರವೇಶ ನಿರ್ಬಂಧಿಸಬೇಕು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 7 ವಸತಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ದ್ವಿಗುಣವಾಗಿರುವುದರಿಂದ ಶಿಕ್ಷಕರ ವಸತಿಗಳನ್ನು ಮಕ್ಕಳಿಗೆ ಒದಗಿಸಲಾಗಿದೆ. ಮಕ್ಕಳ ಸಂಖ್ಯೆ ಹೆಚ್ಚಾಗಿರುವುದರಿಂದ ಕಟ್ಟಡ ಅವಶ್ಯಕತೆ ಪರ್ಯಾಯ ವ್ಯವಸ್ಥೆ ಕುರಿತು ಸೂಕ್ತ ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸುವಂತೆ ಅವರು ಸೂಚನೆ ನಿಡಿದರು. ಜಿಲ್ಲೆಯಲ್ಲಿರುವ ಅನರ್ಹ ಬಿಪಿಎಲ್ ಕಾರ್ಡ್ ಪತ್ತೆ ಕಾರ್ಯ ಕೈಗೊಳ್ಳಬೇಕು. ಸರ್ಕಾರಿ ನೌಕರರು ಪಡೆದುಕೊಂಡಿರುವ ಬಿಪಿಎಲ್ ಕಾರ್ಡಗಳನ್ನು ಹಿಂಪಡೆದು, ಎಪಿಎಲ್ ಕಾರ್ಡ್ ಮಾರ್ಪಾಡು ಮಾಡಿ ಒದಗಿಸಲು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿ.ಪಂ ಸಿಇಒ ರಿಷಿ ಆನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಪಪಂ ಅಧ್ಯಕ್ಷರ ಆಯ್ಕೆಗೆ ವಿಳಂಬಕ್ಕೆ ಕಿಡಿ

ಸಂಗಮೇಶ ಹೂಗಾರ ಚಡಚಣ

ಜಿಲ್ಲೆಯ ವಿವಿಧ ತಾಲೂಕಿನ ಪ.ಪಂಚಾಯಿತಿಗೆ ಮತ್ತು ಪುರಸಭೆಗೆ ಚುನಾವಣೆ ನಡೆದು, ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿದ್ದಾರೆ, ಆದರೆ ಚಡಚಣ ಪ.ಪಂ. ಚುನಾವಣೆ ಮುಗಿದು 9 ತಿಂಗಳು ಕಳೆದಿವೆ. ದಿನಾಂಕ ನಿಗದಿ ಮಾಡಿ ಚುನಾವಣೆ ನಡೆಸುವಂತೆ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದರು, ಸ್ಥಳೀಯ ಆಡಳಿತಾಧಿಕಾರಿಗಳು ಇದುವರೆಗೂ ದಿನಾಂಕ ನಿಗದಿ ಮಾಡಿಲ್ಲ. ಇದರಿಂದ ಸದಸ್ಯರಿಗೆ ಅಭಿವೃದ್ಧಿ ಕೆಲಸ ಮಾಡಲು ಸಾಕಷ್ಟು ತೊಂದರೆಯಾಗುತ್ತದೆ. ಆದಷ್ಟು ಬೇಗ ದಿನಾಂಕ ನಿಗಡಿ ಮಾಡಿ, ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ ಮಾಡಬೇಕು ಎಂದು ಸದಸ್ಯ ಆಕ್ರೋಶ ವ್ಯಕ್ತ ಪಡಿಸುತ್ತಿದ್ದಾರೆ.

ಹೌದು ಚಡಚಣ ಪಟ್ಟಣವು ತಾಲೂಕು ಕೇಂದ್ರವಾಗಿ ಸುಮಾರು 8 ವರ್ಷಗಳೆ ಕಳೆದಿವೆ, ಪ.ಪಂಚಾಯಿತಿಯಾಗಿ 10 ವರ್ಷಗಳೆ ಕಳೆದಿವೆ, ಪ.ಪಂಚಾಯ್ತಿಗೆ ಚುನಾವಣೆ ನಡೆದು 9 ತಿಂಗಳುಗಳೆ ಕಳೆದಿವೆ, ಮೀಸಲಾತಿ ಪ್ರಕಟವಾಗಿ 4 ವಾರ ಆಗಿದೆ ಆದರೂ ಇದುವರೆಗೂ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ ಆಗದಿರುವುದಕ್ಕೆ ಪ.ಪಂ.ಸದಸ್ಯರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸ್ಥಳೀಯ ಪಟ್ಟಣ ಪಂಚಾಯ್ತಿಗೆ ಚುನಾವಣೆ ನಡೆದು ಸುಮಾರು 9 ತಿಂಗಳು ಆಗುತ್ತ ಬಂದರು, ಮೀಸಲಾತಿ ಪ್ರಕಟವಾಗಿ 25 ದಿನಗಳು ಕಳೆದರು, ಇದುವರೆಗೂ ಚಡಚಣ ಪ.ಪಂಚಾಯ್ತಿಗೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆ ಆಗಿಲ್ಲ.

ಕಳೆದ ವರ್ಷ ಅಂದರೆ 27 ಡಿಸೆಂಬರ 2023 ರಂದು ಚುನಾವಣೆ ನಡೆದು ಡಿ.30 ಕ್ಕೆ ಫಲಿತಾಂಶವೂ ಪ್ರಕಟವಾಗಿದೆ. ಸುಮಾರು 16 ಸದಸ್ಯರನ್ನು ಹೊಂದಿರುವ ಪ.ಪಂಚಾಯ್ತಿಗೆ 8 ಜನ ಬಿಜೆಪಿ, 4 ಜನ ಕಾಂಗ್ರೆಸ್ 4 ಪಕ್ಷೇತರಾಗಿ ಆಯ್ಕೆಯಾಗಿದ್ದರೆ, ಆದರೆ ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆಗೆ ಮೀಸಲಾತಿ ನಿಮಿತ್ತ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಇರುವುದರಿಂದ ಆಯ್ಕೆಗೆ ನಿರ್ಬಂಧ ಹೇರಲಾಗಿತ್ತು, ಈಗ ಈ ನಿರ್ಬಂಧ ತೆರವುಗೊಂಡ ನಿಮಿತ್ಯ ರಾಜ್ಯ ಸರಕಾರ ಆ.5 ರಂದು ಅಧ್ಯಕ್ಷ, ಉಪಾಧ್ಯಕ್ಷ ಆಯ್ಕೆಯ ಮೀಸಲಾತಿ ಪ್ರಕಟಿಸಿ ಆದೇಶ ಹೊರಡಿಸಿದೆ.

ಚಡಚಣ ಪ.ಪಂ. ಚುನಾವಣೆ ನಡೆದು 9 ತಿಂಗಳಾಗಿದೆ, ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟವಾಗಿ ತಿಂಗಳಾಗುತ್ತ ಬಂದಿದೆ, ಆದರೆ ಅಧಿಕಾರಿಗಳು ಮಾತ್ರ ಚುನಾವಣೆ ದಿನಾಂಕ ಘೋಷಣೆ ಮಾಡುತ್ತಿಲ್ಲ.

ಅಧಿಕಾರಿಗಳು ಚುನಾವಣೆ ನಡೆಸಿ ನಮಗೆ ಅನುಕೂಲ ಮಾಡಿಕೊಡಬೇಕು.

ದುರಸ್ತಿಯಾಗದ ಚರಂಡಿ

ಮೀಸಲಾತಿ ಪ್ರಕಟಿಸಿ. ಚುನಾವಣೆ ನಡೆಸಲು ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿ 25 ದಿನ ಕಳೆದರೂ ಚುನಾವಣೆ ದಿನಾಂಕ ಪ್ರಕಟಿಸದಿರುವುದು ಆಯ್ಕೆಯಾದ ಸದಸ್ಯರಲ್ಲಿ ಬೇಸರ ಮೂಡಿಸಿದೆ. ಅಲ್ಲದೆ ಪ.ಪಂ.ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತವೆ. ಪಟ್ಟಣ ವಿವಿಧ ವಾರ್ಡಗಳಲ್ಲಿ ಸರಿಯಾದ ಸಮಯಕ್ಕೆ ನೀರು ಬರುತ್ತಿಲ್ಲ, ಅನೇಕ ಚರಂಡಿಗಳು ದುರಸ್ತಿಯಾಗದೆ ರಸ್ತೆ ಮೇಲೆ ನೀರು ಹರಿದಾಡುತ್ತಿವೆ.

ರೋಮಾಂಚನಗೊಳಿಸಿದ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ

ಬಸವನಬಾಗೇವಾಡಿ: ಪಟ್ಟಣದ ಆರಾಧ್ಯ ದೈವ ಮೂಲನಂದೀಶ್ವರ(ಬಸವೇಶ್ವರ) ಜಾತ್ರಾ ಮಹೋತ್ಸವ ಅಂಗವಾಗಿ ಶನಿವಾರ ಗೆಳೆಯರ ಬಳಗದಿಂದ ನಂದಿ ತರಕಾರಿ ಮಾರು ಕಟ್ಟೆ ಆವರಣದಲ್ಲಿ ಹಮ್ಮಿಕೊಂಡ 55 ಎಚ್‌ಪಿ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ ನೆರೆದಿದ್ದ ಜನರನ್ನ ರೋಮಾಂಚನಗೊಳಿಸಿತು.

ಪಟ್ಟಣದಲ್ಲಿ ಎರಡನೇ ಬಾರಿಗೆ ಹಮ್ಮಿಕೊಂಡ ಟ್ರ್ಯಾಕ್ಟರ್ ಜಗ್ಗಾಟ ಸ್ಪರ್ಧೆಯಲ್ಲಿ ಆಲಮೇಲ, ಇಂಡಿ, ಬಬಲೇಶ್ವರ, ಬುದ್ನಿ, ಕುಂಟೋಜಿ, ಜಮಖಂಡಿಯ ಹಿಪ್ಪರಗಿ ಸೇರಿದಂತೆ ವಿವಿಧ ಭಾಗಗಳಿಂದ 30ಕ್ಕೂ ಅಧಿಕ ಟ್ರ್ಯಾಕ್ಟರ್‌ಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು.

ಪಟ್ಟಣ ಸೇರಿದಂತೆ ವಿವಿಧ ಭಾಗಗಳಿಂದ ಅಪಾರ ಸಂಖ್ಯ ಜನರು ಸ್ಪರ್ಧೆಯನ್ನ ವಿಕ್ಷೀಸಲು ಆಗಮಿಸಿದ್ದು ನಂದಿ ತರಕಾರಿ ಮಾರು ಕಟ್ಟೆ ಆವರಣದಲ್ಲಿ ಅಪಾರ ಜನಜಂಗುಳಿ ಕಂಡು ಬಂದಿತು, ಸ್ಪರ್ಧೆ ಆರಂಭವಾಗುತ್ತಿದ್ದಂತೆ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಸ್ಪರ್ಧೆ ಆರಮಬವಾಗುತ್ತಿದ್ದಂತೆ ಜನರು ಸಿಳ್ಳಿ ಕೇಕೆ ಹಾಕಿ ಸ್ಪರ್ಧಾಳುಗಳನ್ನ ಹುರಿದುಂಬಿಸಿದರು. ಟ್ರ್ಯಾಕ್ಟರ್‌ಗಳ ಜಗ್ಗಾಟ ನೋಡುಗರಲ್ಲಿ ಬಾರಿ ಕುತೂಹಲ ಮೂಡಿಸಿದ್ದವು. ಸ್ಪರ್ಧೆಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸದಂತೆ ಸುತ್ತಲು ಬ್ಯಾರಾಕೆಡ ವ್ಯವಸ್ಥೆ ಕಲ್ಪಿಸಲಾಗಿತ್ತು ಅಲ್ಲದೇ ಸೂಕ್ತ ಪೊಲೀಸ ಬಂದು ಬಸ್ತ ಕಲ್ಪಿಸಲಾಗಿತ್ತು, ಸ್ಪರ್ಧೆ ವಿಕ್ಷೀಸಲು ಆಗಮಿಸಿದ ಪ್ರೇಕ್ಷಕರನ್ನು ವೈವಸ್ಥಿತ ಸ್ಥಳದಲ್ಲಿ ಕುರಿಸುವಲ್ಲಿ ಪೊಲೀಸ್ ಸಿಬ್ಬಂದಿಗಳು ಹರಸಾಹಸ ಪಡತ್ತಿರುವದು ಕಂಡು ಬಂದಿತು.

ಬಸವನಬಾಗೇವಾಡಿ ಪಟ್ಟಣದಲ್ಲಿ ಜರುಗಿದ ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ

ಹಿರೇಮಠದ ಶಿವಪ್ರಕಾಶ ಶಿವಾಚಾರ್ಯ ಸ್ವಾಮೀಜಿ, ಶಿವಾನಂದ ಈರಕಾರ ಮುತ್ಯಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್ ಹಾರಿವಾಳ, ಸ್ಪರ್ಧೆ ಆಯೋಜಕರಾದ ಮಂಜು ಹಾರಿವಾಳ, ಮೀರಾಸಾ ಕೋರಬು, ಸುರೇಶ ಹಾರಿವಾಳ, ಪಿಂಟುಗೌಡ ಪಾಟೀಲ, ಸಂತೋಷ ಕೂಡಗಿ, ಬಸು ಚೌಧರಿ, ಗುರು ವಂದಾಲ, ಮಲ್ಲು ಡೋಣುರ, ಶ್ರೀಶೈಲ ಹೆಬ್ಬಾಳ, ಮಾಂತು ಮಾಲಗಾರ, ಜಗದೀಶ ನಿಕ್ಕಂ, ಮಹೇಶ ಹಾರಿವಾಳ, ಸಂಗಮೇಶ ಮೈಲೇಶ್ವರ, ಗುಂಡು ಪಡಶೆಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ಅಶೋಕ ಹಾರಿವಾಳ ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿಯನ್ನ ನಿಭಾಯಿಸಿದರು.

ಸದಸ್ಯತಾ ಅಭಿಯಾನ ಕಾರ್ಯಾಗಾರ

ಸಿಂಡಗಿ: ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ತಾಲೂಕು ಮಂಡಲದ ವತಿಯಿಂದ ಹಮ್ಮಿಕೊಂಡ 2024ರ ಸದಸ್ಯತಾ ಅಭಿಯಾನ ಮಂಡಲ ಕಾರ್ಯಾಗಾರದಲ್ಲಿ ಭಾಗವಹಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ್ ಕೂಚಬಾಳ ಹಾಗೂ ಮಾಜಿ ಶಾಸಕ ರಮೇಶ ಭೂಸನೂರ ಸಸಿಗೆ ನೀರುಣ ಸುವ ಮೂಲಕ ಚಾಲನೆ ನೀಡಿದರು.

ಸಿಂದಗಿ: ಭಾರತದಲ್ಲಿ ಅತೀ ಹೆಚ್ಚು ಸದಸ್ಯರನ್ನು ಹೊಂದಿದ ಪಕ್ಷವೆಂದರೆ ಬಿಜೆಪಿ ಪಕ್ಷ. ಪ್ರತಿ ಆರು ವರ್ಷಕ್ಕೊಮ್ಮೆ ಸದಸ್ಯತಾ ಅಭಿಯಾನ ಹಮ್ಮಿಕೊಳ್ಳಲಾಗುತ್ತದೆ. ಪ್ರತಿ ಮತಕ್ಷೇತ್ರದಲ್ಲಿ ಸಾವಿರಾರು ಸದಸ್ಯರನ್ನು ಮಾಡುವ ಗುರಿಯನ್ನು ಹೊಂದಿದೆ ಎಂದು ಜಿಲ್ಲಾಧ್ಯಕ್ಷ ಆರ್.ಎಸ್. ಪಾಟೀಲ ಕೂಚಬಾಳ ಹೇಳಿದರು.

ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ತಾಲೂಕು ಮಂಡಲದ ವತಿಯಿಂದ ಹಮ್ಮಿಕೊಂಡ 2024ರ ಸದಸ್ಯತಾ ಅಭಿಯಾನ ಮಂಡಲ ಕಾರ್ಯಾಗಾರವನ್ನು ಸಸಿಗೆ ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಕಾಂಗ್ರೆಸ್ ಸರಕಾರ ಪ್ರತಿನಿಧಿಗಳ ಹೇಳಿಕೆ ಮತ್ತು ಭ್ರಷ್ಟಚಾರಗಳನ್ನು ನಾವು ಗಮನಿಸುತ್ತಿದ್ದೇವೆ.

ಯಲ್ಲಮ್ಮಾದೇವಿಯ ಮಾಲಗಂಬ ಪೂಜೆ

ಇಂಡಿ: ತಾಲೂಕಿನ ಕೊಟ್ನಾಳ ಗ್ರಾಮದಲ್ಲಿ ಇಂದು ಶ್ರೀ ಯಲ್ಲಮ್ಮಾದೇವಿಯ ಮಾಲಗಂಬ ವಿಶೇಷ ಪೂಜೆ ಹಾಗೂ ಧರ್ಮ ಸಭೆ ನಡೆಯಿತು. ಈ ಸಂದರ್ಭದಲ್ಲಿ ಕಾರ್ಯಕ್ರಮ ಉದ್ದೇಶಿಸಿ ಉಪನ್ಯಾಸಕ ಮಹೇಶ್ ಕಾಂಬಳೆ ಮಾತನಾಡಿ ಶ್ರೀರೇಣುಕಾ ಯಲ್ಲಮ್ಮಾ ಯಲ್ಲರ ತಾಯಿ ಎಲ್ಲಮ್ಮ ಭಕ್ತಿಯಿಂದ ಶ್ರದ್ಧೆಯಿಂದ ನಮಿಸಿದರೆ ಬೇಡಿದವರಿಗೆ ಇಷ್ಟಾರ್ಥಿಗಳನ್ನು ಪೂರೈಸುವ ಮಹಾದಿವ್ಯಶಕ್ತಿ ಆಗಿದ್ದಾಳೆ. ಶ್ರೀಯಲ್ಲಮ್ಮಾ ಮಹಾತಾಯಿಗೆ ಶ್ರೀರೇಣುಕಾ, ಆದಿಶಕ್ತಿ, ಜಗದಂಬಾ ,ಜಗನ್ಮಾತೆ ಅನೇಕ ಹೆಸರುಗಳಿಂದ ಕರೆಯುತ್ತಾರೆ. ಕೊಟ್ನಾಳ ಗ್ರಾಮದ ಪುಟ್ಟ ಗ್ರಾಮ ಇದ್ದರೂ ಸಹಿತ ಬೃಹತ್ ಕೋಟೆ ಹೊಂದಿದೆ. ದೇಶಮುಖ್ಯ ಎಂಬ ಮನೆ ತನದವರು ಪ್ರಖ್ಯಾತರಾಗಿದ್ದು ಇಲ್ಲಿ ಪ್ರಮುಖ ಕೋಟೆ ಇದ್ದು ಶ್ರೀಯಲ್ಲಮ್ಮಾದೇವಿಯ ದೇವಿಯ ಗುಡಿಯ ಹತ್ತಿರ ಕೋಟೆ ವಿಹಂಗಮವಾಗಿದೆ , ದೇಶಮುಖ ಮನೆ ತನದವರಿಗೆ ತಾಯಿ ಆರ್ಶೀವಾದ ಇದೆ ಎಂಬುದು ಇತಿಹಾಸ. ಮಹೇಶ ಕಾಂಬಳೆ, ಬಾಸ್ಕರ ಹೊಸಮನಿ, ವಿಜಯಕುಮಾರ್ ಕಾಂಬಳೆ, ರವಿ ಕಾಂಬಳೆ, ಬಸವರಾಜ ದೊಡಮನಿ, ಮಂಜುನಾಥ ಕಾಂಬಳೆ, ಪರಶುರಾಮ ಕಾಂಬಳೆ, ಅನೀಲ್ ಹೊಸಮನಿ, ಹಣಮಂತ ಕಟ್ಟಿಮನಿ, ಹೊನ್ನಪ್ಪ ಕಾಂಬಳೆ, ಯಲ್ಲಪ್ಪ ಕಾಂಬಳೆ, ಚೆನ್ನಬಸು ಹೊಸಮನಿ, ಹುಸೇನನಿ ಹೊಸಮನಿ, ಹುಚ್ಚಪ್ಪ ಕಾಂಬಳೆ, ಯೋಗೇಶ ಕಾಂಬಳೆ, ಸಾಗರ ಕಾಂಬಳೆ, ಗಣೇಶ ಹೊಸಮನಿ, ಮುತಪ್ಪ ಕಾಂಬಳೆ, ಚಂದ್ರಕಾಂತ ಗೊಡೇಕರ, ಮುತ್ತಪ್ಪ ಗೊಡೇಕರ್ ಸೇರಿದಂತೆ ಅನೇಕರು ಇದ್ದರು.

ಗ್ರಾಪಂ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

ರೋಣಿಹಾಳ ಗ್ರಾಮ ಪಂಚಾಯಿತಿ ಮಟ್ಟದ ಕ್ರೀಡಾಕೂಟ

ಕೊಲ್ಹಾರ: ಮಕ್ಕಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯಲ್ಲಿ ಕ್ರೀಡೆಗಳು ಅತೀ ಮುಖ್ಯವಾದ ಪಾತ್ರ ವಹಿಸುತ್ತವೆ ಎಂದು ಬಳ್ಳಾರಿಯ ಕೆಪಿಟಿಸಿಎಲ್ ಅಭಿಯಂತರ ಶಿವಾನಂದ ಬಿರಾದಾರ ಅಭಿಪ್ರಾಯ ವ್ಯಕ್ತಪಡಿಸಿದರು.

ತಾಲ್ಲೂಕಿನ ಕುಪಕಡ್ಡಿ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರೋಣಿಹಾಳ ಪಂಚಾಯಿತಿ ಮಟ್ಟದ ಪ್ರಾಥಮಿಕ ಶಾಲೆಗಳ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು. ಪ್ರಸ್ತುತ ಮಕ್ಕಳನ್ನು ಮೊಬೈಲ್ ಗೀಳಿನಿಂದ ದೂರವಿರಿಸಿ ಕ್ರೀಡೆಗಳಲ್ಲಿ ಭಾಗವಹಿಸಲು ಪಾಲಕರು ಪ್ರೋತ್ಸಾಹ ನೀಡಬೇಕು ಎಂದು ಅವರು ಕಿವಿಮಾತು ಹೇಳಿದರು.

ಉದಯಕುಮಾರ ಹಳ್ಳಿ ಕ್ರೀಡಾ ಧ್ವಜಾರೋಹಣ, ಶಿವಾನಂದ ಬಿರಾದಾರ ಕ್ರೀಡಾ ಜ್ಯೋತಿ ನೆರವೇರಿಸಿದರು, ಮುರುಗೇಶ ಹಳ್ಳಿ ಅಧ್ಯಕ್ಷತೆ ವಹಿಸಿದ್ದರು, ಸಂಗಮೇಶ ಜಂಗಮಶೆಟ್ಟಿ ವಿಜೇತ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಶಾಲೆಯ ಮುಖ್ಯ ಗುರುಗಳಾದ ಸಿದ್ದು ಕೋಟ್ಯಾಳ, ಸಿದ್ದನಗೌಡ ಪಾಟೀಲ, ಸತ್ಯಪ್ಪ ಮದಗುಣಕಿ, ದೊಡ್ಡನಗೌಡ ಬಿರಾದಾರ, ಶಿವಾನಂದ ಬಿರಾದಾರ, ಬಾವುರಾವ ಕುಲಕರ್ಣಿ, ಭೀಮಸಿ ಪಾಯಗೊಂಡ, ಶಾಂತಪ್ಪ ಹಲಗಲಿ, ಸಂಗನಗೌಡ ಬಿರಾದಾರ ಸೇರಿದಂತೆ ಗ್ರಾಮದ ಹಿರಿಯರು ಹಾಜರಿದ್ದರು. ಶಿಕ್ಷಣ ಸಂಯೋಜಕರಾದ ವಿಜಯೇಂದ್ರ, ಪುರೋಹಿತ, ಶ್ರೀಕಾಂತ್ ಪಾರಗೊಂಡ, ಆನಂದ ಪವಾರ, ಅಮೀರ ಅಲಿ ನಧಾಫ, ಬಸವರಾಜ ಚಿಂಚೊಳ್ಳಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶಿಕ್ಷಕ ವೃತ್ತಿ ಪವಿತ್ರವಾದದ್ದು

ತಾಳಿಕೋಟಿ: ಎಲ್ಲ ವೃತ್ತಿಗಳಲ್ಲಿ ಶಿಕ್ಷಕರ ವೃತ್ತಿ ಶ್ರೇಷ್ಠ ಹಾಗೂ ಪವಿತ್ರವಾದದ್ದಾಗಿದೆ. ಶಿಕ್ಷಕ ಸಮಾಜದ ಅಂಧಕಾರವನ್ನು ತೊಲಗಿಸಿ ಜ್ಞಾನದ ಜ್ಯೋತಿಯನ್ನು ಬೆಳಗಿಸುತ್ತಾನೆ ಎಂದು ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ವೈ.ಎಚ್.ಅಂಗಡಗೇರಿ ಹೇಳಿದರು. ಶನಿವಾರ ಪಟ್ಟಣದ ಮಾತೋ ಶ್ರೀ ಗಂಗಮ್ಮ ಚೆನ್ನಪ್ಪ ಮುದಗಲ್ ಬಾಲಕಿಯರ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ರೂಡಿ ಪಾಠಗಳ ಮುಕ್ತಾಯ ಸಮಾರಂಭದಲ್ಲಿ ಅವರು ಮಾತನಾಡಿದರು. ಶಿಕ್ಷಕನಾದವನಿಗೆ ಅವನ ಮಾತುಗಳೇ ಬಂಡವಾಳವಾಗಿವೆ. ನಾವಾಡುವ ಮಾತುಗಳು ವಿದ್ಯಾರ್ಥಿಗಳ ಮನಸ್ಸು ಗೆಲ್ಲುತ್ತದೆ ಆದ್ದರಿಂದ ಶಿಕ್ಷಕರು ತಮ್ಮ ಮಾತುಗಳ ಮೇಲೆ ನಿಯಂತ್ರಣ ಹೊಂದಿರಬೇಕು ಎಂದರು. ಶಿಕ್ಷಣಾರ್ಥಿಗಳನ್ನು ಉದ್ದೇಶಿಸಿ ಶಿಕ್ಷಕಿ ಪ್ರೀತಿ ದೇಶಮುಖ ಹಾಗೂ ವಿಜ್ಞಾನ ವಿಷಯ ಶಿಕ್ಷಕ ಪಿ.ಎಂ.ಬೆಳಗಲ್ಲ ಮಾತನಾಡಿದರು.ಎಸ್.ಕೆ. ಬಾಲಕೀಯರ ಪ್ರೌಢ ಶಾಲೆ ಮುಖ್ಯ ಶಿಕ್ಷಕ ವಾಯ್.ಎಸ್.ನಾದ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರತಿಯೊಬ್ಬ ಮಕ್ಕಳಲ್ಲೂ ತನ್ನದೇ ಆದ ಒಂದು ವಿಶೇಷ ಪ್ರತಿಭೆ ಇರುತ್ತದೆ ಇದನ್ನು ಗುರುತಿಸಿ ಅನಾವರಣಗೊಳಿಸಿ ಪ್ರೋತ್ಸಾಹಿಸುವುದು ಶಿಕ್ಷಕರಾದವರ ಕರ್ತವ್ಯವಾಗಿದೆ ಇದನ್ನು ಅವರು ಪ್ರಾಮಾಣಿಕತೆಯಿಂದ ಮಾಡಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ರಸ ಪ್ರಶ್ನೆ ಮತ್ತು ವಸ್ತು ಪ್ರದರ್ಶನ ಹಾಗೂ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿನಿಯರಿಗೆ ಬಹುಮಾನ ವಿತರಿಸಲಾಯಿತು.

ಪ್ರೇಮದೂರಲ್ಲಿ ಅಕ್ಕ ಸಿರಿಗನ್ನಡ ಮೇಳ

ಅಕ್ಕ ಸಮ್ಮೇಳನದಲ್ಲಿ ಡಾ. ನಾ ಸೋಮೇಶ್ವರ ಆಶಯ ಭಾಷಣ, ಅಮೆರಿಕನ್ನಡಿಗರ ಕನ್ನಡ ಸೇವೆಗೆ ಮೆಚ್ಚುಗೆ

ಕನ್ನಡ ನಮ್ಮ ಭಾವಜಗತ್ತನ್ನು ಪೋಷಿಸುವ ತಾಯಿ

ಅಮೆರಿಕ ಕನ್ನಡ ಕೂಟಗಳ ಸಂಘ (ಅಕ್ಕ) ಆಶ್ರಯದಲ್ಲಿ ವರ್ಜೀನಿಯಾ ಪ್ರಾಂತ್ಯದ ರಿಚ್ಮಂಡ್ ನಗರದಲ್ಲಿ 12ನೇ ವಿಶ್ವ ಕನ್ನಡ ಸಮ್ಮೇಳನಕ್ಕೆ ಅದ್ದೂರಿಯ ಚಾಲನೆ ದೊರೆತಿದ್ದು, 'ಥಟ್ ಅಂಥ ಹೇಳಿ' ಖ್ಯಾತಿಯ ಡಾ. ನಾ. ಸೋಮೇಶ್ವರ ಅವರು ತಮ್ಮ ಆಶಯ ಭಾಷಣದಲ್ಲಿ ಅಮೆರಿಕನ್ನಡರ ಕನ್ನಡ ಪ್ರೀತಿ, ಸಾಹಿತ್ಯ ಸೇವೆ, ಕನ್ನಡದ ಸದ್ಯದ ಸ್ಥಿತಿ ಮತ್ತು ಭವಿಷ್ಯದ ಅಗತ್ಯಗಳ ಬಗ್ಗೆ ವಿಸ್ತೃತವಾಗಿ ಪ್ರಸ್ತಾಪಿಸಿದರು. 'ಆಶಯ ಭಾಷಣ'ದ ಮುಖ್ಯಾಂಶ ಗಳು ಇಲ್ಲಿದೆ.



ವರ್ಜೀನಿಯ, ರಿಚ್ಮಂಡ್ ನಗರ

ನಾವು ನೆಲೆ ನಿಂತಿರುವ ವರ್ಜೀನಿಯ ಸಂಸ್ಥಾನವು ಭೌಗೋಳಿಕವಾಗಿ, ಐತಿಹಾಸಿಕವಾಗಿ, ಆರ್ಥಿಕ ವಾಗಿ, ಸಾಂಸ್ಕೃತಿಕವಾಗಿ ಅಮೆರಿಕದ ಇತಿಹಾಸ ದಲ್ಲಿ ಮಹತ್ವಯುತ ಸ್ಥಾನವನ್ನು ಪಡೆದಿದೆ. 1607ರಲ್ಲಿ 'ಅಮೆರಿಕ ಸಂಯುಕ್ತ ಸಂಸ್ಥಾನಗಳು' ಎನ್ನುವ ಪರಿಕಲ್ಪನೆಯ ವಿಕಾಸದಲ್ಲಿ ಭಾಗವಹಿಸಿದ ಮೂಲ 13 ರಾಜ್ಯಗಳಲ್ಲಿ ವರ್ಜೀನಿಯವು ಮುಂಚೂಣಿಯಲ್ಲಿತ್ತು. ಬ್ರಿಟೀಷರು ಅಮೆರಿಕಕ್ಕೆ ಬಂದ ಮೊದಮೊದಲಲ್ಲಿ ವರ್ಜೀನಿಯದಲ್ಲಿಯೇ ಬೀಡುಬಿಟ್ಟರು. ಅಮೆರಿಕದ ಸ್ವಾತಂತ್ರ ಕಹಳೆ ಯನ್ನು ಊದಿದ ಜಾರ್ಜ್ ವಾಷಿಂಗ್ಟನ್, ಥಾಮಸ್ ಜೆಫರ್ಸನ್ ಮತ್ತು ಪ್ಯಾಟ್ರಿಕ್ ಹೆನ್ರಿ ವರ್ಜೀನಿಯ ಪ್ರಾಂತದವರು. ಅಮೆರಿಕ ಸ್ವಾತಂತ್ರ ಸಂಗ್ರಾಮದ ಬಹು ಮುಖ್ಯ ಯುದ್ಧಗಳಾದ ಸೀಜ್ಕೆ ಆಫ್ ಯಾರ್ಕ್ ಟೌನ್' ಬ್ಯಾಟಲ್ ಆಫ್ ಬುಲ್ ರನ್ ' ಮತ್ತು ಸೀಜ್ಕೆ ಆಫ್ ಪೀಟರ್ಸ್ ಬರ್ಗ್' ಈ ಸಂಸ್ಥಾನದಲ್ಲಿಯೇ ನಡೆದವು. ವರ್ಜೀನಿಯ ಸಂಸ್ಥಾನವು ಕಲೋನಿಯಲ್, ಫೆಡರಲ್ ಮತ್ತು ವಿಕ್ಟೋರಿಯನ್ ಶೈಲಿಯ ಮಹತ್ವಯುತ ವಾಸ್ತುಗಳ ತವರೂರು. ಸಾಹಿತ್ಯ, ಸಂಗೀತ, ರಂಗಭೂಮಿ ಹಾಗೂ ದೃಶ್ಯಕಲೆಗಳಿಗೆ ಆಶ್ರಯವನ್ನು ನೀಡಿದೆ. ಎಡ್ಗರ್ ಅಲನ್ ಪೋ, ವಿಲಿಯಂ ಸ್ಟೈರೋನ್ ನಂತಹ ವಿಖ್ಯಾತ ಸಾಹಿತಿಗಳಿಗೆ ಜನ್ಮವಿತ್ತ ನಾಡಾಗಿದೆ. ವರ್ಜೀನಿಯದ ರಾಜಧಾನಿ ರಿಚ್ಮಂಡ್ ನಗರವಂತೂ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಾನ್ಫಿಡರೇಟ್ ಕ್ಯಾಪಿಟಲ್' ಆಗಿತ್ತು. ಇದು ಕಬ್ಬಿಣ ಮತ್ತು ತಂಬಾಕನ್ನು ಆಧರಿಸಿದ ಉದ್ಯಮಗಳ ಕೇಂದ್ರ ವಾಗಿದೆ. ಕೈಗಾರಿಕೆ ಮತ್ತು ರಕ್ಷಣಾ ಉದ್ಯಮವು ಬೃಹತ್ತಾಗಿ ಬೆಳೆದಿದೆ. ಅಮೆರಿಕದ ಆರ್ಥಿಕ, ಶೈಕ್ಷಣಿಕ ಹಾಗೂ ಸಂಶೋಧನಾ ಕೇಂದ್ರವೆನಿಸಿದೆ. ಹಾಗೆಯೇ ಚೆಸಾಪೇಕ್ ಕೊಲ್ಲಿಯ, ಹ್ಯಾಂ ಮತ್ತು ಮೀನಿನ ಪದಾರ್ಥಗಳು ತುಂಬಾ ರುಚಿಯಾಗಿರುತ್ತವೆ ಎಂದು ಕೇಳಿದ್ದೇನೆ. 'ಅಕ್ಕ' ಪದಾಧಿಕಾರಿಗಳು, ತಮ್ಮ 12ನೆಯ ವಿಶ್ವಕನ್ನಡ ಸಮ್ಮೇಳನವನ್ನು ನಡೆಸಲು ಇಂತಹ ಐತಿಹಾಸಿಕ ನಗರವನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಎಲ್ಲರನ್ನು ಹೃತ್ಪೂರ್ವಕ ವಾಗಿ ಅಭಿನಂದಿಸುತ್ತಿದ್ದೇನೆ.

ಅನುಬಂಧದ ಭಾಷೆ

ನಾವು ಕನ್ನಡಿಗರು. ಕನ್ನಡ ನಮ್ಮ ಮಾತ್ರ ಭಾಷೆ ಮಾತ್ರವಲ್ಲ, ನಮ್ಮ ಹೃದಯದ ಭಾಷೆಯಾಗಿದೆ ಹಾಗೂ ಭಾವನೆಗಳ ಭಾಷೆಯಾಗಿದೆ. ಇಂದು ಇಲ್ಲಿ ನೆರೆದಿರುವ 4000 ಕನ್ನಡಿಗರನ್ನು ಬೆಸೆದಿರುವ ತಂತು ಎಂದರೆ ಅದು ಕನ್ನಡ. ಕನ್ನಡ-ಕನ್ನಡಿಗ-ಕರ್ನಾಟಕ ಎನ್ನುವುದು ನಮ್ಮ ಭಾವಜಗತ್ತನ್ನು ಪೋಷಿಸುವ ತಾಯಿ ಕಾವೇರಿಯಾಗಿದೆ.

ಕ್ರಿ.ಪೂ.6ನೆಯ ಶತಮಾನದಲ್ಲಿ 'ಆದಿದ್ರಾವಿಡ ಭಾಷೆ' ಅಸ್ತಿತ್ವದಲ್ಲಿತ್ತು. ಕ್ರಿ.ಪೂ.450ರ ಕಾಲದ ಪಾಣಿನಿಯ ಅಷ್ಟಾಧ್ಯಾಯಿ ಗ್ರಂಥದಲ್ಲಿ 'ಕರ್ಣಾಧಕ' ಗೋತ್ರದ ಬಗ್ಗೆ ಪ್ರಸ್ತಾಪನೆಯಿದೆ. ಕ್ರಿ.ಪೂ.3ನೆಯ ಶತಮಾನದ ಹೊತ್ತಿಗೆ ಕನ್ನಡವು ಜನ ಸಾಮಾನ್ಯರ ಭಾಷೆಯಾಗಿತ್ತು. ಇರಾವಂತಂ ಮಹಾದೇವನ್ ಅವರ ಅಭಿಪ್ರಾಯದಂತೆ ಕ್ರಿ.ಶ.300ಕ್ಕೂ ಹಿಂದಿನ ಪ್ರಾಕೃತ ಮತ್ತು ತಮಿಳು ಭಾಷೆಯ ಶಾಸನಗಳಲ್ಲಿ ಕನ್ನಡ ಪದಗಳಿವೆ. ಕ್ರಿ.ಪೂ.250ರ ಅಶೋಕನ ಶಿಲಾ ಶಾಸನದಲ್ಲಿ 'ಇಸಿಲ' ಎಂಬ ಕನ್ನಡ ಶಬ್ದವನ್ನು ನೋಡ ಬಹುದು. ಈ ಎಲ್ಲ ಆಧಾರಗಳ ಅನ್ವಯ, ಕನ್ನಡ ಭಾಷೆಯು 2500 ವರ್ಷಗಳಿಗಿಂತಲೂ ಹಿಂದಿನಿಂದ ಅಸ್ತಿತ್ವದಲ್ಲಿತ್ತು ಎನ್ನಬಹುದು.

ವಿಶ್ವದಲ್ಲಿ ಅತ್ಯಂತ ಹೆಚ್ಚಿನ ಜನರು ಮಾತನಾಡುವ ಭಾಷೆಗಳ ಪಟ್ಟಿಯಲ್ಲಿ ಕನ್ನಡವು 33ನೆಯ ಸ್ಥಾನದಲ್ಲಿದ್ದರೆ, ಭಾರತದಲ್ಲಿ 8ನೆಯ ಸ್ಥಾನದಲ್ಲಿದೆ.

ಕನ್ನಡವು ಮೇಲುನೋಟಕ್ಕೆ ಒಂದೇ ಭಾಷೆಯ ಹಾಗೆ ಕಂಡರೂ, ಇದರಲ್ಲಿ ಸುಮಾರು 20ಕ್ಕೂ ಹೆಚ್ಚು ಉಪಭಾಷೆಗಳನ್ನು ಕಾಣಬಹುದು. ಅವುಗಳಲ್ಲಿ ಕುಂದಗನ್ನಡ (ಕುಂದಾಪುರ), ನಾಡವರ ಕನ್ನಡ (ಉತ್ತರ ಕನ್ನಡದ ನಾಡವರ ಭಾಷೆ), ಹವಿಗನ್ನಡ (ಹವ್ಯಕರ ಭಾಷೆ), ಅರೆಭಾಷೆ (ದಕ್ಷಿಣ ಕನ್ನಡದ ಗೌಡರು), ಮಲೆನಾಡು ಕನ್ನಡಗಳು (ಸಕಲೇಶಪುರ, ಶಿವಮೊಗ್ಗ, ಚಿಕ್ಕಮಗಳೂರು) ಮುಖ್ಯವಾದವು.

ಇಂದು ನಾವು ಬಳಸುವ ಕನ್ನಡ ಲಿಪಿಯು ಅತ್ಯಂತ ಸುಂದರವಾಗಿದ್ದು, ಇದನ್ನು 'ಲಿಪಿಗಳ ರಾಣಿ' ಎಂದು ವಿನೋಬಾ ಭಾವೆಯವರು ಕರೆದಿರುವುದನ್ನು ಸಾಂದರ್ಭಿಕವಾಗಿ ಇಲ್ಲಿ ನೆನೆಪಿಸಿಕೊಳ್ಳಬಹುದು. ಕನ್ನಡ ಭಾಷೆಯು ಜಗತ್ತಿನ ಶ್ರೀಮಂತ ಭಾಷೆಗಳಲ್ಲಿ ಒಂದು. ಆದರೂ ಸಹ, ಕನ್ನಡ ಭಾಷೆಯು ಈಗಿರುವ ಸ್ಥಿತಿ ಯಲ್ಲಿಯೇ ಮುಂದುವರೆದರೆ ಅದು ಕಣ್ಮರೆ ಯಾಗುತ್ತದೆ' ಎನ್ನುವ ಭೀತಿಯನ್ನು ಕೆಲವರು ವ್ಯಕ್ತಪಡಿಸಿರುವುದು ಸತ್ಯ.

ಪಂಪಕೂಟದಿಂದ ಅಕ್ಕನವರೆಗೆ

ಉಗಾದಿ, ಚೌತಿ, ರಾಜ್ಯೋತ್ಸವ, ದೀಪಾವಳಿ ಮುಂತಾದ ಭಾರತೀಯ ಹಬ್ಬಗಳು ಎಲ್ಲ ಕನ್ನಡಿಗರನ್ನು ಒಗ್ಗೂಡಿಸಲು ಒಂದು ನೆಪವಾಗುತ್ತಿತ್ತು. ಇಂತಹ ಗೆಳೆಯರೇ ಬಂಧುಗಳಾಗಿ ಸೇರಿದ ಗುಂಪು ಗೋಷ್ಠಿಗಳಲ್ಲಿ, 'ನಾವು ಯಾಕೆ ಕನ್ನಡ ಸಂಘವನ್ನು ಕಟ್ಟಬಾರದು' ಎಂದು ನಿಮ್ಮಲ್ಲಿ ಯಾರು ಯೋಚಿಸಿದರೋ, ಮೊದಲು ಸೂಚಿಸಿದರೋ ಅದು ನನಗೆ ತಿಳಿಯದು. ಆದರೆ ಇದರ ಫಲವಾಗಿ ಏಪ್ರಿಲ್ 13, 1971ರಲ್ಲಿ ಮಿಷಿಗನ್ ನಗರದ ಕೆಲವು ಕನ್ನಡಿಗರು ಸೇರಿ 'ಪಂಪ ಕನ್ನಡ ಕೂಟ'ವನ್ನು ಆರಂಭಿಸಿಯೇ ಬಿಟ್ಟರು. ಈ ಕನ್ನಡ ಕೂಟವು 1996ರಲ್ಲಿ 'ಬೆಳ್ಳಿ ಹಬ್ಬ'ವನ್ನು ಹಾಗೂ 2021ರಲ್ಲಿ 'ಚಿನ್ನದ ಹಬ್ಬ'ವನ್ನೂ ಆಚರಿಸಿತು. ಮುಂದೆ ನ್ಯೂಯಾರ್ಕ್ ಕನ್ನಡ ಕೂಟ, ಶಿಕಾಗೋ ನಗರದ ವಿದ್ಯಾರಣ್ಯ ಕನ್ನಡ ಕೂಟ, ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ ಹಾಗೂ ಮೇರಿ ಲ್ಯಾಂಡ್, ವರ್ಜಿನಿಯದಲ್ಲಿ ಕಾವೇರಿ ಕನ್ನಡ ಕೂಟಗಳು ಆರಂಭವಾದವು. ಅನಂತರ ಸುಮಾರು 30ಕ್ಕೂ ಹೆಚ್ಚು ಕನ್ನಡ ಕೂಟಗಳು ಅಮೆರಿಕದಲ್ಲಿ ಅಸ್ತಿತ್ವಕ್ಕೆ ಬಂದವು. 1998ರಲ್ಲಿ ಅರಿಜೋನ ಸಂಸ್ಥಾನದ ಕೆಲವು ಉತ್ಸಾಹಿ ಯುವಕರು ಸೇರಿ ಒಂದು 'ಛತ್ರ ಸಂಘಟನೆ' ಅಥವ ಅಂಬ್ರೆಲ ಆರ್ಗನೈಸೇಶನ್' ಆರಂಭಿಸುವ ಕನಸನ್ನು ಕಂಡರು. ಅದರ ಫಲವಾಗಿ ಅಕ್ಕ' ಅಸೋಸಿಯೇಶನ್ ಆಫ್ ಕನ್ನಡ ಕೂಟಾಸ್ ಆಫ್ ಅಮೆರಿಕ'-ಅಮೆರಿಕ ಕನ್ನಡ ಕೂಟಗಳ ಸಂಘವು ರಚನೆಯಾಯಿತು. ಅಕ್ಕ ಇದುವರೆಗೂ 11 ವಿಶ್ವಕನ್ನಡ ಸಮ್ಮೇಳನಗಳನ್ನು ಅಮೆರಿಕಾದ್ಯಂತ ನಡೆಸಿದೆ. ಈಗ 12ನೆಯ ಸಮ್ಮೇಳನವನ್ನು ಗ್ರೇಟರ್ ರಿಚ್ಮಂಡ್ ನಗರದಲ್ಲಿ ನಡೆಸುತ್ತಿದೆ.

ಕನ್ನಡಮ್ಮನ ಸೇವೆ

ಅಮೆರಿಕನ್ನಡಿಗರಲ್ಲಿ ಬರೆಯುವ ಉತ್ಸಾಹವನ್ನು ತುಂಬಿದವರು ಹಾಗೂ ಅದನ್ನು ನಿರಂತರವಾಗಿ ಮುಂದುವರೆಸಿಕೊಂಡು ಬಂದವರು 'ದಟ್ಸ್ ಕನ್ನಡ.ಕಾಮ್'ನ ಎಸ್.ಕೆ.ಶಾಮಸುಂದರ್ ಅವರು. ಶಿಕಾರಿಪುರ ಹರಿಹರೇಶ್ವರ ಅವರ 'ಹೊಂಬೆಳಕು ಹೊನಲು' ಡಾ. ಮೈತ್ರೀ ನಟರಾಜ್ ಅವರ ಜಾಲತರಂಗ' ತ್ರಿವೇಣಿ ಶ್ರೀನಿವಾಸರಾವ್ ಅವರ 'ತುಳಸೀವನ' ದತ್ತಾತ್ರಿ ರಾಮಣ್ಣ ಅವರ 'ಪೂರ್ವ ಪಶ್ಚಿಮ' ಹಾಗೂ ಶೀವತ್ಸ ಜೋಶಿಯವರ 'ವಿಚಿತ್ರಾನ್ನ' ಮುಂತಾದ ಅಂಕಣ ಬರಹಗಳ ಮೂಲಕ ವಿಶ್ವಸಾರಸ್ವತ ಲೋಕಕ್ಕೆ ಪರಿಚಯ ಮಾಡಿಕೊಟ್ಟರು. ಮುಂದೆ ಈ ಅಂಕಣಗಳು ಪುಸ್ತಕ ರೂಪದಲ್ಲಿ ಪ್ರಕಟವಾದವು. ಈ ಬರವಣಿಗೆಯ ಕೃಷಿಯು, ಮುಂದೆ 'ಕನ್ನಡ ಸಾಹಿತ್ಯ ರಂಗ'ಕ್ಕೆ ಜನ್ಮವನ್ನು ನೀಡಿತು. 2003ರಲ್ಲಿ ಕನ್ನಡ ಸಾಹಿತ್ಯ ರಂಗವನ್ನು ಎಚ್.ವೈ.ರಾಜಗೋಪಾಲ್, ಎಚ್.ಕೆ.ಚಂದ್ರಶೇಖರ್, ಎಚ್.ವಿ.ರಂಗಾಚಾರ್ ಮತ್ತು ಎಚ್. ನಾಗ ಐತಾಳರು ಕಟ್ಟಿದರು. ಕುವೆಂಪು ಸಾಹಿತ್ಯ ಸಮೀಕ್ಷೆ, ನಗೆಗನ್ನಡಂ ಗೆಲ್ಗೆ, ಆಚೀಚೆಯ ಕಥೆಗಳು, ಕನ್ನಡ ಕಾದಂಬರಿ ಲೋಕದಲ್ಲಿ, ಮಥಿಸಿ ದಷ್ಟೂ ಮಾತು, ಅವರವರ ಭಕುತಿಗೆ ಮತ್ತು ಬದಲಾವಣೆಯ ಬೆನ್ನತ್ತಿ ಮುಂತಾದ ಉತ್ತಮ ಗುಣಮಟ್ಟದ ಕೃತಿಗಳನ್ನು ಪ್ರಕಟಿಸಿದರು. ಪ್ರತಿ 2 ವರ್ಷಕ್ಕೊಮ್ಮೆ 'ವಸಂತ ಸಾಹಿತ್ಯೋತ್ಸವ'ವನ್ನು ಏರ್ಪಡಿಸಿದರು. ಕರ್ನಾಟಕದಿಂದ ಹಿರಿಯ ಸಾಹಿತಿಗಳನ್ನು ಆಮಂತ್ರಿಸಿ, ವಿಚಾರ ವಿನಿಮಯ ವನ್ನು ಮಾಡಿದರು. ಇತ್ತೀಚೆಗಷ್ಟೇ 11ನೆಯ 'ವಸಂತ ಸಾಹಿತ್ಯೋತ್ಸವ'ವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವರು. 'ಕಸಾರಂ' ಪ್ರಕಟಣೆ ಗಳಲ್ಲಿ ಕೆಲವನ್ನು ನಾನು ಓದಿದ್ದೇನೆ ಹಾಗೂ ಥಟ್ ಅಂತ ಹೇಳಿ' ಕಾರ್ಯಕ್ರಮದಲ್ಲಿ ಪರಿಚಯವನ್ನು ಮಾಡಿಕೊಟ್ಟಿದ್ದೇನೆ. ಇದುವರೆಗು ಅಮೆರಿಕನ್ನಡಿಗರು ಮಾಡಿರುವ ಎಲ್ಲ ಸಾಹಸಗಳಲ್ಲಿ ನನಗೆ ಇಷ್ಟವಾದದ್ದು 'ಕನ್ನಡ ಕಲಿ'ಶಾಲೆಗಳ ಪರಿಕಲ್ಪನೆ. ಅದನ್ನು ಕಾರ್ಯರೂಪಕ್ಕೆ ತಂದು, ಇಂದಿನವರೆಗೂ ಮುನ್ನಡೆಸಿಕೊಂಡ ಬಂದ ತಮ್ಮ ಆಸಕ್ತಿ ಹಾಗೂ ಬದ್ಧತೆ! ಇದು ಶ್ಲಾಘನೀಯ ಹಾಗೂ ಅನುಕರಣೀಯ. ಒಂದು ವ್ರತದ ಹಾಗೆ ತಾವು ನಡೆಸಿಕೊಂಡು ಬರುತ್ತಿರುವ ಈ ಕನ್ನಡದ ಕೆಲಸವು ಮುಂದಿನ ತಲೆಮಾರನ್ನು ಸೃಜಿಸುವ ಅಪರೂಪದ ಹಾಗೂ ಧನ್ಯತೆಯ ಕೆಲಸ ಎಂದು ನಾನು ಭಾವಿಸಿದ್ದೇನೆ. ಈ ಕೈಂಕರ್ಯದಲ್ಲಿ ತೊಡಗಿಕೊಂಡಿರುವ ಎಲ್ಲ ಕನ್ನಡಿಗರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಿದ್ದೇನೆ. ಅಮೆರಿಕದಲ್ಲಿ ಕನ್ನಡ ಕಲಿಕೆಯ ಪಠ್ಯಪುಸ್ತಕಗಳ ರಚನೆಯ ವಿಷಯದಲ್ಲಿ 'ಏಕವ್ಯಕ್ತಿ ವಿಶ್ವವಿದ್ಯಾಲಯ' ಎಂದು ಕರೆಯಬಹುದಾದ, ಶಿವು ಗೌಡರ್ ಅವರು, ಲಾಸ್ ಏಂಜಲೀಸ್ ಪ್ರದೇಶದಲ್ಲಿ ನೆಲೆಸಿರುವ ಅಪರೂಪದ ಸಂಪನ್ಮೂಲ ವ್ಯಕ್ತಿ. ಸ್ವರಬಲ್ಲ-1 ಮತ್ತು 2, ಅಕ್ಷರ ಬಲ್ಲ 1 ಮತ್ತು 2, ಜಾಣ 1 ಮತ್ತು 2 ಹೀಗೆ 8 ಪುಸ್ತಕ ಗಳನ್ನು ಬರೆದಿರುವುದು ಅವರ ಸೃಜನಶೀಲತೆಗೆ ಉತ್ತಮ ಉದಾಹರಣೆಯಾಗಿದೆ. ಅಮೆರಿಕದ ಹಲವು ನಗರಗಳ ಕನ್ನಡಿಗರು ತಮ್ಮ ಮಕ್ಕಳು ಪ್ರೌಢಶಾಲೆಯಲ್ಲಿ ಕನ್ನಡವನ್ನು ಆಯ್ಕೆ ಮಾಡಿಕೊಂಡು ಓದಲು ಅಧಿಕೃತ ಅವಕಾಶವನ್ನು ಮಾಡಿಕೊಟ್ಟಿದ್ದಾರೆನ್ನುವ ವಿಷಯವು ನನಗೆ ತುಂಬಾ ಸಂತೋಷವನ್ನು ತಂದುಕೊಟ್ಟಿದೆ.

ಅಮೆರಿಕನ್ನಡಿಗರೊಡನೆ ಒಡನಾಟ

ಅಮೆರಿಕದಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಮೊದಲ ಬಾರಿ ನನಗೆ 'ಅಮೆರಿಕನ್ನಡ' ಪತ್ರಿಕೆಯ ಮೂಲ ದೊರೆಯಿತು. ಈ ಪತ್ರಿಕೆಯ ಸಂಪಾದನೆ ಯನ್ನು ಮಾಡುತ್ತಿದ್ದುದ್ದು, 'ಶುದ್ಧ ಕನ್ನಡಿಗ' ದಿವಂಗತ ಹರಿಹರೇಶ್ವರ. ಹರಿಹರೇಶ್ವರ ಅವರನ್ನು ನಾನು ಮುಖತಃ ಭೇಟಿ ಯಾಗಲಿಲ್ಲ. ಆದರೆ ಅವರು 2010ರಲ್ಲಿ ಮೈಸೂರಿಗೆ ಬಂದು ನೆಲೆಸಿದರು. ಒಂದು ರಾತ್ರಿ ನನಗೆ ಫೋನ್ ಬಂದಿತು. ಕನ್ನಡದಲ್ಲಿ ಒಂದು ವಿಶಿಷ್ಟ ಪುಸ್ತಕವನ್ನು ತರಲಿದ್ದೇವೆ. ಕನ್ನಡದಲ್ಲಿ 'ಆರೋಗ್ಯ ವಿಜ್ಞಾನವು ಬೆಳೆದುಬಂದ ಹಾದಿ'ಯ ಬಗ್ಗೆ ಒಂದು ಲೇಖನ ವನ್ನು ತಾವು ಬರೆದುಕೊಡಲು ಸಾಧ್ಯವೇ' ಎಂದರು. 40 ಪುಟಗಳ ಲೇಖನವನ್ನು ಬರೆದೂ ಕೊಟ್ಟೆ. ಆದರೆ ಅದು ಪುಸ್ತಕ ರೂಪದಲ್ಲಿ ಪ್ರಕಟ ವಾಗುವ ವೇಳೆಗೆ, ಹರಿಹರೇಶ್ವರ ಅವರು ನಮ್ಮನ್ನು ಬಿಟ್ಟು ಬಾರದ ಊರಿಗೆ ಹೋಗಿದ್ದರು.

2005ರಲ್ಲಿ ಒಮ್ಮೆ ಶ್ರೀವತ್ಸ ಜೋಶಿ, ಡಾ.ಗುರು ಪ್ರಸಾದ್ ಕಾಗಿನೆಲೆ ಮತ್ತು ವಲ್ಲೀಶ ಶಾಸ್ತ್ರಿಯವರು ಬೆಂಗಳೂರಿಗೆ ಬಂದಿದ್ದಾಗ, 'ನಮ್ಮ ಥಟ್ ಅಂತ ಹೇಳಿ' ಕ್ವಿಜ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಆಗ ಅಮೆರಿಕದ ಕನ್ನಡ ಸಾಹಿತ್ಯ ಸಮ್ಮೇಳನ ದಲ್ಲೂ ಏಕೆ ಕ್ವಿಜ್ ಮಾಡಬಾರದು ಹಾಗೂ ಆ ಕಾರ್ಯಕ್ರಮಗಳನ್ನು ಚಂದನ ವಾಹಿನಿಯಲ್ಲಿ ಪ್ರಸಾರ ಮಾಡಬಾರದು' ಎನ್ನುವ ಮಾತು ಬಂದಿತ್ತು. ಈಗ ಇಡೀ ಚಂದನ ತಂಡವಲ್ಲದಿದ್ದರೂ, ನಾನೊಬ್ಬ ಬರಲು ಸಾಧ್ಯವಾಗಿದೆ. ಅದಕ್ಕಾಗಿ ತಮಗೆ ಧನ್ಯವಾದಗಳು. 2019ರಲ್ಲಿ 'ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ'ವು ನನ್ನನ್ನು ಅಮೆರಿಕಕ್ಕೆ ಆಹ್ವಾನಿಸಿತು. ಅಲ್ಲಿನ ಕನ್ನಡಿಗರಿಗಾಗಿ ಒಂದು ವಿಶೇಷ ಕ್ವಿಜ್ ನಡೆಸಿಕೊಟ್ಟೆ. ಕೊರೋನ ಅವಧಿಯಲ್ಲಿ ಮೇರಿ ಲ್ಯಾಂಡ್, 'ಕಾವೇರಿ ಕನ್ನಡ ಸಂಘ'ಕ್ಕಾಗಿ ಆನ್-ಲೈನ್ ಸರಣಿ ಕ್ವಿಜ್ ಕಾರ್ಯಕ್ರಮ'ವನ್ನು ಕೊಟ್ಟೆ. ಚಂದನ ವಾಹಿನಿಯ ಆನ್-ಲೈನ್ 'ಥಟ್ ಅಂತ ಹೇಳಿ'ಯ ಮೂಲಕ ಜಾಗತಿಕ ಕನ್ನಡಿಗರ ಕನ್ನಡ ಕ್ವಿಜ್ ' ನಡೆಸಿದ್ದು ಸ್ಮರಣೀಯ. ಇತ್ತೀಚೆಗೆ 'ಪದಾಂತರಂಗ'ದ ಮೂಲಕ ಆನ್-ಲೈನ್ ಜಾಗತಿಕ ಕ್ವಿಜ್' ನಡೆಸಿದುದು ಸಹ ಹಸಿರಾಗಿ ಉಳಿದಿದೆ.ಈಗ ನನ್ನನ್ನು ಅಮೆರಿಕಕ್ಕೆ ಕರೆಯಿಸಿ, ಈ 12 ನೆಯ ವಿಶ್ವಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಆಶಯ ಭಾಷಣವನ್ನು ಮಾಡಲು ಅನುವು ಮಾಡಿಕೊಟ್ಟ, 'ಅಕ್ಕ' ಸಂಘಟನೆಯ ಎಲ್ಲ ಪದಾಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

ನಮ್ಮ ಸನಾತನ ಭಾರತೀಯ ಸಂಸ್ಕೃತಿಯನ್ವಯ, ಪ್ರತಿಯೊಬ್ಬ ಭಾರತೀಯನು ತಾನು ಹುಟ್ಟುವಾಗ, ತನ್ನ ಬೆನ್ನಿಗೆ ನಾಲ್ಕು ಋಣಗಳನ್ನು ಹೊತ್ತುಕೊಂಡು ಹುಟ್ಟುತ್ತಾನೆ. ದೈವಋಣ, ಪಿತೃಋಣ, ಆಚಾರ್ಯ ಋಣ ಹಾಗೂ ಸಮಾಜ ಋಣ. ತಾಯಿ ಬೇರೆಯಲ್ಲ, ತಾಯ್ನಾಡು ಬೇರೆ ಯಲ್ಲ, ತಾಯ್ನುಡಿಯು ಬೇರೆಯಲ್ಲ. ತಾಯ್ನಾಡನ್ನು ತೊರೆದು ಸಾವಿರಾರು ಮೈಲಿಗಳ ದೂರಕ್ಕೆ ಬಂದಿದ್ದರೂ, ತಾಯ್ನಾಡು ಹಾಗೂ ತಾಯ್ನುಡಿಯನ್ನು ನೆನೆಪಿಸಿಕೊಂಡು, ವಿಜಂಭಣೆಯಿಂದ ಇಂತಹ ಸಾರ್ಥಕ ಕಾರ್ಯಕ್ರಮವನ್ನು ಆಯೋಜಿಸಿದ್ದೀರಿ. 4000ಕ್ಕೂ ಹೆಚ್ಚು ಜನರು ಈ ನುಡಿ ಸಂಭ್ರಮದಲ್ಲಿ ಭಾಗಿಯಾಗಿದ್ದೀರಿ. ತಾವು ಮಾತ್ರ ಋಣದಿಂದ ಹಾಗೂ ಸಮಾಜ ಋಣದಿಂದ ಮುಕ್ತರಾಗಿದ್ದೀರಿ ಎನ್ನುವುದನ್ನು ಇಲ್ಲಿ ದಾಖಲಿಸಲು ನನಗೆ ಹೆಮ್ಮೆಯಾಗುತ್ತಿದೆ. ಗ್ರೇಟರ್ ರಿಚ್ಮಂಡ್ ನಗರದ 'ಅಕ್ಕ 12 ವಿಶ್ವ ಕನ್ನಡ ಸಮ್ಮೇಳನ'ವು ಯಶಸ್ವಿಯಾಗಿ ನಡೆಯಲಿ ಎಂದು ಆಶಿಸುತ್ತಾ ನನ್ನ ಮಾತಿಗೆ ಮಂಗಳವನ್ನು ಹಾಡುತ್ತೇನೆ. ಮತ್ತೆ ಭೇಟಿಯಾಗೋಣ. ನಮಸ್ಕಾರ.

ಸಮ್ಮೇಳನದ ಉದ್ಘಾಟನಾ ಸಮಾರಂಭವು ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಘನ ಉಪಸ್ಥಿತಿಯಲ್ಲಿ ನೆರವೇರಿತು. ಸಮ್ಮೇಳನದ ವೇದಿಕೆಯ ಮೇಲೆ ಗಣ್ಯರು ಉಪಸ್ಥಿತರಿದ್ದರು.

ಅಮೆರಿಕನ್ನಡಿಗರ ಪದಾರ್ಪಣೆಗೆ 60ರ ಸಂಭ್ರಮ

ಕರ್ನಾಟಕದಲ್ಲಿ ಕನ್ನಡ ಭಾಷೆಯ ವಿನಾಶಕತೆಯ ಬಗ್ಗೆ ಯೋಚಿಸುವಾಗ, ಅಮೆರಿಕದಲ್ಲಿ ಕನ್ನಡ ಭಾಷೆಯನ್ನು ಜೀವಂತವಾಗಿಡುವ ಹಾಗೂ ಬೆಳೆಸುವ ಸೃಜನಶೀಲ ಕೆಲಸಗಳು ನಡೆಯುತ್ತಿರುವ ಬಗ್ಗೆ ಸಂತೋಷವಾಗುತ್ತಿದೆ. 1960ರ ದಶಕದಲ್ಲಿ ಕನ್ನಡಿಗರು ಅಮೆರಿಕದಲ್ಲಿ ನೆಲೆಸಲು ಆರಂಭಿಸಿದರು ಎಂದು ನಾನು ಕೇಳಿದ್ದೇನೆ. ಈಗ 2020ರ ದಶಕದಲ್ಲಿದ್ದೇವೆ. ಅಂದರೆ ನೀವು ಇಲ್ಲಿ ನೆಲೆಸಲು ಆರಂಭಿಸಿ 60 ವರ್ಷಗಳಾದವು. ಹಾಗಾಗಿ ನೀವೆಲ್ಲರೂ ಈಗ ನಿಮ್ಮ ಪದಾರ್ಪಣೆಯ ವಜ್ರ ಮಹೋತ್ಸವ'ವನ್ನು ಆಚರಿಸುತ್ತಿದ್ದೀರಿ. ಅದಕ್ಕಾಗಿ ಅಮೆರಿಕದಲ್ಲಿರುವ ಪ್ರತಿಯೊಬ್ಬ ಕನ್ನಡಿಗರನ್ನು ನಾನು ಅಭಿನಂದಿಸುತ್ತಿದ್ದೇನೆ.

'ಅಮೆರಿಕವು ಅವಕಾಶಗಳ ಅಮರಾವತಿ' ಎಂದು ಪ್ರಸಿದ್ಧ. ಹಾಗಾಗಿ ಮೊದಮೊದಲು ಅಮೆರಿಕಕ್ಕೆ ಬಂದ ಕನ್ನಡಿಗರ ಮನಃಸ್ಥಿತಿಯನ್ನು ನಾನು ಊಹಿಸಿಕೊಳ್ಳಬಲ್ಲೆ. 25ರ ಅಸುಪಾಸಿನ ಯುವಕರು. ಕಲ್ಲನ್ನು ಹಿಂಡಿ ನೀರನ್ನು ತೆಗೆಯ ಬಲ್ಲ ಚೈತನ್ಯ ಉಳ್ಳವರು. ಓದು ಮುಗಿಯುತ್ತಿರುವಂತೆಯೇ, ಸಾಲಸೋಲ ಮಾಡಿಕೊಂಡು, ಪಾಸ್‌ಪೋರ್ಟ್ ವೀಸಾ ಸಿದ್ಧಪಡಿಸಿಕೊಂಡು, ಅಮೆರಿಕಕ್ಕೆ ಅರ್ಜಿ ಗುಜರಾಯಿಸಿ, ತನ್ನ ಮನೋವೇಗಕ್ಕೆ ಈ ವಿಮಾನ ಸಾಟಿಯಲ್ಲ ಎಂದು ಚಡಪಡಿಸುತ್ತಾ, ಅಪರಿಚಿತ ಊರಿನಲ್ಲಿ ವಿಚಿತ್ರ ಕಾಕು ಇಲ್ಲವೇ ಆಕ್ಸೆಂಟಿನ ಇಂಗ್ಲಿಷನ್ನು ಕೇಳುತ್ತಾ, ಇದೆಂತಹ ಭಾಷೆ ಎಂದು ಗೊಂದಲಕ್ಕೊಳಗಾಗುತ್ತಾ, ಯಾವಾಗ ಕನ್ನಡ ಭಾಷೆಯನ್ನು ಕೇಳುವೆನೋ, ಎಂದು ಚಾತಕದ ಹಾಗೆ ಕಾಯುತ್ತಾ ಅಮೆರಿಕಕ್ಕೆ ಬಂದರು.

ಉಡುಪಿ ಹೋಟೆಲುಗಳು, ಎಂಟಿಆರ್, ಸಿಟಿಆರ್‌ಗಳನ್ನು ನೆನಪಿಸಿಕೊಳ್ಳುತ್ತ ಸ್ವಯಂಪಾಕವನ್ನು ಮಾಡಿಕೊಳ್ಳಬೇಕಾದ ಅನಿವಾರ್ಯ. ಮನೆಯಲ್ಲಿ ಅಮ್ಮ ಮಾಡಿದ ಸಾರಿನಲ್ಲಿ ಸ್ವಲ್ಪ ಉಪ್ಪು ಹೆಚ್ಚು ಇದ್ದರೆ ಕೂಗಾಡುತ್ತಿದ್ದವರು, ಇಲ್ಲಿ ಉಪ್ಪು-ಖಾರ-ಹುಳಿಯಿಲ್ಲದ, ಕೊತ್ತಂಬರಿ-ಕರಿಬೇವು-ತೆಂಗಿನ ತುರಿಯಿಲ್ಲದ, ವಾಸ್ತವದಲ್ಲಿ, ಒಗ್ಗರಣೆಯಲ್ಲದ ಒಗ್ಗರಣೆ ಹಾಕಿ ಮಾಡಿದ ಉಪ್ಪಿಟ್ಟು, ಚಿತ್ರಾನ್ನಗಳನ್ನು ತಿಂದು ಕೊಂಡು, ಕಟ್ಟಿಕೊಂಡ ಬದುಕು, ಯಾವುದೋ ಕಾದಂಬರಿಯ ಭಾಗದಂತೆ ಕಂಡರೆ ಆಶ್ಚರ್ಯ ಪಡಬೇಕಿಲ್ಲ.

1970 ದಶಕದಲ್ಲಿ ಗ್ರೀನ್ ಕಾರ್ಡ್ ಮುಕ್ತವಾಗಿ ಸಿಗಲಾರಂಭಿಸಿತು. ಕನ್ನಡಿಗರು ಪ್ರವಾಹೋಪಾದಿಯಲ್ಲಿ ಅಮೆರಿಕಕ್ಕೆ ಬಂದರು. ಅಮೆರಿಕದ ಪೂರ್ವ ಕರಾವಳಿಯ ನ್ಯೂಯಾರ್ಕ್, ವಾಷಿಂಗ್ಟನ್ , ಬಾಸ್ಟನ್ ಮತ್ತು ಫಿಲಡೆಲ್ಫಿಯ ಪ್ರದೇಶಗಳಲ್ಲಿ, ಪಶ್ಚಿಮ ಕರಾವಳಿಯ ಲಾಸ್ ಏಂಜಲೀಸ್, ಸ್ಯಾನ್ ಫ್ರಾನ್ಸಿಸ್ಕೊ, ದಕ್ಷಿಣದಲ್ಲಿ ಅಟ್ಲಾಂಟ ಮತ್ತು ಹ್ಯೂಸ್ಟನ್ ಹಾಗೂ ಉತ್ತರದಲ್ಲಿ ಶಿಕಾಗೋ, ಡೆಟ್ರಾಯ್ಟ್ ಮತ್ತು ಮಿನಿಯಪೊಲೀಸ್ ನಗರ ಗಳಲ್ಲಿ ನೆಲೆಸಿದರು. ಮಿಷಿಗನ್ ಸಂಸ್ಥಾನದಲ್ಲಿ ನೆಲೆಸಿದ್ದ ಕನ್ನಡಿಗರು ಅಮೆರಿಕದಲ್ಲಿರುವ ಎಲ್ಲ ಕನ್ನಡಿಗರ ಹೆಸರು, ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನುಳ್ಳ 'ಡೈರೆಕ್ಟರಿ' ಸಿದ್ಧಪಡಿಸಿದರು. ಹೀಗೆ ಅಮೆರಿಕದಲ್ಲಿ ಕನ್ನಡ ಭಾಷೆ-ಭಾವ-ಬದುಕುಗಳನ್ನು ಸನಿಹವಾಗಿಸಿದರು. ವಸಂತ ಋತು ಬಂದಿತೆಂದರೆ, ನೀವೆಲ್ಲರೂ ಸನಿಹದ ಉದ್ಯಾನವನದಲ್ಲೋ ಅಥವ ಮತ್ತೊಂದು ಪ್ರಾಕೃತಿಕ ಪರಿಸರದಲ್ಲೋ ಭೇಟಿ ಯಾಗುತ್ತಿದ್ದಿರಿ. ಶಿಶಿರ-ಹೇಮಂತ ಋತುಗಳು ಬಂದಿತೆಂದರೆ ಯಾರದೋ ಮನೆಯ ನೆಲಮಾಳಿಗೆಯಲ್ಲಿ ಸೇರುತ್ತಿದ್ದಿರಿ. ಕರ್ನಾಟಕದ ಎಲ್ಲ ತಿಂಡಿಗಳನ್ನು ಮಾಡಿ ತಿನ್ನುತ್ತಿದ್ದಿರಿ. ನೀವು ಹರಟೆ ಹೊಡೆದು ಹೊಡೆದು ಬೇಸರವಾದರೆ ನಿಮ್ಮನ್ನು ಮನತಣಿಸಲು ಮಕ್ಕಳ ಹಾಡು-ಕುಣಿತವಂತೂ ಇದ್ದೇ ಇತ್ತು. ಒಳ್ಳೆಯ ಕಾಫಿಯನ್ನು ಕುಡಿದು ನಿಮ್ಮ ನಿಮ್ಮ ಮನೆಗಳತ್ತ ತೆರಳುತ್ತಿದ್ದದ್ದು, ಇಂದಿಗೂ ನಿಮ್ಮ ಪಾಲಿಗೆ ಸವಿ ಸವಿ ನೆನಪುಗಳಾಗಿ ಉಳಿದಿವೆ.

ಅಳಿವಿನತ್ತ ನಡೆದಿದೆಯೆ ಕನ್ನಡ ?

ವಿಶ್ವಸಂಸ್ಥೆಯ ಅಂಗ ಸಂಸ್ಥೆಯಾದ ಯುನೆಸ್ಕೊ' ಮಾರ್ಚ್ 2003ರಲ್ಲಿ ಭಾಷೆಯ ಜೀವಂತಿಕೆ ಮತ್ತು ವಿನಾಶಕತೆ' (ಲಾಂಗ್ವೇಜ್ ವೈಟಾಲಿಟಿ ಅಂಡ್ ಎಂಡೇಂಜಮೆಂಟ್) ಎನ್ನುವ ವರದಿಯನ್ನು ಪ್ರಕಟಿಸಿತು. ಈ ವರದಿಯು ಜಗತ್ತಿನಲ್ಲಿ ವಿನಾಶದತ್ತ ಸಾಗುತ್ತಿರುವ ಭಾಷೆಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿ, ಅವುಗಳನ್ನು ರಕ್ಷಿಸಬೇಕು, ಎನ್ನುವ ನಿಲುವನ್ನು ತೋರಿತು. ಈ ವರದಿಯು ಒಂದು ಭಾಷೆಯು ಕಣ್ಮರೆಯಾಗುತ್ತಿದೆಯೇ ಎನ್ನುವುದನ್ನು ತಿಳಿಯಲು 'ಒಂಬತ್ತು ಲಕ್ಷಣ'ಗಳನ್ನು ಸೂಚಿಸಿತು. ಈ ಹಿನ್ನೆಲೆಯಲ್ಲಿ ನಾವು ನಮ್ಮ ಕನ್ನಡ ಭಾಷೆಯ ಸ್ಥಿತಿ-ಗತಿಯನ್ನು ಅಧ್ಯಯನ ಮಾಡಬೇಕಿದೆ. ಯುನೆಸ್ಕೋ ಹೇಳಿರುವ 9 ಲಕ್ಷಣಗಳನ್ನು ಗಂಭೀರವಾಗಿ ಪರಿಗಣಿಸಿ, ಆ ಒಂಬತ್ತು ಲಕ್ಷಣಗಳಲ್ಲಿ ಎಷ್ಟು ಲಕ್ಷಣಗಳು ಕನ್ನಡ ಭಾಷೆಗೆ ಅನ್ವಯಿಸುತ್ತವೆ ಎನ್ನುವುದನ್ನು ತಿಳಿದುಕೊಂಡು, ಅವುಗಳಿಗೆ ಪ್ರಾಮಾಣಿಕ ಪರಿಹಾರವನ್ನು ಕಂಡುಕೊಳ್ಳಬೇಕಿದೆ.

- ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಭಾಷೆಯ ವರ್ಗಾವಣೆ. ಕನ್ನಡ ಭಾಷೆಯು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಹರಿದು ಬರುತ್ತಿದ್ದರೂ, ಇದು ನಿರಂತರವಾಗಿ ಮುಂದುವರೆಯಲಿ ಅಡ್ಡಿಯಿದೆ ಎನ್ನಬಹುದು.
- ಭಾಷಿಕರ ಒಟ್ಟು ಪ್ರಮಾಣ.
  ಕನ್ನಡವನ್ನು ಮಾತನಾಡುವವರ ಪ್ರಮಾಣ ಸಾಕಷ್ಟಿದೆ.
- ಒಟ್ಟು ಜನಸಂಖ್ಯೆಯಲ್ಲಿ ನಿಗದಿತ ಭಾಷಿಕರ ಪ್ರಮಾಣ.
  ದಕ್ಷಿಣ ಭಾರತದ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕದಲ್ಲಿ ಕನ್ನಡಿಗರ ಸಂಖ್ಯೆ ತೀವ್ರವಾಗಿ ಕಡಿಮೆಯಾಗುತ್ತಿದೆ. ಇದನ್ನು ತಡೆಗಟ್ಟದಿದ್ದರೆ, ಕರ್ನಾಟಕದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುವ ಸಾಧ್ಯತೆಯನ್ನು ತಳ್ಳಿ ಹಾಕುವ ಹಾಗಿಲ್ಲ.
- ಅಸ್ತಿತ್ವದಲ್ಲಿ ಭಾಷಾ ಕ್ಷೇತ್ರದ ಪ್ರವೃತ್ತಿಗಳು.
  ಕನ್ನಡವು ಶಿಕ್ಷಣ ಮಾಧ್ಯಮವಾಗಿ ಹಿನ್ನಡೆಯನ್ನು ಕಂಡಿದೆ. ದಿನೇ ದಿನೇ ಇಂಗ್ಲಿಷ್ ಮಾಧ್ಯಮದತ್ತ ಹೊರಳುವ ಜನರ ಪ್ರಮಾಣ ಹೆಚ್ಚುತ್ತಿದೆ. ಕರ್ನಾಟಕದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುವ ಭೀತಿಯಿದೆ.
- ಮಾಧ್ಯಮವೇ ಮುಂತಾದ ಹೊಸ ಕ್ಷೇತ್ರಗಳಿಗೆ ಪ್ರತಿಕ್ರಿಯೆ.
  ಕನ್ನಡ ಭಾಷೆಯ ಜನ್ಮದತ್ತ ಜಾಯಮಾನಕ್ಕನುಗುಣವಾಗಿ ಹೊಸ ಹೊಸ ಸವಾಲನ್ನು ಸ್ವೀಕರಿಸಬಲ್ಲ ಸಾಮರ್ಥ್ಯವಿದೆ. ಆದರೂ ಕನ್ನಡವನ್ನು ಮುಕ್ತ ಮನಸ್ಸಿನಿಂದ ಬಳಸುವ ಕನ್ನಡಿಗರ ಅಗತ್ಯವಿದೆ.
- ಭಾಷಾ ಶಿಕ್ಷಣ ಮತ್ತು ಸಾಕ್ಷರತೆಯ ಸಾಮಗ್ರಿಗಳು.
  ಕನ್ನಡ ಭಾಷಾ ಹಾಗೂ ಸಾಹಿತ್ಯ ಶ್ರೀಮಂತಿಕೆ ಉತ್ತಮವಾಗಿದೆ. ಕಲಿಯಬೇಕೆನಿಸುವವರಿಗೆ ಒಂದು ಜನ್ಮಕ್ಕಾಗುವಷ್ಟು ಜ್ಞಾನ ಸಂಪತ್ತು ಕನ್ನಡದಲ್ಲಿದೆ.
- ಒಂದು ಭಾಷೆಯ ಅಧಿಕೃತ ಮಾನ್ಯತೆ ಹಾಗೂ ಬಳಕೆಯನ್ನು ಒಳಗೊಂಡಂತೆ, ಸರ್ಕಾರೀ ಮತ್ತು ಸಾಂಸ್ಥಿಕ ಭಾಷಾ ವರ್ತನೆಗಳು ಮತ್ತು ನೀತಿಗಳು.
  ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವ ಆಸಕ್ತಿ ಸರ್ಕಾರಕ್ಕಿಲ್ಲ. ಶೈಕ್ಷಣಿಕ ಮಾಧ್ಯಮವಾಗಿ ಕನ್ನಡವನ್ನು ಬೆಳೆಸುವ ಬಗ್ಗೆ ಯಾರಿಗೂ ಆಸಕ್ತಿಯಿಲ್ಲ.
- ಒಂದು ಸಮುದಾಯವು, ತನ್ನ ಭಾಷೆಯ ಬಗ್ಗೆ ತೋರುವ ಧೋರಣೆ.
  ಕನ್ನಡದ ಬಗ್ಗೆ ಕನ್ನಡಿಗರ ಧೋರಣೆಯು ನಿರಾಶದಾಯಕವಾಗಿದೆ. ಕನ್ನಡದ ಅವಸಾನಕ್ಕೆ ಕನ್ನಡಿಗರೇ ಕಾರಣವಾಗುತ್ತಿರುವುದು ಬೇಸರದ ವಿಷಯವಾಗಿದೆ.
- ಉತ್ತಮ ಗುಣಮಟ್ಟದ ದಾಖಲೀಕರಣ ಹಾಗೂ ಅದರ ಪ್ರಮಾಣ.
  ಕನ್ನಡ ಭಾಷಾ ಸಾಹಿತ್ಯವನ್ನೆಲ್ಲ ದಾಖಲಿಸುವ, ಡಿಜಿಟಲೀಕರಿಸುವ ಹಾಗೂ ಎಲ್ಲರಿಗೂ ದೊರೆಯುವಂತೆ ಮಾಡುವ ಕೆಲಸ ಆಮೆಗತಿಯಲ್ಲಿದೆ. ಇದು ತೀವ್ರವಾಗಬೇಕು.

ಕನ್ನಡ ಭಾಷೆಗೆ ಶ್ರೀಮಂತ ಪರಂಪರೆಯಿದ್ದರೂ ಅದರ ಹೆಮ್ಮೆ ಪಡುವವರು ವೃದ್ಧರು ಮತ್ತು ಮಧ್ಯಮ ವರ್ಗದವರು ಮಾತ್ರ. ಹಾಗಾಗಿ ಕರ್ನಾಟಕ ದಲ್ಲಿ ಕನ್ನಡವು ವೃದ್ಧರ ಭಾಷೆಯಾಗಿದೆ. ಕನ್ನಡ ಭಾಷೆಯ ಬಗ್ಗೆ ಸರಕಾರ ಹಾಗೂ ಪಾಲಕರ ಉದಾಸೀನತೆಯು ಅಕ್ಷಮ್ಯವಾಗಿದೆ. ಕರ್ನಾಟಕದಲ್ಲಿ ಕನ್ನಡವನ್ನು ಮಾತನಾಡುವವರ ಸಂಖ್ಯೆ ಕ್ಷೀಣಿಸುತ್ತಿದೆ. ಮುಂದೆ ಕನ್ನಡಿಗರು ಅಲ್ಪಸಂಖ್ಯಾತರಾದರೆ ಆಶ್ಚರ್ಯ ಪಡಬೇಕಾಗಿಲ್ಲ.

ಗಿರೀಶ್ ವಾಸುದೇವ

ಪ್ರತಿ ಸಲದಂತೆ ಈ ಬಾರಿಯೂ ಅಕ್ಕ ಸಮ್ಮೇಳನಕ್ಕೆ ಮೊದಲು ಆಟೋಟ ಸ್ಪರ್ಧೆಗಳು ನಡೆದಿದ್ದುವು. ಕ್ರಿಕೆಟ್ ಲೀಗ್, ಪಿಕಲ್ ಬಾಲ್ ಸ್ಪರ್ಧೆ ಮತ್ತು ಚೆಸ್ ಟೂರ್ನಮೆಂಟ್ ಈ ಸಲದ ವೈಶಿಷ್ಯಗಳು. ಕ್ರಿಕೆಟ್ ಲೀಗ್‌ನ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕದ ನಿವೃತ್ತ ರಣಜಿ ಆಟಗಾರ ಜೆ ಅರುಣ ಕುಮಾರ್, ಪಾಕಿಸ್ತಾನದ ನಿವೃತ್ತ ಅಂಪೈರ್ ಮೊಹಮ್ಮದ್ ಅಬ್ದುಲ್ ಕಾರ್ದಿ, ಭಾರತದಲ್ಲಿ ಅಂಧರ ಕ್ರಿಕೆಟ್ ಅಸೋಸಿಯೇಷನ್ ಅಧ್ಯಕ್ಷ ಡಾ ಮಹಾಂತೇಶ ಜಿ.ಕೆ ಮತ್ತು ನಾಯಕ ದುರ್ಗಾ ರಾವ್ ಮುಂತಾದವರೆಲ್ಲ ಭಾಗವಹಿಸಿದ್ದರು.

ಕ್ರಿಕೆಟ್ ಲೀಗ್‌ನಲ್ಲಿ ಅಮೆರಿಕದ 4 ವಿವಿಧ ವಲಯಗಳ ಒಟ್ಟು 14 ತಂಡಗಳು ಭಾಗವಹಿಸಿದ್ದವು. ಸೆಮಿಫೈನಲ್ಸ್ ಮತ್ತು ಫೈನಲ್ಸ್ ಪಂದ್ಯಗಳನ್ನು ವರ್ಜೀನಿಯಾದ ಬೊಲೆನ್ ಪಾರ್ಕ್ ಸ್ಟೇಡಿಯಂನಲ್ಲಿ ಹೊನಲುಬೆಳಕಿನಲ್ಲಿ ನಡೆಸಲಾಗಿತ್ತು. ಹಾಫ್ ಟೈಮ್ ಶೋ ಮನೋರಂಜನೆ ಕಾರ್ಯಕ್ರಮವೂ ಸೇರಿದಂತೆ ಪಕ್ಕಾ ಅಂತಾರಾಷ್ಟ್ರೀಯ ಕ್ರಿಕೆಟ್ ಲೀಗ್‌ಗಳ ಮಾದರಿಯಲ್ಲೇ ಆ ಪಂದ್ಯಗಳು ನಡೆದಿದ್ದವು. ಅಂತಿಮ ಪಂದ್ಯದಲ್ಲಿ ಆಡಿದ ಕಾವೇರಿ ಲೆಜೆಂಡ್ ಟೀಮ್ಸ್ (ನಾಯಕ: ಮಾದೇಶ ಬಸವರಾಜು) ಟ್ರೋಫಿ ಎತ್ತಿಕೊಂಡಿತು. ಶಾರ್ಲಟ್‌ನ ಹೊಯ್ಸಳ ಟೀಮ್ (ನಾಯಕ: ಭಾರ್ಗವ ಗೌಡ) ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು.

ಪಿಕಲ್ ಬಾಲ್ ಸ್ಪರ್ಧೆಯನ್ನು ಐಕ್ಲೌಡ್ ಫ್ಲುಯೆನ್ಸ್‌ನ ಮಧು ಅಯ್ಯರ್ ಪ್ರಾಯೋಜಿಸಿದ್ದರು. ಸೆಮಿಫೈನಲ್ಸ್ ಮತ್ತು ಫೈನಲ್ಸ್ ಪಂದ್ಯಗಳು ರಿಚ್ಮಂಡ್‌ನಲ್ಲಿ ಸುಮಾರು 100 ಮಂದಿ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದವು. ಮೆನ್ಸ್ ಡಬಲ್ಸ್‌ನಲ್ಲಿ ರವಿ ರವೀಂದ್ರ ಮತ್ತು ಅರುಣ್ ಶಿವಮೊಗ್ಗ ವಿಜೇತರಾದರೆ ಮಿಕ್ಸೆಡ್ ಡಬಲ್ಸ್‌ನಲ್ಲಿ ರವಿ ರವೀಂದ್ರ ಮತ್ತು ಆರತಿ ಕಾಶಿಪತಿ ವಿಜೇತರಾದರು.

ಲಿಚೆಸ್ ಆರ್ಗನೈಸೇಷನ್‌ನ ಸಹಯೋಗದಲ್ಲಿ ನಡೆದ ಆನ್‌ಲೈನ್ ಚೆಸ್ ಟೂರ್ನಮೆಂಟ್‌ನಲ್ಲಿ ಋತ್ವಿಕ್ ಮಂಜುನಾಥ್ ಗೆಲುವು ಸಾಧಿಸಿದರು. ಆದ್ಯನ್ ರಾಜ್ ಮತ್ತು ಶ್ರೇಯಾ ದೇವರಾಜ್ ರನ್ನರ್ ಅಪ್ ಸ್ಥಾನ ಪಡೆದರು. ಅಂಡರ್ 10, ಅಂಡರ್ 12, ಅಂಡರ್ 15 ಮತ್ತು ಬಾಲಕಿಯರ ವಿಭಾಗದಲ್ಲಿ ಅನುಕ್ರಮವಾಗಿ ಆರವ್ ಹೇಮಂತ್, ವಿಹಾನ್ ರಾಜ್, ಸಿರಿ ದೇವರಾಜ್, ಮತ್ತು ಕಲ್ಪನಾ ರಾಮಸ್ವಾಮಿ ವಿಜೇತರಾದರು. ಗಾಲ್ಫ್ ಟೂರ್ನಮೆಂಟ್ ಅಕ್ಕ ಸಮ್ಮೇಳನ ನಡೆಯುವಾಗಲೇ ಅಂದರೆ ರವಿವಾರ ಸೆಪ್ಟೆಂಬರ್ 1ರಂದು ರಿಚ್ಮಂಡ್‌ನ ಪ್ರಾವಿಡೆನ್ಸ್ ಗಾಲ್ಫ್ ಕ್ಲಬ್‌ನಲ್ಲಿ ನಡೆಯಲಿದೆ.

ಪ್ರೇಮದೂರಲ್ಲಿ ಅಕ್ಕ ಸಿರಿಗನ್ನಡ ಮೇಳ

ಭಾನುವಾರ 01.09.2024 / ಅಮೆರಿಕ 12ನೇ ವಿಶ್ವಕನ್ನಡ ಸಮ್ಮೇಳನ

ವೇದಘೋಷದೊಡನೆ ಶುಕ್ರವಾರ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳ ಆರಂಭ.


ಎಮ್ ಎಸ್ ಎನ್ ಮತ್ತು ಎಮ್ ಎಸ್ ಎನ್ (ಮಾಲೂರು ಸೂರಪ್ಪ ನರಸಿಂಹಮೂರ್ತಿ ಮತ್ತು ಮೈಸೂರು ಶ್ರೀನಿವಾಸ ನಟರಾಜ).

ಜಗದ್ಗುರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಂದ ಆಶೀರ್ವಚನ.

ಗುರುಕಿರಣ್ ಬಂದಿದ್ದಾರೆ! ಸುಪರ್ ಡುಪರ್ ರಸಮಂಜರಿ ನಡೆಸಿಕೊಡ್ತಾರೆ!

ತಮಟೆ ಡೋಲು ಸಹಿತ ನಾದಸ್ವರ ವಾದನದಲ್ಲಿ 'ಚೆಲ್ಲಿದರು ಮಲ್ಲಿಗೆಯ ಅಕ್ಕನ ಮಡಿಲು ತುಂಬ...'


ಡಾ.ನಾ. ಸೋಮೇಶ್ವರ ಅವರಿಗೆ ಗೌರವ ಸಮರ್ಪಣೆ.

ಅಕ್ಕ ಮೆರವಣಿಗೆಯಲ್ಲಿ ಕಸಾಪ ಅಧ್ಯಕ್ಷ ಮಹೇಶ ಜೋಶಿ.

ಶನಿವಾರ ಬೆಳಿಗ್ಗೆ ಮುಖ್ಯ ವೇದಿಕೆ ಕಾರ್ಯಕ್ರಮ: ಅನುಶ್ರೀ ನಿರೂಪಣೆ.

ವರ್ಜೀನಿಯಾ ಸೆನೇಟರ್ ಟಿಮ್ ಕೇನ್

ಮೆರವಣಿಗೆಯಲ್ಲಿ ಕಂಡ ಅಕ್ಕ ಅಧ್ಯಕ್ಷ ರವಿ ಬೋರೇಗೌಡ.

ಒಂದಲ್ಲ ಎರಡಲ್ಲ ಮೂರು ದೊಡ್ಡ ಹಣತೆಗಳಲ್ಲಿ ಜ್ಯೋತಿ ಬೆಳಗಿ ಉದ್ಘಾಟನೆ.


ಅಕ್ಕ ಸಮ್ಮೇಳನದ ಮತ್ತಷ್ಟು ಮೆರುಗು ತಂದ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮಿಜಿ, ಮೈಸೂರು ಶಾಖಾ ಮಠದ ಸ್ವಾಮಿಜಿ ಮತ್ತಷ್ಟು ಗಣ್ಯ ಮಹೋದಯರು.

ಅಕ್ಕ ಸಮ್ಮೇಳನದ ಮೆರವಣಿಗೆಯೂ ಇಡೀ ರಿಚ್‌ಮಂಡ್ ನಗರವನ್ನು ಸಿಂಗರಿಸಿದಂತಿತ್ತು. ತಾಯಿ ಭುವನೇಶ್ವರಿಯನ್ನು ನೆನೆದು ಶುರುವಾದ ಮೆರವಣಿಗೆಯೂ ಇಡೀ ಅಮೆರಿಕ ದೇಶಕ್ಕೆ ಕನ್ನಡ ಹಾಗೂ ಭಾರತೀಯ ಸಂಸ್ಕೃತಿಯನ್ನು ಪರಿಚಯಿಸಿತು. ಇದೆಲ್ಲರ ಜತೆಗೆ ಪೂರ್ಣ ಕುಂಭ, ಪಲ್ಲಕ್ಕಿ, ತಾಯಿ ಭುವನೇಶ್ವರಿಯ ಮೆರವಣಿಗೆ ಕಣ್ಮನ ಸೆಳೆಯುತ್ತಿತ್ತು.

ಪ್ರೇಮದೂರಲ್ಲಿ ಅಕ್ಕ ಸಿರಿಗನ್ನಡ ಮೇಳ

ಸಮ್ಮೇಳನ ಸಂಚಾಲಕ ಷಣ್ಮುಗಂ ಅಯ್ಯರ್ ಪುತ್ರಿಯರಾದ ಸ್ನೇಹಾ ಮತ್ತು ಶ್ರೇಯಾ ಅವರಿಂದ ಶನಿವಾರ ಬೆಳಗಿನ ಸಭಾಕಾರ್ಯಕ್ರಮದ ಪ್ರಾರ್ಥನೆ.

ಅಮೆರಿಕದಲ್ಲಿ ಕನ್ನಡದ ಕಂಬ ಅಂದರೆ ಈ ಎಲ್ಲ ಕನ್ನಡ ಸಂಘಗಳು.

ನವೋದ್ಯಮಿಗಳಿಗೆ ಹುರುಪು ತುಂಬಲಿದೆ ಅಕ್ಕ ಬಿಸಿನೆಸ್ ಫೋರಂ

ರಿಚ್ಮಂಡ್ ಟೌನ್: ಅಮೆರಿಕದ ಕನ್ನಡಿಗರು ಬರೀ ಪ್ರತಿಭೆ ಮತ್ತು ಪ್ರೀತಿಯಿಂದ ಅಮೆರಿಕದಲ್ಲಿ ಹೆಸರುವಾಸಿಯಾಗದೇ, ಅತ್ಯಂತ ಯಶಸ್ವಿ ಉದ್ಯಮಿಗಳಾಗಿಯೂ ಹೊರಹೊಮ್ಮಿದ್ದಾರೆ. ಈ ಬಾರಿಯ ಅಕ್ಕ 2024ರ ಅಧಿವೇಶನದಲ್ಲಿ ಹಮ್ಮಿಕೊಂಡಿರುವ 'ಅಕ್ಕ ಬ್ಯುಸಿನೆಸ್ ಫೋರಂ', ಕನ್ನಡ ಭಾಷಿಕ ಉದ್ಯಮಿಗಳ ಸಾಮರ್ಥ್ಯ ಮತ್ತು ತಜ್ಞತೆಯನ್ನು ಇಡೀ ವಿಶ್ವಕ್ಕೆ ತೆರೆದಿಡಲಿದೆ. ಉದ್ಯಮಶೀಲ ಆಸಕ್ತರಿಗೆ ಈ ಕಾರ್ಯಕ್ರಮ ಮಾರ್ಗದರ್ಶನ ನೀಡಲಿದೆ.

ಬಿ.ವಿ. ಜಗದೀಶ್

ಈ ವರ್ಷದ ಬ್ಯುಸಿನೆಸ್ ಫೋರಂ ನೆಟ್ ವರ್ಕಿಂಗ್, ಕ್ರಿಯಾಶೀಲ ಚರ್ಚೆಗಳು, ಸ್ಫೂರ್ತಿದಾಯಕ ಭಾಷಣಗಳು, ಭಾರತ ಮತ್ತು ಅಮೆರಿಕ ನಡುವಿನ ಉದ್ಯಮಗಳಿಗೆ ಪ್ರೋತ್ಸಾಹಿಸುವಿಕೆಯೊಂದಿಗೆ ಮುಂದಿನ ಪೀಳಿಗೆಯನ್ನು ಉತ್ತೇಜಿಸಲಿದೆ. ಖ್ಯಾತ ಉದ್ಯಮಿ, ದಾನಿ, ಹೆಮ್ಮೆಯ ಕನ್ನಡಿಗ ಬಿ.ವಿ.ಜಗದೀಶ್ 'AI for Prosperity and Purpose: Creating Wealth and Impacting Society' ಎಂಬ ವಿಷಯದ ಬಗ್ಗೆ, ಕೃತಕ ಬುದ್ಧಿಮತ್ತೆಯು ಬರೀ ಆರ್ಥಿಕತೆಯನ್ನಷ್ಟೇ ಬೆಳೆಸದೆ, ಸಮಾಜದ ಉದ್ಧಾರವನ್ನೂ ಮಾಡಬಹುದು ಎನ್ನುವ ವಿಚಾರ ಬಗ್ಗೆ ಮಾತನಾಡಲಿದ್ದಾರೆ.

ಭರತ್ ಕೌಶಿಕ್

ಭಾರತ, ಅಮೆರಿಕ, ಬ್ರಿಟನ್ ಮತ್ತಿತರ ದೇಶಗಳ ಹಲವು ಸ್ಟಾರ್ಟ್‌ಅಪ್‌ಗಳು ತಮ್ಮ ಯೋಚನೆ, ಉದ್ಯಮವನ್ನು ಇಲ್ಲಿ ಪ್ರಸ್ತುತಪಡಿಸಲಿವೆ. ಹೊಸ ಉದ್ಯಮಕ್ಕೆ ಬಂಡವಾಳ, ಬ್ರ್ಯಾಂಡ್ ಬಗ್ಗೆ ಪ್ರಚಾರ, ಉದ್ಯಮದ ಬೆಳವಣಿಗೆ ಬಗ್ಗೆ ಇಲ್ಲಿ ತಜ್ಞರ ಸಲಹೆಯನ್ನೂ ಪಡೆಯಬಹುದು. ಬೆಂಗಳೂರಿನ ಐ ಟ್ರಯಾಂಗಲ್, ಝೀಯೋಲೈಟ್, ಮತ್ತು ಕ್ಲೀನ್ ಫನಾಟಿಕ್ಸ್, ಯುಎಸ್‌ಎಯ ಜೀವಾ ಕ್ಲಿನಿಕಲ್, ಇವಿ ಬಡ್ಡಿ, ಇಂಗ್ಲೆಂಡ್‌ನಿಂದ ಪ್ಯಾಲೇಟ್ ಸ್ಟಾರ್ಟ್‌ಅಪ್‌ಗಳು ಫೋರಂನ ಒಂದು ಭಾಗವಾಗಿರುತ್ತವೆ. ಇವುಗಳಿಗೆ ಬಂಡವಾಳದ ನೆರವು, ಉದ್ಯಮದ ತಜ್ಞರೊಂದಿಗೆ ಸಂಪರ್ಕ ಸಾಧಿಸಲು ಅಕ್ಕ ಸಮ್ಮೇಳನ ವೇದಿಕೆಯನ್ನು ನೀಡುತ್ತಿದೆ.

ವಿಜಯ್ ಕಿರಂಗದೂರು

ಚರ್ಚಾಗೋಷ್ಠಿಯಲ್ಲಿ "Pathways for More Kannadigas in Public Sector Business Opportunities' ಮತ್ತು "Launching a Business: Overcoming Challenges and Leveraging Advisors' ಎಂಬ ಮಹತ್ವದ ವಿಷಯದ ಮೇಲೆ ಚರ್ಚಾಗೋಷ್ಠಿ ನಡೆಯಲಿದೆ. ಹೊಂಬಾಳೆ ಫಿಲಂಸ್‌ನ ವಿಜಯ್ ಕಿರಂಗದೂರು ಮತ್ತು ಅಡುಕಳ ಭರತ್ ಕೌಶಿಕ್ ಅವರ ತಮ್ಮ ಸ್ಫೂರ್ತಿದಾಯಕ ಮಾತುಗಳ ಮೂಲಕ ನವೋದ್ಯಮಿಗಳಲ್ಲಿ ಹುರುಪು ತುಂಬಲಿದ್ದಾರೆ. ಇರುತ್ತದೆ.

ಸಾಫ್ಟ್‌ವೇರ್ ಉದ್ಯಮದಲ್ಲಿ ವಿಜಯಸಾಧಿಸಿ ಈಗ ಡಿಸ್ಟಿಲ್ಲರಿಸ್‌ನಲ್ಲಿ 'ವರ್ಚಸ್' ಎನ್ನುವ ಹೊಸ ಬ್ರ್ಯಾಂಡ್ ಅನ್ನು ಸ್ಥಾಪಿಸಿರುವ ವರ್ಚಸ್ವಿ ಶಂಕರ್ ಅವರ ಸ್ಫೂರ್ತಿದಾಯಕ ಕತೆಯನ್ನೂ ಸಭಿಕರ ಮುಂದೆ ಪ್ರಚುರ ಪಡಿಸಲಾಗುತ್ತಿದೆ. ಕರ್ನಾಟಕ ಮತ್ತು ಅಮೆರಿಕದ ಸ್ಟಾರ್ಟ್‌ಅಪ್‌ಗಳಿಗೆ ಮಾರ್ಗದರ್ಶನ ನೀಡುವ ಸಲುವಾಗಿ ಅಕ್ಕ ಬ್ಯುಸಿನೆಸ್ ಫೋರಂನಲ್ಲಿ ಈ ಗೋಷ್ಠಿ ಹಮ್ಮಿಕೊಳ್ಳಲಾಗಿದೆ.

ಅಕ್ಕ ಸಮ್ಮೇಳನ ಕನ್ನಡಿಗ ವ್ಯಾಪಾರಿಗಳ ಕೇಂದ್ರವೂ ಆಗಿದೆ !

ವಿರಾಮ

ದಕ್ಷಿಣದ ದೇಸಿ ದೇವರು ಖಂಡೋಬಾ

ಮೈಲಾರ ಅಥವಾ ಖಂಡೋಬಾ ಅಪ್ಪಟ ದೇಸಿ ದೇವರು. ಉತ್ತರ ಕರ್ನಾಟಕದ ಮೈಲಾರನು, ಮಹಾರಾಷ್ಟ್ರದಲ್ಲಿ ಖಂಡೋಬಾ ಎಂದೇ ಜನಪ್ರಿಯನಾಗಿದ್ದಾನೆ. ಮಹಾರಾಷ್ಟ್ರ ಪ್ರದೇಶದಲ್ಲಿ ನಾಲ್ಕುನೂರಕ್ಕೂ ಹೆಚ್ಚು ಖಂಡೋಬಾ ದೇಗುಲಗಳಿವೆ. ಪ್ರಬಲವಾದ ಆಗಮಿಕ-ಪೌರಾಣಿಕ ಹಿಂದೂಧರ್ಮ ಮತ್ತು ಜೈನ-ಬೌದ್ಧ ನಾಸ್ತಿಕ ಧರ್ಮಗಳನ್ನು ಮೀರಿ ಈ ಪರಂಪರೆ ಉಳಿದು ಬಂದುದೊಂದು ಮಹಾ ಸೋಜಿಗ ಎಂಬುದಾಗಿ ಡಾ. ನೇಗಿನಹಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕ ಮೂಲದ ಖಂಡೋಬಾ ಮಹಾರಾಷ್ಟ್ರದಲ್ಲಿ ಜನಪ್ರಿಯ!

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ಬಹು ದೇವರ ಉಪಾಸನೆ ನಮ್ಮಲ್ಲಿ ಲಾಗಾಯ್ತಿನಿಂದಲೂ ನಡೆದು ಬಂದಿದೆ. ಬಹುತ್ವ ನಮ್ಮ ದೇಶದ ಜೀವಾಳ. ಆಗಮ ಪರಂಪರೆಯ ದೇವತೆಗಳ ಜತೆ ಜತೆಗೆ ಜಾನಪದ ದೇವರು ಸಹ ಅಷ್ಟೇ ಗಡದ್ದಾಗಿ ಆರಾಧನೆ ಗೊಳ್ಳುತ್ತಾ ಬಂದಿರುವುದು ವಿಶೇಷ.

ಕರ್ನಾಟಕ - ಮಹಾರಾಷ್ಟ್ರ ಇವುಗಳ ನಡುವಿನ ಬಾಂಧವ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಗಟ್ಟಿಯಾದ ಹಿನ್ನೆಲೆಯಿದೆ. ಈ ಉಭಯ ರಾಜ್ಯಗಳ ನಡುವಿನ ಸಂಬಂಧವನ್ನು ನಂಟನ್ನು ಬೆಸೆಯುವಲ್ಲಿ ದೇವಾದಿದೇವತೆಗಳ ಪಾತ್ರ ಘನಿಷ್ಠವಾದುದು. ಇವತ್ತಿನ ಮಹಾರಾಷ್ಟ್ರದ ಜನಪ್ರಿಯ ದೇವರು ವಿಠ್ಠಲ, ಮಹಾಲಕ್ಷ್ಮೀ , ಖಂಡೋಬಾ, ತುಳಜಾ ಭವಾನಿ ಇವರೆಲ್ಲ ಪ್ರಾಚೀನ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದ ಭಾಗವೇ ಆಗಿರುವುದು ಚಾರಿತ್ರಿಕ ಸತ್ಯ.

ಮೈಲಾರ, ಮಲ್ಲಯ್ಯ, ಖಂಡೋಬಾ ಎಂಬೆಲ್ಲ ಹೆಸರುಗಳಿಂದ ಗುರುತಿಸಲ್ಪಡುವ ಖಂಡೋಬಾ ದೇವರು ಮೂಲತಃ ಕರ್ನಾಟಕದ ಗ್ರಾಮದೇವತೆ. ಈ ಜಾನಪದ ದೇವರ ಪ್ರಭಾವ ವಲಯವು ಬಹಳ ವಿಸ್ತಾರವಾಗಿದೆ. ಕರ್ನಾಟಕದ ರಾಜಕೀಯ ವಲಯ, ಎಲ್ಲೆಗಳನ್ನು ಮೀರಿ ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಗೋವಾ, ತೆಲಂಗಾಣ ಹಾಗೂ ಆಂಧ್ರಪ್ರದೇಶಗಳಲ್ಲಿಯೂ ಈತ ಜನಪ್ರಿಯ ದೇವತೆ. ಕರ್ನಾಟಕ ಮೂಲದ ಈ ಮೈಲಾರ ಅಥವಾ ಖಂಡೋಬಾ ಕುಲದೇವರೆಂದು ವ್ಯಾಪಕವಾಗಿ ಅನ್ಯ ರಾಜ್ಯಗಳಲ್ಲಿ ಪೂಜೆಗೊಳ್ಳುವ ಪರಿ ಬೆರಗು ಹುಟ್ಟಿಸುವ ಸಂಗತಿ. ಮಹಾರಾಷ್ಟ್ರದ ಅನೇಕ ಕುಟುಂಬಗಳ, ರಾಜಮನೆತನಗಳ ಕುಲದೇವರು ಮೈಲಾರಲಿಂಗ!

ಮೈಲಾರ ಅಥವಾ ಖಂಡೋಬನ ಪ್ರಭಾವ ಕಾವೇರಿಯಿಂದ ಗೋದಾವರಿ ಪ್ರಾಂತವನ್ನು ಮೀರಿ ವ್ಯಾಪಿಸಿರುವುದು ಅಚ್ಚರಿಯ ಅಂಶ. ಕರ್ನಾಟಕದಲ್ಲಿ ಬೀದರ್‌ನ ಪೆಂಬೇರ, ಮೈಲಾರ, ಯಾದಗಿರಿ, ದೇವರ ಹಿಪ್ಪರಗಿ, ಗುಡೂರು, ಆನೆಗೊಂದಿ, ರಾಣೆಬೆನ್ನೂರು, ಹಿರೇಮೈಲಾರ, ದೇವರಗುಡ್ಡ,, ಬೀಳಗಿ ಹೀಗೆ ವಿವಿಧ ಕಡೆ ಮುನ್ನೂರೈವತ್ತಕ್ಕೂ ಹೆಚ್ಚು ದೊಡ್ಡ - ಸಣ್ಣ ಮೈಲಾರ ದೇವಾಲಯಗಳಿವೆ. ಕರ್ನಾಟಕದಿಂದ ಒಂದು ಕಾಲದಲ್ಲಿ ಮಹಾರಾಷ್ಟ್ರಕ್ಕೆ ವಲಸೆ ಬಂದ ಈ ದೇವತೆಗೆ ಇವತ್ತು ಮಹಾರಾಷ್ಟ್ರದಲ್ಲಿ ಸುಮಾರು ನಾಲ್ಕುನೂರಕ್ಕೂ ಹೆಚ್ಚು ಆರಾಧನ ಕೇಂದ್ರಗಳಿರುವುದು ವಿಶೇಷ!ಮಹಾರಾಷ್ಟ್ರದ ಜೆಜೂರಿ, ಪಾಲಿ, ನಳದುರ್ಗ, ಮಾಲೆಗಾಂಮ್, ನೇವಾಸೆ, ಸತಾರಾ, ಧಾಮಣಟೇಕ ಮೊದಲಾದ ಕಡೆ, ಕೊಂಕಣ ಹಾಗೂ ವಿದರ್ಭ ಪ್ರಾಂತವೂ ಸೇರಿದಂತೆ ಖಂಡೋಬಾನ ಉಪಾಸನೆ ದೊಡ್ಡ ಮಟ್ಟದಲ್ಲಿ ನಡೆಯುತ್ತಾ ಬಂದಿರುವುದು ಗಮನಾರ್ಹ ಸಂಗತಿ.

ಆದಿಮ ಸಂಸ್ಕೃತಿಯ ಪ್ರತೀಕ

ಕಲ್ಯಾಣದ ಚಾಲುಕ್ಯರು, ರಾಷ್ಟ್ರಕೂಟರು, ಸೇವುಣರು, ರಟ್ಟರು, ಮರಾಠಾ ದೊರೆಗಳು, ಅವರ ಸಾಮಂತರು, ಪೇಶ್ವೆಗಳು, ಹೋಳ್ಕರ್ ಮನೆತನ ಮೊದಲಾದವರು ಮೈಲಾರಲಿಂಗನಿಗೆ ದತ್ತಿ ದಾನಗಳನ್ನು ಬಿಟ್ಟ ಅಂಶ ಇತಿಹಾಸದಲ್ಲಿ ದಾಖಲಾಗಿದೆ. ಕನ್ನಡ, ಮರಾಠಿ ಶಿಷ್ಟ ಹಾಗೂ ಜಾನಪದ ಸಾಹಿತ್ಯದಲ್ಲಿಯೂ ಮೈಲಾರನ ಕುರಿತು ಸಮೃದ್ಧವಾದ ಮಾಹಿತಿ ಲಭ್ಯವಿದೆ. ಮೈಲಾರ ಪೌರಾಣಿಕ ಹಿನ್ನೆಲೆಯಿರುವ ದೇವರಲ್ಲ. ಇವನು ಜನಮಾನಸದ ದೈವ. ಆತ ಕುಲ ಸಂಕೇತದ ಆದಿಮ ಸಂಸ್ಕೃತಿಯ ಪ್ರತೀಕ. ಮಾಳಚಿ ಅವನ ಪತ್ನಿ. ಖಂಡೋಬಾ ಭಂಡಾರಪ್ರಿಯ. ಮೈಲಾರ ಏಳು ಕೋಟಿ ಸೈನ್ಯವನ್ನು ಹೊಂದಿದ್ದನಂತೆ. ತಿರುಪತಿ ತಿಮ್ಮಪ್ಪನ ಸಾಲ ಸಹ ಏಳು ಕೋಟಿ. ಅದನ್ನು ಆತ ಮೈಲಾರನಿಗೆ ಕೊಟ್ಟಿದ್ದನಂತೆ. ಎಂತಲೇ ಈ ದೇವರಿಗೆ ಏಳು ಕೋಟಿ ಎಂಬ ಹೆಸರು ಬಂತು.

ಈ ಏಳು ಸಂಖ್ಯೆ ಮತ್ತೆ ಮತ್ತೆ ಮಲ್ಲಾರಿ ಮಹಾತ್ಮೆಯಲ್ಲಿ ಸಹ ಬಂದು ಹೋಗಿದೆ. ಕನ್ನಡ ಭಕ್ತರಂತೆ ಮರಾಠಿ ಭಕ್ತರಿಗೂ 'ಏಳ್ ಕೋಟ್ ಏಳ್ ಕೋಟ್ ಉಘೇ ಮಲ್ಲಾರ್' ಎಂಬ ಸಾಲು ಬಲು ಇಷ್ಟ. ಈ ಕಾರಣಿಕ ಮೈಲಾರನ ಭಕ್ತರನ್ನು ಗೊರವರು, ಗುರವ್, ವಾಘೇ ಎಂದೆಲ್ಲ ಮಹಾರಾಷ್ಟ್ರದಲ್ಲಿ ಕರೆಯಲಾಗುತ್ತದೆ. ಧನಗರ್, ಕುರುಬ, ಗೊಲ್ಲ, ಕೋಲಿ,ಗೌಳಿ, ಗೊರವ, ಲಿಂಗವಂತ ಮೊದಲಾದ ದೊಡ್ಡ ದೊಡ್ಡ ಜನ ಸಮುದಾಯಗಳ ಆರಾಧ್ಯ ದೈವ ಖಂಡೋಬಾ. ಜುಂಜಪ್ಪ, ವೀರಭದ್ರ, ಎಲ್ಲಮ್ಮಸಂಪ್ರದಾಯಗಳ ಜೊತೆಗೂ ಈ ದೇವರ ನಂಟಿದೆ. ಹೀಗೆ ಬಹು ಸಂಸ್ಕೃತಿಯ ಹಿನ್ನೆಲೆಯಿರುವ ಕರ್ನಾಟಕದ ಮೈಲಾರ ಮಹಾರಾಷ್ಟ್ರದಲ್ಲಿ ಖಂಡೋಬಾನಾದ ಕಥೆ ಬಹುರೋಚಕ.

ಖಂಡೋಬಾ ದೇವಾಲಯ, ಜೇಜುರಿ, ಮಹಾರಾಷ್ಟ್ರ

ಖಂಡೋಬಾನ ಮೂಲಚೂಲಗಳ ಕುರಿತು ಆಸಕ್ತಿ ತಳೆದು ಮೊದಲು ಅಧ್ಯಯನ, ಸಂಶೋಧನೆಗೆ ತೊಡಗಿದ ಹಿರಿಮೆ ಮರಾಠಿ ವಿದ್ವಾಂಸರಿಗೆ ಸಲ್ಲುತ್ತದೆ. ಮಹಾರಾಷ್ಟ್ರದಲ್ಲಿ 'ಖಂಡೋಬಾ', ಕರ್ನಾಟಕದಲ್ಲಿ 'ಮೈಲಾರ' ಹೆಸರಿನಿಂದ ಕರೆಯಿಸಿಕೊಳ್ಳುವ ಈ ದೇವರು ಎರಡೂ ರಾಜ್ಯಗಳ ಸಂಸ್ಕೃತಿ ಸಾಮರಸ್ಯದ ಪ್ರತೀಕನಾಗಿದ್ದಾನೆ. 'ಮಲ್ಲಾರಿ ಮಾರ್ತಾಂಡ ಭೈರವ' ಎಂಬುದು ಸಂಸ್ಕೃತ ಹೆಸರು. ಕುರುಬ-ರಾಮೋಶಿ ಜನರಿಂದ ಬ್ರಾಹ್ಮಣರವರೆಗೆ ಎಲ್ಲ ಕುಲಜಾತಿಗಳ ಜನರು ಆರಾಧಿಸುವುದು ಈ ದೇವರ ಜನಪ್ರಿಯತೆಗೆ ನಿದರ್ಶನವೆನಿಸಿದೆ. ವಿಠ್ಠಲ ಮಹಾರಾಷ್ಟ್ರದ ಉಪಾಸ್ಯ ದೇವತೆಯಾದರೆ, ಖಂಡೋಬಾ ಕುಲದೇವತೆ. ಖಂಡೋಬಾ ಅಥವಾ ಮೈಲಾರನು ಶಿವನ ಮಾರ್ತಾಂಡ ಭೈರವನ ಅವತಾರ ಎಂಬ ನಂಬಿಕೆ ಮಹಾರಾಷ್ಟ್ರದಲ್ಲಿ ಇವತ್ತಿಗೂ ಚಾಲ್ತಿಯಲ್ಲಿದೆ ಎಂಬುದನ್ನು ಮಹಾರಾಷ್ಟ್ರದ ಖ್ಯಾತ ಸಂಶೋಧಕ ರಾ. ಚಿಂ. ಢೇರೆ ಅವರು ತಮ್ಮ 'ದಕ್ಷಿಣದ ದೇಸಿ ದೇವರು ಖಂಡೋಬಾ' ಕೃತಿಯಲ್ಲಿ ಆಧಾರ ಸಮೇತ ತೋರಿಸಿಕೊಟ್ಟಿದ್ದಾರೆ. ಈ ಉಭಯ ರಾಜ್ಯಗಳ ಸಂಘರ್ಷವನ್ನು ಸ್ನೇಹವನ್ನಾಗಿಸಿದ ದೇವರು ನಮ್ಮ ಮೈಲಾರ!

ಏಳು ಕೋಟಿ ಕಥೆ

ಮೈಲಾರ ಲಿಂಗದ ಸಂಪ್ರದಾಯ ದಲ್ಲಿ ಅನೇಕ ಕಥೆಗಳು, ಐತಿಹ್ಯಗಳು, ನಂಬಿಕೆ, ಆಚರಣೆಗಳು ಚಾಲ್ತಿಯಲ್ಲಿವೆ. ಹೆಚ್ಚಿನ ಕಡೆಗಳಲ್ಲಿ ಏಳು ಕೋಟಿ ಕಥೆ ಒಂದೇ ಮಾದರಿಯಲ್ಲಿ ಕಾಣಸಿಗುತ್ತದೆ. ಅದು ಮೈಲಾರ ದೇವರ ಮದುವೆಗೆ ಸಂಬಂಧ ಪಟ್ಟದ್ದು. ಮೈಲಾರನ ಹೆಂಡತಿ ಗಂಗವ್ವ ಅಥವಾ ಗಂಗಿ ಮಾಳವ್ವ, ಮಾಳಸಾ ಇವಳು ತಿರುಪತಿ ತಿಮ್ಮಪ್ಪನ ಮಗಳು. ನಮ್ಮ ಮಾಳವ್ವ ಮಹಾರಾಷ್ಟ್ರದಲ್ಲಿ ಮಾಳಸಾದೇವಿ! 'ಮೈಲಾರ ಲಿಂಗ ಖಂಡೋಬಾ, ಒಂದು ಸಾಂಸ್ಕೃತಿಕ ಅಧ್ಯಯನ' ಎಂಬ ಶೋಧ ಕೃತಿ ರಚನೆ ಮಾಡಿದ ಡಾ. ನೇಗಿನಹಾಳ ಅವರು ಸಹ ಈ ಕಥೆ ಎಲ್ಲೆಡೆ ಸಣ್ಣ ಪುಟ್ಟ ವ್ಯತ್ಯಾಸದೊಂದಿಗೆ ಬಳಕೆಯಲ್ಲಿ ಇರುವುದನ್ನು ತೋರಿಸಿ ಕೊಟ್ಟಿದ್ದಾರೆ. ಆ ಕಥೆ ಹೀಗಿದೆ.

ಗಂಗಿ ಮಾಳಮ್ಮನ ಲಗ್ನ

ಮೈಲಾರಲಿಂಗಪ್ಪನಿಗೆ ಲಗ್ನವಾಗಬೇಕೆಂಬ ಬಯಕೆ ಉಂಟಾಯಿತು. ತನ್ನ ಊರಾದ (ಮೈಲಾರದಿಂದ) ಹೊರಟು ಬಳ್ಳಾರಿ ದೇಶಕ್ಕೆ ಬಂದ. ಅಲ್ಲಿನ ತನ್ನ ಭಕ್ತರನ್ನು 'ಇಲ್ಲಿ ಯಾರಲ್ಲಾದರೂ ಹೆಣ್ಣುಂಟೆ ?' ಎಂದು ಕೇಳಿದ. ಅವರು 'ತಿರುಪತಿ ತಿಮ್ಮಪ್ಪನಲ್ಲಿ ಹೆಣ್ಣು ಇವೆ. ಹೋಗಿ ಕೇಳು' ಎಂದು ಹೇಳಿದರು. ಅವರ ಮಾತಿನಂತೆ ಈ ಗೊರವಯ್ಯ ತಿರುಪತಿಗೆ ಹೋದ. ತಿರುಪತಿಯಲ್ಲಿ ತಿಮ್ಮಪ್ಪ ತನ್ನ ಏಳು ಅಂತಸ್ತಿನ ಅರಮನೆಯ ಮೇಲ್ಮಾಳಿಗೆಯಲ್ಲಿ ಇದ್ದ. ಇವನು ಬಾಗಿಲಲ್ಲಿ ನಿಂತು ಗಂಟೆ ಬಾರಿಸಿದ, ಡಮರು ಹೊಡೆದ. ಗೊರವಯ್ಯ ಬಾಗಿಲಿಗೆ ಬಂದು ನಿಂತುದು ತಿಮ್ಮಪ್ಪನ ಹೆಣ್ಣು ಮಕ್ಕಳಿಗೆ ತಿಳಿಯಿತು. ಯಾವನೋ ಗೊರವ ಭಿಕ್ಷೆಗೆ ಬಂದಿದ್ದಾನೆ. ಅವನಿಗೆ ಅದನ್ನು ನೀಡಿ ಕಳಿಸಿರಿ ಎಂದು ಅವರು ತಮ್ಮ ತಮ್ಮಲ್ಲಿ ಹೇಳಿಕೊಂಡರು. ಹೊರಗೆ ಬಂದು ನೀಡಲು ಯಾರೂ ತಯಾರಾಗಲಿಲ್ಲ. ಕೊನೆಗೆ 'ಹಿರಿಯ ಮಗಳು ಗಂಗಮ್ಮ' ಗೊರವನಿಗೆ ಭಿಕ್ಷೆ ನೀಡಲು ಮುಂದಾದಳು. ಕೈಯಲ್ಲಿ ಮೊರ, ಅದರ ತುಂಬ ಮುತ್ತು ರತ್ನ ತುಂಬಿ ತಕ್ಕೊಂಡು ಹೊರಗೆ ಬಂದಳು.

ಆಗ ಅವಳನ್ನು ಕಂಡು ಬೆರಗಾದ ಮೈಲಾರ 'ಏನು ಹೆಣ್ಣು,ಎಂಥಾ ಚೆಲುವಿದೆ ? ಇವಳನ್ನು,ಬಿಡಬಾರದು' ಎಂದು ಮನದಲ್ಲಿ ನಿರ್ಧರಿಸಿದ. ಅವಳು ಹೊರಕ್ಕೆ ಬಂದು ಇವನ ಜೋಳಿಗೆಗೆ ಭಿಕ್ಷೆ ನೀಡುತ್ತಿದ್ದಂತೆ ಅವಳ ಕೈ ಹಿಡಿದು ಬಿಟ್ಟ. ಗೊರವಯ್ಯನ ಈ ಆಟ ನೋಡಿ ಗಂಗಮ್ಮ ಚೀರಿಕೊಂಡಳು. ಮಗಳು ಚೀರಿದ್ದು ತಿಮ್ಮಪ್ಪನಿಗೆ ಕೇಳಿತು. ಏಳನೆಯ ಅಂತಸ್ತಿನಿಂದ ಆತ ಬಡಿಗೆ ಊರುತ್ತ ಕೆಳಗಿಳಿದು ಬಂದ. ನೋಡುತ್ತಾನೆ. ಮೈಲಾರದ ಗೊರವಯ್ಯ!

ಇದೇನೆಂದು ವಿಚಾರಿಸಿದಾಗ 'ಇವಳನ್ನು ಕೊಟ್ಟು ನನಗೆ ಲಗ್ನ ಮಾಡು' ಎಂದ ಆತ. ತಿಮ್ಮಪ್ಪ ವಿಚಾರದಲ್ಲಿ ಬಿದ್ದ. ಇವನೋ ಹರಕು ಕೋರಿಯ ಮುರುಕು ಬೆತ್ತದ ಒಡಕು ದೋಣಿಯ ಗೊರವ, ಇಂಥವನಿಗೆ ತಾನು ಮಗಳನ್ನು ಕೊಡುವುದೇ? ಆದರೆ ಹಾಗೆ ಬಾಯಿಬಿಟ್ಟು ಹೇಳಲಾರ. ಇಲ್ಲೆಂದು ಹೇಳಿದರೆ ಗೊರವಯ್ಯ ಸಾಪಳಿಸಿ ಹೋಗುತ್ತಾನೆ. ಏನು ಮಾಡುವುದು? ತಿಮ್ಮಪ್ಪನಿಗೆ ಒಂದು ವಿಚಾರ ಹೊಳೆಯಿತು. ಇವನು ಕೊಡಲಾರದಷ್ಟು 'ತೆರವು' ಕೇಳಿದರಾಯಿತು ತಾನೆ ತಿರುಗಿ ಹೋಗುತ್ತಾನೆ ಎಂದು ಅಂದು ಕೊಂಡು 'ಏಳುಕೋಟಿ ಹೊನ್ನು ತೆರವು ಕೊಡುವುದಾದರೆ ನಿನಗೆ ನನ್ನ ಮಗಳನ್ನು ಕೊಡುತ್ತೇನೆ' ಎಂದು ಹೇಳಿದ. ಅದಕ್ಕೆ ಗೊರವಯ್ಯ ಒಪ್ಪಿ,'ನನ್ನೂರು ಇಲ್ಲಿಂದ ಮುನ್ನೂರು ಹರದಾರಿ, ಅಲ್ಲಿಗೆ ಹೋಗಿ ಬರುವುದರಲ್ಲಿ ಆಷಾಢಮಾಸ ಬರುತ್ತದೆ, ಆಷಾಢದಲ್ಲಿ ನನ್ನ ಲಗ್ನವಿಲ್ಲ. ಲಗ್ನವಾಗಿ ನನ್ನೂರಿಗೆ ಹೋದ ಮೇಲೆ ನಿನ್ನ ತೆರವಿನ ಹಣ ಮುಟ್ಟಿಸುತ್ತೇನೆ ' ಎಂದು ಹೇಳಿದ. ತಿಮ್ಮಪ್ಪ ನಿರ್ವಾಹವಿಲ್ಲದೆ ಒಪ್ಪಿದ.

ಸಾಲ ನೀಡಿದ ತಿಮ್ಮಪ್ಪ

ಇನ್ನು ಲಗ್ನ ಮಾಡಬೇಕಾದರೆ ಈತನಿಗೆ ಯಾರೂ ಇಲ್ಲ. ಲಗ್ನದ ಕಾರ್ಯ ನಿಭಾಯಿಸುವುದು ಹೇಗೆ? ಎಂದು ತಿಮ್ಮಪ್ಪ ಸಮಸ್ಯೆ ಎತ್ತಿದ. ಗೊರವಯ್ಯ 'ಈಗ ನೀನೆ ಕೈಯಿಂದ ಹಣ ಹಾಕಿ ಲಗ್ನಮಾಡು, ನಾನು ನನ್ನೂರಿಗೆ ಹೋದ ಮೇಲೆ ಆದರ ಅಸಲು ಬಡ್ಡಿ ಎಲ್ಲ ತೀರಿಸುತ್ತೇನೆ' ಎಂದ. ಬಡ್ಡಿಯ ಆಸೆಗಾಗಿ ತಿಮ್ಮಪ್ಪ ಒಪ್ಪಿ ಲಗ್ನದ ಸಿದ್ದತೆಗೆ ತೊಡಗಿದ.

(ಎರಡನೇ ಪುಟಕ್ಕೆ)

ಮೊಗಸಾಲೆ 80

ಕನ್ನಡಕ್ಕೆ ಹಲವು ಪ್ರಮುಖ ಕಾದಂಬರಿಗಳನ್ನು ನೀಡಿರುವ ಡಾ. ನಾ. ಮೊಗಸಾಲೆಯವರು ಈಗ 80 ವರ್ಷ ಪೂರೈಸಿ 81ಕ್ಕೆ ಕಾಲಿಟ್ಟಿದ್ದಾರೆ. ಈಗಲೂ ವರ್ಷಕ್ಕೆ ಒಂದು ಅಥವಾ ಎರಡರಂತೆ ಕಾದಂಬರಿಗಳನ್ನು ರಚಿಸುತ್ತಿರುವ ಮೊಗಸಾಲೆ ಯವರು, ಕಾಂತಾವರ ಎಂಬ ಪುಟ್ಟ ಹಳ್ಳಿಯಲ್ಲೇ ನೆಲೆ ನಿಂತು, ಸಾಹಿತ್ಯ ಸೇವೆಯಲ್ಲಿ ತೊಡಗಿಕೊಂಡಿರುವುದು ಅಭಿನಂದನಾರ್ಹ. ಅಪಾರ ಆಸಕ್ತಿಯಿಂದ, ಸಾಹಿತ್ಯ ಸೇವೆ ಮಾಡುವ ತುಡಿತದಿಂದ ಅವರು ಸ್ಥಾಪಿಸಿ, ಬೆಳೆಸಿದ 'ಕಾಂತಾವರ ಕನ್ನಡ ಸಂಘ'ವು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ದಾಖಲೆಯನ್ನೇ ಬರೆದಿದೆ. ಕನ್ನಡ ಸಂಘವು 'ನಾಡಿಗೆ ನಮಸ್ಕಾರ' ಮಾಲಿಕೆಯಲ್ಲಿ ಮುನ್ನೂರಕ್ಕೂ ಹೆಚ್ಚು ಪ್ರತಿಭಾವಂತರ ಕುರಿತು ಹೊರತಂದ ಪುಸ್ತಕಗಳು ಕರ್ನಾಟಕದಲ್ಲೇ ಒಂದು ದಾಖಲೆ ಮತ್ತು ಇದರ ಹಿಂದಿನ ಶಕ್ತಿ ಡಾ. ಮೊಗಸಾಲೆ ಅವರು.

» ಡಾ. ರವಿಶಂಕರ ಜಿ. ಕೆ.



ಕಳೆದ ಐದೂವರೆ ದಶಕಗಳಿಂದ ಸಾಹಿತ್ಯ ಸಂಘಟನೆಯ ಜೊತೆಗೆ ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಕೃತಿಗಳನ್ನು ಕೊಡುತ್ತಾ ಬಂದಿರುವ ಹಿರಿಯ ಸಾಹಿತಿ ಡಾ. ನಾ. ಮೊಗಸಾಲೆಯವರು ಆಗಸ್ಟ್ 27ಕ್ಕೆ ತಮ್ಮ 81ನೇ ವಯಸ್ಸಿಗೆ ಕಾಲಿರಿಸಿದ್ದಾರೆ. 1944ರಲ್ಲಿ ಗಡಿನಾಡು ಕಾಸರಗೋಡಿನ ಮಂಜೇಶ್ವರ ಸಮೀಪದ ಕೋಳ್ಯೂರಿನಲ್ಲಿ ಜನಿಸಿದ ನಾ. ಮೊಗಸಾಲೆಯವರ ಮೂಲ ಹೆಸರು ನಾರಾಯಣ ಭಟ್ಟ. ಅವರು ತಮ್ಮ ಐದನೇ ವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ಕೋಳ್ಯೂರು ಮತ್ತು ಕನ್ಯಾನದಲ್ಲಿ ಎಸ್ಸೆಸ್ಸೆಲ್ಸಿ ತನಕದ ವಿದ್ಯಾಭ್ಯಾಸವನ್ನು ಪಡೆದುಕೊಂಡು ಆ ಮೇಲೆ ಉಡುಪಿಯ ಕೃಷ್ಣ ಮಠದ ಆಶ್ರಯದಲ್ಲಿದ್ದುಕೊಂಡು ಆಯುರ್ವೇದದಲ್ಲಿ ಡಿಪ್ಲೊಮಾ ಪದವಿ ಪಡೆದರು. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಾಂತಾವರದಲ್ಲಿ ಹೊಸದಾಗಿ ಆರಂಭಗೊಂಡಿದ್ದ ಗ್ರಾಮೀಣ ಚಿಕಿತ್ಸಾಲಯದ ವೈದ್ಯಾಧಿಕಾರಿಯಾಗಿ 01.11.1965ರಂದು ಕಾಲಿಟ್ಟ ಮೊಗಸಾಲೆಯವರು ಕಾಂತಾವರದ ಪ್ರೇಮಲತಾ ಅವರನ್ನು ವಿವಾಹವಾಗಿ ಅಲ್ಲಿನವರೇ ಆಗಿ ಹೋದರು. ಸುತ್ತಮುತ್ತಲಿನ ಹಳ್ಳಿಗಳಿಗೆ ಮಾತ್ರವೇ ಪರಿಚಿತವಾಗಿದ್ದ ಕಾಂತಾವರ ಎಂಬ ಪುಟ್ಟ ಊರು ಅನಂತರದಲ್ಲಿ ತನ್ನ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಇಡೀ ನಾಡಿಗೆ ಚಿರಪರಿಚಿತವಾಯಿತು. ಇದಕ್ಕೆ ಮುಖ್ಯ ಕಾರಣ ಮೊಗಸಾಲೆಯವರ ಸಾಹಿತ್ಯ ಪ್ರೀತಿ.

ಕಾಂತಾವರದಲ್ಲಿ ನೆಲೆನಿಂತ ಮರುವರ್ಷವೇ ಮೊಗಸಾಲೆಯವರು ರೈತಾಪಿ ಜನರನ್ನು ಸಾಮಾಜಿಕ ಸಂಘಟನೆಯಲ್ಲಿ ತೊಡಗಿಸುವ ಉದ್ದೇಶದಿಂದ ಕಾಂತಾವರ ರೈತ ಯುವಕ ವೃಂದವನ್ನು ಹುಟ್ಟುಹಾಕಿದರು. ಹತ್ತು ವರುಷಗಳ ಕಾಲ ಈ ಸಂಘಟನೆಯಲ್ಲಿ ವಿವಿಧ ಪದಾಧಿಕಾರಿಯಾಗಿ ದುಡಿದ ನಂತರ ಅದರಿಂದ ಹೊರಬಂದು ಕಾಂತಾವರ ಕನ್ನಡ ಸಂಘವನ್ನು 1976ರಲ್ಲಿ ಸ್ಥಾಪಿಸಿದರು. ಕಾಂತಾವರ ಕನ್ನಡ ಸಂಘವು ಕನ್ನಡ ಸಾಹಿತ್ಯಕ್ಕೆ, ಕನ್ನಡ ನಾಡಿಗೆ ಇದುವರೆಗೆ ನೀಡಿದ ಕೊಡುಗೆ ಅಮೂಲ್ಯ. ಪುಸ್ತಕ ಪ್ರಕಟಣೆ, ಸಾಹಿತ್ಯ ಕಾರ್ಯಕ್ರಮ ಮೊದಲಾದ ಚಟುವಟಿಕೆಗಳಲ್ಲಿ, ಈ ಪುಟ್ಟ ಗ್ರಾಮವು ಹೊಸ ಮೈಲುಗಲ್ಲುಗಳನ್ನೇ ದಾಖಲಿಸಿದೆ.

ಕೃತಿ ಪ್ರಕಟಣೆ ಪ್ರಶಸ್ತಿ ಪ್ರದಾನ

ಕನ್ನಡ ಸಂಘವು ಕರಾವಳಿಯ ಸಾಹಿತ್ಯದ ಕುರಿತಾದ ಅಪೂರ್ವವಾದ ಆ್ಯಂಥಾಲಜಿಗಳ ಪ್ರಕಟಣೆ, ಕೆ.ಬಿ. ಜಿನರಾಜ ಹೆಗ್ಡೆ ಸ್ಮಾರಕ ಕನ್ನಡ ಭವನದ ನಿರ್ಮಾಣ, ಹತ್ತು ಹಲವು ವಿಚಾರಸಂಕಿರಣಗಳು, ತಿಂಗಳ ಉಪನ್ಯಾಸ ಕಾರ್ಯಕ್ರಮಗಳು, ಮುದ್ದಣ ಕಾವ್ಯ ಪುರಸ್ಕಾರ ಸೇರಿದಂತೆ ಹನ್ನೊಂದು ದತ್ತಿನಿಧಿ ಪ್ರಶಸ್ತಿಗಳು, ನಾಡಿಗೆ ನಮಸ್ಕಾರದಂತಹ ಗ್ರಂಥಮಾಲಿಕೆ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕವಾಗಿ ಅಹರ್ನಿಶಿಯಾಗಿ ನಾಡುನುಡಿ ಸೇವೆಯನ್ನು ಮಾಡುತ್ತಾ ಬಂದು ಈಗ ಸುಮರ್ಣಮಹೋತ್ಸವದ ಸಮೀಪದಲ್ಲಿದೆ. ಇದರ ಜೊತೆಗೆ ವರ್ಧಮಾನ ಪ್ರಶಸ್ತಿಪೀಠ (1978), ಅಲ್ಲಮಪ್ರಭು ಪೀಠ (2010) ಕೂಡ ನಿರಂತರವಾಗಿ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ ನಾಡಿನ ಪ್ರತಿಷ್ಠಿತ ಸಂಸ್ಥೆಗಳಾಗಿ ಮೆರೆಯುತ್ತಿವೆ. ಡಾ. ಮೊಗಸಾಲೆಯವರಿಗೆ ಕನ್ನಡದ ಮೇಲಿರುವ ಅಚಲವಾದ ಶ್ರದ್ಧೆ, ನಿಷ್ಠೆ, ಬದ್ಧತೆಗಳ ಜೊತೆಗೆ ಅವರ ಛಲ, ಪರಿಶ್ರಮಗಳಿಂದಾಗಿ ಕನ್ನಡ ಸಂಘವನ್ನು ಸದೃಢವಾಗಿ ಕಟ್ಟಿ ಬೆಳೆಸುವುದಕ್ಕೆ ಸಾಧ್ಯವಾಗಿದೆ. ಕಾಂತಾವರದಂತಹ ಪುಟ್ಟ ಹಳ್ಳಿಯಲ್ಲಿ ಅವರು ಕಂಡ ಕನಸಿಗೆ ಊರವರು, ದಾನಿಗಳು, ಹಿರಿಯರು, ಹಲವು ಸಂಘ ಸಂಸ್ಥೆಗಳು, ಸರಕಾರವೂ ಕೂಡ ಸಹಕರಿಸಿದ್ದರಿಂದ ಇಂದು ಕಾಂತಾವರವು ಸಾಹಿತ್ಯದ ಶಕ್ತಿಕೇಂದ್ರವಾಗಿ ರೂಪುಗೊಂಡು ನಾಡಿನ ಹೆಮ್ಮೆಯಾಗಿ ಹೊರಹೊಮ್ಮಿದೆ.

ಮೊಗಸಾಲೆಯವರ ಕಾವ್ಯ

ಮೊಗಸಾಲೆಯವರ ಮೊದಲ ಕವನ ಸಂಕಲನ ವರ್ತಮಾನದ ಮುಖಗಳು. ಅನಂತರ ಪಲ್ಲವಿ, ಮೊಗಸಾಲೆಯ ನೆನಪುಗಳು, ಪ್ರಭವ, ಸ್ವಂತಕ್ಕೆ ಸ್ವಂತಾವತಾರ, ನೆಲದ ನೆರಳು, ಇದಲ್ಲ ಇದಲ್ಲ, ಇಹಪರದ ಕೊಳ, ಕಾಮನೆಯ ಬೆಡಗು, ದೇವರು ಮತ್ತೆ ಮತ್ತೆ, ಭವದ ಬೆರಗು, ಬೇಲಿಯ ಗೂಟದಲ್ಲೊಂದು ಚಿಟ್ಟೆ ಸಂಕಲನಗಳು ಪ್ರಕಟವಾಗಿವೆ. ಮೊಗಸಾಲೆಯವರೇ ಹೇಳಿಕೊಂಡಂತೆ ಅವರಿಗೆ ಕಾವ್ಯ ಎನ್ನುವುದು ಅವರ ಮತ್ತು ಅವರನ್ನು ಒಳಗೊಂಡ ಮನುಷ್ಯ ಪ್ರಪಂಚದ ಸಂಬಂಧಗಳನ್ನು ಬೆಸೆಯುವ ಮತ್ತು ಅದರ ಅರ್ಥಗಳನ್ನು ಹುಡುಕುವ ಅನ್ವೇಷಣೆಯ ಪ್ರತಿರೂಪ. ಹಾಗಾಗಿ ದೈನಂದಿನ ಬದುಕಿನ ವಿದ್ಯಮಾನಗಳು, ಅಂತರಂಗದಲ್ಲಿ ಹೊಳೆಯುವ ಸತ್ಯ, ಸಮಾಜದಲ್ಲಿ ಕಾಣುವ ವ್ಯಕ್ತಿಗಳು, ಅವರ ವರ್ತನೆಗಳು, ಅವರ ವ್ಯಕ್ತಿತ್ವದಲ್ಲಿನ ಆದರ್ಶ-ಸಣ್ಣತನಗಳು, ದೇವರ ಅಸ್ತಿತ್ವದ ಕುರಿತಾದ ನಂಬಿಕೆಗಳು, ಆಧ್ಯಾತ್ಮ-ವೈಚಾರಿಕ ಚಿಂತನೆಗಳು, ಪ್ರಕೃತಿಯ ಸೂಕ್ಷ್ಮತೆಗಳು, ಬದುಕಿನ ಹತ್ತುಹಲವು ಸಾಂಸ್ಕೃತಿಕ ಸಂಗತಿಗಳು ಮೊಗಸಾಲೆಯವರ ಕಾವ್ಯಯಾನಕ್ಕೆ ಒದಗಿಬಂದಿವೆ. ಆರಂಭದಲ್ಲಿ ಸಮಾಜದ ಸುಧಾರಣೆಗೆ ತುಡಿಯುತ್ತಿದ್ದ ಅವರ ಕವಿತೆಗಳು ಅನಂತರದಲ್ಲಿ ಆಧ್ಯಾತ್ಮಿಕ ದೃಷ್ಟಿಯತ್ತ ಹೊರಳಿಕೊಂಡಿವೆ. ದೇವರ ಅಸ್ತಿತ್ವವನ್ನು ಹುಡುಕುತ್ತಲೇ ಸಾಗಿ ಈಗ ಪ್ರಕೃತಿಯಲ್ಲಿಯೇ ದೇವರನ್ನು ಕಾಣುವ ಹಂತಕ್ಕೆ ಬಂದು ನಿಂತಿವೆ.

ಕಥಾ ಸಾಹಿತ್ಯ

ಆಶಾಂಕುರ ಮೊಗಸಾಲೆಯವರ ಮೊದಲ ಕಥಾಸಂಕಲನ. ಹಸಿರು ಬಿಸಿಲು ಸುಂದರಿಯ ಎರಡನೇ ಅವತಾರ, ಸೀತಾಪುರದ ಕತೆಗಳು, ಸೀತಾಪುರದಲ್ಲಿ ಗಾಂಧೀಜಿ, ಸನ್ನಿಧಿಯಲ್ಲಿ ಸೀತಾಪುರ, ಆಗು ನೀ ಅನಿಕೇತನ ಅವರ ಪ್ರಕಟಿತ ಕಥಾಸಂಕಲನಗಳು. ಮೊಗಸಾಲೆಯವರ ಬಹುತೇಕ ಕಥೆಗಳು ನಡೆಯುವುದು ಕಾಂತಾವರದ ತದ್ರೂಪಿಯಂತಿರುವ ಸೀತಾಪುರ ಗ್ರಾಮದಲ್ಲಿಯೇ. ಅವರು ತಮ್ಮ ಕಥೆಗಳ ಮೂಲಕ ಸೀತಾಪುರ ಎಂಬ ಗ್ರಾಮಭಾರತದೊಳಗಿನ ಮಾನವೀಯ ಮುಖಗಳಿಗೆ, ಭೂತ-ವರ್ತಮಾನಗಳ ಸಾಂಸ್ಕೃತಿಕ ಮೌಲ್ಯಗಳಿಗೆ, ರಾಜಕೀಯ-ಆರ್ಥಿಕ-ಸಾಮಾಜಿಕ-ಧಾರ್ಮಿಕ ಪಲ್ಲಟಗಳಿಗೆ ಕನ್ನಡಿ ಹಿಡಿದಿದ್ದಾರೆ. ತಮ್ಮ ಸೀತಾಪುರದೊಳಗೆ ಗಾಂಧೀವಾದವನ್ನು ಆವಾಹಿಸಿದ್ದಾರೆ. ಅಲ್ಲಮನ ತತ್ವಸಿದ್ಧಾಂತಗಳಿಗೆ ಸೀತಾಪುರವನ್ನು ತೆರೆದಿಟ್ಟಿದ್ದಾರೆ. ಸೀತಾಪುರದೊಳಗೆ ಇದ್ದುಕೊಂಡೇ ಅನಿಕೇತನವಾಗುವ ಪ್ರಯತ್ನವನ್ನು ಮಾಡಿದ್ದಾರೆ.

ಕಾದಂಬರಿಗಳು

ಮಣ್ಣಿನಮಕ್ಕಳು, ಅನಂತ, ಕನಸಿನ ಬಳ್ಳಿ, ನನ್ನದಲ್ಲದ್ದು, ಪಲ್ಲಟ, ಹದ್ದು, ಪ್ರಕೃತಿ, ನೆಲಮುಗಿಲುಗಳ ಮಧ್ಯೆ, ದಿಗಂತ, ದೃಷ್ಟಿ, ಉಪ್ಪು, ತೊಟ್ಟಿ, ಪಂಥ, ಅರ್ಥ, ಉಲ್ಲಂಘನೆ, ಮುಖಾಂತರ, ಧಾತು, ಧರ್ಮಯುದ್ಧ, ಇದ್ದೂ ಇಲ್ಲದ್ದು, ನೀರು, ನೀರಿನೊಳಗಿನ ಮಂಜು, ಭಾರತ ಕಥಾ ಮೊಗಸಾಲೆಯವರ ಪ್ರಕಟಿತ ಕಾದಂಬರಿಗಳು.

ಬೃಹತ್ ಕಾದಂಬರಿಗಳಾದ 'ಉಲ್ಲಂಘನೆ' ಮತ್ತು 'ಮುಖಾಂತರ' ಮೊಗಸಾಲೆಯವರಿಗೆ ಖ್ಯಾತಿಯನ್ನು ತಂದುಕೊಟ್ಟವು. ಉಲ್ಲಂಘನೆಯಲ್ಲಿ ಕರಾವಳಿಯ ಬಂಟಸಮುದಾಯದ ಬದುಕಿನ ಸಾಂಸ್ಕೃತಿಕ ವಿವರಗಳು ದಾಖಲಾಗಿದ್ದರೆ, ಮುಖಾಂತರದಲ್ಲಿ ಕರಾವಳಿಯ ಹವ್ಯಕ ಸಮುದಾಯದ ಚಿತ್ರಣವಿದೆ. ತಲೆಮಾರುಗಳ ಸಾಂಸ್ಕೃತಿಕ ಬದುಕನ್ನು ಹಿಡಿದಿಟ್ಟುಕೊಂಡಿರುವ ಈ ಕಾದಂಬರಿಗಳಿಗೆ ಕರಾವಳಿಯ ಪ್ರಾತಿನಿಧಿಕ ಕಾದಂಬರಿಗಳಾಗುವ ಶಕ್ತಿಯಿದೆ. ಇತ್ತೀಚಿಗಿನ 'ಇದ್ದೂ ಇಲ್ಲದ್ದು' ಕಾದಂಬರಿಯು ಮಾಧ್ವ ಶಿವಳ್ಳಿ ಬ್ರಾಹ್ಮಣ ಸಮುದಾಯದ ಸಾಂಸ್ಕೃತಿಕ ಪಲ್ಲಟಗಳ ಮೇಲೆ ಬೆಳಕು ಬೀರಿದರೆ, 'ಭಾರತ ಕಥಾ' ಕಾದಂಬರಿಯು ಗ್ರಾಮಭಾರತದೊಳಗಿನ ರಾಜಕಾರಣದ ತಂತ್ರಗಾರಿಕೆಯನ್ನು ವಸ್ತುವಾಗಿಸಿಕೊಂಡಿದೆ. 'ನೀರೊಳಗಿನ ಮಂಜು' ಕಾದಂಬರಿ ಮನುಷ್ಯನ ಅಂತರಂಗವನ್ನು ಶೋಧಿಸಿದ್ದು, ನೀರು ಕಾದಂಬರಿಯು ನೀರು ಮತ್ತು ನೀರೆಯ ಮೇಲಿರುವ ಪುರುಷನ ವ್ಯಾಮೋಹವನ್ನು ಚಿತ್ರಿಸಿದೆ.

ಇತರ ಕೃತಿಗಳು

'ಬಯಲ ಬೆಟ್ಟ' ಮೊಗಸಾಲೆಯವರ ಆತ್ಮಕಥೆ. ಪುರೂರವ ಅವರು ಬರೆದ ಗೀತನಾಟಕ. ಇದಲ್ಲದೆ ಏಳು ವೈದ್ಯಕೀಯ ಕೃತಿಗಳು, ಒಂಬತ್ತು ಲೇಖನ ಸಂಗ್ರಹ ಕೃತಿಗಳು, ಹದಿಮೂರು ಸಂಪಾದನಾ ಕೃತಿಗಳನ್ನು ಪ್ರಕಟಿಸಿದ್ದಾರೆ.

ಸೃಜನಶೀಲ ಮನಸ್ಸು ಯಾವತ್ತೂ ಒಂದು ಸಿದ್ಧಾಂತ ಅಥವಾ ಚಳುವಳಿಯ ಚೌಕಟ್ಟಿಗೆ ಸೀಮಿತವಾಗಬಾರದು ಎಂಬುದು ಮೊಗಸಾಲೆಯವರ ನಿಲುವು. ಹಾಗಾಗಿ ಅವರು ಸಮಾಜವನ್ನು ಮುಕ್ತವಾದ ಕಣ್ಣುಗಳಿಂದ ನೋಡಿ ಚಿಂತಿಸುತ್ತಾ ಬಂದಿದ್ದಾರೆ. ಸಾಹಿತ್ಯ ಪಂಥಗಳ ನಡುವಿನ ಹೊಯ್ದಾಟಗಳಿಗೆ ಸಿಕ್ಕಿಕೊಳ್ಳದೆ ಎರಡೂ ಪಂಥಗಳ ಒಳಿತುಗಳನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ. ತಮ್ಮ ಕೃತಿಗಳ ಮೂಲಕ ಜಾತಿ-ಧರ್ಮಗಳ ಕಟ್ಟುಪಾಡುಗಳಿಂದ ಮುಕ್ತವಾಗುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾರೆ. ಕಥೆ, ಕಾದಂಬರಿ, ಕವಿತೆಗಳ ಮೂಲಕ ಗಾಂಧಿವಾದಕ್ಕೆ ಸ್ಪಂದಿಸುತ್ತಾ, ಶುದ್ಧ ಮಾನವೀಯ ನೆಲೆಯ ಸಮಾಜವನ್ನು ಕಟ್ಟುವ ಆಶಯವನ್ನು ಪ್ರತಿಪಾದಿಸಿದ್ದಾರೆ. ಲೋಕಾಂತವಾಗಿರುವ ಸಾಹಿತ್ಯ ಸಂಘಟನೆ ಮತ್ತು ಏಕಾಂತವಾಗಿರುವ ಸಾಹಿತ್ಯ ಸೃಷ್ಟಿಯ ಕೆಲಸಗಳೆರಡರಲ್ಲಿಯೂ ಸಮಾನವಾಗಿ ತೊಡಗಿಸಿಕೊಂಡು ಸಾಹಿತ್ಯ ಪರಿಚಾರಿಕೆಯಲ್ಲಿಯೇ ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡಿದ್ದಾರೆ.

ಪುಸ್ತಕ ವಿಮಾನ

» ಕುಂ. ವೀರಭದ್ರಪ್ಪ

ಒರಿಯಾ ಕಥೆಗಳು

ಡಾ. ದೀಪ್ತಿ ಪಟ್ನಾಯಕ್ ರಚಿಸಿದ ಒರಿಯಾ ಕಥೆಗಳು ಕನ್ನಡಕ್ಕೆ ಈಗ ಅನುವಾದವಾಗಿದ್ದು, ಈ ಕಥಾಸಂಕಲನದ ಮುನ್ನುಡಿಯ ಆಯ್ದಭಾಗಗಳು ಇಲ್ಲಿವೆ.

ಒರಿಯಾ ಭಾಷೆಯ ಕಥೆಗಳು ಇಲ್ಲಿವೆ, ಹೀಗೆ ಬನ್ನಿ. ಒರಿಯಾ ಭಾಷೆಯ ಸಾಹಿತ್ಯ ಭಾರತದ ಪ್ರಾದೇಶಿಕ ಭಾಷೆಗಳ ಸಾಹಿತ್ಯಕ್ಕಿಂತ ಯಾವುದರಲ್ಲೂ ಕಡಿಮೆ ಇಲ್ಲ. ಈ ಭಾಷೆಯ ಡಾ. ದೀಪ್ತಿ ಪಟ್ನಾಯಕ್ ಅವರ ರಚನೆಗಳು ಶ್ರೇಷ್ಠ ದರ್ಜೆಯವು. ಅದಕ್ಕೆ ಈ ಸಂಕಲನದಲ್ಲಿನ ಹನ್ನೆರಡು ಕಥೆಗಳು ಪುರಾವೆ ಒದಗಿಸುತ್ತವೆ. ಇವು ಅನುವಾದದ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಪ್ರವೇಶಿಸುತ್ತಿರುವುದು ಅಭಿಮಾನದ ಸಂಗತಿ.

ಒರಿಯಾ ಭಾಷೆಯ ಕಥೆಗಳು ಕನ್ನಡಕ್ಕೆ ಹೊಸತಲ್ಲ. ಅಲ್ಲಿನ ಕೆಲವು ಮುಖ್ಯ ಬರಹಗಳನ್ನು ಹಲವರು ಕನ್ನಡಕ್ಕೆ ಪ್ರೀತಿಯಿಂದ ಪರಿಚಯಿಸಿದ್ದಾರೆ. ಹಿಂದೆ ನಾನೂ, ಫಕೀರ್ ಮೋಹನ್ ಸೇನಾಪತಿಯವರ ಕಥೆಗಳ ಸೊಬಗಿಗೆ ಮಾರುಹೋಗಿ ಅವುಗಳಿಗೆ ನನ್ನ ಮಾತೃಭಾಷೆಯ ಉಡುಗೆಗಳನ್ನು ತೊಡಿಸಿದ್ದೆ. ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ಲಂಕೇಶ್ ಸಹ, ಸೇನಾಪತಿಯವರ ಕಥನಶೈಲಿಯನ್ನು ಮೆಚ್ಚಿಕೊಂಡಿದ್ದರು. ಅವರು ಮಾಸ್ತಿ ಥರದ ಕಥೆಗಾರರೆಂದೂ ಹೇಳಿದ್ದರು. ಹಿಂದಿ, ತೆಲುಗು ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಒರಿಯಾ ಕಥೆ ಕಾದಂಬರಿಗಳನ್ನು ಓದಿ ನನ್ನ ತಿಳಿವಳಿಕೆಯನ್ನು ತಿದ್ದಿಕೊಂಡಿದ್ದೆ. ಆದರೆ ಡಾ. ದೀಪ್ತಿ ಪಟ್ನಾಯಕ್ ಅವರ ಕಥೆಗಳನ್ನು ಇದುವರೆಗೆ ಓದಿರಲಿಲ್ಲ. ಅದು ಸಾಧ್ಯವಾದದ್ದು ಸಂವೇದನಾಶೀಲ ಸಾಹಿತಿಯೂ ದಕ್ಷ ಪೊಲೀಸ್ ಅಧಿಕಾರಿಯೂ ಆದಂಥ ಸನ್ಮಿತ್ರ ಡಾ. ಡಿ.ಸಿ. ರಾಜಪ್ಪ ಅವರಿಂದ. ಮೂಲ ಕಥೆಗಾರ್ತಿ ಡಾ. ದೀಪ್ತಿ ಪಟ್ನಾಯಕ್ ಅವರನ್ನೂ, ಅನುವಾದಿಸಿರುವ ಕನ್ನಡದ ಹೆಸರಾಂತ ಅನುವಾದ ತಜ್ಞ ಮಿತ್ರ ಹಸನ್ ನಯೀಂ ಸುರಕೋಡ ಅವರನ್ನು ಮೊದಲಿಗೆ ಅಭಿನಂದಿಸುತ್ತೇನೆ.

ಕಥೆಗಾರ್ತಿ ಕೇವಲ ಅಕ್ಷರಸ್ಥೆ ಮಾತ್ರವಲ್ಲ, ಎಪ್ಪತ್ತರ ಹೊಸ್ತಿಲಲ್ಲಿರುವ ಇವರು ಪ್ರತಿಷ್ಠಿತ ಹಿಂದೂ ವಿಶ್ವವಿದ್ಯಾಲಯದ ಗೌರವಾನ್ವಿತ ಸ್ನಾತಕೋತ್ತರ ಪದವೀಧರೆ. ಭೌತಶಾಸ್ತ್ರಜ್ಞೆಯಾದ ಇವರು ಅಣುರಸಾಯನಶಾಸ್ತ್ರ ವಿಷಯಕ್ಕೆ ಸಂಬಂಧಿ ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದವರು. ರಸಾಯನಶಾಸ್ತ್ರದ ಪ್ರಾಧ್ಯಾಪಕ ನಿವೃತ್ತರಾದವರು. ಸಣ್ಣಕಥೆ, ಕಾದಂಬರಿ, ನಾಟಕ, ವೈಜ್ಞಾನಿಕ, ಸಾಹಿತ್ಯ ಮತ್ತು ವ ಸಾಹಿತ್ಯ –ಹೀಗೆ ನಾನಾ ಪ್ರಾಕಾರಗಳ ದಿಗಂತಗಳನ್ನು ಲೇಖಕಿಯಾಗಿ ವಿಸ್ತರಿಸಿದ ತಮ್ಮ ಕೃತಿಗಳಿಗೆ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದವರು. ಇದು ಇವರ – ಬದುಕು. ಇಂಥವರ ಕಥೆಗಳನ್ನು ಓದುವುದು, ಸಂಕಲನಕ್ಕೆ ಆರಂಭಿಕ ಮಾತುಗಳನ್ನು ಬರೆಯುವುದು ನನಗೆ ಸಂದ ಸುವರ್ಣಾವಕಾಶವೆಂದೇ ಭಾವಿಸಿದೆ. ಹಾಂ! ಅಂದ ಇವರ ಕಥೆಗಳು ವಾಚಕರಿಗೆ ಹತ್ತಿರವಾಗುವ ಮೊದಲು ಒರಿಯಾ ನೆಲದ ಸಾಹಿತ್ಯದ ಪೂರ್ವಾಪರವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ ತಾನೆ!

ಒರಿಸ್ಸಾ ಇದರ ಮೂಲ ಇರುವುದು ಪ್ರಾಕೃತ ಭಾಷೆಯಲ್ಲಿ. ಒಡ್ಡವಿಸಂ ಉರ್ದಬಿಭಾಷಾ ಹಾಗೂ ಓಡ್ರಾ ಬಿಭಾಶಾ ಇವು ಇದರ ಪ್ರಾಚೀನ ಹೆಸರುಗಳು. ಪ್ರಾಂತದ ಮೂಲ ನಿವಾಸಿಗಳು ಇದನ್ನು ಕರೆಯುತ್ತಿದ್ದುದು ಓಡ್ಡಕಾ ಎಂದು. ಸರಳ ದಾಸ್ ಎಂಬ ಮಹಾ ಕವಿ ಮಹಾಭಾರತವನ್ನು ಒರಿಯಾ ಭಾಷೆಗೆ ಅನುವಾದಿಸಿದ್ದು ಹದಿನೈದನೇ ಶತಮಾನದಲ್ಲಿ, ಆ ಕಾವ್ಯದಲ್ಲಿ ಓಡ್ರರಾಷ್ಟ್ರ ಒಡಿಸ್ಸಾ ಎಂದು ಇದನ್ನು ಕರೆಯಲಾಗಿದೆ. ಗಜಪತಿ ಸಾಮ್ರಾಜ್ಯ ಕಪಿಲೇಂದ್ರ ಪುರಿಯಲ್ಲಿನ ದೇವಾಲಯಗಳನ್ನು ನಿರ್ಮಿಸಿದ. ಒರಿಸ್ಸಾ ಎಂಬುದು ಒಡಿಸ್ಸಾ ಎಂದು ಬದಲಾಗಿದ್ದು 2011ರಲ್ಲಿ.

ರಾಧಾನಾಥ್ ರೇ (1849–1918) ಪಾಶ್ಚಿಮಾತ್ಯ ತಿಳಿವಳಿಕೆಯನ್ನು ಸಾನೆಟ್‌ಗಳ ಕಾವ್ಯಗಳ ಒರಿಯಾ ಸಾಹಿತ್ಯಕ್ಕೆ ಧಾರೆ ಎರೆಯುವ ಕಾರ್ಯವನ್ನು ಯಶಸ್ವಿಯಾಗಿ ಆರಂಭಿಸಿದರು. ಅವರ ಚಂದ್ರಭಾಗ, ನಂದಿಕೇಶ್ವರಿ, ಉಷಾ, ಮಹಾಜಾತ್ರಾ, ದರ್ಬಾರ್ ಮತ್ತು ಚಿಲಿಕಾ ಕಾವ್ಯಕೃತಿಗಳು ಆಧುನಿಕ ಒರಿಯಾ ಸಾಹಿತ್ಯಕ್ಕೆ ಹೊಸ ಪರಿವೇಷ ಕಲ್ಪಿಸಿದವು. ಫಕೀರ್ ಮೋಹನ್ ಸೇನಾ ಪತಿ (1843–1918) ಒರಿ ಯಾ ಭಾಷೆಯ ಆಧುನಿಕ ಕಥಾ ಸಾಹಿತ್ಯದ ಮಾರ್ಗ ನಿರ್ಮಾಪಕರು. ಇವರು ಒರಿಯಾ ಸಾಹಿತ್ಯದ ಆಧು ನಿಕ ವ್ಯಾಸರೆಂದೇ ಖ್ಯಾತರಾಗಿದ್ದಾರೆ. ರೇಬತಿ (1898) ಕಥೆಯಲ್ಲಿ ಒರಿಸ್ಸಾದ ಗ್ರಾಮೀಣ ಬದುಕಿನ ಕಷ್ಟಕಾ ರ್ಪಣ್ಯಗಳನ್ನು ಅಭಿವ್ಯಕ್ತಿಸಿದ್ದಾರೆ. ಇಂಥ ಕಥೆಗಳಿಂದಾಗಿ ಇವರು ಮನೆಮಾತಾದರು. ಇವರು ಒರಿಯಾ ಕಥಾ ಸಾಹಿತ್ಯದ ಜನಕರೆಂಬ ಕೀರ್ತಿಗೆ ಭಾಜನರಾಗಿದ್ದಾರೆ. ಇವರ ಮಾರ್ಗದಲ್ಲಿ ಖ್ಯಾತನಾಮರೆಂದರೆ ಗಂಗಾಧರ ಮೆಹರ್, ಮಧುಸೂದನರಾವ್, ಚಿಂತಾಮಣಿ ಮೊಹಂತಿ, ನಂದಕಿಶೋರ್‌ಬಾಲ್ ಮತ್ತು ಗೌರಿಶಂಕರ್ ಮೊದಲಾದ ಕಥೆಗಾರರು.

> **ಬೊಗಸೆ ತುಂಬ ಕನಸುಗಳು**
> **ಒರಿಯಾ ಕಥೆಗಳು**
> **ಲೇ: ಡಾ. ದೀಪ್ತಿ ಪಟ್ನಾಯಕ್**
> **ಭಾಷಾಂತರ : ಪ್ರಣವ ಮಹಾಂತಿ**
> **ಪ್ರ: ಪ್ರದ್ಯೋತ ಪ್ರಕಾಶನ ಜಕ್ಕೂರು**
> **ಬೆಲೆ ರು.200/-**

ಒರಿಯಾ ಕಾವ್ಯದ ಹರವೂ ವಿಸ್ತಾರವಾದುದು. ಆದರೆ ಡಾ. ದೀಪ್ತಿ ಪಟ್ನಾಯಕ್ ಅವರ ಕಥಾಸಂಕಲನದ ಮುನ್ನುಡಿಯಾದ್ದರಿಂದ ಕಥೆಗಳಿರುವ ದಿಕ್ಕಿನ ಕಡೆ ಹೊರಳುವುದು ಮುಖ್ಯ. ಫಕೀರ್ ಮೋಹನ್ ಸೇನಾಪತಿ ತಮ್ಮ ನೆಲಮೂಲ ಕಥೆಗಳ ಮೂಲಕ ಸಮಕಾಲೀನ ಹಾಗೂ ಉತ್ತರೋತ್ತರ ಕಥೆಗಾರರ ಮೇಲೆ ಬೀರಿದ ಪ್ರಭಾವ ಅಪಾರವಾದುದು. ಸೇನಾಪತಿಗಳ ಸಮರ್ಥ ಉತ್ತರಾಧಿಕಾರಿಗಳಾದ ಗೋಪಿನಾಥ ಮೊಹಂತಿ, ಸುರೇಂದ್ರ ಮೊಹಂತಿ, ಮನೋಜ್ ದಾಸ್ ಒರಿಯಾ ಕಥೆಯ ದಿಗಂತವನ್ನು ತಮ್ಮ ಅಮೂಲ್ಯ ಕಥೆಗಳ ಮೂಲಕ ವಿಸ್ತರಿಸಿದರು. ಸ್ತ್ರೀಪರ ಚಿಂತನೆಯ ಲೇಖಕಿ ಸರೋಜಿನಿ ಸಾಹು ತಮ್ಮ ವಿಮರ್ಶಾ ಬರಹಗಳಲ್ಲಿ ಕಥೆಗಳಲ್ಲಿ ಅಸ್ತಿತ್ವವಾದವನ್ನು ಎತ್ತಿ ಹಿಡಿದರು. ಒರಿಯಾ ನೆಲದ ಬಹುಮುಖೀ ನೆಲೆಗಳನ್ನು ವಿಸ್ತರಿಸಿದರು. ಕಥಾ ಪ್ರಕಾರ ಆಂದೋಲನದ ರೀತಿಯಲ್ಲಿ ಕಾಣಿಸಿಕೊಂಡ ಪರಿಣಾಮವಾಗಿ ಎಪ್ಪತ್ತರ ದಶಕದಲ್ಲಿ ನೂರಾರು ಯುವ ಬರಹಗಾರರು ಒರಿಯಾ ಸಾಹಿತ್ಯದ ನಭೋಮಂಡಲದಲ್ಲಿ ಕಾಣಿಸಿಕೊಂಡರು. ಈ ಆಂದೋಲನದ ಫಲಶ್ರುತಿಯೇ ಜಗದೀಶ್ ಮೊಹಂತಿ, ಕನ್ಹಯ್ಯಲಾಲ್ ದಾಸ್, ಸತ್ಯಮಿಶ್ರ, ರಾಮಚಂದ್ರ ಬೆಹರ, ಪದ್ಮರಾಜ ಪಾಲ್, ಯಶೋಧರ ಮಿಶ್ರ ಸೇರಿದಂತೆ ಹಲವು ಪ್ರತಿಭಾವಂತ ಬರಹಗಾರರು ಒರಿಯಾ ಕಥೆಗೆ ಆಧುನಿಕ ಸ್ಪರ್ಶ ನೀಡಿದರು.

ಈ ಸಂಕಲನದ ಕಥೆಗಳು ಪ್ರಥಮ ಓದಿಗೇನೆ ಸಾರ್ಥಕ ಅನುಭವವನ್ನು ನೀಡುತ್ತವೆ. ದೀಪ್ತಿ ಮೇಡಂ ಒರಿಯಾ ಭಾಷೆಯ ಹಿಂದಿನ ಹಾಗೂ ಸಮಕಾಲೀನ ಸಾಹಿತ್ಯದ ಕಸುವನ್ನು ಜೀರ್ಣಿಸಿಕೊಂಡಿರುವವರು ಎಂದೆನ್ನಿಸುತ್ತದೆ. ಸ್ತ್ರೀ ಬಗೆಗಿನ ಕಕ್ಕುಲಾತಿ ಇಲ್ಲಿನ ಪ್ರತಿಯೊಂದು ಕಥೆಯ ವಸ್ತು. ಆದ್ದರಿಂದ ಇವರ ಕಥೆಗಳನ್ನು ಹಲವು ನೆಲೆಗಳ ಮೂಲಕ ಗ್ರಹಿಸಬಹುದು. ಇಳಿವಯಸ್ಸಿನ ಮಹಿಳೆಯ ಕಷ್ಟ ಕಾರ್ಪಣ್ಯಗಳು, ಆಧುನಿಕತೆಯಿಂದಾಗಿ ಕೌಟುಂಬಿಕ ಬಿರುಕುಗಳು, ಸ್ವಾತಂತ್ರ್ಯೋತ್ತರ ಜೀವನದ ಪಲ್ಲಟಗಳು, ಮಾನವೀಯ ಸಂಬಂಧಗಳ ಶಿಥಿಲತೆ –ಹೀಗೆ ಹತ್ತುಹಲವು ವಿಷಯಗಳು ಇಲ್ಲಿ ಅಡಕಗೊಂಡಿವೆ. ಪ್ರತಿಯೊಂದು ಕಥೆಯಲ್ಲಿ ನಿರುದ್ವಿಗ್ನ ನಿರೂಪಣೆ ಇದೆ. 'ಬೆಳದಿಂಗಳನ್ನು ವರ್ಣಿಸಬೇಡ, ಅದರ ಪ್ರತಿಫಲನವನ್ನು ಒಡೆದ ಗಾಜಿನ ಚೂರಿನ ಮೇಲೆ ತೋರಿಸಿದರೆ ಸಾಕು. ಆಗ ಬೆಳದಿಂಗಳ ನಿಕಟ ಅನುಭವವಾಗುವುದು' ಎಂಬ ಪ್ರಸಿದ್ಧ ಕಥೆಗಾರ ಚೆಕಾವ್‌ನ ಮಾತು ಇಲ್ಲಿನ ಕಥೆಗಳನ್ನು ಓದಿದಾಗ ನೆನಪಾಗುವುದು. ಸಾಂಪ್ರದಾಯಿಕ ನೆಲೆಗಳಿಂದ ಭಿನ್ನವಾಗಿ ವಿಶಿಷ್ಟವಾಗಿ ಬರೆಯುವುದು ಕಥೆಗಾರ್ತಿಗೆ ಸಾಧ್ಯವಾಗಿದೆ.

ಈ ಸಂಕಲನದಲ್ಲಿ ನನ್ನ ಮನಸ್ಸನ್ನು ಆವರಿಸಿದ ಕಥೆ ಸೋಪಾನ. ಸಾರ್ತಜಿ ಬಾರ್ತಮನ್ ಯಾನೆ ಸಾರಾ ಈ ಕಥೆಯ ಕೇಂದ್ರ ಪಾತ್ರ. ಬಹಳಷ್ಟು ವಾಚಕರಿಗೆ ತಿಳಿದಿರಬಹುದಾದ, ತಿಳಿಯದೇ ಇರಬಹುದಾದ ಐತಿಹಾಸಿಕ ವ್ಯಕ್ತಿ ಸಾಲ್ದಾ, ದಕ್ಷಿಣ ಆಫ್ರಿಕಾದ ಗಮಟೂಸ್ ಕಣಿವೆ ಪ್ರಾಂತದಲ್ಲಿ ಜನಿಸಿದಳು. ಹದಿನೆಂಟನೆ ಶತಮಾನದ ಆರಂಭದಲ್ಲಿ ಬ್ರಿಟಿಷ್ ವಸಾಹತುಶಾಹಿಯ ಅವಮಾನವೀಯ ನಡವಳಿಕೆಯನ್ನು ಈ ಕಥೆ ಅನಾವರಣಗೊಳಿಸುತ್ತದೆ. ಆ್ಯಸಿಡ್ ಹಲ್ಲೆಯಿಂದ ತನ್ನನ್ನು ವಿರೂಪಗೊಳಿಸಿ ತಪನ್‌ನನ್ನೇ ವಿವಾಹವಾಗುವ ಮನೋಜ್ಞ ಕಥೆ ದೇವಿ. ಇಳಿವಯಸ್ಸಿನ ಮಾನಸಿಕ ಘರ್ಷಣೆ ಸಂಧ್ಯಾ ಕಥೆಯಲ್ಲಿ ಸಮರ್ಥವಾಗಿ ಅಭಿವ್ಯಕ್ತಗೊಂಡಿದೆ. ನನ್ನ ಮನಸ್ಸನ್ನು ಸೂರೆಗೊಂಡ ಕಥೆ ಎಂದರೆ ಧೀರಾ ಕಕ್ಕಿ, ಸುಧೀರಾ ಹೆಸರಿನ ಮಹಿಳೆ ಉಳಿದ ಕಥೆಗಳಲ್ಲಿನ ಸ್ತ್ರೀಪಾತ್ರಗಳಂತೆ ಅಕ್ಷರಸ್ಥೆಯಲ್ಲ, ಸಿರಿವಂತಳಂತೂ ಅಲ್ಲವೇ ಅಲ್ಲ. ನೆರೆಹೊರೆಯವರ ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸುವ ಶ್ರಮಜೀವಿ. ದೀಪ್ತಿಯವರು ಈ ಕಥೆಯನ್ನು ಅತಿ ಸಂಯಮದಿಂದ ಚಿತ್ರಿಸಿದ್ದಾರೆ. ಈ ವಿವಿಧ ಮಜಲುಗಳ ಸಲುವಾಗಿ ಇಲ್ಲಿನ ಸರಳ ಸುಂದರ ಕಥೆಗಳು ಆಪ್ತವಾಗುತ್ತವೆ. ಕಥೆಯ ಮೂಲಕ ಸ್ತ್ರೀತನದ ಶ್ರೇಷ್ಠತೆ ಘನತೆಯನ್ನು ಎತ್ತಿ ಹಿಡಿದಿದ್ದಾರೆ. ಮಾನವೀಯತೆಯ ಸಮಕಾಲೀನ ನಗರವಾಸಿ ಬದುಕಿನ ನರಕದರ್ಶನ ಮಾಡಿಸುತ್ತವೆ.

ಇಷ್ಟೆಲ್ಲಾ ಹೇಳುವ ದೀಪ್ತಿಯವರು ಎಲ್ಲೂ ಸಮಾಜ ಸುಧಾರಕಿಯಂತೆ ಪೋಸ್ ಕೊಡುವುದಿಲ್ಲ, ಬದಲಿಗೆ ಇಂಥದೊಂದು ಜೀವನ ಅಸ್ತಿತ್ವದಲ್ಲಿದೆ ಎಂದು ಮಾತ್ರ ಹೇಳುತ್ತಾರೆ. ನೇರವಾದ ಕಥನ, ಹೊರಗಿನ ಹಾಗೂ ಒಳಗಿನ ನೈಜತೆಗಳ ನಡುವೆ ಮಾನವೀಯ ಸಂಬಂಧ ಏರ್ಪಡಿಸುವುದೇ ಕಥೆಗಾರ್ತಿಯ ಉದ್ದೇಶವಾದ್ದರಿಂದ ಇಲ್ಲಿನ ಕಥೆಗಳು ಕನ್ನಡ ಸಾರಸ್ವತಲೋಕಕ್ಕೆ ಸ್ವಾಗತಾರ್ಹ ಎನ್ನಿಸುತ್ತವೆ. ಈಗಾಗಲೇ ಕನ್ನಡದ ಕಥನ ಪರಂಪರೆಯನ್ನು ಉಜ್ವಲಗೊಳಿಸಿರುವ ಡಾ. ವೀಣಾ ಶಾಂತೇಶ್ವರ, ವೈದೇಹಿ, ಜಾಹ್ನವಿ, ಸುಮಂಗಲಾ, ಸುನಂದಾ ಕಡಮೆಯಂಥವರ ಸಾಲಿಗೆ ಒರಿಯಾ ಭಾಷೆಯ ಪ್ರಬುದ್ಧ ಲೇಖಕಿ ಡಾ। ದೀಪ್ತಿ ಪಟ್ನಾಯಕ್ ಸೇರುತ್ತಾರೆ ಎನ್ನುವುದೇ ಸಮಾಧಾನದ ಸಂಗತಿ.

(ಮುನ್ನುಡಿಯಿಂದ ಆಯ್ದ ಭಾಗ)

ದಕ್ಷಿಣದ ದೇಸಿ ದೇವರು ಖಂಡೋಬಾ

(ಮೊದಲನೆ ಪುಟದಿಂದ)

ಅಲಗ್ನಕ್ಕೆ ನಿನ್ನ ಸಂಬಂಧಿಗಳು ಯಾರಾದರೂ ಬರುವವರು ಇದ್ದಾರೆಯೇ?ಟಿ ಎಂದು ತಿಮ್ಮಪ್ಪ ಕೇಳಿದ.

ಗೊರವಪ್ಪ ಸಮೀಪದ ಗುಡ್ಡದ ತುದಿಯ ಮೇಲೆ ನಿಂತು ತನ್ನ ತಂಗಿಯರನ್ನು ನೆನೆದ. ಆಗ ಸವದತ್ತಿಯ ಎಲ್ಲಮ್ಮ, ಹೊನ್ನತ್ತಿಯ ಹೊನ್ನಮ್ಮ, (ಚಂದ್ರ)ಗುತ್ತಿಯ ಗುತ್ತವ್ವರ ಕವಡೆಗಳು ಅಲುಗಾಡಿದವು. ತಮ್ಮ ಅಣ್ಣ ಮೈಲಾರ ಯಾಕೋ ನೆನಪು ಮಾಡಿಕೊಂಡಿದ್ದಾನೆ ಎಂದು ಅವರೆಲ್ಲ ಯೋಚನೆ ಮಾಡಿ ಕವಡೆ ಹಾಕಿ ನೋಡಿದರು. ಕೊನೆಗೆ ಅವರೆಲ್ಲ ಬಂದು, ಕ್ರಮದಂತೆ ಲಗ್ನವಾಗಿ ತಿಮ್ಮಪ್ಪ ತನ್ನ ಮಗಳನ್ನು ಕಳುಹಿಸಿ ಕೊಡಲು ಸಿದ್ಧನಾದ. ದಿಬ್ಬಣ ಮದುಮಕ್ಕಳು ಸಮೇತ ಮೈಲಾರಕ್ಕೆ ಬಂತು. ತಿಮ್ಮಪ್ಪ ಹಣದ ವಿಷಯ ಪ್ರಸ್ತಾಪ ಮಾಡಿ ಹಿಂದಿರುಗಿಸು ಎಂದಾಗ, ಭಾರತ ಹುಣ್ಣಿಮೆಯ ಜಾತ್ರೆಯ ಕಾಣಿಕೆ ಹಣದಿಂದ ಸಾಲ ತೀರಿಸುವೆ ಎಂದು ಸಮಾಧಾನ ಹೇಳುತ್ತಾನೆ.

ಭಾರತ ಹುಣ್ಣಿಮೆಯ ಕಾಣಿಕೆಯಲ್ಲೂ ಸಾಲ ತೀರಲಿಲ್ಲ. ತಿಮ್ಮಪ್ಪ ಸಿಟ್ಟಾದಾಗ ಅಗುಡಿಸಲು ಸುತ್ತ ಇರುವ ಐನೂರು ಹುಣಸೆಮರ ಉಂಟು. ಗಿಡ ಹಣ್ಣು ಬಿಟ್ಟಾಗ ಮಾರಿ ಸಾಲ ಮುಟ್ಟಿಸಿಕೊಳ್ಳುಟಿ ಎನ್ನುತ್ತಾನೆ. ಹುಣಸೆ ಮರ ಹಣ್ಣಾಗುವ ಸಮಯಕ್ಕೆ ತಿಮ್ಮಪ್ಪ ಮತ್ತೆ ಮೈಲಾರಕ್ಕೆ ಬಂದ. ಆದರೆ ಹುಣಸೆ ಪೂರ್ತಿ ಹಣ್ಣಾಗದೆ ದೋರೆಯಾಗಿತ್ತು. ಹೀಗಾಗಿ ಅಲ್ಲಿಯ ತನಕ ಮಗಳ ಮನೆಗೆ ಹೋಗಿ ಬರುವುದು ವಾಸಿ ಎಂದು ಹೋಗುತ್ತಾನೆ. ಅಲ್ಲಿ ಪುಷ್ಕಳ ಊಟ ಮಾಡಿ ನಿದ್ದೆ ಹೋಗುತ್ತಾನೆ.

ಸ್ವಲ್ಪ ಹೊತ್ತಿನಲ್ಲಿ ಮೈಲಾರ ಬಂದು ತಿಮ್ಮಪ್ಪನನ್ನು ಎಬ್ಬಿಸಿದ. ಅಏಳು, ಎಷ್ಟು ಹೊತ್ತು ಮಲಗಿದಿ, ನನಗೊಂದು ಕನಸು ಬಿದ್ದಿತ್ತು. ನೀನು ಹುಣಸೆ ಮರವನ್ನೆಲ್ಲ ಬಡಿದು ಮಾರಿ, ಹಣ ಕಟ್ಟಿಕೊಂಡು ನಿನ್ನ ಗಿರಿಗೆ ಹೋದಂತೆ ತೋರಿತು. ಮಾರಾಯ, ಹೆಚ್ಚಿನ ನನ್ನ ಹಣ ನನಗೆ ಕೊಟ್ಟು ಹೋಗುಟಿ ಎಂದ. ಅದನ್ನು ಕೇಳಿದಾಗ ತಿಮ್ಮಪ್ಪ ಹೌಹಾರಿಹೋದ. ಇಬ್ಬರೂ ಸೇರಿ ಹುಣಸೆ ಮರದ ಸಮೀಪ ಬಂದು ನೋಡುತ್ತಾರೆ, ಅಲ್ಲೇನಿದೆ ? ಎಲ್ಲ ಮರಗಳು ಬೋಳು. ತಿಮ್ಮಪ್ಪ ಕೂಗಾಡಿದ. ಜನ ಸೇರಿದರು. ಆತಾನು ಮಗಳ ಮನೆಯಲ್ಲಿ ಉಂಡು ಮಲಗಿದ್ದೆ. ಗಿಡಗಳನ್ನು ತಾನು ಬಡಿಯಲೇ ಇಲ್ಲ. ಇವನೇ ಏನೋ



ಮೋಸಮಾಡಿದ್ದಾನೆಟಿ ಎಂದು ಗೋಳಾಡಿದ. ಆಈತ ಹಗಲು–ರಾತ್ರಿಟಿ ಎನ್ನದೆ ಗಿಡ ಕಾಯುತ್ತ ಅಲ್ಲಿಯೇ ಇದ್ದಾನೆ. ಬೇರೆ ಯಾರು ಬಂದು ಬಡಿಯುತ್ತಾರೆ ? ಈತ ಎಲ್ಲ ಬಡಿದುಕೊಂಡು ಹೆಚ್ಚಿನ ನನ್ನ ಹಣ ಕೊಡದೆ ಮೋಸಮಾಡಿದ್ದಾನೆ.ಟಿ ಎಂದು ಗೊರವಯ್ಯ ಪ್ರತಿಯಾಗಿ ಆಪಾದಿಸಿದ.

ಬುದ್ಧಿವಂತರಿಗೆ ಏನು ಹೇಳಬೇಕೋ ತಿಳಿಯಲಿಲ್ಲ. ವಾದವಿವಾದ ನಡೆಯಿತು. ಕೊನೆಯಲ್ಲಿ ತಿಮ್ಮಪ್ಪ ಅನನ್ನ ಏಳುಕೋಟಿ, ಹಣ ತಿಂದು ಹಾಕಿದೆ. ಇನ್ನು ಮುಂದೆ ನೀನು ಅಏಳು ಕೋಟಿ. ಏಳುಕೋಟಿಟಿ ಎಂದು ಹೇಳುತ್ತ ತಿರುಗುತ್ತ ಹೋಗು, ನಿನಗೆ ಬಡತನ ಎಂದೂ ತಪ್ಪದಿರಲಿಟಿ ಎಂದು ಶಾಪಕೊಟ್ಟು ಹೋದನಂತೆ! ಈತ ಅಪುಕ್ಕಟೆ ಹಣ್ಣು ತಂದು ಬಿಟ್ಟೆ. ತಿಮ್ಮಪ್ಪಗೆ ಬುದ್ಧಿ ಕಲಿಸಿದೆಟಿ ಎಂದು ಮನದಲ್ಲಿ ನಕ್ಕನಂತೆ. ಇದು ತಿಮ್ಮಪ್ಪನ ಮೈಲಾರನ ದುಡ್ಡಿನ ವ್ಯವಹಾರ, ವೃತ್ತಾಂತ. ಇದೇ ಕಥೆಯ ಬೇರೆ ಬೇರೆ ಪಾಠಗಳು ಮಹಾರಾಷ್ಟ್ರದಲ್ಲೂ ಚಾಲ್ತಿಯಲ್ಲಿವೆ.

ಖಂಡೇರಾಯ

ಮೈಲಾರ ದೇವರ ಸಂಪ್ರದಾಯದಲ್ಲಿ ಹೆಗ್ಗಡೆ ಮುಖ್ಯನಾಗಿದ್ದು ಈತ ತಿಮ್ಮಪ್ಪ ಎಂಬ ನಂಬಿಕೆ ಸಹ ಜಾನಪದರದು. ಇಲ್ಲಿ ಖಡ್ಗಕ್ಕೆ ವಿಶೇಷ ಪ್ರಾಧಾನ್ಯವಿದ್ದು ಅಂಥ ಮೂರ್ತಿಯನ್ನು ಖಂಡೇರಾಯ ಎಂದೂ ಕರೆಯಲಾಗುತ್ತದೆ. ಈ ಕಾರಣದಿಂದ ಮೈಲಾರ ದೇವರನ್ನು ಮಹಾರಾಷ್ಟ್ರದಲ್ಲಿ ಖಂಡೋಬಾ ಎಂದು ಕರೆದು ಪೂಜಿಸುವ ಪರಂಪರೆ ರೂಢಿಗೆ ಬಂದಿದೆ. ರಾಕ್ಷಸರನ್ನು ಖಂಡನ ಮಾಡಿದ್ದರಿಂದ ಈತ ಖಂಡೇರಾಯ. ಖಂಡೆಯ ಎಂದರೆ ಕನ್ನಡದಲ್ಲಿಯೂ ಖಡ್ಗ ಎಂದೇ ಅರ್ಥ. ಈತ ಅಶ್ವಾರೋಹಿ.

ಭಂಡಾರ ಪ್ರಿಯ

ಮೈಲಾರ ಅಥವಾ ಖಂಡೋಬಾ ದೇವರು ಭಂಡಾರ ಪ್ರಿಯ. ಭಂಡಾರ ಎಂದರೆ ಅರಿಸಿನದ ಪುಡಿ. ಈ ದೇವರ ಉತ್ಸವ, ಜಾತ್ರೆಗಳಲ್ಲಿ ಭಕ್ತ ಗಡಣ ಹಳದಿಯ ಓಕುಳಿಯಲ್ಲಿ ಮಿಂದೇಳುತ್ತದೆ. ಇದು ಈ ಸಂಪ್ರದಾಯದ ವಿಶೇಷಗಳಲ್ಲಿ ಒಂದು. ದೇವರನ್ನು ಭಕ್ತರು ಅಖಂಡುಗ ಭಂಡಾರದೊಡೆಯಟಿ ಎಂದೂ ಭಂಡಾರಕ್ಕೆ ಇವನೇ ಅಆದಿಕರ್ತಟಿ ನೆಂದೂ ಜನಪದ ಹಾಡುಗಳಲ್ಲಿ ವರ್ಣಿಸಿದ್ದಾರೆ. ಶಿವನು ಲಿಂಗರೂಪದಲ್ಲಿ ಭೂಲೋಕದಲ್ಲಿ ಅವತರಿಸಿದಾಗ ಅವನ ಜೊತೆಗೆ ಭಂಡಾರವೂ ಹುಟ್ಟಿತೆಂದೂ ಅದರಿಂದಲೇ ದೇವತೆಗಳು ಋಷಿಗಳು ಸೇರಿ ಅವನನ್ನು ಪೂಜಿಸಿದರೆಂದೂ ಕತೆಗಳು ಪ್ರಚಲಿತವಾಗಿವೆ.

ಮೈಲಾರಲಿಂಗನ ಭಕ್ತರ ನಂಬಿಕೆಯಲ್ಲಿ ಭೂಲೋಕದಲ್ಲಿ ಮೊದಲು ಹುಟ್ಟಿದ್ದೇ ಭಂಡಾರ. ಆದ್ದರಿಂದ ದೇವರ ಪೂಜೆಗೂ ತಮ್ಮ ನಿತ್ಯ ನೈಮಿತ್ತಿಕ ಕಾರ್ಯ ಗಳಿಗೂ ಭಂಡಾರ ಉಪಯೋಗಿಸಬೇಕು ಎಂದು ಅವರು ಭಾವಿಸುತ್ತಾರೆ. ಅದನ್ನೇ ಎಲ್ಲ ದೇವಾಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಸುವ ಕ್ರಮವಿದೆ. ಶಿವಲಿಂಗವನ್ನು ಭಂಡಾರದಿಂದ ಪೂಜಿಸುವ ಕ್ರಮ ಮೈಲಾರಲಿಂಗ ಪರಂಪರೆಯಲ್ಲಿ ಇದೆ. ಮಾಳಸಾ ದೇವಿಯ ಆರಾಧನೆ ಪೂರ್ತಿ ಜಾನಪದ ಹಿನ್ನೆಲೆಯನ್ನು ಹೊಂದಿದೆ. ಬೇಟೆ ಸಂಸ್ಕೃತಿ ಹಾಗೂ ಕೃಷಿ ಸಂಸ್ಕೃತಿಗಳ ಸಂಗಮ ಈ ದೇವರ ಆರಾಧನೆಯಲ್ಲಿ ಕಂಡು ಬರುತ್ತದೆ.

ಕಾಡಿನ ಸಂಸ್ಕೃತಿ ನಾಡಿನ ಸಂಸ್ಕೃತಿಯಾಗಿ ಪರಿವರ್ತಿಸುತ್ತಿರುವ ಹಂತದ ಆಚರಣೆಗಳು ಇಲ್ಲಿ ಸನ್ನಿಹಿತವಾಗಿವೆ. ಎಂದರೆ ಬೇಟೆಗಾರ ಮತ್ತು ಹೈನುಗಾರ ಸಂಸ್ಕೃತಿಯ ಅಂಶಗಳು ಸ್ಪಷ್ಟವಾಗಿವೆ. ಕೃಷಿಕ ಸಂಸ್ಕೃತಿಯ ಅಂಶಗಳು ಇಲ್ಲಿ ಕಡಿಮೆ ಪ್ರಮಾಣದಲ್ಲಿವೆ. ವೀರಗೆಲಸ, ಬೇಟೆ, ಭಂಡಾರ ಇವು ಬೇಟೆಗಾರಿಕೆಯ ಪ್ರಧಾನ ಅಂಶಗಳು. ತುಪ್ಪ, ಕೋರಿ ಮುಂತಾದವು ಹೈನುಗಾರಿಕೆಯವು .ಇತರೆಲ್ಲ ಸಂಕೇತಗಳು ಮೊದಲ ವಿಭಾಗಕ್ಕೆ ಸಲ್ಲುತ್ತವೆ. ಪ್ರದೇಶವ್ಯಾಪ್ತಿ ಕಾಲವ್ಯಾಪ್ತಿ, ಸಂಕೇತ ವೈವಿಧ್ಯ ಮತ್ತು ಆಚರಣಾ ವೈವಿಧ್ಯಗಳನ್ನು ಗಮನಿಸಿದರೆ ಆಗಮಿಕ ಮತ್ತು ಪೌರಾಣಿಕ ಸಂಸ್ಕೃತಿಗಿಂತ ಹಿಂದಿನ ಕಾಲಕ್ಕೆ ಸೇರಿದ ಪದರಗಳು ಇಲ್ಲಿ ಹರಡಿರುವುದು ನಿಶ್ಚಯ.

ಪ್ರಬಲವಾದ ಆಗಮಿಕ–ಪೌರಾಣಿಕ ಹಿಂದೂಧರ್ಮ ಮತ್ತು ಜೈನ–ಬೌದ್ಧ ನಾಸ್ತಿಕ ಧರ್ಮಗಳನ್ನು ಮೀರಿ ಈ ಪರಂಪರೆ ಉಳಿದು ಬಂದುದೊಂದು ಮಹಾ ಸೋಜಿಗ ಎಂಬುದಾಗಿ ಡಾ. ನೇಗಿನಹಾಳ ಅವರು ಅಭಿಪ್ರಾಯ ಪಟ್ಟಿದ್ದಾರೆ. ಮೈಲಾರ ಅಥವಾ ಖಂಡೋಬಾ ದೇವರು ಅಪ್ಪಟ ದೇಸಿ ದೇವರು. ಹೀಗಾಗಿ ಈ ದೇವರು ಭಾಷೆಗಳ ಗಡಿಯನ್ನು ಮೀರಿ ಸರ್ವವ್ಯಾಪಿಯಾಗಿ ಇಂದಿಗೂ ಕಂಗೊಳಿಸುತ್ತಿದ್ದಾನೆ.

» ಎಂ.ಎಸ್.ಹೆಬ್ಬಾರ್

ವೈವಿಧ್ಯಮಯ ಕುತೂಹಲಕಾರಿ ಬರಹಗಳು



ಈ ಸಂಕಲನದ ಬರಹಗಳ ಒಂದು ಮುಖ್ಯ ಗುಣ ಸುಲಭವಾಗಿ ಓದಿಸಿಕೊಳ್ಳುವುದು; ಇನ್ನೊಂದು ಮುಖ್ಯ ವಿಚಾರವೆಂದರೆ, ಇಲ್ಲಿನ ಬರಹಗಳಲ್ಲಿ ಅಡಕಗೊಂಡ ಮಾಹಿತಿಯ ಹಿಂದೆ ಸಂಶೋಧನಾ ಸ್ವರೂಪದ ಅಧ್ಯಯನವಿದೆ, ಇದುವರೆಗೆ ಕನ್ನಡದ ಓದುಗರಿಗೆ ತಿಳಿದಿಲ್ಲದ ಹಲವು ಸ್ವಾರಸ್ಯಕರ ಮಾಹಿತಿಗಳನ್ನು ಈ ಬರಹಗಳು ಒದಗಿಸುತ್ತವೆ.

ಈ ಪುಸ್ತಕದ ಲೇಖಕರು ವಿದೇಶಕ್ಕೆ ಉದ್ಯೋಗವನ್ನರಸಿಕೊಂಡು ಹೋಗಿ ಕೆಲವು ದಶಕಗಳೇ ಆದವು. ಆದರೆ ಕನ್ನಡದ ಪ್ರೀತಿ, ಕನ್ನಡದ ಒಡನಾಟ, ಕನ್ನಡ ಸಾಹಿತ್ಯದ ಕೃಷಿ ಇವರನ್ನು ಬಿಟ್ಟಿಲ್ಲ. ಕಳೆದ ಹಲವು ವರ್ಷಗಳಿಂದ ಪ್ರತಿ ವಾರ ವಿಶ್ವವಾಣಿ ಪತ್ರಿಕೆಯಲ್ಲಿ 'ಶಿಶಿರ ಕಾಲ' ಎಂಬ ಅಂಕಣವನ್ನು ಬರೆಯುತ್ತಿದ್ದಾರೆ; ಅದು ಜನಪ್ರಿಯವೂ ಹೌದು. ಆ ಅಂಕಣಗಳ ಸಂಕಲನವೂ ಪ್ರಕಟಗೊಂಡಿದ್ದು, ಈಗ 'ಶಿಶಿರ ಕಾಲ 2' ಅಂಕಣ ಬರಹಗಳ ಸಂಕಲನ ಹೊರಬಂದಿದೆ.

ಈ ಸಂಕಲನವನ್ನು ಓದುತ್ತಾ ಹೋಗುವಾಗ ಸಣ್ಣಗೆ ಅಚ್ಚರಿಯಾಗುತ್ತದೆ; ದೂರದೇಶದಲ್ಲಿದ್ದುಕೊಂಡು, ಕನ್ನಡದಲ್ಲೇ ಚಿಂತನೆ ನಡೆಸುತ್ತಾ, ಅದೆಷ್ಟು ವೈವಿಧ್ಯಮಯವಾಗಿ ಶಿಶಿರ ಹೆಗಡೆಯವರು ತಮ್ಮ ಬರಹಗಳನ್ನು ಅಚ್ಚುಕಟ್ಟಾಗಿ ರೂಪಿಸಿದ್ದಾರೆ ಎಂದು. ನಾನಾ ವಿಷಯಗಳನ್ನೆತ್ತಿಕೊಂಡು ಶಿಶಿರ ಹೆಗಡೆಯವರು ಲೇಖನ ಬರೆಯುವುದರಲ್ಲಿ ಸಿದ್ಧಹಸ್ತರು; ಹಾಗಿದ್ದೂ, ಈ ಸಂಕಲನದ ಬಹುಪಾಲು ಬರಹಗಳು, ಅಮೆರಿಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸನ್ನಿವೇಶಗಳ ಸುತ್ತ ಸುತ್ತುವುದನ್ನು ಗಮನಿಸಬಹುದು. ಜತೆಗೆ, ಯುರೋಪಿಯನರು, ವಿಶೇಷವಾಗಿ ಬಿಳಿ ಜನರು, ನಮ್ಮ ದೇಶದ ಮೇಲೆ ನಡೆಸಿದ ಅನ್ಯಾಯಗಳನ್ನು ತೆರೆದಿಡುವ ಬರಹಗಳೂ ಇಲ್ಲಿವೆ.

> **ಶಿಶಿರ ಕಾಲ 2**
> **ಲೇ: ಶಿಶಿರ ಹೆಗಡೆ**
> **ಪ್ರ: ವಿಶ್ವವಾಣಿ ಪುಸ್ತಕ**
> **8431007267**
> **ಬೆಲೆ ರು. 250/-**

ಈ ಸಂಕಲನದಲ್ಲಿ ಅಡಕಗೊಂಡ ಗಮನ ಸೆಳೆಯುವ ಬರಹಗಳಲ್ಲಿ, 'ಇದು ನಮ್ಮದಲ್ಲದ ನಮ್ಮವರ ಕಥೆ' ಲೇಖನವೂ ಸೇರಿದೆ. ಈ ಅಂಕಣವು ನಾಲ್ಕು ವಾರಗಳ ಕಾಲ, ಧಾರಾವಾಹಿಯಂತೆ ಪ್ರಕಟಗೊಂಡಿತ್ತು! ಅದಕ್ಕೊಂದು ಕಾರಣವೂ ಇದೆ – ಅದೇನೆಂದರೆ, ಬ್ರಿಟಿಷರು ನಮ್ಮ ದೇಶದವರ ಮೇಲೆ ನಡೆಸಿದ ಮೋಸ, ದೌರ್ಜನ್ಯ, ಜನಾಂಗೀಯ ಅನ್ಯಾಯವೇ ಈ ಬರಹದ ಹೂರಣ. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ, ಲಕ್ಷಾಂತರ ಜನರನ್ನು ತಪ್ಪು ಮಾಹಿತಿ ನೀಡಿ, ದೂರದ ಫಿಜಿ, ಕೆರಿಬಿಯನ್ ಮೊದಲಾದ ದ್ವೀಪಗಳಿಗೆ ಹಡಗಿನಲ್ಲಿ ಕೊಂಡೊಯ್ದು, ಅಲ್ಲಿ ಕಬ್ಬಿನ ಗದ್ದೆಗಳಲ್ಲಿ ಗುಲಾಮರ ರೀತಿ ದುಡಿಸಿಕೊಂಡ ವಿವರಗಳು ಈ ನಾಲ್ಕು ಬರಹಗಳಲ್ಲಿವೆ. ಕನ್ನಡದ ಓದುಗರಿಗೆ ಗೊತ್ತಿಲ್ಲದ, ಇದುವರೆಗೆ ಮರೆಯಾಗಿದ್ದ ಹಲವು ಸೂಕ್ಷ್ಮ ಮಾಹಿತಿಗಳೂ ಈ ಬರಹಗಳಲ್ಲಿದ್ದು, ಅಮಾಯಕ ಭಾರತೀಯರನ್ನು ಬ್ರಿಟಿಷರು ಹೇಗೆ ತಮಗೆ ಬೇಕಾದಂತೆ ದುಡಿಸಿಕೊಂಡರು ಎಂಬುದನ್ನು ಬಿಚ್ಚಿಡುತ್ತವೆ. ಬ್ರಿಟಿಷರು ತಮ್ಮ ಸಾಮ್ರಾಜ್ಯ ಕಟ್ಟಲು 'ಗುಲಾಮಗಿರಿ'ಯನ್ನು ಚಾಲ್ತಿಯಲ್ಲಿಟ್ಟಿದ್ದರು; ಅದೊಂದು ಅಮಾನುಷ ವಿದ್ಯಮಾನ; ಮನುಷ್ಯರನ್ನು ಸಾಕುಪ್ರಾಣಿಗಳ ರೀತಿ ಮಾರಿ, ದುಡಿತಕ್ಕೆ ಒಳಪಡಿಸುವ ಗುಲಾಮಗಿರಿ ಎಂಬ ಪ್ರಕ್ರಿಯೆಯು, ಒಂದು ದಿನ ನಿಷೇಧಕ್ಕೆ ಒಳಗಾಯಿತು.

ಇದರಿಂಗಾಗಿ, ಬ್ರಿಟಿಷರು ವಿವಿಧ ದ್ವೀಪಗಳಲ್ಲಿ ನಡೆಸುತ್ತಿದ್ದ ಪ್ಲಾಂಟೇಷನ್, ಕಬ್ಬಿನ ಕೃಷಿ ಮೊದಲಾದವುಕ್ಕೆ ಕೆಲಸಗಾರರ ಕೊರತೆ ಉಂಟಾಯಿತು. ಆಗ ಅವರು ರೂಪಿಸಿದ್ದೇ, 'ಒಪ್ಪಂದದ ವ್ಯವಸ್ಥೆ'. ಬ್ರಿಟಿಷರೇ ರೂಪಿಸಿದ ಕಾನೂನು, ಅವರೇ ಸಿದ್ಧಪಡಿಸಿದ ಒಪ್ಪಂದ, ಅವರೇ ಜಾರಿಗೆ ತರುವ ಪ್ರಾಧಿಕಾರ – ಐದು ವರ್ಷಗಳ ಕಾಲ ದುಡಿದು, ಹಣ ಗಳಿಸಿ ವಾಪಸಾಗುವ ಅವಕಾಶ ಕೊಡುತ್ತೇವೆ ಎಂದು ನಂಬಿಕೆ ಹುಟ್ಟಿಸಿ, ಒಪ್ಪಂದಕ್ಕೆ ಸಹಿ ಮಾಡಿಸಿಕೊಂಡು (ಆಗ ನಮ್ಮ ದೇಶದವರಲ್ಲಿ ಹೆಚ್ಚಿನವರ ಸಹಿ ಎಂದರೆ ಹೆಬ್ಬೆಟ್ಟು!), ಫಿಜಿ, ಮಲಯಾ, ಟ್ರಿನಿಡಾಡ್, ಬ್ರಿಟಿಷ್ ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ, ಮಾರಿಷಸ್ ಮೊದಲಾದ ಬಹುದೂರದ ಪ್ರದೇಶಗಳಿಗೆ ಹಡಗಿನಲ್ಲಿ ಸಾಗಹಾಕಿದರು. ಹಾಗೆ ಕಳಿಸುವಾಗ, ತಿಂಗಳುಗಟ್ಟಲೆ ಪಯಣದಲ್ಲಿ ದಾರಿಯಲ್ಲೇ ಅದೆಷ್ಟೋ ಜನರು ಸತ್ತು ಹೋದರು; ಹೊಸ ದ್ವೀಪಕ್ಕೆ ಹೋದ ನಂತರವೂ ಹಲವು ಕೆಲಸಗಾರರು ಸತ್ತರು. ಐದು ವರ್ಷದ ನಂತರ, ಭಾರತಕ್ಕೆ ವಾಪಸಾಗಲು ಹೆಚ್ಚಿನವರಿಗೆ ಸಾಧ್ಯವಾಗಲೇ ಇಲ್ಲ. ಅವರೆಲ್ಲರೂ ಕೂಲಿಗಳ ರೀತಿ, ಜೀತದಾಳುಗಳ ರೀತಿ ದುಡಿದರು, ಸಕ್ಕರೆ ತಯಾರಿಸಿದರು, ಪ್ಲಾಂಟೇಷನ್ ಬೆಳೆ ಉತ್ಪಾದಿಸಿದರು, ಬ್ರಿಟಿಷರ ಸಾಮ್ರಾಜ್ಯಕ್ಕೆ ಹಣವನ್ನು ಗಳಿಸಿಕೊಟ್ಟರು. ಆ ವಿವರಗಳನ್ನು ಜತನದಿಂದ ಕಲೆಹಾಕಿ ಇಲ್ಲಿನ ನಾಲ್ಕು ಬರಹಗಳಲ್ಲಿ ಅಡಕವಾಗಿಸಿದ್ದು, ಈ ಸಂಕಲನದ ಮೌಲ್ಯವನ್ನು ಹೆಚ್ಚಿಸಿವೆ.

ಶಿಕಾಗೋದಲ್ಲಿನ ಚಳಿಪ್ರದೇಶದ ಜೀವನ, ನ್ಯೂಯಾರ್ಕ್‌ನ ಇಲಿಗಳ ಕಾಟ, ಅಮೆರಿಕದ ಬಡವರು, ಬ್ರೆಜಿಲ್ ಕಾಡುಜನರ ಐದು ಶತಮಾನದ ಯುದ್ಧ, ಅಮೆರಿಕದ ಸೀಕ್ರೆಟ್ ಸರ್ವಿಸ್, ಶೆಲ್ ಕಂಪೆನಿಗಳು – ಹೀಗೆ ಹಲವು ಕ್ಷೇತ್ರಗಳಲ್ಲಿ ಇವರ ಅಂಕಣ ಬರಹಗಳು ಓಡಾಡುತ್ತವೆ. ಇಲ್ಲಿನ ಬರಹಗಳು ಅಪರೂಪದ ಮಾಹಿತಿ ಹೊಂದಿವೆ ಮತ್ತು ವಿಶೇಷವೆಂದರೆ, ಆ ಮಾಹಿತಿಯನ್ನು ಬರಹದ ಮೂಲಕ ಪ್ರಸ್ತುತ ಪಡಿಸಿದ ವಿಧಾನ ಆಕರ್ಷಕವಾಗಿದೆ. ಅಂಕಣಗಳ ಮೂಲ ಅವಶ್ಯಕತೆಗಳಲ್ಲಿ ಒಂದು ಎಂದರೆ, ಅವು ಓದಿಸಿಕೊಂಡು ಹೋಗಬೇಕು – ಆ ಗುಣ ಇಲ್ಲಿನ ಬರಹಗಳಲ್ಲಿವೆ. ಆದ್ದರಿಂದ, ಶಿಶಿರ ಹೆಗಡೆಯವರ ಈ ಅಂಕಣ ಬರಹಗಳ ಸಂಕಲನವು, ಯಾವ ಕಾಲದಲ್ಲಾದರೂ ಓದಿಸಿಕೊಳ್ಳುತ್ತವೆ ಮತ್ತು ಅವು ಸ್ಟೇಲ್ ಅನಿಸುವುದಿಲ್ಲ. ಹೊರದೇಶದಲ್ಲಿದ್ದುಕೊಂಡು, ಕನ್ನಡತನವನ್ನು ತಮ್ಮ ಬರಹಗಳಲ್ಲಿ ದಟ್ಟವಾಗಿ ಉಳಿಸಿಕೊಂಡಿರುವ ಶಿಶಿರ ಹೆಗಡೆಯವರ 'ಶಿಶಿರಕಾಲ' ಸಂಕಲನವು ಈ ದೃಷ್ಟಿಯಲ್ಲಿ ಮುಖ್ಯ ಎನಿಸುತ್ತದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಆತ್ಮನಿವೇದನೆ
(ಬನ್ನಂಜೆ ಗೋವಿಂದಾಚಾರ್ಯರು ನಿವೇದಿಸಿದ ಆತ್ಮಕಥನ)
ನಿರೂಪಣೆ : ಬನ್ನಂಜೆ ಗೋವಿಂದಾಚಾರ್ಯರು
ಬರಹ : ವೀಣಾಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 360/-

2

ಸಾಕ್ಷಿ
(ನನ್ನ ಬದುಕಿಗೆ ನಾನೇ ಸಾಕ್ಷಿ)
ಲೇ:ಡಾ। ಗುರುರಾಜ ಕರಜಗಿ
ಪ್ರ: ಲೋಕ ಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ
ಬೆಲೆ : ರೂ 499/-

3

ಸತ್ಕುಲ ಪ್ರಸೂತರು
(ಗುರುಪ್ರಸಾದರ ಹೊಸ ಕಾದಂಬರಿ)
ಲೇ:ಗುರುಪ್ರಸಾದ ಕಾಗಿನೆಲೆ
ಪ್ರ: ಅಂಕಿತಪುಸ್ತಕ, ಬೆಂಗಳೂರು
ಬೆಲೆ : ರೂ 295/-

4

ಲ್ಯಾಟರೀನಾ
(ನೊಂದಾನೊಂದು ಕಾಲದ ಗಲೀಜು ಪ್ರಸಂಗ – ಕಾದಂಬರಿ)
ಲೇ:ಕುಂವೀ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 350/-

5



ವಚನ ದರ್ಶನ
ಸಂ : ಜನಮೇಜಯ ಉಮರ್ಜಿ ಮತ್ತು ಇತರರು
(ವಚನ ಸಾಹಿತ್ಯ ಕುರಿತು ವಿದ್ವತ್ಪೂರ್ಣ ಲೇಖನಗಳು)
ಪ್ರ: ಅಯೋಧ್ಯ ಪ್ರಕಾಶನ, ಬೆಂಗಳೂರು
ಬೆಲೆ : ರೂ 260/-

6



ಆಧುನಿಕ ಮನೋವಿಜ್ಞಾನದ ಪ್ರವರ್ತಕರು
(ಮನೋವಿಜ್ಞಾನದ ಇತಿಹಾಸ ಕುರಿತು)
ಲೇ:ಎಂ. ಬಸವಣ್ಣ
ಪ್ರ: ಅಮೂಲ್ಯ ಪುಸ್ತಕ, ಬೆಂಗಳೂರು
ಬೆಲೆ : ರೂ 275/-

7



ಬಣಮಿ
(ಕಥಾಸಂಕಲನ)
ಲೇ:ಕಪಿಲ ಪಿ. ಹುಮನಾಬಾದೆ
ಪ್ರ: ಕಾವ್ಯಮನೆ ಪ್ರಕಾಶನ, ಕಲಬುರ್ಗಿ
ಟಬೆಲೆ : ರೂ 110/-

8

ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ:ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-

9

ಸಿಗ್ನಲ್ ಜಂಪ್
(ದಿಕ್ಕುತಪ್ಪಿದ ಕತೆಗಳು)
ಲೇ:ರವೀಂದ್ರ ಮುದ್ದಿ
ಪ್ರ: ಅವ್ವ ಪುಸ್ತಕಾಲಯ, ಕೆಂಚನಹಳ್ಳಿ
ಬೆಲೆ : ರೂ 150/-

10



ಕರ್ನಾಟಕದಲ್ಲಿ ಸ್ಮಾರ್ತ ಬ್ರಾಹ್ಮಣರು
(ನೆಲೆ–ಹಿನ್ನೆಲೆ)
ಸಂ : ಡಾ। ಟಿ.ಆರ್.ಅನಂತರಾಮು
ಪ್ರ: ಹರಿವು ಬುಕ್ಸ್, ಬೆಂಗಳೂರು
ಬೆಲೆ : ರೂ 840/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ವಿರಾಮ

ವಿದ್ವತ್ತಿನ ಮೇರು ಪರ್ವತ

ಎಸ್.ಕೆ.ರಾಮಚಂದ್ರರಾವ್ ಅವರಿಗೆ ಒಂದು ಅಭಿನಂದನಾ ಗ್ರಂಥ ರೂಪಿಸುವ ಪ್ರಸ್ತಾಪ ಬಂದಿತು. ಬೇಡವೇ ಬೇಡ ಎಂದು ಮೊಂಡು ಹಿಡಿದವರನ್ನು ಹೇಗೋ ಒಪ್ಪಿಸಿದ್ದಾಗಿತ್ತು. ಆದರೆ ಒಂದೇ ವಾರದಲ್ಲಿ ಬೇಡ ಎಂದು ಬಿಟ್ಟರು. ಅವರ ಗುರುಗಳು ಕನಸಿನಲ್ಲಿ ಬಂದು ಇದೇನೋ ಹುಚ್ಚಾಟ ಎಂದರಂತೆ!

ನನ್ನ ಜೀವನದಲ್ಲಿ ದೊರಕಿದ ಪುಣ್ಯಗಳಲ್ಲಿ ಮುಖ್ಯವಾದದ್ದು ಪ್ರೊ.ಎಸ್.ಕೆ.ರಾಮಚಂದ್ರ ರಾವ್ ಅವರ ಬಳಿಯ ಶಿಷ್ಯತ್ವ. ಅದು ದೊರಕಿದ್ದೂ ಆಕಸ್ಮಿಕವಾಗಿ. ಈಶಾವಾಸ್ಯ ಉಪನಿಷತ್ತಿನ ಒಂದು ಶ್ಲೋಕದ ಕುರಿತು ಅನುಮಾನಕ್ಕಾಗಿ ಅವರನ್ನು ಭೇಟಿ ಮಾಡಿದ್ದೆ. ಅವರು ಇಡೀ ಉಪನಿಷತ್ತಿನ ಸಾರವನ್ನೇ ವಿವರಿಸಿದ್ದಲ್ಲದೆ.



ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಮುಂದೆ ನನಗೆ ಉಪನಿಷತ್ತಿನ ತರಗತಿಗಳನ್ನೇ ತೆಗೆದುಕೊಂಡರು. ಅವರು ಬರೀ ಉಪನಿಷತ್ತನ್ನು ಮಾತ್ರ ಕಲಿಸಲಿಲ್ಲ. ಬದುಕಿನ ಸೂಕ್ಷ್ಮಗಳನ್ನು ಕೂಡ ಕಲಿಸಿದರು. 'ಮಲ್ಲಿಗೆ' ಮಾಸಪತ್ರಿಕೆಯಲ್ಲಿ ನಾನಿದ್ದಾಗ 'ವೇದಾಂತದ ಕತೆಗಳು' ಎಂಬ ಮಾಲಿಕೆಯನ್ನೇ ಬರೆದು ಕೊಟ್ಟರು. ಅದರ ಪ್ರತಿ ಕಂತುಗಳನ್ನು ಅವರ ಮನೆಗೆ ಹೋಗಿ ಪಡೆದು ಕೊಂಡು ಬರುತ್ತಿದ್ದಾಗ ದೊರಕಿದ ಉಪದೇಶಗಳು ನನ್ನ ಬದುಕಿಗೆ ನಿರಂತರ ಬೆಳಕಾದವು. ಕಥನದ್ದು ಒಂದು ನೆಲೆಯಾದರೆ ಅದರ ಹಿಂದಿನ ತಾತ್ವಿಕತೆಯದು ಇನ್ನೊಂದು ನೆಲೆ. ಗಹನವಾದ ಈ ತಾತ್ವಿಕತೆಯನ್ನು ಅವರಷ್ಟು ಪರಿಣಾಮಕಾರಿಯಾಗಿ ಹೇಳುವವರು ಇನ್ನೊಬ್ಬರಿಲ್ಲವೇನೋ. (ಇದನ್ನು ಅವರ ಮಗ ಸುದರ್ಶನ್ ಪುಸ್ತಕ ರೂಪದಲ್ಲಿಯೂ ತಂದರು.)

ಶಿಷ್ಯರಿಗೆ ಪ್ರೀತಿಯ ಗುರುಗಳಾದ ರಾಯರು, ತಪ್ಪು ಕಂಡಾಗ ಅಷ್ಟೇ ಕಠಿಣರಾಗುತ್ತಿದ್ದರು. ಯಾರೇ ತಪ್ಪು ಮಾಡಲಿ, ತಮ್ಮ ತಣ್ಣಗಿನ ಸ್ವರದಲ್ಲಿಯೇ ಅದನ್ನು ಖಚಿತವಾಗಿ ಹೇಳುತ್ತಿದ್ದರು. ಅವರ ಬರಹಗಳಲ್ಲಿಯೂ ಅಷ್ಟೇ, ಎಲ್ಲಿಯೂ ವೈಭವೀಕರಣ, ಕೊಂಕು ಇಲ್ಲವೇ ಇಲ್ಲ. ಇಂತಹ ತಪ್ಪನ್ನು ನಾವು ಮಾಡಿದಾಗಲೂ ಮುಲಾಜಿಲ್ಲದೆ ತರಾಟೆಗೆ ತೆಗೆದು ಕೊಳ್ಳುತ್ತಿದ್ದರು. ಅವರಿಗೆ ಒಂದು ಅಭಿನಂದನಾ ಗ್ರಂಥ ರೂಪಿಸುವ ಪ್ರಸ್ತಾಪ ಬಂದಿತು. ಬೇಡವೇ ಬೇಡ ಎಂದು ಮೊಂಡು ಹಿಡಿದವರನ್ನು ಹೇಗೋ ಒಪ್ಪಿಸಿದ್ದಾಗಿತ್ತು. ಆದರೆ ಒಂದೇ ವಾರದಲ್ಲಿ ಇಲ್ಲವೆಂದು ಬಿಟ್ಟರು. ಅವರ ಗುರುಗಳು ಕನಸಿನಲ್ಲಿ ಬಂದು ಇದೇನೋ ಹುಚ್ಚಾಟ ಎಂದರಂತೆ! ಅಭಿನವ ಗುಪ್ತ ಮತ್ತು ನಾದ ಮಾರ್ಗದ ಕುರಿತು ನನಗೆ ಅನೇಕ ಸೂಕ್ಷ್ಮಗಳನ್ನು ಅವರು ಕಲಿಸಿದರು. ಸಂಗೀತದಲ್ಲಿ ಕೂಡ ಅವರಿಗೆ ಅಪಾರ ವಿದ್ವತ್ತು. ವಕ್ರರಾಗಗಳ ಕುರಿತು ಒಮ್ಮೆ ಅವರು ನನ್ನ ಬಳಿ ಎರಡು ಗಂಟೆಗಳ ಮಾತನಾಡಿದ್ದು ನನ್ನ ಪೂರ್ವಜನ್ಮದ ಸುಕೃತವೇ ಸರಿ!

ಎಸ್.ಕೆ. ರಾಮಚಂದ್ರರಾವ್ 1925ರ ಸೆಪ್ಟೆಂಬರ್ 4ರಂದು ಹಾಸನದಲ್ಲಿ ಜನಿಸಿದರು.(ಇದು ಅವರ ಜನ್ಮ ಶತಮಾನೋತ್ಸವದ ವರ್ಷ) ಅವರ ತಂದೆ ಶ್ರೀ ಕೃಷ್ಣನಾರಾಯಣರಾವ್ ಕಾವೇರಿ ನದಿ ತೀರದ ಹನಸೋಗೆ ಗ್ರಾಮಕ್ಕೆ ಸೇರಿದವರು. ಅವರ ತಾಯಿ ಕಮಲಾಬಾಯಿ ಅಂದಿನ ಮೈಸೂರು ಸಂಸ್ಥಾನದ ಸಾರ್ವಜನಿಕ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಆಗಿದ್ದ ಕೆ. ನಾರಾಯಣರಾವ್ ಅವರ ಪುತ್ರಿ. ಬೆಂಗಳೂರಿನಲ್ಲಿದ್ದ ಈ ತಾತನ ಮನೆಯಲ್ಲಿಯೇ ರಾಮಚಂದ್ರರಾವ್ ಅವರ ಪ್ರಾರಂಭಿಕ ವಿದ್ಯಾಭ್ಯಾಸ ನೆರವೇರಿತು. ತಮ್ಮ ತಾತನವರು ನಿಧನರಾದ ಕಾರಣ ಹನ್ನೆರಡು ವಯಸ್ಸಿನ ಬಾಲಕ ರಾಮಚಂದ್ರರಾವ್ ತಮ್ಮ ತಂದೆ ತಾಯಿಯರಿದ್ದ ನಂಜನಗೂಡಿಗೆ ಬಂದು ಅಲ್ಲಿಯ ಪಾಠಶಾಲೆಯಲ್ಲಿ ತಮ್ಮ ಸಂಸ್ಕೃತಾಭ್ಯಾಸವನ್ನು ಮುಂದುವರೆಸಿದರು. ಅದಾದ ಒಂದು ವರ್ಷದಲ್ಲಿ ಅವರಿಗೆ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳ ದರ್ಶನ ದೊರಕಿ, ಅವರ ಬದುಕಿನ ಮೇಲೆ ಹೊಸದಾದ ಬೆಳಕನ್ನೇ ತಂದಿತು. ಈ ಪ್ರಸಂಗವನ್ನು ವರ್ಣಿಸುವಾಗ ನಮ್ಮನ್ನು ಆ ಕಾಲಕ್ಕೇ ಕರೆದು ಕೊಂಡು ಹೋಗುತ್ತಿದ್ದರು. ಚಂದ್ರಶೇಖರ ಭಾರತಿಗಳ ಕುರಿತು ಅಧಿಕೃತ ವ್ಯಕ್ತಿಚಿತ್ರವನ್ನೂ ಅವರು ರಚಿಸಿದ್ದಾರೆ. ಮುಂದೆ ಶಂಕರಾಚಾರ್ಯರ ಪ್ರಸ್ತಾನತ್ರಯವನ್ನು ಅವರು ಬಹುಕಾಲ ಅಭ್ಯಾಸ ಮಾಡಿದರು.

ರಾಮಚಂದ್ರರಾವ್ ತಮ್ಮ ಹೈಸ್ಕೂಲಿನ ವಿದ್ಯಾಭ್ಯಾಸದ ನಂತರ ಮೈಸೂರಿನ ಯುವರಾಜಾ ಕಾಲೇಜು ಹಾಗೂ ಮಾನಸ ಗಂಗೋತ್ರಿಗಳಲ್ಲಿ ತಮ್ಮ ವಿದ್ಯಾಭ್ಯಾಸವನ್ನು ನಡೆಸಿ ಮನಃ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅಂದಿನ ದಿನಗಳಲ್ಲಿ ತಮ್ಮ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಪ್ರೊ. ಎಂ. ಹಿರಿಯಣ್ಣ, ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಪ್ರೊ. ರಾಘವಾಚಾರ್, ಪ್ರಾಕೃತ ಹಾಗೂ ಸಂಗೀತ ಶಾಸ್ತ್ರ ಬೋಧಕರಾಗಿದ್ದ ರಾಳಪಲ್ಲಿ ಅನಂತಕೃಷ್ಣ ಶರ್ಮ ಅವರ ಕುರಿತು ರಾಮಚಂದ್ರ ರಾವ್ ಅವರಿಗೆ ಅಪಾರ ಅಭಿಮಾನ ಮತ್ತು ಭಕ್ತಿಭಾವಗಳಿತ್ತು, ಅವರೆಲ್ಲರ ಸಾರವನ್ನು ಹೀರಿದ ಮೂರ್ತರೂಪವಾಗಿ ಎಸ್.ಕೆ.ಆರ್. ನಮಗೆ ದೊರಕಿದ್ದರು. ಪದವಿ ಪಡೆದ ನಂತರ ರಾಮಚಂದ್ರರಾಯರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಇಂಡಸ್ಟ್ರಿಯಲ್ ಸೈಕಾಲಜಿ ವಿಭಾಗದಲ್ಲಿ ರಿಸರ್ಚ್ ಅಸಿಸ್ಟೆಂಟ್ ಹುದ್ದೆಗೆ ಸೇರಿ ಅಲ್ಲಿ ಡಾಕ್ಟರ್ ಎನ್. ಎಸ್. ಶ್ರೀನಿವಾಸ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡಿದರು. ಇದೇ ಸಮಯದಲ್ಲಿಯೇ ಜೈನ ಬೌದ್ಧ ಧರ್ಮಗಳ ಕುರಿತೂ ಆಳವಾದ ಅಧ್ಯಯನ ನಡೆಸಿದರು. ಎಸ್ ಕೆ ರಾಮಚಂದ್ರ ರಾವ್ ಅವರಿಗೆ ಶಾಲಾ ದಿನಗಳಲ್ಲೇ ಚಿತ್ರಕಲೆ ಮತ್ತು ಶಿಲ್ಪಕಲೆಗಳಲ್ಲಿ ಆಸಕ್ತಿ ಉಂಟಾಗಿತ್ತು. ಹೀಗಾಗಿ ಮೇಣ, ಸಾಬೂನು ಮುಂತಾದವುಗಳಲ್ಲಿ ಶಿಲ್ಪಗಳನ್ನು ಮಾಡುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಪೆನ್ಸಿಲ್ ಮತ್ತು ಚಾರ್‌ಕೋಲ್‌ನಲ್ಲಿ ಚಿತ್ರಬಿಡಿಸುವ ಕಲೆ ಕೂಡಾ ಅವರಿಗೆ ಹಸ್ತಗತವಾಗಿತ್ತು. ಖ್ಯಾತ ಕಲಾವಿದ ವೆಂಕಟಪ್ಪನವರ ಶಿಷ್ಯತ್ವ ಕೇಳಿದಾಗ 'ಪೂರ್ಣ ಪ್ರಮಾಣದಲ್ಲಿ' ಚಿತ್ರಕಲೆ ಕಲಿಯಲು ಬರಬೇಕೆಂಬ ಶರತ್ತು ಇಟ್ಟಿದ್ದರಿಂದ ಸಾಧ್ಯವಾಗಲಿಲ್ಲ.

1954ರಲ್ಲಿ ಆಲ್ ಇಂಡಿಯಾ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಸಂಸ್ಥೆ ಪ್ರಾರಂಭಗೊಂಡಾಗ ಆ ಸಂಸ್ಥೆಯ ನಿರ್ದೇಶಕ ಹುದ್ದೆಯನ್ನು ವಹಿಸಿದ್ದ ಡಾ. ಎಂ. ವಿ. ಗೋವಿಂದಸ್ವಾಮಿ ಅವರು ಪ್ರೊ. ಎಸ್. ಕೆ ರಾಮಚಂದ್ರರಾವ್ ಅವರಿಗೆ ಮನಃಶಾಸ್ತ್ರ ವಿಭಾಗದ ಸಹಾಯಕ ಪ್ರೊಫೆಸರ್ ಹುದ್ದೆಯ ಆಹ್ವಾನ ನೀಡಿದರು. ಇಲ್ಲಿನ ಪಠ್ಯ ಬೋಧನೆಗಳಲ್ಲಿ ಭಾರತೀಯ ತತ್ವಚಿಂತನೆಗಳ ವಿಚಾರವೂ ಒಳಗೊಂಡಿತ್ತು. ಇದರಿಂದ ಪ್ರೇರಿತರಾದ ರಾಯರು 1962ರ ವರ್ಷದಲ್ಲಿ 'ದಿ ಡೆವೆಲಪ್ಮೆಂಟ್ ಆಫ್ ಸೈಕಲಾಜಿಕಲ್ ಥಾಟ್ ಇನ್ ಇಂಡಿಯಾ' ಎಂಬ ಗ್ರಂಥವನ್ನು ರಚಿಸಿದರು. ಪ್ರೊ. ಎಂ. ವಿ. ಗೋವಿಂದಸ್ವಾಮಿ ಅವರ ನಿಧನಾನಂತರದಲ್ಲಿ ಪ್ರೊ. ಎಸ್ ಕೆ ರಾಮಚಂದ್ರ ರಾವ್ ಅವರು ಡಿಪಾರ್ಟ್ಮೆಂಟ್ ಆಫ್ ಕ್ಲಿನಿಕಲ್ ಸೈಕಾಲಜಿ ವಿಭಾಗದ ಮುಖ್ಯಸ್ಥರ ಜವಾಬ್ದಾರಿಯನ್ನು ನಿರ್ವಹಿಸಿದರು. ಮಿಥಿಕ್ ಸೊಸೈಟಿಯಲ್ಲಿಯೂ ಕ್ರಿಯಾಶೀಲರಾಗಿದ್ದ ಅವರು ಅಲ್ಲಿನ ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿ ಭಾರತೀಯ ದರ್ಶನ ಶಾಸ್ತ್ರಗಳ ಮೇಲೆ ಬೆಳಕು ಚೆಲ್ಲುವ ಹಲವಾರು ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸಿದರು.

1965ರ ವರ್ಷದಲ್ಲಿ ತಮ್ಮ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಸೇವೆಯಿಂದ ಹೊರಬಂದ ರಾಮಚಂದ್ರರಾಯರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸೇರಿದ ಹಲವಾರು ವಿದ್ಯಾಸಂಸ್ಥೆಗಳಲ್ಲಿ ಮನಃಶಾಸ್ತ್ರ, ತತ್ವಶಾಸ್ತ್ರ, ಭಾರತೀಯ ದರ್ಶನ ಶಾಸ್ತ್ರಗಳನ್ನು ಬೋಧಿಸುವುದರ ಜೊತೆಗೆ ಸಮಾಜ ಸೇವೆ ಮತ್ತು ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ವಿಷಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನಾಡಿಗೆ ಅವರ ಪ್ರವಚನ ಮತ್ತು ಬರಹದ ಬೆಳಕು ಈ ಮೂಲಕ ದೊರಕಿತು. ನಾನು ಎರಡು ಕೆಲಸಗಳನ್ನು ಮಾಡ ಬೇಕು ಎಂಬ ಆಗ್ರಹ ಅವರದಾಗಿತ್ತು. ಒಂದು ಸದ್ಗುರು ಶಂಕರಲಿಂಗ ಭಗವಾನರ ಉಪದೇಶಗಳ ವಿಶ್ಲೇಷಣೆ , ಇನ್ನೊಂದು ಚಿತ್ರಗೀತೆಗಳಲ್ಲಿ ಬಳಕೆಯಾಗಿರುವ ರಾಗಗಳ ವಿಶ್ಲೇಷಣೆ. ಇವೆರಡನ್ನೂ ಅವರ ಜೀವಿತ ಕಾಲದಲ್ಲಿ ಮಾಡಲಾಗಲಿಲ್ಲವೆನ್ನುವ ಕೊರಗು ನಿರಂತರವಾಗಿ ಕಾಡುತ್ತಲೇ ಇರುತ್ತದೆ. ಕೊನೆಯ ದಿನಗಳಲ್ಲಿ ಎಸ್.ಕೆ.ಆರ್. ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಅವರನ್ನು ನೋಡಲು ಹೋದಾಗ 'ಏನು ಸರ್, ಹೀಗೆ ಹಾಸಿಗೆ ಹಿಡಿದು ಬಿಟ್ಟಿರಿ' ಎಂದರೆ 'ನಾನು ಮಾಡಿದರೂ ಪರಿಪೂರ್ಣವಾಗಿಯೇ ಮಾಡುವನು' ಎಂದರು. ಅಂತಹ ಹೊತ್ತಿನಲ್ಲಿಯೂ ಅವರ ಹಾಸ್ಯಪ್ರಜ್ಞೆ ಪ್ರಖರವಾಗಿಯೇ ಇತ್ತು! ನಮ್ಮ ಕಾಲದ ವಿಸ್ಮಯ ಎನ್ನಿಸಿ ಕೊಂಡಿದ್ದ ಎಸ್.ಕೆ.ಆರ್, 2006ರ ಫೆಬ್ರುವರಿ 2ರಂದು ಈ ಲೋಕವನ್ನಗಲಿದರು.

ಸೋಲನ್ನು ಸೋಲಿಸಿದ ಪೊಲೀಸ್!

» ಚಿದಾನಂದ ಮಾಯಪ್ಪಾ ಪಡದಾಳೆ

ಇದು ಸ್ಪರ್ಧಾತ್ಮಕ ಯುಗ. ಈ ಯುಗದಲ್ಲಿ 'ಸಕ್ಸಸ್ ರೇಟ್' ತುಂಬಾನೇ ಕಡಿಮೆ. ಆದರೂ ಅದೆಷ್ಟೋ ಸ್ಪರ್ಧಾಕಾಂಕ್ಷಿಗಳು ತಮ್ಮ ಕನಸುಗಳನ್ನು ನನಸಾಗಿಸಿಕೊಳ್ಳಲು ಒಂದು ಕ್ಷಣವೂ ವಿಚಲಿತಗೊಳ್ಳದೆಯೇ ಅಧ್ಯಯನದಲ್ಲಿ ನಿರತರಾಗಿರುತ್ತಾರೆ. ಅವರಿಗೆ ಕನಸಿನ ಕನವರಿಕೆ ಬಿಟ್ಟರೆ ಬೇರೆಡೆ ತುಡಿತವೇ ಇರುವುದಿಲ್ಲ. ಕೆಲವೊಂದು ಸಲ ಅವರ ಪ್ರಯತ್ನಕ್ಕೆ ಫಲವೇ ಸಿಗುವುದಿಲ್ಲ. ಕೆಲವರು 'ಮರಳಿ ಪ್ರಯತ್ನವ ಮಾಡು' ಎಂಬ ಮಂತ್ರ ಪಠಿಸಿದರೆ, ಇನ್ನು ಕೆಲವರು ಸೋಲಿನಿಂದ ವಿಚಲಿತ ರಾಗಿ ಬಹು ಬೇಗ ತಮ್ಮ ಕನಸಿನಿಂದ ದೂರಾಗಿ ಬಿಡುತ್ತಾರೆ.

ಆದರೆ ಇಲ್ಲೊಬ್ಬ ಯುವಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಫೇಲಾಗಿದ್ದು ಬರೋಬ್ಬರಿ 33 ಸಲ! ಆದರೂ ಸೋಲಿಗೆ ಸೋಲಿನ ರುಚಿ ತೋರಿಸಿ ಗೆದ್ದವ ಇಂದು ಐಪಿಎಸ್! ಅವರೇ, ರಾಜಸ್ಥಾನದ ಹನುಮಾನ್‌ಗಢ್ ಜಿಲ್ಲೆಯ ಅಜಿತಪುರ್ ಎಂಬ ಪುಟ್ಟ ಗ್ರಾಮದ ಆದಿತ್ಯ ಕುಮಾರ್! ರಾಜಸ್ಥಾನ ಸರ್ಕಾರದಿಂದ ಸರ್ಕಾರಿ ಹುದ್ದೆಗಳಿಗಾಗಿ ಅಧಿಕೃತವಾಗಿ ಪ್ರಕಟಗೊಳ್ಳುವ ಎಲ್ಲ ಅಧಿಸೂಚನೆಗಳಿಗೆ ಅರ್ಜಿ ಸಲ್ಲಿಸಿ, ಪರೀಕ್ಷೆ ಬರೆಯುತ್ತಿದ್ದರೂ ಪ್ರತಿ ಸಲವೂ ಸೋಲು ಅಣಕಿಸಿ ನಗುತ್ತಿತ್ತು. ರಾಜ್ಯದ ಸೇವಾ ಪರೀಕ್ಷೆ, ಬ್ಯಾಂಕಿಂಗ್ ಹೀಗೆ ಹಲವಾರು ಪರೀಕ್ಷೆ ಬರೆದು ಬೇಸತ್ತು, 2013ರಲ್ಲಿ ದೆಹಲಿಗೆ ಹೋಗಿ, ಅಲ್ಲಿ ನಾಗರಿಕ ಸೇವಾ ಪರೀಕ್ಷೆಗಳಿಗೆ ಅಣಿಯಾದರೂ ಸೋಲು ಹಿಂಬಾಲಿಸುವುದನ್ನು ಬಿಡಲೇ ಇಲ್ಲ. ಸತತ ಮೂರು ಪ್ರಯತ್ನಗಳಲ್ಲಿ ಸೋತರು. ಸುತ್ತಮುತ್ತಲಿ ನವರು ಹೀಯಾಳಿಸಿದರು. ಕುಹಕ ಮಾತುಗಳ ನ್ನಾಡಿ ನೋವು ನೀಡಿದರೂ ಆದಿತ್ಯ ಅವರ ಆತ್ಮವಿಶ್ವಾಸಕ್ಕೆ ಕೊರತೆಯಿರಲಿಲ್ಲ. ಕೊನೆಗೆ ಸೋಲಿಗೂ ಸಾಕು ಎನಿಸಿತೇನೂ? ಇವರ ಪ್ರಾಮಾಣಿಕ ಪ್ರಯತ್ನಗಳ ಮುಂದೆ ಸೋಲು ಮಂಡಿಯೂರ=ಲೇಬೇಕಾಯಿತು. 2017ರ ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ, ನಾಲ್ಕನೇ ಪ್ರಯತ್ನದಲ್ಲಿ, ಇಡೀ ದೇಶಕ್ಕೆ 630ನೇ ಸ್ಥಾನದೊಂದಿಗೆ ಐಪಿಎಸ್ ಹುದ್ದೆ ಪಡೆದು, ಪಂಜಾಬ್ ಕೇಡರ್‌ಗೆ ಆಯ್ಕೆ ಆದರು. ಈಗ ಸಂಗ್ರೂರ್ ಜಿಲ್ಲೆಯಲ್ಲಿ ಎಎಸ್‌ಪಿ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಷ್ಟ-ಸೋಲುಗಳು ಬರುವುದು ನಮ್ಮನ್ನು ಗಟ್ಟಿಯಾಗಿಸಲೇ ಹೊರತು, ಕುಗ್ಗಿಸಲು ಅಲ್ಲ. ಪ್ರತೀ ಸಲ ಸೋಲು ಎದುರಾದಾಗಲೂ ಹಿಂಜರಿಯದೇ ಮುನ್ನಡೆಯಬೇಕು. ಸೋಲನ್ನು ಸೋಲಿಸಿ ಗೆಲ್ಲುವ ತಾಕತ್ತು ನಮ್ಮೆಲ್ಲರಲ್ಲೂ ಇದೆ.

ಅವಳು

● ಕಾರ್ತಿಕ್ ಕೃಷ್ಣ

ಸೆಮಿನಾರ್ ಹಾಲಿನ ಅವಳ ಆಕ್ರಂದನ
ನಮಗೆ ಕೇಳಿಸಲೇ ಇಲ್ಲ
ದೇಶದ ಯಾವುದೋ ಮೂಲೆಯಲ್ಲಿ ಅವಳು
ಆಗಾಗ ನಲುಗುತ್ತಿದ್ದುದ್ದಕ್ಕೆ ನಾವು ಕಿವಿಯಾಗಲೇ ಇಲ್ಲ

ಎಚ್ಚರಿಸುವುದಿದ್ದರೆ ನಿರ್ಭಯಾಳ
ಬಿಸಿ ನೆತ್ತರ ಶಾಖವೇ ಅಂದೇ
ನಮ್ಮನ್ನು ಬಡಿದೇಳಿಸಬೇಕಿತ್ತು

ಮೆತ್ತನೆಯ ಹಾಸಿನ ಮೇಲೆ
ಸಿಹಿನಿದ್ದೆಯಲ್ಲಿರುವ ನಮಗೆ
ಎರಡು ವಾರದ ಮೇಲೆ
ಏನೊಂದೂ ನೆನಪಿರುವುದಿಲ್ಲ.

ಸುದೀರ್ಘ ಮರೆವಿನ ಮಂಪರು
ದೇಶದುದ್ದಕ್ಕೂ ಸಾಮೂಹಿಕ ನಿದ್ದೆ
ಇಷ್ಟೇನಾ ನಮ್ಮ ಕಾಳಜಿ?



ಹಸುರು ವಾಣಿಯ ಹೊಸ ಪ್ರಯೋಗ

ದೇಶದಲ್ಲಿ ಜನಸಂಖ್ಯೆಯೆಂಬ ಸಿಡಿಮದ್ದು ಅಲ್ಲಲ್ಲಿ ಸ್ಫೋಟಗೊಂಡು ಢಾಂ ಢೂಂ ಎನ್ನುತ್ತಿರುವಾಗಲೇ ವಾಣಿಜ್ಯ ರಾಜಧಾನಿಯಲ್ಲೀಗ ಉದ್ಯೋಗ, ಶಿಕ್ಷಣ, ಗಳಿಕೆ ಹಾಗೂ ಉತ್ತಮ ಸೌಲಭ್ಯದ ಸಲುವಾಗಿ ಸದ್ದಿಲ್ಲದೆ ನೆಲಸಿಗರು ಬಂದು ನೆಲಗುಮ್ಮ

ಮುಂಬಾಪುರಿ

» ಕಲಾ ಭಾಗ್ವತ್

ಸಿಡಿಸುತ್ತಿದ್ದಾರೆ. ಒಗ್ಗಟ್ಟಿಲ್ಲದ ಊರಿಗಿಂತ ಇಕ್ಕಟ್ಟಾದ ಜಾಗವೇ ಲೇಸೆಂದು ಬಂದು ಊರುಕೇರಿಯನ್ನು ಇಲ್ಲೇ ಸೃಷ್ಟಿಸಿಕೊಳ್ಳುವವರಿಗೇನೂ ಇಲ್ಲಿ ಕಡಿಮೆಯಿಲ್ಲ. 'ಈ ನಗರದಲಿ ನಿತ್ಯ ಮಹಾಭಾರತ ಯುದ್ಧ, ಸೋತವನೂ ಸಿಡಿದೆದ್ದು ಮತ್ತೆ ಸಮರಕೆ ಸಿದ್ಧ' ಎಂಬ ಸನದಿಯವರ ನುಡಿಯು ಇಲ್ಲಿನ ವಾಸ್ತವ. ನಿಬಿಡವಾದ ವಲಸೆ ವೈವಿಧ್ಯತೆಯಿಂದಾಗಿ ಮುಂಬಾಪುರಿಯು ವಿಘಟಿತ

ಹೊರವಲಯಕ್ಕೂ ಚಾಚಿಕೊಂಡಿರುವುದರಿಂದ ಇಲ್ಲೀಗ ನಗರ ಮತ್ತು ಗ್ರಾಮೀಣ ಸಂಸ್ಕೃತಿಗಳ ಸಂಕರವೇರ್ಪಟ್ಟಿದೆ. ನಿತ್ಯದ ಕರ್ತವ್ಯ, ಕಾಯಕ, ಕಿಲಿಕಿಲಿಗಳಿಂದ ಹೊರತಾದ ಹಸುರಿನಲ್ಲಿ ವಿಹರಿಸಬೇಕೆಂಬ ಹಂಬಲದಲ್ಲಿ ಮುಂಬೈ ಜನರು ಮಣ್ಣಿಗೂ ಹಣ ಕೊಟ್ಟು ಮಡಿಕೆಗಳೊಳಗಿಟ್ಟು ಮನೆಯ ಬಾಲ್ಕನಿಯಲ್ಲಿ ಬೆಳೆಯನ್ನು ಬೆಳೆದು ಸುಖಿಸುತ್ತಾರೆ. ಮನೆಯ ಕೆಳಗಿಳಿದರೆ ಕೊಳ್ಳಿರೆಂದು ಕರೆಯುವ ತರಕಾರಿ, ಹೂವುಗಳ ಅಂಗಡಿಗಳಿದ್ದರೂ ಹೊಟ್ಟೆಗೆ ಹಿಟ್ಟು, ಜುಟ್ಟಿಗೆ ಮಲ್ಲಿಗೆ, ಬೆಟ್ಟದಷ್ಟು ಖುಷಿ ಎಲ್ಲವನ್ನೂ ಈ ಪುಟ್ಟ ಕೃಷಿಯಲ್ಲೇ ಕಾಣುವ ಹೆಚ್ಚಿನ ಮಹಾಜನಗಳನ್ನು ಹುಟ್ಟೂರಿನ ಹಸುರಿನ ಮಾಯೆಯು ಬಿಡುವುದೇ ಇಲ್ಲ. ಬಾಲ್ಕನಿಯ ಲ್ಲಿಯೇ ಬೀಟ್ರೂಟ್, ಮೂಲಂಗಿ ಹಾಗಲಕಾಯಿ, ಪಾಲಕ್, ಮೆಂತೆ, ಹರಿವೆ ಇತ್ಯಾದಿಗಳನ್ನು ಬೆಳೆದು ಅನೇಕರು ಬೇಸರ ಕಳೆಯುತ್ತಾರೆ. ಜನಾರಣ್ಯದಲ್ಲಿ ಕಟ್ಟಡಗಳಷ್ಟೇ ಅಲ್ಲದೆ ಬೆಟ್ಟ ಮರಮಟ್ಟುಗಳು ಸಾಕಷ್ಟಿವೆ. ಇವುಗಳ ನಡುವೆ ಹೊಲಗಳನ್ನೂ ಹುಟ್ಟಿಸಿಕೊಂಡು ಸಾಗುವಳಿ ಮಾಡಲು ಆ ಮೂಲಕ ಬಡವರಿಗೆ ಕೃಷಿ ಉದ್ಯೋಗ, ಹೆಚ್ಚುವರಿ ಆಹಾರ ಮತ್ತು ಗಳಿಕೆಗೆ ಅನುಕೂಲ ಮಾಡಿಕೊಡಬೇಕೆಂದು ಭಾರತೀಯ ರೈಲ್ವೆ ಇಲಾಖೆಯು ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದು ಇಲ್ಲಿ ಗಮನ ಸೆಳೆಯುವ ಸಂಗತಿ. ಮುಂಬೈ ನಿದ್ರಿಸದ ನಗರಿ. ಇಲ್ಲಿನ ಕಡಲ ಕಿನಾರೆಯುದ್ದಕ್ಕೂ ಅಂಗಾತ ಮಲಗಿರುವ ರೈಲು ಹಳಿಗಳ ಎದೆ ಸೀಳಿಕೊಂಡು ಮುಂಬೈ ಲೋಕಲ್ ಓಡಾಡುತ್ತಲೇ ಇರುತ್ತದೆ. ಮುಂಬಯಿಯ ದಾವಂತದ ಬದುಕಿಗೆ ಇಲ್ಲಿನ ರೈಲು ಪ್ರಯಾಣದ ಉಪ್ಪು ಖಾರದನುಭವವು ಸೇರಿ ಅದು ಇನ್ನಷ್ಟು ಚುರುಕುಗೊಂಡಿದೆ. ದಿನವಹಿ ಸುಮಾರು ಎಂಬತ್ತು ಲಕ್ಷ ಜನರು ಇಲ್ಲಿ ರೈಲು ಸವಾರಿ ಮಾಡುವುದು ಅಚ್ಚರಿಯೆನಿಸುವ ವಾಸ್ತವ. ಮುಂಬಾಪುರಿಯ ಜೀವನಾಡಿಯಾದ ರೈಲಿನ ಓಡಾಟವು ಒಂದು ದಿನ ಸ್ತಬ್ಧವಾದರೂ ಇಲ್ಲಿನ ಬದುಕು ಅಲ್ಲೋಲಕಲ್ಲೋಲವಾಗುತ್ತದೆ. ಗಾಲಿಗಳ ಸದ್ದಿನಲ್ಲಿ ವಾಣಿಜ್ಯ ನಗರಿಯ ಹೃದಯ ಬಡಿತದ ಲಬ್ ಡಬ್ ಸದ್ದು ಕೇಳಿಬರುತ್ತದೆ. ಮಳೆಗಾಲದಲ್ಲಂತೂ ಕುವೆಂಪು ಅವರ ''ಹಸುರತ್ತಲ್ ಹಸುರಿತ್ತಲ್ ಹಸುರೆತ್ತಲ್'' ಎನ್ನುವ ಸಾಲನ್ನು ನೆನಪಿಸುವಷ್ಟು ಹಸುರಿನಿಂದ ಈ ಜನಾರಣ್ಯವು ಮೈದುಂಬಿರುತ್ತದೆ. ಲೋಕಲ್ ರೈಲಿನಿಂದ ಹೊರಗೆ ಇಣುಕಿದಾಕ್ಷಣ ಇನ್ನೊಂದು ಲೋಕ! ಹಳಿಗಳುದ್ದಕ್ಕೂ ಕಾಣುವ ಕೆಸರ ಕೌದಿಯ ಹೊದ್ದ ನೆಲದಲ್ಲಿ ರಾತ್ರಿ ಬೆಳಗಾಗುವುದರೊಳಗೆ ಕಟ್ಟಿ ನಿಲ್ಲಿಸುವ ಅದೆಷ್ಟೋ ಬಿಡಾರಗಳ ತ್ಯಾಜ್ಯ ಸಂಗ್ರಹವು ಹೊಸದಾಗಿ ಲೋಕಲ್ ರೈಲು ಪ್ರಯಾಣ ಮಾಡುವವರನ್ನು ಒಮ್ಮೆ ಬೆಚ್ಚಿ ಬೀಳಿಸುತ್ತದೆ. ತೆರೆದ ಗಟಾರ, ಕಸದ ರಾಶಿ, ಹಂದಿ, ಇಲಿ, ಜಿರಳೆಗಳೇ ತುಂಬಿರುವ ಈ ಜಾಗಗಳಲ್ಲಿ ಮುಂಬೈಯ ಇನ್ನೊಂದು ಮುಖದ ನಿಜ ದರ್ಶನವಾಗುತ್ತದೆ.

ರೈಲಿನ ಪಕ್ಕದಲ್ಲಿ ತರಕಾರಿ ಕೃಷಿ

ಸುರಕ್ಷತೆಗೋಸ್ಕರವಾಗಿ ರೈಲು ಹಳಿಯ ಪಕ್ಕದಲ್ಲಿ ಇರುವ ಎಕರೆಗಟ್ಟಲೆ ಜಾಗವು ಸ್ಲಮ್ ನಿವಾಸಿಗಳ ಆಕ್ರಮಣದಿಂದ ತಪ್ಪಿಸಿಕೊಳ್ಳಲು ಉಪಾಯ ಹುಡುಕಿಕೊಂಡಿದೆ. ಇಲ್ಲೆಲ್ಲ ಶತಮಾನಗಳಿಂದ ಹಸುರುವಾಣಿಯನ್ನು ಪಟ್ಟಾಗಿ ಬೆಳೆಸಲಾಗುತ್ತಿದೆ. ಮುಂಬಾಪುರಿಯ ಸಂಪೂರ್ಣ ವ್ಯವಸ್ಥೆಯನ್ನೇ ಹೊತ್ತು ಈ ನಗರದ ಉದ್ದಗಲಕ್ಕೂ ಮೈಚಾಚಿಕೊಂಡು ಗಾವುದ ದೂರ ಹಬ್ಬಿ ಲಕ್ಷೋಪಲಕ್ಷ ಜನರನ್ನು ದಿನನಿತ್ಯ ಅತ್ತಿಂದಿತ್ತ ಓಡಾಡಿಸುವ ರೈಲು ಮಾರ್ಗಕ್ಕೆ ಗಟ್ಟಿತನವು ಬಹುಶಃ ಈ ಹಸುರು ಹೊನ್ನಿನಿಂದಲೇ ಬಂದಿರಬೇಕು. ಅನೇಕ ವರ್ಷಗಳಿಂದ ಬಂದುಳಿದ ನಿವಾಸಿಗಳು ರೈಲ್ವೆ ಇಲಾಖೆಯಿಂದ ಗುತ್ತಿಗೆ ಪಡೆದ ಭೂಮಿಯಲ್ಲಿ ಕಾಯಿ ಪಲ್ಯಗಳ ಕೃಷಿ ಮಾಡುತ್ತಾರೆ. ಮುಂಬೈಯ ದೊಡ್ಡ ದೊಡ್ಡ ತರಕಾರಿ ಮಂಡಿಗಳಿಗೆ ನಾಸಿಕ್, ಗುಜರಾತ್ ಪಂಜಾಬ್ ಹಾಗೂ ಮಹಾರಾಷ್ಟ್ರದ ಇತರ ಹಳ್ಳಿಗಳಿಂದ ಬೆಳಿಗ್ಗೆ ಎರಡು ಗಂಟೆಯ ಆಸು ಪಾಸು ಮುನ್ನೂರಕ್ಕೂ ಹೆಚ್ಚು ಲಾರಿಗಳಲ್ಲಿ ತರಕಾರಿಗಳು ಬಂದಿಳಿಯುತ್ತವೆ. ಇದಕ್ಕೆ ಹೊರತಾಗಿ ಹಾಗೇ ಬಂದು ಕೂತು ಪ್ಲಾಸ್ಟಿಕ್ ಮೇಲೆ ತರಕಾರಿಗಳನ್ನು ಹರಡಿ ಅಗ್ಗದ ಬೆಲೆಯಲ್ಲಿ ಮಾರಿ ಎದ್ದು ಹೋಗುವ ಸಣ್ಣಪುಟ್ಟ ಸ್ಥಳೀಯ ಮಾರಾಟಗಾರರಿಗೆ ರೈಲ್ವೆ ಜಾಗದ ಬೆಳೆಯೇ ಮುಖ್ಯ ಸರಕು. ಕೊಳಗೇರಿಗೆ ಹತ್ತಿರವಿರುವ ಗದ್ದೆಗಳಿಗೆಲ್ಲ ಕೊಳಚೆ ನೀರಿನಿಂದಲೇ ತಂಪು.

ಇತ್ತೀಚೆಗೆ ಹೆಚ್ಚುವರಿ ಆಹಾರ ಯೋಜನೆಯ ಅಡಿಯಲ್ಲಿ ಬೆಳೆಯುತ್ತಿರುವ ಈ ತರಕಾರಿಗಳಿಗೆ ತ್ಯಾಜ್ಯ ನೀರನ್ನುಣಿಸುವುದು ಆರೋಗ್ಯದ ದೃಷ್ಟಿಯಿಂದ ಒಳಿತಲ್ಲವೆಂಬ ಆರೋಗ್ಯ ಸಂಸ್ಥೆಗಳ ಪುಕಾರಿನ ಹಿನ್ನೆಲೆಯಲ್ಲಿ ರೈತರು ಸಲ್ಲಿಸಿದ ಕೋರಿಕೆ ಅರ್ಜಿಗೆ ಸ್ಪಂದಿಸಿ ರೈಲ್ವೆ ಇಲಾಖೆಯು ಬಾವಿಗಳಿರುವಲ್ಲಿ ಮಾತ್ರ ತರಕಾರಿಗಳನ್ನು ಬೆಳೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಬಹಳ ಜಾಗವಿರುವಲ್ಲಿ ಹೈನುಗಾರಿಕೆಯನ್ನು ಮಾಡಲು, ದನ ಕರುಗಳಿಗೆ ಬೇಕಾಗುವ ಮೇವನ್ನು ಬೆಳೆಸುವ ವ್ಯವಸ್ಥೆಯೂ ಇದೆ. ಸುತ್ತಲಿನ ಗದ್ದೆಯಲ್ಲಿ ಅಷ್ಟೇ ಅಲ್ಲ ಹಳಿಗಳ ಆಜು ಬಾಜು ಖಾಲಿ ಜಾಗಗಳಲ್ಲಿ ಹೂಬನ, ಗೃಹಾಲಂಕಾರ ಮತ್ತು ಔಷಧಿ ಗಿಡಗಳನ್ನು ಬೆಳೆಸುವ ಯೋಜನೆಯನ್ನೂ ಮುಂದಿಟ್ಟಿದೆ. ಇದನ್ನು ಕೈಗೆತ್ತಿಕೊಳ್ಳಲು ನುರಿತ ಗುತ್ತಿಗೆದಾರರನ್ನು ಆಕರ್ಷಿಸುವ ಸವಾಲು ರೈಲ್ವೆ ಇಲಾಖೆಯ ಮುಂದಿದೆ. ಮೆಟ್ರೋಪಾಲಿಟನ್ ನಗರವಾದ ಮುಂಬೈಯಲ್ಲಿ ಜನರ ಜೀವನೋಪಾಯವನ್ನು ಬೆಂಬಲಿಸಲು ಹತ್ತು ಹಲವು ಗ್ರಾಮೀಣ ಯೋಜನೆಗಳು ಒಳಗೊಳಗೇ ರೂಪುಗೊಂಡಿವೆ.

ಹಾಗೇನಾದರೂ ಯೋಜನೆಗಳು ಕಾರ್ಯರೂಪಕ್ಕೆ ಬಂದರೆ 'ಯಾರೂ ತುಳಿಯದ ಹಾದಿಯ ಬದಿಯಲಿ ಮೌನದೊಳಿರುವಳು ಈ ಚಲುವೆ' ಎಂಬ ಜಿ ಎಸ್ ಎಸ್ ವಾಣಿಯಂತೆ ಹಳಿಗಳ ಇಕ್ಕೆಲಗಳಲ್ಲಿ ತಮ್ಮ ಪಾಡಿಗೆ ಬೆಳೆದು ನಿಂತ ಹಸುರು ಮುಂಬಾಪುರಿಯ ಜೀವಸೆಲೆ. ಅರಳಿ ಹೊರಳಿ ಬಳಕಿ ಬಾಗಿ ಬೀಗುವ ರಂಗಬಿರಂಗಿ ಸುಮರಾಶಿಗಳ ಸೌಂದರ್ಯದಿಂದ ಜನ ನಿಬಿಡವಾದ ರೈಲಿನಲ್ಲಿ ಒಂಟಿ ಕಾಲಲ್ಲಿ ನಿಂತು ಗಂಟೆಗಟ್ಟಲೆ ಪ್ರಯಾಣ ಮಾಡಿ ತಪಸ್ಸಿನಂತೆ ನಿತ್ಯ ಕಾಯಕಗೈವ ಮುಂಬೈಕರ್ಸ್ ಕಣ್ಮನಗಳು ತುಸುವಾದರೂ ತಣಿದೀತೇ? ಕಾದು ನೋಡಬೇಕು.

ಮುಂಬಯಿಯಲ್ಲಿರುವ ವಿಸ್ಮಯ ಎನಿಸಿರುವ ಲೋಕಲ್ ರೈಲುಗಳ ಜತೆಯಲ್ಲೇ, ರೈಲು ಹಳಿಗಳ ಪಕ್ಕದಲ್ಲೇ ಬೆಳೆಯುವ ಹಸಿರುವಾಣಿಯೂ ಇನ್ನೊಂದು ವಿಸ್ಮಯ!

ಎಲ್ಲೀ... ನಮ್ಮ ಆಟೋಮರಿಯೂ!

ಇತ್ತೀಚೆಗೆ ಬೆಂಗಳೂರಿಗೆ ಹೋದಾಗ, ಚಿಕ್ಕಪೇಟೆಗೆ ಹೋಗಿ ಚೆನ್ನಾಗಿ ಶಾಪಿಂಗ್ ಮಾಡಿ ಬರೋಣ ಬನ್ನಿ ಎಂದು ತಂಗಿ ಹಾಗೂ ತಮ್ಮನ ಹೆಂಡತಿಯನ್ನು ಕರೆದೆ. ನಮ್ಮ ರಾಜಾಜಿನಗರದಿಂದ ಚಿಕ್ಕಪೇಟೆ ಹತ್ತಿರ ಇರುವುದರಿಂದ ಆಟೋದಲ್ಲಿ ಹೋಗುವುದು ಸುಲಭ, ಅಲ್ಲಿಂದ

ಲಹರಿ

» ನಳಿನಿ ಟಿ. ಭೀಮಪ್ಪ

ಬರುವುದೇ ತಲೆನೋವು ಎಂದು ಅವರಿಬ್ಬರು ತಲೆತಿವಿದು ಹೇಳಿದರೂ ತಲೆಗೆ ಹೋಗಿರಲಿಲ್ಲ. ಜೊತೆಗೆ ಅಲ್ಲಿಗೆ ಹೋದ ಮೇಲೆ ಒಂದು ದಿನ ಪೂರ್ತಿ ಹೋಗುತ್ತದೆ ಎಂದಾಗ, ಬೇಗ ಬೇಗ ಖರೀದಿ ಮಾಡಿ ಬಂದುಬಿಡೋಣ, ಟೈಮ್ ವೇಸ್ಟ್ ಮಾಡೋದೇ ಬೇಡಾ, ಹತ್ತಿರವಿದ್ದರೆ ಇನ್ನೂ ಒಳ್ಳೆಯದಲ್ವ ಎಂದಾಗ ಅವರು ಕನಿಕರದಿಂದ ನನ್ನೆಡೆಗೆ ನೋಡಿದ್ದರು.

ಸರಿ ರಾಜಾಮಾರ್ಕೆಟ್ ಎಂದು ಹೇಳಿ ಆಟೋದಲ್ಲಿ ಕುಳಿತು ಅಲ್ಲಿ ತೆಗೆದುಕೊಳ್ಳಬೇಕಾದ ಬಟ್ಟೆ, ಫ್ಯಾನ್ಸಿ ಒಡವೆ, ಗಿಫ್ಟು ಎಲ್ಲ ಲೆಕ್ಕಾಚಾರ ಹಾಕಿಕೊಂಡು ಕೂತಿದ್ದೆ. ಕೇವಲ ಹತ್ತೇನಿಮಿಷದಲ್ಲಿ ರಾಜಾಮಾರ್ಕೆಟ್‌ನಲ್ಲಿ ಇಳಿಸಿದ. ಆಟೋ ಮೀಟರ್ ಬರೀ ಅರವತ್ತು ತೋರಿಸಿದಾಗ, ಅಬ್ಬಾ ನಮ್ಮೂರಲ್ಲಿ ಇಷ್ಟು ದೂರಕ್ಕೆ ಕನಿಷ್ಟ ನೂರರಿಂದ ನೂರಿಪ್ಪತ್ತು ರೂಪಾಯಿಯಾದರೂ ಕೇಳುತ್ತಿದ್ದರು, ಬೆಂಗಳೂರಿನಲ್ಲಿ ಇಷ್ಟು ಕಡಿಮೆಯಾ ಎಂದು ಖುಷಿ ಖುಷಿಯಿಂದಲೇ ಕೊಟ್ಟಿದ್ದೆ.

ಅಲ್ಲಿಂದ ಚಿಕ್ಕಪೇಟೆಯ ಒಳಗೆ ನಡೆದುಕೊಂಡು ಹೋಗುವಾಗ ಜನಸಾಗರವನ್ನು ನೋಡಿ ಗಾಬರಿಯಾಗಿತ್ತು. ಅದರಲ್ಲೂ ಎಂತೆಂತಹ ಮಾಡರ್ನ್ ಡ್ರೆಸ್ ಹಾಕಿದ ಕೆಲವರು ಹಳ್ಳಿಯ ಜನ ಸಂತೆಯ ಸಾಮಾನಿನ ಗಂಟನ್ನು ತಲೆಯ ಮೇಲಿಟ್ಟುಕೊಳ್ಳುವ ಹಾಗೊಂದು, ಕಾಂಗರೂ ರೀತಿ ಹೊಟ್ಟೆಯ ಮುಂದೊಂದು ಚೀಲ ಮತ್ತು ಸಾಮಾನುಗಳನ್ನು ಹೊತ್ತು ತರುವುದನ್ನು ನೋಡಿದ ನನಗೆ, ಅಲ್ಲಲ್ಲಿ ನಿಂತಿದ್ದ ಆಟೋಗಳಲ್ಲಿ ಹತ್ತಿ ಹೋದರಾಯ್ತಪ್ಪ, ಅದ್ಯಾಕೆ ಇಷ್ಟಿಷ್ಟರಲ್ಲೇ ಉಳಿಸಿ ಜೋಕರ್ ತರಹ ಹೊತ್ತುಕೊಂಡು ಹೋಗುತ್ತಾರೋ ಎಂದು ಮನಸೊಳಗೇ ನಕ್ಕಿದ್ದೆ.

ಅಂತೂ ಇಂತೂ ಆಟೋ ಸಿಕ್ಕಾಗ, ಟ್ವೆಂಟಿ-ಟ್ವೆಂಟಿಯಲ್ಲಿ ಆರ್‌ಸಿಬಿ ಗೆದ್ದಷ್ಟೇ ಖುಷಿ. ಹೊರಲಾರದೆ ಹೊತ್ತು ತಂದಿದ್ದ ತುಂಬಿದ ಚೀಲಗಳನ್ನು, ನಮ್ಮೆಲ್ಲರ ಸೋತು ಕಂಗೆಟ್ಟ ಮುಖವನ್ನು ಚಕ್ ಎಂದು ಸ್ಕ್ಯಾನ್ ಮಾಡಿ, ಇನ್ನೂರೈವತ್ತು ಎಂದ ಆಟೋ ಡ್ರೈವರ್!

ನಮ್ಮದೂ ಶಾಪಿಂಗ ಶುರುವಾಯಿತು ನೋಡಿ. ಅದೆಷ್ಟು ರಶ್ಸು ಎಂದರೆ, ಆಮೆಯಂತೆ ಕೈಕಾಲು ಎಲ್ಲ ಮುದುರಿಕೊಂಡು ಹೋಳು ಮಗ್ಗುಲಾಗಿ ಅಕ್ಕ ಪಕ್ಕ, ಹಿಂದೆ ಮುಂದೆ ಜನರನ್ನು ಭುಜಕ್ಕೆ ಭುಜ ತಾಗಿಸುತ್ತ ಸವರುತ್ತಲೇ ಸಾಗಬೇಕು. ಆದರೆ ಚಿಕ್ಕಪೇಟೆಯೆಂಬ ಮಾಯಾಂಗನೆಯಲ್ಲಿ ಸಿಗದ ಸಾಮಾನುಗಳೇ ಇಲ್ಲ ಎನ್ನಬಹುದು. ಇದನ್ನು ಕೊಳ್ಳೋದಾ, ಅದನ್ನು ಕೊಳ್ಳೋದಾ ಎಂದು ನಿರ್ಧರಿಸಲಾಗದೆ, ಎಲ್ಲವನ್ನೂ ಕೊಂಡಿದ್ದಾಯ್ತು. ಪುಣ್ಯಕ್ಕೆ ಜಿಪೇ, ಫೋನ್‌ಪೇ ಇರುವುದರಿಂದ ಹಣ ಪಾವತಿಸಲು ತುಂಬ ಅನುಕೂಲ. ಹಣ ಕಾಯುವ ಗೊಡವೆ ಇಲ್ಲ, ಮೊಬೈಲ್ ಒಂದನ್ನು ಸರಿಯಾಗಿ ಕಾದರೆ ಸಾಕು. ಇದರಲ್ಲಿ ಲಕ್ಷಗಟ್ಟಲೆ ಹಣ ಸೋರ್ಯ್ ಅಂತಾ ಖರ್ಚಾದರೂ ಏನೇನೂ ಸಂಕಟವಾಗುವುದಿಲ್ಲ. ಮೆಸೇಜುಗಳೆಲ್ಲ ಗಂಡನ ಫೋನಿಗೆ ಹೋಗುವುದರಿಂದ ಅವರಿಗೆ ಎದೆಬಡಿತ ಹೆಚ್ಚಾಗುತ್ತಿರುತ್ತದೆ ಬಿಡಿ. ಅದೇ, ನಮ್ಮ ಕೈಯ್ಯಿಂದ ಸಾವಿರ ರೂಪಾಯಿ ನೋಟುಗಳನ್ನು ಎಣಿಸಿಕೊಡುವಾಗ ಹೊಟ್ಟೆಯೆಲ್ಲ ಉರಿಯುತ್ತಿರುತ್ತದೆ.

ಸಂಜೆಯ ತನಕ ಎಲ್ಲ ಕಡೆ ಓಡಾಡಿ ಕೊಳ್ಳುವ ಹೊತ್ತಿಗೆ ಒಬ್ಬೊಬ್ಬರ ಕೈಯ್ಯಲ್ಲೂ ದೊಡ್ಡ ದೊಡ್ಡ ಎರಡು ಬ್ಯಾಗುಗಳು. ಇದರ ನಡುವೆಯೇ ಹೊಟ್ಟೆ ಹಸಿದಿದ್ದರಿಂದ ಅಲ್ಲೇ ಕಿರುಬೆರಳಿನ ಗಾತ್ರದ ಸಂದಿಯಲ್ಲಿ ಬಿಸಿಬಿಸಿ ಜಾಮೂನು, ದಹಿವಡಾ ಆರ್ಡರ್ ಮಾಡಿ, ಹೋಗುವವರು, ಬರುವವರು ತಿನ್ನುತ್ತಿದ್ದ ನಮ್ಮ ಮೊಣಕೈಯ್ಯನ್ನು ಪುಶ್ ಪುಲ್ ತರಹ ತಳ್ಳುತ್ತಲೇ ಇರುವುದರ ನಡುವೆ, ನಿಂತಲ್ಲೇ ಸರ್ಕಸ್ ಮಾಡುತ್ತ ತಿಂದಿದ್ದಾಯಿತು. ಅಲ್ಲೇ ಪಕ್ಕದಲ್ಲಿ ಸ್ಟೂಲ್‌ಕೆಳಗೆ ಕೈಕಾಲು ಹೊರಚಾಚಿ ಮಲಗಿದ್ದ ನಾಯಿಯನ್ನು ತುಳಿದು, ಅದು ನೋವಿನಿಂದ ಜೋರಾಗಿ ಬೊಗಳಿ ಕಚ್ಚಬೇಕೆಂದರೂ ಹೊರಬರಲು ಸಾಧ್ಯವಾಗದಷ್ಟು ಸ್ಥಳಾಭಾವ ಇದ್ದುದರಿಂದ ಬಚಾವ್. ಹಾಗೆ ನಡೆಯುತ್ತಲೇ ಎಲ್ಲಿ ಒಬ್ಬರಿಗೊಬ್ಬರು ತಪ್ಪಿಸಿಕೊಂಡು ಹೋಗುತ್ತೇವೆಯೋ ಎನ್ನುವ ಭಯದಲ್ಲೇ ಇರುವಂತಾಗಿತ್ತು.

ಫೋನ್ ಕಿವಿಗಿಡುವುದಿರಲಿ, ಕೈಯ್ಯಲ್ಲಿ ಹತ್ತಾರು ಕವರ್‌ಗಳನ್ನು ಹಿಡಿದು ಹಗ್ಗದ ಮೇಲಿನ ನಡಿಗೆಯ ರೀತಿ ಜನಗಳ ನಡುವೆ ಬ್ಯಾಲೆನ್ಸ್ ಮಾಡುತ್ತಿದ್ದುದರಿಂದ, ವ್ಯಾನಿಟಿ ಬ್ಯಾಗಿನಿಂದ ಹೊರತೆಗೆಯುವುದೇ ದುಸ್ತರವಾಗಿತ್ತು. ಇನ್ನು ಕಾಲ್ ಗೀಲ್ ಬಂದರೆ ಕೇಳಿಸುವುದಂತೂ ಅಸಾಧ್ಯ. ಅಕಸ್ಮಾತ್ ಕೇಳಿಸಿದರೂ ಚಲ್ ಹಟ್ ಆಮೇಲೆ ನೋಡಿದರಾಯ್ತು ಎನ್ನುವ ಭಾವ. ಮಾಡಿದವರು ಅದೆಷ್ಟು ಬೈಯ್ದುಕೊಂಡರೋ ಅಂದು ಯಾರಿಗ್ಗೊತ್ತು. ಕೊನೆಗೆ ಒಂದು ಅಂಗಡಿಯಲ್ಲಿ ದೊಡ್ಡ ಗೋಣೀಚೀಲದಂತಹ ಚೀಲವನ್ನು ಇಸ್ಕೊಂಡು, ಅದರಲ್ಲಿ ಕೋಳಿಗಳನ್ನೆಲ್ಲ ಬುಟ್ಟಿಯೊಳಗೆ ಹಾಕಿ ಮುಚ್ಚುವ ಹಾಗೆ, ಚಿಕ್ಕ ಪುಟ್ಟ ಕವರ್‌ಗಳನ್ನೆಲ್ಲ ಅದರೊಳಗೆ ಹಾಕಿ, ಬಿಗಿಯಾಗಿ ದಾರ ಕಟ್ಟಿ ಬಾಯಿ ಬಂದ್‌ಮಾಡಿ ಎರಡು ದೊಡ್ಡ ದೊಡ್ಡ ಚೀಲಗಳನ್ನು ಹೊತ್ತು ನಡೆದಿದ್ದಾಯ್ತು.

ಕಾಲು, ಕೈ ಎಲ್ಲ ನೋವು ಬಂದು ಅಲ್ಲಲ್ಲಿ ನಿಂತಿರುವ ಆಟೋಗಳನ್ನೆಲ್ಲ ರಾಜಾಜಿನಗರ ಬರ್ತೀರೇನಪ್ಪಾ ಎಂದರೆ, ಮದುವೆಗೆ ಹೆಣ್ಣು ನೋಡಲು ಹೋದಾಗ, ಕನ್ಯಾ ಒಪ್ಪಿಗೆ ಆಗದಿದ್ದವರಂತೆ ನಮ್ಮ ಲೋಕೇಷನ್ ಕೇಳಿ ತಲೆತಿರುಗಿಸುವವರೇ. ಮೀಟರ್ ಮೇಲೆ ಅಷ್ಟು ಕೊಡ್ತೀವಿ, ಇಷ್ಟು ಕೊಡ್ತೀವಿ ಅಂದ್ರೂ ತಾರಮ್ಮಯ್ಯ ಎಂದು ಕೈಯಾಡಿಸಿಬಿಟ್ಟರು. ಓಲಾ, ಊಬರ್ ಯಾರೂ ಅಷ್ಟು ಹತ್ತಿರದ ಲೋಕೇಶನ್‌ಗೆ ಅಕ್ಸೆಪ್ಟ್ ಮಾಡಲೇ ಇಲ್ಲ. ಆಟೋಗಾಗಿ ಅಲ್ಲಲ್ಲಿ ಅಡ್ಡ ಸಿಗುತ್ತಿದ್ದ ಪೋಲೀಸರ ಸಹಾಯ ಪಡೆದರೆ ಹೇಗೆ ಎನ್ನುವ ಹುಂಬ ಪ್ರಶ್ನೆಯನ್ನು ಅವರ ಮುಂದಿಟ್ಟೆ. 'ಅಯ್ಯೋ, ಪೋಲೀಸರು ಹತ್ತಿಸಿದಾಗ ಸುಮ್ಮನೆ ಹತ್ತಿಸಿಕೊಳ್ಳುತ್ತಾರೆ, ಒಂದಷ್ಟು ದೂರ ಕರೆದುಕೊಂಡು ಹೋಗಿ, ನಮಗೆ ಬೇರೆ ಕೆಲಸ ಇದೆ ಇಳಿದುಕೊಳ್ಳಿ ಎಂದು ಇಳಿಸಿಬಿಡುತ್ತಾರೆ' ಎಂದಾಗ ಪೆಚ್ಚಾಗಿದ್ದೆ.

ಚೀಲಗಳನ್ನು ಹಿಡಿದು ಕೈ ಸೋತು ಕೊನೆಗೆ ಎಲ್ಲರೂ ತಲೆಯ ಮೇಲೆ, ಹೊಟ್ಟೆಯ ಮುಂದೆ ಹಿಡಿದು 'ಎಲ್ಲೀ ನಮ್ಮ ಆಟೋಮರಿಯು..' ಎಂದು ಅರಸುತ್ತಾ, ಕನಿಷ್ಟ ಐವತ್ತು ಆಟೋಗಳನ್ನಾದರೂ ವಿಚಾರಿಸಿ, ಹೆಚ್ಚೂಕಡಿಮೆ ಒಂದು ಕಿಲೋಮೀಟರ್‌ನಷ್ಟು ನಡೆದು ಮಾರ್ಕೆಟ್‌ನಿಂದ ಹೊರಗೆ ಬಂದಿದ್ದೆವು. ಮತ್ಯಾವುದೋ ಒಂದು ಫ್ಯಾಮಿಲಿ ಕೊಂಡ ಸಾಮಾನುಗಳನ್ನೆಲ್ಲ ತಳ್ಳುಗಾಡಿಯಲ್ಲಿ ದೂಡಿಸಿಕೊಂಡು ಬಂದು ಕಾರಿಗೆ ಸಾಗಿಸಿದ್ದನ್ನು ನೋಡಿ ಬುದ್ಧಿವಂತರೆನಿಸಿದ್ದು ಸುಳ್ಳಲ್ಲ. ಕೊನೆಯಲ್ಲಿ ಒಬ್ಬ ಆಟೋದವರಾದರೂ ಬರಲು ಒಪ್ಪಿದರೆ ಸಾಕಪ್ಪಾ ಎನ್ನುವಷ್ಟು ಸುಸ್ತಾಗಿ, ದೇವರಿಗೆ ಹರಕೆ ಹೊರುವುದಷ್ಟೇ ಬಾಕಿಯಿತ್ತು.

ಅಂತೂ ಇಂತೂ ಆಟೋ ಸಿಕ್ಕಾಗ, ಟ್ವೆಂಟಿ-ಟ್ವೆಂಟಿಯಲ್ಲಿ ಆರ್ ಸಿಬಿ ಗೆದ್ದಷ್ಟೇ ಖುಷಿಯಾಗಿತ್ತು. ಹೊರಲಾರದೆ ಹೊತ್ತು ತಂದಿದ್ದ ತುಂಬಿದ ಚೀಲಗಳನ್ನು, ನಮ್ಮೆಲ್ಲರ ಸೋತು ಕಂಗೆಟ್ಟ ಮುಖವನ್ನು ಚಕ್ ಎಂದು ಸ್ಕ್ಯಾನ್ ಮಾಡಿ, ಇನ್ನೂರೈವತ್ತು ಎಂದ. ಮಾರಾಯ ಸದ್ಯ ಒಪ್ಪಿದ್ನಲ್ಲ ಎಂದು ಸರಕ್ ಅಂತ ತೂರಿ ಕುಳಿತುಬಿಟ್ಟೆವು. ಅಂತೂ ಮನೆಗೆ ಬರುವಷ್ಟರಲ್ಲಿ ಸುಸ್ತೋಸುಸ್ತು. ಮನೆಗೆ ಬಂದ ನಂತರವೇ ಗೊತ್ತಾಗಿದ್ದು, ಅದ್ಯಾರೋ ಸಂಬಂಧಿಕರು ಮದುವೆಗೆ ಕರೆಯಲು ಬಂದು, ನಮ್ಮ ಬರುವಿಕೆಗಾಗಿ ಶಬರಿ ಕಾಯುವಂತೆ ಕಾದು, ನಿರಾಶರಾಗಿ ವಾಪಾಸು ಹೋಗಿದ್ದು. ಅದಕ್ಕಾಗಿಯೇ ನಮ್ಮ ಮೂರೂ ಜನರ ಮೊಬೈಲ್‌ಗಳಲ್ಲಿ ಅಸಂಖ್ಯಾತ ಮಿಸ್ ಕಾಲ್‌ಗಳು ದಾಖಲಾಗಿದ್ದು ಎಂದು ಗೊತ್ತಾಯಿತು. ಬಾಯಿಬಿಟ್ಟರೆ ಬಣ್ಣಗೇಡು ಎಂದು ಸುಮ್ಮನೆ ಬೈಸಿಕೊಂಡಿದ್ದಾಯ್ತು.

ಮತ್ತೆ ಚಿಕ್ಕಪೇಟೆಯ ಕಡೆ ತಲೆ ಹಾಕಿ ಮಲಗಿದರೆ ಕೇಳಿ ಎಂದಿದ್ದೆ. ರಾತ್ರಿಯೆಲ್ಲ, ಅಯ್ಯೋ ಆ ಸಾಮಾನು ತೊಗೋಬೇಕಿತ್ತು, ಈ ಸಾಮಾನು ಬಿಟ್ಟು ಬರಬಾರದಾಗಿತ್ತು ಎಂದೆಲ್ಲ ತಲೆಯಲ್ಲೇ ಮತ್ತೊಂದು ಹೊಸ ಪಟ್ಟಿ ಸಿದ್ಧವಾಗಿತ್ತು. ಮಾರನೆಯ ದಿನ ಎಲ್ಲರಿಗಿಂತ ಮುಂಚೆ ಮತ್ತೊಮ್ಮೆ ಶಾಪಿಂಗ್‌ಗೆ ತಯಾರಾಗಿದ್ದವಳನ್ನು ಎಲ್ಲರೂ ಅಚ್ಚರಿಯಿಂದ ನೋಡತೊಡಗಿದರು.

ರಕ್ತ ಹರಿಸಿದ ಬ್ರಿಟಿಷರು

» ಕೆ.ಎನ್.ವೆಂಕಟಸುಬ್ಬರಾವ್



ಅಮೃತಸರದಲ್ಲಿ ನಡೆದಿದ್ದ ಹತ್ಯಾಕಾಂಡದ ಬಗೆಗಿನ ಎಲ್ಲ ಮಾಹಿತಿಗಳನ್ನೂ ಹಲವಾರು ತಿಂಗಳ ಕಾಲ ಇಂಗ್ಲೆಂಡಿನ ಸಂಸತ್ತನ್ನೂ ಸೇರಿದಂತೆ ಪ್ರಪಂಚದೆಲ್ಲೆಡೆ ಮರೆಮಾಚಲಾಗಿತ್ತು. ಆದರೆ ಇದೇ ಹತ್ಯಾಕಾಂಡ 1921ರ ಕ್ರಾಂತಿಗೆ ರೂವಾರಿಯಾಗಿತ್ತು. ಪಂಜಾಬಿನ ಪ್ರಖ್ಯಾತ ನಗರವಾದ ಅಮೃತಸರದಲ್ಲಿ ರೌಲೆತ್ ಕಾಯ್ದೆಗಳ ವಿರುದ್ಧ 1919ರ ಮಾರ್ಚ್ 30 ಮತ್ತು ಏಪ್ರಿಲ್ 6ರಂದು ಹರತಾಳವನ್ನು ಯಶಸ್ವಿಯಗಿ ಆಚರಿಸಲಾಗಿತ್ತು. ಇಂಡಿಯಾದ ನಿವಾಸಿಯಾಗಿದ್ದ ಇಂಗ್ಲಿಷ್ ಪಾದ್ರಿಯೊಬ್ಬರ ಪ್ರಕಾರ: 'ಎಲ್ಲವೂ ವ್ಯವಸ್ಥಿತವಾಗಿತ್ತು. ಗುಂಪುಗಳ ನಡುವೆಯೇ ಯೂರೋಪಿಯನ್ನರು ಯಾವುದೇ ಅಡೆತಡೆ ಅಪಾಯಗಳಿಲ್ಲದೆ ಹಾದು ಹೋಗಬಹುದಿತ್ತು. ಅಹಿಂಸೆ ಮತ್ತು ಅಸಹಕಾರಕ್ಕೆ ಅದೊಂದು ಅತ್ಯುತ್ತಮ ಉದಾಹರಣೆಯಾಗಿತ್ತು.'

ಈ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ್ದ ವಕೀಲ ಮತ್ತು ಸ್ವಾತಂತ್ರ್ಯ ಹೋರಾಟಗಾರ ಸೈಫುದ್ದೀನ್ ಕಿಚ್ಲು ಮತ್ತು ಡಾ. ಸತ್ಯಪಾಲ್ ಅವರನ್ನು ಸರ್ಕಾರ ಏಪ್ರಿಲ್ 9ರಂದು ಬಂಧಿಸಿತ್ತು. ಈ ಈರ್ವರ ಬಂಧನದ ಸುದ್ದಿ ಹರಡಿದಂತೆ ಜನ ಗುಂಪುಗುಂಪಾಗಿ ರಸ್ತೆಗೆ ಇಳಿದಿದ್ದರು. ಗುಂಪು ತಮ್ಮ ನಾಯಕರ ಬಂಧನದ ಬಗ್ಗೆ ವಿರೋಧ ವ್ಯಕ್ತಪಡಿಸಲು ನೇರವಾಗಿ ಪೊಲೀಸ್ ಡೆಪ್ಯುಟಿ ಕಮೀಷನ ಕಚೇರಿಯತ್ತ ತೆರಳುತ್ತಿತ್ತು. ಹಾಗೆ ತೆರಳುವಾಗ ಗುಂಪಿನಲ್ಲಿ ಇದ್ದ ಕೆಲವರು ಪೊಲೀಸರತ್ತ ಕಲ್ಲುಗಳನ್ನು ಎಸೆದಿದ್ದರು. ಪ್ರತಿಯಾಗಿ ಪೊಲೀಸರು ಗುಂಡು ಹಾರಿಸಿ ಹತ್ತು ಜನರ ಜೀವ ಪಡೆದಿದ್ದರು. ಶವವಾಗಿ ಬಿದ್ದಿದ್ದ ತಮ್ಮವರನ್ನು ಕಂಡಂತೆ ಕೋಪೋದ್ರಿಕ್ತ ಗುಂಪು ಹಿಂಸಾಚಾರಕ್ಕೆ ತಿರುಗಿತ್ತು. ಗಲಭೆ-ಹಿಂಸೆ ಸರ್ಕಾರದ ಆಸ್ತಿಯನ್ನು ನಾಶಮಾಡಿದ್ದಲ್ಲದೆ ಐವರು ಇಂಗ್ಲಿಷರ ಪ್ರಾಣ ಕಸಿದಿತ್ತು. ತೀವ್ರವಾಗಿ ಗಾಯಗೊಂಡ ಮತಪ್ರಚಾರಕಿಯೊಬ್ಬಳನ್ನು ಹಿಂದೂಗಳು ಸುರಕ್ಷಿತ ಜಾಗಕ್ಕೆ ಒಯ್ದಿದ್ದರು. ಉದ್ರಿಕ್ತ ಗುಂಪನ್ನು ಸಮಾಧಾನಪಡಿಸಲು ಯತ್ನಿಸಿದ ಸುಶಿಕ್ಷಿತ ಇಂಡಿಯನ್ನರು ವಿಫಲರಾಗಿದ್ದರು. ಇಂಡಿಯಾದ ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಸರ್ಕಾರದ ನೆರವಿಗೆ ನಿಂತಿದ್ದರು.

ವಿಲ್ ಡ್ಯುರಾಂಟ್ ಅವರ 'ದಿ ಕೇಸ್ ಫಾರ್ ಇಂಡಿಯಾ' ಪುಸ್ತಕವು ಈಗ ಕನ್ನಡಕ್ಕೆ ಅನುವಾದಗೊಂಡಿದೆ. ಕೆ.ಎನ್. ವೆಂಕಟಸುಬ್ಬರಾವ್ ಅವರು ಆ ಪ್ರಮುಖ ಪುಸ್ತಕವನ್ನು 'ಇಂಡಿಯಾ ಅಂದು' ಎಂಬ ಹೆಸರಿನಲ್ಲಿ ಅನುವಾದ ಮಾಡಿದ್ದಾರೆ. ಅದರ ಆಯ್ದ ಭಾಗಗಳು ಇಲ್ಲಿವೆ.

ಏಪ್ರಿಲ್ 10 ಮತ್ತು 11ರಂದು ಒಟ್ಟು 600 ಸೈನಿಕರ ತುಕಡಿಗಳು ಅಮೃತಸರಕ್ಕೆ ಧಾವಿಸಿದ್ದವು. ಏಪ್ರಿಲ್ 12ರಂದು ಧಾವಿಸಿದ್ದ ಬ್ರಿಗೇಡಿಯರ್ ಜನರಲ್ ಡೈಯರ್ ತುಕಡಿಗಳ ಮುಂದಾಳತ್ವ ವಹಿಸಿದ್ದನು. ಅಂದಿನಿಂದ ಕಾನೂನು ಮತ್ತು ಶಿಸ್ತು ಪಾಲನೆಗೆ ಕ್ರಮ ಕೈಗೊಂಡು ಗುಂಪುಗಳನ್ನು ಚದುರಿಸಿ ಶಾಂತ ವಾತಾವರಣ ಸೃಷ್ಟಿಸಲಾಗಿತ್ತು. ಹಲವಾರು ಜನರನ್ನು ಬಂಧಿಸಿದ್ದ ಡೈಯರ್, ಏಪ್ರಿಲ್ 13ರಂದು ಅಮೃತಸರ ನಗರದ ಹಾದಿಬೀದಿಗಳಲ್ಲಿ ಡಂಗುರ ಹೊಡೆಸಿ ಜನರ ಸಭೆ ಕರೆದಿದ್ದನು. ಪರವಾನಗಿ ಇಲ್ಲದೆ ನಗರದ ಹೊರಗೆ ಹೋಗಬಾರದು, ಸಭೆಗಳನ್ನು, ಮೆರವಣಿಗೆಗಳನ್ನು ನಡೆಸಬಾರದು, ಮೂವರಿಗಿಂತ ಹೆಚ್ಚು ಮಂದಿ ಗುಂಪು ಸೇರಬಾರದು ಎಂದು ಸಭೆಯಲ್ಲಿ ಘೋಷಿಸಿದ್ದನು. ಈ ಮಧ್ಯೆ ಡೈಯರ್ ಮಾಡಿದ್ದ ಘೋಷಣೆಗಳ ಬಗ್ಗೆ ತಿಳಿಯದ ನೆರೆಯ ಜಿಲ್ಲೆಗಳ 10,000 ಮಂದಿ ಹಿಂದೂಗಳು ಧಾರ್ಮಿಕ ಉತ್ಸವವನ್ನು ಆಚರಿಸಲು ಜಲಿಯನ್‌ವಾಲಾ ಬಾಗ್‌ನಲ್ಲಿ ಸಮಾವೇಶಗೊಂಡಿದ್ದರು. ಜಲಿಯನ್‌ವಾಲಾ ಬಾಗ್ ನಾಲ್ಕೂ ದಿಕ್ಕಿನಲ್ಲಿ ಎತ್ತರದ ಗೋಡೆಗಳಿಂದ ಸುತ್ತುವರೆದಿದ್ದ, ಆಗಮನ-ನಿರ್ಗಮನಕ್ಕೆ ಕಿರಿದಾದ ಒಂದೆರಡು ಓಣಿಗಳಿದ್ದ ಪಾಳುಬಿದ್ದ ಉದ್ಯಾನವನವಾಗಿತ್ತು.

ಇಂಥ ಉದ್ಯಾನವನದಲ್ಲಿ ಸೇರಿರುವುದನ್ನು ತಿಳಿದಂತೆಯೇ ಮೆಷಿನ್ ಗನ್ನುಗಳಿಂದ ಸಜ್ಜಿತವಾಗಿದ್ದ ಸೇನಾ ತುಕಡಿ ಮತ್ತು ಶಸ್ತ್ರಸಜ್ಜಿತ ಮೋಟಾರ್ ಕಾರುಗಳ ಸಹಿತ ಡೈಯರ್ ಸ್ಥಳಕ್ಕೆ ಧಾವಿಸಿದ್ದ. ಅಲ್ಲಿ ಬೃಹತ್ ಗುಂಪನ್ನು ನೋಡಿದಂತೆ ಜನ ತನ್ನ ಆಜ್ಞೆಯನ್ನು ಉಲ್ಲಂಘಿಸಿ ಸಭೆ ಸೇರಿದ್ದಾರೆ ಎಂದು ನಿರ್ಧರಿಸಿದ್ದ. ಕಿಂಚಿತ್ ಮುನ್ಸೂಚನೆ ನೀಡದೆ ಅಥವಾ ಜನರಿಗೆ ತಾವು ಸೇರಿರುವ ಉದ್ದೇಶವನ್ನು ತಿಳಿಸಲು ಅವಕಾಶ ನೀಡದೆ ಜನಸಮೂಹದತ್ತ ಗುಂಡು ಹಾರಿಸುವಂತೆ ತುಕಡಿಗೆ ಆದೇಶ ನಿಡಿದ್ದ, ಪ್ರತಿರೋಧ ತೋರಲಾಗದ ಸ್ಥಿತಿಯಲ್ಲಿದ್ದ ಜನ ಭಯದಿಂದ ಚೀರುತ್ತಾ ಉದ್ಯಾನವನವನ್ನು ತೊರೆಯಲು ಓಣಿಗಳತ್ತ ನುಗ್ಗತೊಡಗಿದ್ದರು. ತಂದಿರುವ ಮದ್ದುಗುಂಡುಗಳು ಖಾಲಿಯಾಗುವವರೆಗೂ ನೂಕುನುಗ್ಗಲಾಗಿದ್ದ ಓಣಿಯತ್ತಲೇ ಗುಂಡು ಹಾರಿಸುವಂತೆ ಡೈಯರ್ ಖುದ್ದಾಗೇ ಸೂಚಿಸಿದ್ದ. ಹತ್ತು ನಿಮಿಷಗಳಲ್ಲಿ ಕಗ್ಗೊಲೆಯ ಕಾರ್ಯ ಅಂತ್ಯವಾಗಿತ್ತು. 'ಗುರಿ ಚೆನ್ನಾಗಿತ್ತು' ಎಂದು ಡೈಯರ್ ಘೋಷಿಸಿದ್ದ. 1500 ಹಿಂದೂಗಳು ನೆಲಕ್ಕೆ ಒರಗಿದ್ದರು. ಆ ಪೈಕಿ 400 ಮಂದಿ ಮೃತಪಟ್ಟಿದ್ದರು. ಗಾಯಗೊಂಡವರಿಗೆ ನೆರವು ನೀಡದಂತೆ ಸೈನಿಕರಿಗೆ ಸೂಚಿಸಿದ್ದ ಡೈಯರ್ ಇಪ್ಪತ್ನಾಲ್ಕು ಗಂಟೆಗಳ ಕಾಲ ಹಿಂದೂಗಳು ರಸ್ತೆಗೆ ಇಳಿಯಕೂಡದು ಎಂದೂ ಆಜ್ಞೆ ಹೊರಡಿಸಿದ್ದ. ಆ ಮೂಲಕ ಗಾಯಗೊಂಡು ಬಿದ್ದಿದ್ದವರಿಗೆ ಅವರ ಬಂಧುಬಾಂಧವರು ಒಂದು ಲೋಟ ನೀರು ನೀಡುವುದಕ್ಕೂ ತಡೆಹಾಕಿದ್ದ.

ತರುವಾಯ, ಅಧಿಕೃತ ಭಯೋತ್ಪಾದನೆ ಆರಂಭವಾಗಿತ್ತು. ಯಾವ ರಸ್ತೆಯಲ್ಲಿ ಮತಪ್ರಚಾರಕಿ ಘಾಸಿಗೊಂಡಿದ್ದಳೋ ಆ ರಸ್ತೆಯನ್ನು ಬಳಸುತ್ತಿದ್ದ ಹಿಂದೂಗಳು ಹೊಟ್ಟೆಯ ಮೇಲೆ ತೆವಳುವ ಶಿಕ್ಷೆ ವಿಧಿಸಿದ್ದ. ಶಿಕ್ಷೆಗೆ ಒಳಗಾಗಿ ತೆವಳುತ್ತಿದ್ದವರು ತಲೆ ಎತ್ತಿ ಏಳಲು ಯತ್ನಿಸಿದರೆ ಸೈನಿಕರು ಬಂದೂಕಿನ ಹಿಂಬದಿಯಿಂದ ತಲೆಯ ಮೇಲೆ ಮೊಟಕುತ್ತಿದ್ದರು. ಡೈಯರ್ 500 ಪ್ರೊಫೆಸರ್‌ಗಳನ್ನು ಮತ್ತು ವಿದ್ಯಾರ್ಥಿಗಳನ್ನು ಬಂಧಿಸಿ ಅವರೆಲ್ಲರೂ ಪ್ರತಿದಿನ ಪೊಲೀಸ್ ಠಾಣೆಯಲ್ಲಿ ಹಾಜರಿಗೆ ಬರಬೇಕು ಎಂದು ಕಟ್ಟಳೆ ವಿಧಿಸಿದ್ದ. ಅವರಲ್ಲಿ ಬಹಳಷ್ಟು ಮಂದಿ ಠಾಣೆಗೆ ಬರಲು ಪ್ರತಿ ದಿನ ನಡಿಗೆಯಲ್ಲೇ ಹದಿನಾರು ಮೈಲಿ ಕ್ರಮಿಸಬೇಕಿತ್ತು. ಯಾವುದೇ ತಪ್ಪು ಮಾಡದ ಶಾಲಾ ಬಾಲಕರನ್ನೂ ಸೇರಿದಂತೆ ನೂರಾರು ನಾಗರಿಕರನ್ನು ಸಾರ್ವಜನಿಕವಾಗೇ ಛಡಿಯಿಂದ ಥಳಿಸುತ್ತಿದ್ದ. ಬೃಹತ್ ಬೋನುಗಳನ್ನು ತಯಾರಿಸಿ ಒಳಗೆ ಬಂದಿಗಳನ್ನು ಕೂಡಿಹಾಕಿ ಅವರನ್ನು ರಣ ಬಿಸಿಲಿನಲ್ಲಿ ಇರಿಸುತ್ತಿದ್ದ. ಕೆಲವು ಬಂದಿಗಳನ್ನು ಹಗ್ಗದಿಂದ ಬಂಧಿಸಿ ಅವರನ್ನು ಹದಿನೈದು ಗಂಟೆಗಳ ಕಾಲ ತೆರೆದ ಲಾರಿಗಳ ಮೇಲೆ ನಿಲ್ಲಿಸುತ್ತಿದ್ದ. ಸಾಧುಸಂತರನ್ನು ನಗ್ನಗೊಳಿಸಿ ಅವರ ದೇಹಕ್ಕೆ ಸುಣ್ಣ ಬಳಿಸಿ ಅವರನ್ನು ಬಿಸಿಲಿನಲ್ಲಿ ನಿಲ್ಲಿಸುತ್ತಿದ್ದ. ಸೂರ್ಯನ ಶಾಖದಿಂದ ಸುಣ್ಣ ಒಣಗಿ ಚರ್ಮ ಬಿರಿದಾಗ ಈ ಸಾಧುಸಂತರನ್ನು ಯಾತನೆಗೆ ಒಳಪಡಿಸುವುದು ಡೈಯರ್ ಶಿಕ್ಷೆಯ ಉದ್ದೇಶವಾಗಿತ್ತು. ಇಂಡಿಯನ್ನರ ಮನೆಗಳ ನೀರು ಮತ್ತು ವಿದ್ಯುತ್ ಸರಬರಾಜನ್ನು ಕಡಿತಗೊಳಿಸಿ, ಹಿಂದೂಗಳು ತಾವು ಹೊಂದಿರುವ ವಿದ್ಯುತ್ ಪಂಖಗಳನ್ನು ಸರ್ಕಾರಕ್ಕೆ ಒಪ್ಪಿಸುವಂತೆ ಆದೇಶ ಹೊರಡಿಸಿದ್ದ. ಹಾಗೆ ಒಪ್ಪಿಸಲಾಗಿದ್ದ ಪಂಖಗಳನ್ನು ಬ್ರಿಟಿಷರಿಗೆ ಪುಕ್ಕಟ್ಟೆಯಾಗಿ ನೀಡಿದ್ದ. ಕಡೆಯದಾಗಿ ಬಯಲುಗಳಲ್ಲಿ ದುಡಿಯುತ್ತಿದ್ದ ಮಹಿಳೆಯರು ಮತ್ತು ಪುರುಷರ ಮೇಲೆ ವಿಮಾನಗಳಿಂದ ಬಾಂಬುಗಳ ದಾಳಿ ನಡೆಸಿದ್ದ.



ಇಂಡಿಯಾ ಅಂದು
ಮೂಲ : ವಿಲ್ ಡ್ಯುರಾಂಟ್
ಕನ್ನಡಕ್ಕೆ : ಕೆ.ಎನ್. ವೆಂಕಟಸುಬ್ಬರಾವ್
ಕಾಮಧೇನು ಪುಸ್ತಕ ಭವನ
ಶಾಸಕರ ಭವನದ ಆವರಣ
ಬೆಂಗಳೂರು -1
9945002444
ಬೆಲೆ : 175/-

ಸೇನೆಯ ವಿಘ್ನಸಂತೋಷದ ಪ್ರತೀಕವಾಗಿದ್ದ ಈ ರಾಕ್ಷಸೀ ಸ್ವೇಚ್ಛಾಚಾರ ಸುಮಾರು ಆರು ತಿಂಗಳ ಕಾಲ ಪ್ರಪಂಚಕ್ಕೆ ತಿಳಿಯದಾಗಿತ್ತು. ಸರ್ಕಾರ ತಡವಾಗಿ ನೇಮಿಸಿದ್ದ ವಿಚಾರಣಾ ಆಯೋಗವೊಂದು ದ್ವಂದ್ವಾರ್ಥದ ವರದಿ ನೀಡಿತ್ತು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ನೇಮಿಸಿದ್ದ ಸಮಿತಿಯೊಂದು ಪಕ್ಕಾ ವಿಚಾರಣೆ ನಡೆಸಿ ಇಡೀ ಘಟನೆಗಳ ಸಂದರ್ಭದಲ್ಲಿ 1,200 ಮಂದಿ ಮೃತಪಟ್ಟಿದ್ದಾರೆ ಮತ್ತು 3600 ಮಂದಿ ಗಾಯಗೊಂಡಿದ್ದಾರೆ ಎಂದು ವರದಿ ನೀಡಿತ್ತು. ಕೆಳ ಮನೆಯು (ಹೌಸ್ ಆಫ್ ಕಾಮನ್ಸ್) ಡೈಯರ್‌ನನ್ನು ಖಂಡಿಸಿತ್ತು. ಆದರೆ ಇಂಗ್ಲೆಂಡಿನ ಮೇಲ್ಮನೆ (ಹೌಸ್ ಆಫ್ ಲಾರ್ಡ್ಸ್) ಅವನನ್ನು ನಿರ್ದೋಷಗೊಳಿಸಿ, ಪಿಂಚಣಿ

ನೀಡಿ ನಿವೃತ್ತಿಗೊಳಿಸಿತ್ತು. ನೀಡಲಾಗಿದ್ದ ಬಳುವಳಿ ಸಾಲದ್ದು ಎಂಬಂತೆ ಅವನ ಗೌರವಾರ್ಥ ಸಂಗ್ರಹಿಸಲಾದ ಸಾಮ್ರಾಜ್ಯದ ಸೇನಾನಾಯಕರು 150,000 ಡಾಲರ್ ನಿಧಿ ಹಾಗೂ ಆಭರಣ ಖಚಿತ ಖಡ್ಗವೊಂದನ್ನು ಅವನಿಗೆ ಅರ್ಪಿಸಿದ್ದರು.

1921ರ ಕ್ರಾಂತಿ

ಅಮೃತಸರದಲ್ಲಿ ನಡೆದಿದ್ದ ಘಟನಾವಳಿಗಳ ಹಿನ್ನೆಲೆಯಲ್ಲಿ ಟ್ಯಾಗೂರರು ವೈಸ್ರಾಯ್‌ಗೆ ಪತ್ರ ಬರೆದಿದ್ದರು. ಪತ್ರದೊಡನೆ ಬ್ರಿಟಿಷ್ ಸರ್ಕಾರ ಅವರಿಗೆ ನೀಡಿದ್ದ ನೈಟ್‌ಹುಡ್ ಬಿರುದಿನ ಪ್ರಶಂಸಾ ಪತ್ರವನ್ನೂ ಲಗತ್ತಿಸಿದ್ದರು. ಅವರ ಪತ್ರ:

'ಕೆಲವು ಸ್ಥಳೀಯ ಗಲಭೆಗಳನ್ನು ನಿಗ್ರಹಿಸಲು ಪಂಜಾಬಿನಲ್ಲಿ ಸರ್ಕಾರ ಕೈಗೊಂಡ ಅಗಾಧ ಪ್ರಮಾಣದ ಕ್ರಮಗಳು ತೀವ್ರ ಆಘಾತ ನೀಡುವುದಾಗಿದೆ. ಇದು ಇಂಡಿಯಾದಲ್ಲಿ ಬ್ರಿಟಿಷ್ ಪ್ರಜೆಗಳಾಗಿರುವ ನಮ್ಮ ಅಸಹಾಯಕತೆಯನ್ನು ಎಲ್ಲರಿಗೂ ತಿಳಿಸುವುದೂ ಆಗಿದೆ. ದುರ್ದೈವಿ ಜನರ ಮೇಲೆ ಎಸಗಿರುವ ಅಳತೆ ಮೀರಿದ ಕ್ರೌರ್ಯ ಮತ್ತು ಬಳಸಿದ ವಿಧಾನಗಳು ನಾಗರಿಕ ಸರ್ಕಾರಗಳು ಎಸಗಿರುವ ಕ್ರೌರ್ಯದ ಇತಿಹಾಸದಲ್ಲೇ ಅಪರೂಪದ್ದಾಗಿದೆ. ನಿಶ್ಶಸ್ತ್ರರು ಮತ್ತು ನಿರ್ಗತಿಕರೂ ಆದ ಜನಸಮೂಹದ ಮೇಲೆ ಮನುಷ್ಯ ಜೀವಗಳನ್ನು ಅತ್ಯಂತ ಕ್ರೂರವಾಗಿ ನಾಶಮಾಡಬಲ್ಲ ದಕ್ಷ ಅಧಿಕಾರಕ್ಕೆ ತನ್ನನ್ನು ಶ್ರುತಪಡಿಸಿಕೊಳ್ಳುವ ರಾಜಕೀಯ ಔಚಿತ್ಯ, ನೈತಿಕ ಸಮರ್ಥನೆ ಇಲ್ಲ ಎಂದು ನಾವು ಘಂಟಾಘೋಷದಿಂದ ಧೃಡಪಡಿಸಬಹುದಾಗಿದೆ. ...

'ನಮ್ಮ ಸಹೋದರರು ಅನುಭವಿಸಿದ ಅಪಮಾನ ಮತ್ತು ಯಾತನೆಗಳು. . .ಬಲವಂತದ ಮೌನದ ನಡುವೆಯೂ ಹನಿ ಹನಿಯಾಗಿ ಇಂಡಿಯಾದ ಮೂಲೆಮೂಲೆಗಳನ್ನು ತಲಪುತ್ತಿದೆ. ಆಳುವವರು ನಮ್ಮ ಜನರ ಎದೆಯಲ್ಲಿ ಭುಗಿಲೆದ್ದಿರುವ ರೋಷಾವೇಶವನ್ನು ಅಲಕ್ಷಿಸಿದ್ದಾರೆ- ನಮಗೆ ಪರಿಣಾಮಕಾರಿಯಾದ ಪಾಠ ಕಲಿಸಿದ್ದೇವೆ ಎಂದು ಅವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿರಬಹುದು.

'ಮಾಡಲಾದ ಸನ್ಮಾನ, ನೀಡಲಾದ ಗೌರವ ಪದಕಗಳು ನಮ್ಮ ಅಪಮಾನಕ್ಕೆ ದರ್ಪಣ ಹಿಡಿಯುತ್ತಿರುವ ಈ ಸಂದರ್ಭದಲ್ಲಿ ಅಸಮಂಜಸವೆನಿಸುತ್ತಿದೆ. ನಾನು ನನ್ನೆಲ್ಲ ಬಿರುದುಬಾವಲಿಗಳನ್ನು ಕಳಚಿ, ಅನಾಮಿಕರು ಎನಿಸಿಕೊಂಡು ಮನುಷ್ಯ ಕುಲಕ್ಕೇ ಸಲ್ಲದಂತಹ ಕೀಳುಸ್ಥಿತಿ ಮತ್ತು ಯಾತನೆಗಳನ್ನು ಅನುಭವಿಸುತ್ತಿರುವ ನನ್ನ ದೇಶ ಬಾಂಧವರ ಜೊತೆ ನಿಲ್ಲುತ್ತೇನೆ.'

ಇದೇ ಸಮಯದಲ್ಲಿ ಗಾಂಧೀ ಕೂಡ ಅವರು ಆಫ್ರಿಕಾದಲ್ಲಿ ಮತ್ತು ಯುದ್ಧದ ಸಮಯದಲ್ಲಿ ಸಲ್ಲಿಸಿದ ಸೇವೆಗಳ ಕುರುಹಾಗಿ ಬ್ರಿಟಿಷ್ ಸಾಮ್ರಾಜ್ಯನೀಡಿದ್ದ ಬಿರುದುಬಾವಲಿಗಳನ್ನು ಹಿಂತಿರುಗಿಸಿ, ಅಂತಹದ್ದೇ ಪತ್ರವನ್ನು ವೈಸ್ರಾಯ್‌ಗೆ ಕಳುಹಿಸಿದ್ದರು. ನವೆಂಬರ್ ನಾಲ್ಕರಂದು ನ್ಯಾಷನಲ್ ಕಾಂಗ್ರೆಸ್ ಸಾಮೂಹಿಕ ಶಾಂತಿಯುತ ಪೌರ ಅಸಹಕಾರಕ್ಕೆ ದೆಹಲಿಯಿಂದ ಕರೆನೀಡಿತ್ತು. ಬ್ರಿಟಿಷ್ ವಸ್ತುಗಳ ಬಹಿಷ್ಕಾರ, ಎಲ್ಲ ರೀತಿಯ ತೆರಿಗೆಗಳ ಪಾವತಿ ನಿರಾಕರಣೆ, ಹಿಂದೂಗಳು ಮತ್ತು ಸರ್ಕಾರದ ನಡುವಿನ ಎಲ್ಲ ರೀತಿಯ ಸಹಯೋಗ ಅಥವಾ ಸಹಕಾರಗಳ ನಿಷೇಧ ಅಸಹಕಾರ ಕಾರ್ಯಕ್ರಮದ ಭಾಗವಾಗಿತ್ತು. ವೇಲ್ಸಿನ ರಾಜಕುಮಾರ (ಪ್ರಿನ್ಸ್ ಆಫ್ ವೇಲ್ಸ್) ಇಂಡಿಯಾಕ್ಕೆ ಆಗಮಿಸುತ್ತಿರುವ ನಿಮಿತ್ತ ಸರ್ಕಾರ ಸೌಮ್ಯವಾಗಿ ವರ್ತಿಸುವ ಯೋಚನೆಗೆ ಒಳಗಾಗಿತ್ತು.

ನವೆಂಬರ್ 17ರಂದು ರಾಜಕುಮಾರರು ಬೊಂಬಾಯಿಗೆ ಆಗಮಿಸಿದ್ದರು. ಅಂದೇ ಹರತಾಳ ಘೋಷಿಸಲಾಗಿತ್ತು. ಅಂಗಡಿಮುಂಗಟ್ಟುಗಳು ಬಾಗಿಲು ಹಾಕಿದ್ದವು. ಸಾಮ್ರಾಜ್ಯದ ಹಾಗೂ 32 ಕೋಟಿ ಹಿಂದೂಗಳ ಉತ್ತರಾಧಿಕಾರಿ ರಾಜ ಕುಮಾರರು ಬರಿದಾದ ಬೀದಿಗಳನ್ನು ಮುಚ್ಚಿದ ಕಿಟಕಿಗಳನ್ನು ನೋಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇಂಗ್ಲಿಷರು ಮತ್ತು ಕೆಲವು ಪಾರ್ಸಿ ವ್ಯಾಪಾರಿಗಳು ತಮ್ಮ ಮಳಿಗೆಗಳನ್ನು ತೆರೆದಿದ್ದರು. ಇದನ್ನು ತಿಳಿದ ಜನ ತಮ್ಮ ಗುಡಿಸಲು ಜೋಪಡಿಗಳಿಂದ ಗುಂಪುಗುಂಪಾಗಿ ಧಾವಿಸಿ ತೆರೆದಿದ್ದ ಮಳಿಗೆಗಳ ಮೇಲೆ ದಾಳಿ ಮಾಡಿ ವ್ಯಾಪಾರಿಗಳ ಮನೆಗಳಿಗೆ ಬೆಂಕಿ ಹಚ್ಚಿದ್ದರು. ಘಟನೆಯಲ್ಲಿ ಐವತ್ಮೂರು ಮಂದಿ ಮೃತಪಟ್ಟಿದ್ದರು.

ಸುದ್ದಿ ಕೇಳಿ ಹತಾಶರಾಗಿದ್ದ ಗಾಂಧೀ ಆ ಕೂಡಲೇ ಅಹಮದಾಬಾದಿನಿಂದ ಬೊಂಬಾಯಿಗೆ ತೆರಳಿದ್ದರು. ಅವರನ್ನು ಉನ್ಮತ್ತವಾಗೇ ಸ್ವಾಗತಿಸಿದ್ದ ಜನಸಮೂಹಕ್ಕೆ 'ನೀವು ಎಸಗಿರುವ ಹಿಂಸಾಚಾರ ಡೈಯರ್ ಎಸಗಿದ್ದಕ್ಕಿಂತ ಕೀಳಾಗಿದೆ' ಎಂದು ಹೇಳಿದ್ದರು. ಜನ ಶಾಂತಿಯುತ ಕ್ರಾಂತಿಗೆ ಸಿದ್ಧರಿರಲಿಲ್ಲ. ಭ್ರಮನಿರಸನರಾಗಿದ್ದ ಗಾಂಧೀ ಆಶ್ರಮಕ್ಕೆ ಮರಳಿ ಉಪವಾಸ ಮತ್ತು ಪ್ರಾರ್ಥನೆಗಳಲ್ಲಿ ತೊಡಗಿದ್ದರು. ರಾಜಕುಮಾರರ ಪಾಲಿಗೆ ಕಲ್ಕತ್ತ ನಿರ್ಜೀವ ನಗರವಾಗಿತ್ತು. ಅಲ್ಲಿ ಹರತಾಳವನ್ನು ಒಮ್ಮತದಿಂದ ಮತ್ತು ಅಹಿಂಸಾತ್ಮಕವಾಗೇ ಆಚರಿಸಲಾಯಿತು ಎಂಬುದನ್ನು ತಿಳಿದು ಗಾಂಧೀ ಉತ್ತೇಜಿತರಾಗಿದ್ದರು. ಆದರೆ ದಕ್ಷಿಣದ ಮೋಪ್ಲಾ ಮತ್ತು ಉತ್ತರದ ಚೌರಿ ಚೌರಗಳಲ್ಲಿನ ಘಟನೆಗಳು ಮೊದಲ ಕ್ರಾಂತಿಯ ಕರಾಳ ಘಟನೆಗಳಾಗಿದ್ದವು.

(ಮೂಲ : ವಿಲ್ ಡ್ಯುರಾಂಟ್. ಕನ್ನಡಕ್ಕೆ : ಕೆ.ಎನ್.ವೆಂಕಟಸುಬ್ಬರಾವ್)

ಚಾನೆಲ್ಲುಗಳು ದರ್ಶನ್ ಸುದ್ದಿ ಮಾತ್ರ ಏಕೆ ತೋರಿಸುತ್ತಾರೆ?

Ask the Editor

» ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಸಿ.ಕೆ.ಪ್ರಭು, ಮೈಸೂರು

- **ಭಟ್ಟರೇ, ಕನ್ನಡ ಟಿವಿ ಚಾನೆಲ್ಲುಗಳಿಗೆ ನಟ ದರ್ಶನ್ ಬಿಟ್ಟರೆ ಉಳಿದವು ಸುದ್ದಿ ಅಲ್ಲವಾ? ದಿನ ಬೆಳಗಾದರೆ ಬರೀ ದರ್ಶನ್‌ಗೆ ಸಂಬಂಧಿಸಿದ ಸುದ್ದಿಯನ್ನಷ್ಟೇ ಪ್ರಸಾರ ಮಾಡುತ್ತಾರಲ್ಲ? ಟಿವಿ ಮಾಧ್ಯಮದವರು ನೈತಿಕವಾಗಿ ದಿವಾಳಿ ಆಗುತ್ತಿದ್ದಾರೆ ಅಂತ ನಿಮಗೆ ಅನಿಸುತ್ತಿದೆಯಾ?**

– ಪ್ರಭು ಅವರೇ, ಕನ್ನಡ ಟಿವಿ ಚಾನೆಲ್ಲುಗಳು ಯಾಕೆ ದರ್ಶನ್ ಅವರ ಸುದ್ದಿಯನ್ನು ದಿನವಿಡೀ ಪ್ರಸಾರ ಮಾಡುತ್ತವೆ ಎಂದು ಎಂದಾದರೂ ಯೋಚಿಸಿದ್ದೀರಾ? ಜನ ಕಣ್ಣು ಮೀಟುಕಿಸದೇ ನೋಡುತ್ತಾರೆ ಎಂಬ ಕಾರಣಕ್ಕೆ ತೋರಿಸುತ್ತಾರೆ. ಸಿಂಪಲ್. ಜನರು ಏನನ್ನುನೋಡುತ್ತಾರೆ, ಯಾವುದನ್ನು ತೋರಿಸಿದರೆ ಓಡುತ್ತೆ ಎಂಬುದು ಟಿವಿ ಚಾನೆಲ್ಲಿನಲ್ಲಿ ಇರುವವರಿಗೆ ಗೊತ್ತು. ವಾರವಾರವೂ ಪ್ರಕಟವಾಗುವ ಟಿಆರ್‌ಪಿ ಅದನ್ನು ದೃಢಪಡಿಸುತ್ತದೆ. ದರ್ಶನ್ ಸುದ್ದಿಯನ್ನು ತೋರಿಸಿದರೆ ಜನ ನೋಡುವುದಿಲ್ಲ ಎಂಬುದು ಗೊತ್ತಾದ ಮರುದಿನವೇ ಆ ಸುದ್ದಿ ಪ್ರಸಾರ ಖತಂ!

ಆದರೆ ಆಗುತ್ತಿರುವುದೇನು? ದರ್ಶನ್ ಜೈಲು ಸೇರಿದಂದಿನಿಂದ ಕನ್ನಡ ಟಿವಿ ಚಾನೆಲ್ಲುಗಳಿಗೆ ಶುಕ್ರದೆಸೆ. ಆತನ ಕುರಿತು ದಿನಗಟ್ಟಲೆ ಕಾರ್ಯಕ್ರಮ ಮಾಡಿದರೂ ಜನ ನೋಡುತ್ತಾರೆ. ನೀವು ಎಲ್ಲಿ ತನಕ ನೋಡುತ್ತೀರೋ, ಅಲ್ಲಿ ತನಕ ಅದನ್ನು ತೋರಿಸುತ್ತಾರೆ.

ಪ್ರಭು ಅವರೇ, ನಿಮಗೆ ಅಥವಾ ನಿಮ್ಮ ಹಾಗೆ ಯೋಚಿಸುವವರಿಗೆ ದರ್ಶನ್ ಸುದ್ದಿಯನ್ನು ಟಿವಿ ಚಾನೆಲ್ಲುಗಳು ಅತಿಯಾಗಿ ಪ್ರಸಾರಮಾಡುತ್ತವೆ ಎಂದು ಅನಿಸಬಹುದು. ಆದರೆ ಅದನ್ನು ಇಷ್ಟಪಡುವವರೂ ಇದ್ದಾರಲ್ಲ. ನಿಮಗೆ ಇಷ್ಟವಿಲ್ಲದಿದ್ದರೆ, ನಿಮ್ಮ ಕೈಯಲ್ಲಿ ರಿಮೋಟ್ ಕಂಟ್ರೋಲ್ ಇದೆಯಲ್ಲ. ಚಾನೆಲನ್ನು ಬದಲಿಸಬಹುದಲ್ಲ? ಆಸ್ತಾ, ಶಂಕರ, ಬಸವ ಚಾನೆಲ್ಲುಗಳನ್ನು ನೋಡಬಹುದಲ್ಲ? ಕನ್ನಡ ಚಾನೆಲ್ಲಿನಲ್ಲಿ ದರ್ಶನ್ ಸುದ್ದಿಯನ್ನು ಮಾತ್ರ ನೋಡಲೇಬೇಕು ಎಂಬ ನಿಯಮವೇನಿಲ್ಲವಲ್ಲ? ಈಗಂತೂ ಟಿವಿಯಲ್ಲಿ ಐದುನೂರಕ್ಕೂ ಹೆಚ್ಚು ಚಾನೆಲ್ಲುಗಳಿವೆ. ನಿಮಗೆ ಇಷ್ಟವಾದ ಬೇರೆಯದನ್ನು ನೋಡಬಹುದಲ್ಲ? ಟಿವಿ ಚಾನೆಲ್ಲುಗಳನ್ನು ಯಾಕೆ ಸುಖಾಸುಮ್ಮನೆ ದೂರುತ್ತೀರಿ? ಪಾಪ, ಅವರ ಹೊಟ್ಟೆಯ ಮೇಲೇಕೆ ಹೊಡೆಯುತ್ತೀರಿ?

ಟಿವಿ ಚಾನೆಲ್ಲುಗಳಿಗೆ ಟಿಆರ್‌ಪಿ ಅಂದ್ರೆ ಬ್ರೆಡ್ ಅಂಡ್ ಬಟರ್. ಅದಿಲ್ಲದೇ ಅವುಗಳಿಗೆ ಜಾಹೀರಾತು ಬರುವುದಿಲ್ಲ. ದರ್ಶನ್ ಟಿಆರ್‌ಪಿ ಮೆಟೀರಿಯಲ್ಲು. ಟಿವಿಯಲ್ಲಿ ಆತನ ಕುರಿತ ಸುದ್ದಿಯನ್ನು ತೋರಿಸಿದರೆ ಜನ ನೋಡ್ತಾರೆ. ಹೀಗಾಗಿ ಅವನ ಸುದ್ದಿಯನ್ನು ಹೆಚ್ಚು ಹೆಚ್ಚು ಮತ್ತು ಅತಿ ಎನಿಸುವಷ್ಟು ತೋರಿಸುತ್ತಾರೆ. ಇದರಲ್ಲಿ ನೈತಿಕತೆ, ದಿವಾಳಿತನದ ಪ್ರಶ್ನೆ ಎಲ್ಲಿಂದ ಬಂತು? ನಿಮ್ಮ ಮುಂದೆ ಆಯ್ಕೆ ಅವಕಾಶ ಇದ್ದೇ ಇದೆಯಲ್ಲ. ದರ್ಶನ್ ಸುದ್ದಿಯನ್ನು ಜನ ನೋಡುವುದನ್ನು ನಿಲ್ಲಿಸಿದರೆ, ಟಿವಿ ಚಾನೆಲ್ಲುಗಳು ಆ ಸುದ್ದಿಯಿಂದ ವಿಮುಖ ಆಗಬಹುದು. ಹೀಗಾಗಿ ನೀವು ಜನರಿಗೆ ದರ್ಶನ್ ಸುದ್ದಿಯನ್ನು ನೋಡಬೇಡಿ ಎಂದು ಮನವಿ ಮಾಡಿಕೊಳ್ಳುವುದು ಒಳ್ಳೆಯದು.

ಸುಜಾತಾ ಜೋಶಿ, ಶಿವಮೊಗ್ಗ

- **ಭಟ್ಟರೇ, ನಾನು ಎಂಟು ನೂರಾ ಅರವತ್ನಾಲ್ಕು ಪುಟಗಳ ಕಾದಂಬರಿ ಬರೆದಿದ್ದೇನೆ. ನೀವು ಅದಕ್ಕೊಂದು ಮುನ್ನುಡಿ ಬರೆದುಕೊಡಬಹುದಾ? ಯಾರನ್ನೇ ಕೇಳಿದರೂ ಸಾಧ್ಯವಿಲ್ಲ ಅಂತಾರೆ. ನೀವು ಬರೆದುಕೊಡುತ್ತೀರಾ? ಅಥವಾ ನೀವೂ ಸಹ ಸಾಧ್ಯವಿಲ್ಲ ಅಂತೀರಾ? ಪುಸ್ತಕ ಬರೆಯುವುದು ಕಷ್ಟವಲ್ಲ. ಆದರೆ ಮುನ್ನುಡಿ ಬರೆಯಿಸುವುದು ಕಷ್ಟ ಎಂಬುದು ನನಗೆ ಈಗ ಮನವರಿಕೆ ಆಗಿದೆ. ನೀವೂ ಆಗೊಲ್ಲ ಎನ್ನುವ ವರ್ಗಕ್ಕೆ ಸೇರಿದವರಾ?**

– ಸುಜಾತ ಅವರೇ, ಮುನ್ನುಡಿ ಬರೆಯಿರಿ ಎಂದು ಹೇಳುವುದು ಕೃತಿಕಾರ ನೀಡುವ ದೊಡ್ಡ ಗೌರವ. ಯಾರಾದರೂ ನನಗೆ ಮುನ್ನುಡಿ ಬರೆದುಕೊಡಿ ಅಂತ ಹೇಳಿದರೆ, ಖುಷಿಯಿಂದ ಬರೆದುಕೊಡುತ್ತೇನೆ. ಅದೊಂದು ಗೌರವಪೂರಕವಾದ, ಹೆಮ್ಮೆಯ ವಿಷಯ. ಆ ನೆಪದಲ್ಲಿ ಒಂದು ಪುಸ್ತಕವನ್ನು ಓದಿದ ನೆಮ್ಮದಿ ನನ್ನದಾಗುತ್ತದೆ ಎಂದು ಭಾವಿಸುವವನು ನಾನು. ಹೀಗಾಗಿ ಯಾರೇ ಆಗಲಿ ತಮ್ಮ ಪುಸ್ತಕಕ್ಕೆ ಮುನ್ನುಡಿ ಬರೆದುಕೊಡ್ತೀರಾ ಎಂದು ಕೇಳಿದರೆ ನಾನು ಇಲ್ಲ ಎನ್ನುವುದಿಲ್ಲ.

ಆದರೆ ಮುನ್ನುಡಿ ಬರೆಯಬೇಕೆಂದರೆ ಇಡೀ ಪುಸ್ತಕವನ್ನು ಓದಬೇಕು, ಓದುವಾಗ ಟಿಪ್ಪಣಿ ಮಾಡಿಕೊಳ್ಳಬೇಕು, ನಂತರ ಮುನ್ನುಡಿ ಬರೆಯಬೇಕು. ಇದು ಸಮಯವನ್ನು ಬೇಡುತ್ತದೆ. ಹೇಗೇಗೋ ಓದುವಂತಿಲ್ಲವಲ್ಲ? ಓದಿದ ಬಳಿಕ ಮುನ್ನುಡಿ ಬರೆಯಬೇಕಲ್ಲ? ಇದಕ್ಕೆ ಸಾಕಷ್ಟು ಕಾಲಾವಕಾಶ ಬೇಕು. ಇದೊಂದು ಪ್ರೀತಿಯಿಂದ, ಭಕ್ತಿಯಿಂದ, ಗೌರವದಿಂದ ಮಾಡುವ ಕೆಲಸ. ಮುನ್ನುಡಿ ಬರೆದುಕೊಟ್ಟಿದ್ದಕ್ಕೆ ಯಾರೂ ಸಂಭಾವನೆ ಕೊಡುವುದಿಲ್ಲ ಮತ್ತು ಅದನ್ನು ನಿರೀಕ್ಷಿಸಲೂ ಬಾರದು.

ಇನ್ನು ಕಾದಂಬರಿ ವಿಷಯಕ್ಕೆ ಬರೋಣ. ಎಂಟು ನೂರಾ ಅರವತ್ನಾಲ್ಕು ಪುಟಗಳಿವೆ ಎಂದು 'ಹೆದರಿಸಿದ್ದೀರಿ'. ಅಷ್ಟು ಬೃಹತ್ ಗಾತ್ರದ ಪುಸ್ತಕ ಓದಲು ನನಗೆ ಕನಿಷ್ಠ ಹದಿನೈದು ದಿನಗಳಾದರೂ ಬೇಕು. ನಾನು ನನ್ನ ಬಿಡುವಿನ ವೇಳೆಯಲ್ಲಿ, ದಿನಕ್ಕೆ ಒಂದು ಗಂಟೆಯಷ್ಟೇ ಕಾದಂಬರಿ ಓದುವುದಕ್ಕೆ ವಿನಿಯೋಗಿಸಬಹುದು. ಹೀಗಾಗಿ ಇದು ನನಗಾಗಲಿ, ಯಾರಿಗೇ ಆಗಲಿ, ತುಸು laborious ಆದ ಕೆಲಸವೇ. ಅದಾದ ಬಳಿಕ ಕನಿಷ್ಠ ಮೂರು-ನಾಲ್ಕು ಪುಟಗಳ ಮುನ್ನುಡಿ ಬರೆಯಬೇಕು. ಮುನ್ನುಡಿ ಬರೆದುಕೊಡ್ತೇನೆ ಎಂದು ಒಪ್ಪಿಕೊಂಡ ಮೇಲೆ ಅದೊಂದು ದೊಡ್ಡ ಜವಾಬ್ದಾರಿ. ಅದನ್ನು ನೆರವೇರಿಸಿಕೊಡುವುದು ನಮ್ಮ ಕರ್ತವ್ಯ.

ಇದಕ್ಕೆ ಸಾಕಷ್ಟು ಸಮಯ ಬೇಕು. ಕೆಲವೊಮ್ಮೆ ಲೇಖಕರು ಒಂದು ತಿಂಗಳು ಸಮಯ ನೀಡಿದರೂ, ನಿಗದಿತ ಸಮಯದಲ್ಲಿ ಮುನ್ನುಡಿ ಬರೆದು ಕೊಡಲು ಸಾಧ್ಯವಾಗುವುದಿಲ್ಲ. ಆಗ ಅನಗತ್ಯವಾಗಿ ಬೇಸರ ಕಟ್ಟಿಕೊಳ್ಳಬೇಕಾಗುತ್ತದೆ. ಸಂಬಂಧ ಹಳಸುವ ಸಾಧ್ಯತೆಯೂ ಇರುತ್ತದೆ. ಅದಕ್ಕಾಗಿ ಈ ಉಸಾಬರಿಯೆ ಬೇಡ ಎಂದು, ಮುನ್ನುಡಿ ಬರೆದುಕೊಡಿ ಎಂದು ಹೇಳಿದಾಗ, ಏನೋ ಕುಂಟು ನೆಪ ಹೇಳಿ, ಎಸ್ಕೇಪ್ ಆಗಿಬಿಡುತ್ತಾರೆ. ನಿಮ್ಮ ವಿಷಯದಲ್ಲೂ ಹಾಗೆ ಆಗಿದೆ. ಎಂಟು ನೂರಾ ಅರವತ್ನಾಲ್ಕು ಪುಟಗಳ ಕಾದಂಬರಿ ಅಂದ ಕೂಡಲೇ ಹೆದರಿಬಿಡ್ತಾರೆ. ಆದ್ದರಿಂದ ನೀವು ರೀಡಿಂಗ್ ಫೀಸ್ ಕೊಡ್ತೇನೆ ಎಂಬ ಆಮಿಷವನ್ನು ಒಡ್ಡಿ ನೋಡಬೇಕಿತ್ತು.

ನಿಮ್ಮ ಕಾದಂಬರಿಗೆ ನಾನು ಖಂಡಿತವಾಗಿಯೂ ಮುನ್ನುಡಿ ಬರೆದು ಕೊಡಬಲ್ಲೆ. ಅದು ನಿಜಕ್ಕೂ ಸಂತಸ ನೀಡುವ ಕೆಲಸವೇ. ನನಗೆ ನೀವು ರೀಡಿಂಗ್ ಫೀಸ್ ಅಥವಾ ಗೌರವಧನ ಕೊಡಬೇಕಿಲ್ಲ. ಆದರೆ ನನಗೆ ಸಮಯಾವಕಾಶ ನೀಡಬೇಕು. ಕನಿಷ್ಠ ನಲವತ್ತು ದಿನಗಳ ಸಮಯ ನೀಡಿದರೆ ಬರೆದುಕೊಡ್ತೇನೆ.

ಸೋಮಶೇಖರ ವಸ್ತ್ರದ, (ಇಮೇಲ್ ಮೂಲಕ)

- **ಭಟ್ರೇ, ನಾನು ಸರಕಾರೀ ಕಚೇರಿಯಲ್ಲಿ ಉದ್ಯೋಗಿ. ನನ್ನ ಪತ್ನಿಯ ಮೂವರು ಅಣ್ಣಂದಿರು ಮದುವೆಯಾಗಿ ಅಮೆರಿಕದಲ್ಲಿದ್ದಾರೆ. ನನ್ನ ಪತ್ನಿಯ ಅಕ್ಕ ಮತ್ತು ಅವಳ ಗಂಡ ಪ್ಯಾರಿಸಿನಲ್ಲಿ ವಾಸವಾಗಿದ್ದಾರೆ. ಮಾವನ ಮನೆಯವರಿಗೆ ನನ್ನನ್ನು ಮತ್ತು ಪತ್ನಿಯನ್ನು ಕಂಡರೆ ಏನೋ ತಾತ್ಸರ. ನನ್ನ ಪತ್ನಿಗೆ ಆಗಾಗ ಅವರ ತವರುಮನೆಯವರು, 'ನೀನೂ ಅಮೆರಿಕದಲ್ಲಿದ್ದವನನ್ನು ಮದುವೆಯಾಗಬೇಕಿತ್ತು' ಎಂದು ಹಂಗಿಸುತ್ತಾ ಇರುತ್ತಾರೆ. ಆ ಮಾತು ಕೇಳಿದಾಗಲೆಲ್ಲ ನನ್ನ ಪತ್ನಿ ವಿಚಲಿತಳಾಗುತ್ತಾಳೆ. ನನ್ನ ಮೇಲೆ ಬೇಸರ ಮಾಡಿಕೊಳ್ಳುತ್ತಾಳೆ. ಈ ಮನಸ್ಥಿತಿಯವರನ್ನು ಹೇಗೆ ಹ್ಯಾಂಡಲ್ ಮಾಡಬೇಕು ಹೇಳಿ.**

– ಸೋಮಶೇಖರ ಅವರೇ, ಪ್ರಾಯಶಃ ಈಗ ನೀವು ಅಮೆರಿಕಕ್ಕೆ ಹೋಗಿ ನೆಲೆಸುವುದು ಅಸಾಧ್ಯದ ಮಾತು. ಕಾರಣ ಆ ಅವಕಾಶ ಇನ್ನೊಮ್ಮೆ ಬರಲಿಕ್ಕಿಲ್ಲ. ಹೀಗಾಗಿ ನೀವು ಅಮೆರಿಕಕ್ಕೆ ಹೋಗುವ ಬಗ್ಗೆ ಯಾರಾದರೂ ಹೇಳಿದರೆ, ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ. ಅಮೆರಿಕದಲ್ಲಿ ಇದ್ದವರು ಮಾತ್ರ ಉತ್ತಮ ಜೀವನ ನಡೆಸುತ್ತಿದ್ದಾರೆ ಎಂದು ಭಾವಿಸಬೇಕಿಲ್ಲ. ಇಲ್ಲಿನವರು, ಅಲ್ಲಿಯವರಿಗಿಂತ ಯಾವ ವಿಧದಲ್ಲೂ ಕಮ್ಮಿಯಿಲ್ಲ. ಅಮೆರಿಕ ಎಂಬ ಬಿಸಿಲುಗುದುರೆಯ ಮೋಹ ಕಮ್ಮಿಯಾಗಿ ಬಹಳ ವರ್ಷಗಳೇ ಸಂದಿವೆ. ನಮಗೆ ಅಮೆರಿಕದಲ್ಲಿರುವ ಹುಡುಗ ಬೇಡ ಎಂದು ಈಗಿನ ಹುಡುಗಿಯರು ಹೇಳುತ್ತಾರೆ. ಮದುವೆಯಾಗಿ ಅಲ್ಲಿಗೆ ಹೋಗಿ ನಾಲ್ಕು ಗೋಡೆಗಳ ಮಧ್ಯೆ ಇರುವುದಕ್ಕಿಂತ ನಮ್ಮೂರಲ್ಲಿಯೇ ಇನ್ನೂ ಸಂತೋಷವಾಗಿರಬಹುದು ಎಂದು ಈಗಿನ ಹುಡುಗಿಯರು ಭಾವಿಸುತ್ತಾರೆ. ಇಪ್ಪತ್ತು- ಮೂವತ್ತು ವರ್ಷಗಳ ಹಿಂದೆ ಅಮೆರಿಕದ ಕ್ರೇಜ್ ಇತ್ತು. ಈಗ ಹಾಗಿಲ್ಲ. ಅಮೆರಿಕದಲ್ಲಿರುವ ಗಂಡಿನ ಡಿಮ್ಯಾಂಡ್ ಕಮ್ಮಿಯಾಗಿದೆ.

ನಿಮ್ಮ ಮಾವನ ಮನೆಯವರಾಗಲಿ, ನಿಮ್ಮ ಸಂಬಂಧಿಕರಾಗಲಿ, ನಿಮ್ಮನ್ನು ನಿಕೃಷ್ಟವಾಗಿ ಕಂಡರೆ ಅದಕ್ಕೆ ಸೊಪ್ಪು ಹಾಕಬೇಕಿಲ್ಲ. ಒಮ್ಮೆ ನೌಕರಿ ಸೇರಿದರೆ, ಸಾಯುವ ತನಕ ನೆಮ್ಮದಿಯಾಗಿರುವವರೆಂದರೆ, ಸರಕಾರಿ ನೌಕರರು. ಸೇವೆಯಲ್ಲಿದ್ದಾಗ ಸಂಬಳ ಮತ್ತು ಲಂಚ (ಕೆಲವರಿಗೆ). ವರ್ಷದಲ್ಲಿ ನೂರಾ ಐವತ್ತು ದಿನ ಮಾತ್ರ ಕೆಲಸ. ಉಳಿದ ದಿನ ಒಂದಿಲ್ಲೊಂದು ರಜಾ. ಕಚೇರಿಯಲ್ಲಿ ನಿದ್ದೆ ಮಾಡಿದರೂ ಯಾರೂ ಕೇಳುವುದಿಲ್ಲ! ಆಫೀಸಿನ ವೇಳೆಯಲ್ಲಿ ಸ್ವಂತ ಕೆಲಸ ಮಾಡಿಕೊಂಡರೂ ಯಾರೂ ಕೇಳುವುದಿಲ್ಲ. ಅರವತ್ತರ ನಂತರ ನಿವೃತ್ತರಾದ ಬಳಿಕ ಪೆನ್ಷನ್. ಸಾಯುವ ತನಕವೂ ನಿವೃತ್ತಿ ವೇತನ ಬರುತ್ತಲೇ ಇರುತ್ತದೆ. ನೀವು ಸತ್ತ ನಂತರ ನಿಮ್ಮ ಪೆನ್ಷನ್ ಹಣ ಹೆಂಡತಿಗೆ. ಒಮ್ಮೆ ಕೆಲಸಕ್ಕೆ ಸೇರಿದರೆ, ಕೆಲಸ ಮಾಡಲಿ, ಬಿಡಲಿ, ನಿಮ್ಮ ನೌಕರಿ ಭದ್ರ. ಯಾರಿಂದಲೂ ನಿಮ್ಮ ರೋಮವನ್ನು ಸಹ ಕಿತ್ತು ಕೊಳ್ಳಲು ಸಾಧ್ಯವಿಲ್ಲ. ಇಂಥ ಜವಾಬ್ದಾರಿ ಇಲ್ಲದ ಸುಖ ಜಗತ್ತಿನಲ್ಲಿ ಯಾರಿಗಿದೆ? ನಿಮ್ಮಷ್ಟು ಅದೃಷ್ಟವಂತರು ಯಾರೂ ಇಲ್ಲ.

ಅಮೆರಿಕದಲ್ಲಿ ಇದ್ದವರಿಗೂ ಈ ಭಾಗ್ಯ ಇಲ್ಲ. ನಿಮ್ಮ ಮಾವನ ಮನೆಯವರಾಗಲಿ, ಸಂಬಂಧಿಕರಾಗಲಿ, ಏನೇ ಹೇಳಲಿ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ. ಈಗ ನೀವು ಅನುಭವಿಸುತ್ತಿರುವ ಆನಂದ ಮತ್ತೆಲ್ಲೂ ಸಿಗಲು ಸಾಧ್ಯವಿಲ್ಲ. ಇದನ್ನು ನಿಮ್ಮ ಹೆಂಡತಿಗೆ ಮನವರಿಕೆ ಮಾಡಿಕೊಡಿ. ಭಾರತದಲ್ಲಿ ಸರಕಾರಿ ನೌಕರಿಗೆ ಸೇರಿಕೊಳ್ಳಲು ಪುಣ್ಯ ಮಾಡಿರಬೇಕು. ಅಮೆರಿಕದಲ್ಲಿ ಈ ಭಾಗ್ಯ ನಿಮ್ಮ ಷಡ್ಡಕರಿಗೆ ಇದೆಯಾ? ಇಂಪಾಸಿಬಲ್. ಹೀಗಾಗಿ ಯಾರೋ ಹೇಳುತ್ತಾರೆಂದು, ಅಮೆರಿಕಕ್ಕೆ ಹೊರಟು ಬಿಟ್ಟೀರಾ, ಜೋಕೆ!

ರಂಜಿನಿ ಗೌಡ, ತುಮಕೂರು

- **ಸಂಪಾದಕರೇ, ನಾನು ಸುಮಾರು ನೂರಾ ಐವತ್ತಕ್ಕೂ ಹೆಚ್ಚು ಕವನ ಮತ್ತು ಇನ್ನೂರಕ್ಕೂ ಹೆಚ್ಚು ಹನಿಗವನಗಳನ್ನು ಬರೆದಿದ್ದೇನೆ. ಈಗಾಗಲೇ ನಾಲ್ವರು ಪ್ರಕಾಶಕರನ್ನು ಸಂಪರ್ಕಿಸಿದ್ದೇನೆ. ಆದರೆ ಯಾರೂ ಅದನ್ನು ಪ್ರಕಟಿಸಲು ಮುಂದೆ ಬರುತ್ತಿಲ್ಲ. ನನ್ನ ಮೊದಲ ಕೃತಿ ಪ್ರಕಟವಾಗಲು ನೀವು ನನಗೆ ಸಹಕರಿಸುವಿರಾ?**

– ರಂಜಿನಿ ಅವರೇ,ಇದು ನಿಮ್ಮದೊಂದೇ ಸಮಸ್ಯೆ ಅಲ್ಲ. ಇತ್ತೀಚಿನ ದಿನಗಳಲ್ಲಿ ಇಲ್ಲ ಹಲವು ಕವಿಗಳು, ಕವಯತ್ರಿಯರು ಎದುರಿಸುತ್ತಿರುವ ಗಂಭೀರ ಸಮಸ್ಯೆ. ಹೊಸಬರ ಕೃತಿಗಳನ್ನು ಪ್ರಕಾಶಸಲು ಯಾವ ಪ್ರಕಾಶಕರೂ ಮುಂದೆ ಬರುವುದಿಲ್ಲ. ಅವರಿಗೆ ಹೊಸಬರನ್ನುಪ್ರೋತ್ಸಾಹಿಸಬಾರದು ಎಂಬ ಉದ್ದೇಶ ಇರುವುದಿಲ್ಲ. ಆದರೆ ಅವರ ಕೃತಿಗಳನ್ನು ಮುದ್ರಿಸಿದರೆ, ಯಾರೂ ಹಣ ಕೊಟ್ಟು ಖರೀದಿಸುವುದಿಲ್ಲ. ಪ್ರಿಂಟ್ ಮಾಡಿದ ಪ್ರತಿಗಳೆಲ್ಲ ಗೋದಾಮಿನಲ್ಲಿ ಧೂಳು ತಿನ್ನುತ್ತಾ ಇರುತ್ತವೆ. ಖ್ಯಾತನಾಮ ಕವಿಗಳ ಕವನ ಸಂಕಲನಗಳನ್ನೇ ಯಾರೂ ಖರೀದಿಸುವುದಿಲ್ಲ.

ಹೀಗಿರುವಾಗ ಹೊಸ ಕವಿಗಳ ಕೃತಿಗಳನ್ನು ಓದುವುದು ದೂರವೇ ಉಳಿಯಿತು. ಹೀಗಾಗಿ ಈ ದಿನಗಳಲ್ಲಿ ಮುದ್ರಣ ವೆಚ್ಚ ಕೊಂಚ ಹೆಚ್ಚಾದರೂ ಕವನ ಸಂಕಲನಗಳ ಇನ್ನೂರು – ಮುನ್ನೂರು ಪ್ರತಿಗಳನ್ನಷ್ಟೇ ಅಚ್ಚು ಹಾಕಿಸುತ್ತಾರೆ. ಆ ಎಲ್ಲ ಪ್ರತಿಗಳನ್ನು ಕವಿಗಳೇ ಖರೀದಿಸಬೇಕು ಎಂಬ ಷರತ್ತಿನೊಂದಿಗೆ ಮುದ್ರಿಸುತ್ತಾರೆ. ಇದರಿಂದ ಪ್ರಕಾಶಕ ಸುರಕ್ಷಿತ. ಆತ ನಿಮಗೆ ಗೌರವ ಧನ ಕೊಡುವುದಿಲ್ಲ. Poets are never unemployed, just unpaid ಎಂಬ ಮಾತನ್ನು ಕೇಳಿರಬಹುದು. ಆ ಎಲ್ಲ ಪ್ರತಿಗಳನ್ನು ಮಾರಾಟಮಾಡುತ್ತೀರೋ, ಸ್ನೇಹಿತರಿಗೆ, ಬಂಧುಗಳಿಗೆ ಉಚಿತವಾಗಿ ಕೊಡುತ್ತೀರೋ, ಅದು ನಿಮಗೆ ಬಿಟ್ಟಿದ್ದು.

ಇದಕ್ಕೆ ನಿಮಗೆ ಹೆಚ್ಚು ಅಂದ್ರೆ ಇಪ್ಪತ್ತು ಸಾವಿರ ರುಪಾಯಿ ಖರ್ಚು ಆಗಬಹುದು. ಇದರಿಂದ ನಿಮ್ಮ ಕವನ ಸಂಕಲನ ಪ್ರಕಟವಾದ ಸಮಾಧಾನ, ಸಂತಸ ನಿಮ್ಮದಾಗಬಹುದು. ಇದರಿಂದ ಸಾಹಿತ್ಯಲೋಕದಲ್ಲಿ ನೀವು ಕವಯತ್ರಿಯಾಗಿ ಗುರುತಿಸಿಕೊಳ್ಳುತ್ತೀರಿ. ಇದು ಜನಮನ್ನಣೆಗೆ ಪಾತ್ರವಾದರೆ, ಮುಂದೆ ನೀವು ಬರೆಯುವ ಕವನ ಸಂಕಲನವನ್ನು ಪ್ರಕಟಿಸಲು ಪ್ರಕಾಶಕರು ಮುಂದೆ ಬರಬಹುದು.

ಅತೀ ಹೆಚ್ಚು ಪುಸ್ತಕ ಮಾರಾಟವಾದ ಮತ್ತು ಅತೀ ಹೆಚ್ಚು ಸಂಭಾವನೆ ಗಳಿಸಿದ ಜೆ.ಕೆ.ರೌಲಿಂಗ್ ಅವರು, ಹ್ಯಾರಿ ಪೊಟರ್ ಮೊದಲ ಕಾದಂಬರಿ ಬರೆದಾಗ, ಅದನ್ನುಪ್ರಕಟಿಸಲು ಯಾವ ಪ್ರಕಾಶಕನೂ ಮುಂದೆ ಬಂದಿರಲಿಲ್ಲ. ಈಗ ಆಕೆ ಏನೇ ಬರೆಯಲಿ, ಪೈಪೋಟಿಗೆ ಬಿದ್ದು, ಕೇಳಿದಷ್ಟು ಹಣವನ್ನು ಕೊಟ್ಟು ಪ್ರಕಟಿಸುತ್ತಾರೆ. ನೀವೂ ಹೀಗೆ ಆಗಬಹುದು, ಯಾರಿಗೆ ಗೊತ್ತು? ಹೀಗಾಗಿ ಧೈರ್ಯ ಕಳೆದುಕೊಳ್ಳಬೇಡಿ.

ಬಿ.ಚಿದಾನಂದ ನಾಯ್ಡು, ಬೆಂಗಳೂರು

- **ಸಂಪಾದಕರೇ, ನಾನು ಸ್ನಾತಕೋತ್ತರ ಪಧವೀಧರ. ಖಾಸಗಿ ಕಂಪನಿಯಲ್ಲಿ ಉದ್ಯೋಗಿ. ನನಗೆ ನೂರು ಪುಟಗಳ ಒಂದು ಪುಸ್ತಕವನ್ನು ಓದಲು ಒಂದು ತಿಂಗಳಾದರೂ ಬೇಕು. ಬರೆಯುವುದು ಇನ್ನೂ ಕಷ್ಟ. ಎರಡು ಪುಟಗಳನ್ನು ಬರೆಯುವ ಹೊತ್ತಿಗೆ ಸುಸ್ತಾಗಿ ಬಿಡುತ್ತೇನೆ. ನೀವು ಎರಡನ್ನೂ ಸಲೀಸಾಗಿ ಹೇಗೆ ಮಾಡುತ್ತೀರಿ? ನನಗೆ ತಿಳಿದುಕೊಳ್ಳುವ ಕುತೂಹಲ.**

– ನಾಯ್ಡು ಅವರೇ, ಓದುವುದು ಮತ್ತು ಬರೆಯುವುದು ನನ್ನ ಕಾಯಕ. ಅವು ನನಗೆ ಹೊಟ್ಟೆ ಪಾಡು. ಅದಕ್ಕಿಂತ ಮುಖ್ಯವಾಗಿ ನನಗೆ ಗೊತ್ತಿರುವುದೇ ಅವೆರಡು. ಓದುವುದು ಮತ್ತು ಮತ್ತು ಬರೆಯುವುದು ನನ್ನ ವೃತ್ತಿ ಮತ್ತು ಪ್ರವೃತ್ತಿ. ಆೈರಡೂ ಒಂದೇ ಆಗುವುದು ಅಪರೂಪ. ಆ ವಿಷಯದಲ್ಲಿ ನಾನು ಅದೃಷ್ಟಶಾಲಿ. ಪತ್ರಕರ್ತರಾದರೆ ಅದೊಂದು ಲಾಭ. ಬರೆಯಬೇಕು ಅಂದರೆ ಏನನ್ನಾದರೂ ಓದಬೇಕು. ಓದದೇ ಬರೆಯಲು ಸಾಧ್ಯವಿಲ್ಲ. ಹೀಗಾಗಿ, ಓದು ಮತ್ತು ಬರಹ ಜತೆಜತೆಯಾಗಿ ಸಾಗಬೇಕು. ಓದದೇ ಬರೆದರೆ, ಬರಹ ಬಹುಬೇಗ ನಿತ್ರಾಣ, ನಿಸ್ತೇಜವಾಗುತ್ತದೆ. ನನ್ನ ದೃಷ್ಟಿಯಲ್ಲಿ ಬರೆಯುವುದು ಮತ್ತು ಓದುವುದು ಬೇರೆ ಬೇರೆ ಅಲ್ಲ. ಎರಡೂ ಒಂದೇ.

ಈ ದಿಕ್ಕಿನಲ್ಲಿ ನಿಮ್ಮ ಚಿಂತನೆಯನ್ನು ತುಸು ಬದಲಿಸಿಕೊಳ್ಳಿ. ನಿಮಗೆ ಓದುವುದು ಮತ್ತು ಬರೆಯುವುದು ಭಾರವಾದ ಕೆಲಸ ಎಂದು ಅನಿಸಿಕೊಳ್ಳುವುದಿಲ್ಲ. ಓದುವಾಗ ಪ್ರತಿ ಕ್ಷಣವೂ ನೀವು ಹೊಸ ಹೊಸ ವಿಷಯಗಳನ್ನು ತಿಳಿಯುತ್ತಾ ಹೋಗುತ್ತೀರಿ. ಒಂದು ಪುಟ ಸಾಗುವುದರೊಳಗೆ ಎಷ್ಟೋ ಹೊಸ ಸಂಗತಿಗಳು ಗೊತ್ತಾಗುತ್ತವೆ. ಅದು ಒತ್ತಾಯದ ಕ್ರಿಯೆ ಅಲ್ಲ. ಅದು ಒತ್ತಾಸೆಯ ಹಂಬಲ. ಬರವಣಿಗೆಯಲ್ಲಿ ಪ್ರತಿ ಸಾಲಿನಲ್ಲೂ ನೀವು ಹೊಸ ಹೊಸ, ಬೇರೆ ಬೇರೆಯ ವಿಷಯವನ್ನು ತಿಳಿಸುತ್ತಾ ಹೋಗುತ್ತೀರಿ. ಓದುವುದು ಮತ್ತು ಬರೆಯುವುದರಲ್ಲಿ, ಹೊಸ ವಿಷಯ ತಿಳಿಯುವ ಮತ್ತು ತಿಳಿಸುವ ಕೈಂಕರ್ಯವನ್ನು ಜತೆಜತೆಯಾಗಿ ಮಾಡುತ್ತಾ ಹೋಗುತ್ತೀರಿ. ಅಂದರೆ, ಭರ್ತಿಯಾಗುವ ಮತ್ತು ಬರಿದಾಗುವ ಕೆಲಸ ನಡೆಯುತ್ತಾ ಹೋಗುತ್ತದೆ.

ಇದು ಇಷ್ಟದ ಕೆಲಸ, ಕಷ್ಟದ್ದಲ್ಲ. ನೀವು ನಿಮ್ಮ ಗ್ರಹಿಕೆಯ ಅಂಟೆನಾವನ್ನು ನಾನು ಹೇಳಿದ ಈ ದಿಕ್ಕಿಗೆ ಹೊರಳಿಸಿ. ಓದುವುದು ಮತ್ತು ಬರೆಯುವುದು ಅಂದ್ರೆ, ಹೊಸ ವಿಷಯಗಳನ್ನು ತಿಳಿಯುವ ಮತ್ತು ತಿಳಿಸುವ ಕೆಲಸ ಎಂದು ಭಾವಿಸಿ. ಆ ಎರಡೂ ಸುಲಭವಾಗುತ್ತಾ ಹೋಗುತ್ತದೆ. ನಾವು ಮಾಡುವ ಕೆಲಸವನ್ನು ಪ್ರೀತಿಸದಿದ್ದರೆ, ಹಣೆಗೆ ಒತ್ತಿ ಮಾಡದಿದ್ದರೆ, ನಮಗೆ ಅದು ಸುಲಭಕ್ಕೆ ಒಲಿಯುವುದಿಲ್ಲ. ಅದು ಅಪರಿಚಿತ ಹೆಣ್ಣನ್ನು ಒಲಿಸಿಕೊಂಡಂತೆ. ಪ್ರಯತ್ನಿಸಿ. ಊಟ ಮಾಡುವುದು ಕಷ್ಟದ ಅಥವಾ ಒತ್ತಾಯದ ಕ್ರಿಯೆ ಎಂದು ಎಂದಾದರೂ ಅನಿಸಿದೆಯಾ? ಓದುವುದೆಂದರೆ ಬುದ್ಧಿಗೆ ಊಟ ಮಾಡಿಸಿದ ಹಾಗೆ. ಬರೆಯುವುದೆಂದರೆ ದುಡಿದು ಹಸಿವು ಮಾಡಿಕೊಂಡಂತೆ.

ನಿಮ್ಮ ಚಿಂತನೆಯನ್ನು ತುಸು ಬದಲಿಸಿಕೊಂಡರೆ ಅವೆರಡೂ ಸಲೀಸಾದೀತು. ಸಾಮ್ಯುಯಲ್ ಜಾನ್ಸನ್ ಹೇಳಿದ ಒಂದು ಮಾತು ಕೇಳಿ – A writer only begins a book. A reader finishes it.